# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ವರದಿ

## ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷ

**ಕರ್ನಾಟಕ ಸರ್ಕಾರ**

***2025ನೇ ವರ್ಷದ ವರದಿ ಸಂಖ್ಯೆ: 1***

**ಪರಿವಿಡಿ**


| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಮುನ್ನುಡಿ | | vii |
| ಸ್ಥೂಲನೋಟ | | ix-xviii |
| **ವಾಣಿಜ್ಯ ಲೆಕ್ಕಪರಿಶೋಧನಾ ವರದಿ (ಸಾವಲುಗಳು)** | | |
| **ಅಧ್ಯಾಯ - I** | | |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸಿನ ಕಾರ್ಯನಿರ್ವಹಣೆಯ ಸಂಕ್ಷಿಪ್ತ ವಿವರಣೆ** | | **1** |
| ಪೀಠಿಕೆ | 1.1 | 1 |
| ಸರ್ಕಾರಿ ಕಂಪನಿಗಳು ಮತ್ತು ನಿಗಮಗಳಲ್ಲಿ ಹೂಡಿಕೆಗಳು ಹಾಗೂ ಆಯವ್ಯಯ ಬೆಂಬಲಗಳು | 1.2 | 3 |
| ಹೂಡಿಕೆಗಳನ್ನು ಹಿಂಪಡೆಯುವಿಕೆ, ಪುನರ್‌-ರಚನೆ ಮತ್ತು ಖಾಸಗೀಕರಣ | 1.3 | 8 |
| ಸರ್ಕಾರಿ ಕಂಪನಿಗಳು ಮತ್ತು ನಿಗಮಗಳಿಂದ ಪ್ರತಿಫಲ | 1.4 | 9 |
| ಸಾಲದ ಮೇಲಿನ ಬಡ್ಡಿ ಪಾವತಿ ಮತ್ತು ಕಾನೂನು ನಿಯಮ ನಿಬಂಧನೆಗಳ ಅನುಪಾಲನೆಗಳು | 1.5 | 11 |
| ಸರ್ಕಾರಿ ಕಂಪನಿಗಳ ಕಾರ್ಯಾಚರಣೆಗಳಲ್ಲಿನ ದಕ್ಷತೆ | 1.6 | 12 |
| ರಾಜ್ಯ ಸರ್ಕಾರದಿಂದ ಮಾಡಲಾಗಿರುವ ಹೂಡಿಕೆಗಳಿಂದ ಪ್ರತಿಫಲಗಳು | 1.7 | 16 |
| ನಷ್ಟ ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು | 1.8 | 20 |
| **ಅಧ್ಯಾಯ - II** | | |
| **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣಾ ಪಾತ್ರ** | | **23** |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪರಿಶೋಧನೆ | 2.1 | 23 |
| ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ | 2.2 | 23 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ | 2.3 | 23 |
| ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣೆ: ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮತ್ತು ಪೂರಕ ಲೆಕ್ಕಪರಿಶೋಧನೆ | 2.4 | 26 |
| ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣಾ ಪಾತ್ರದ ಫಲಿತಾಂಶ | 2.5 | 28 |
| ಲೆಕ್ಕಪತ್ರ ಮಾನದಂಡಗಳು/ಭಾರತೀಯ ಲೆಕ್ಕಪತ್ರ ಮಾನದಂಡಗಳು | 2.6 | 31 |
| ವ್ಯವಸ್ಥಾಪನಾ ಪತ್ರಗಳು | 2.7 | 32 |

| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ಅಧ್ಯಾಯ - III** | | |
| **ಸಾಂಸ್ಥಿಕ ಆಡಳಿತ ನಿರ್ವಹಣೆ** | | **33** |
| ಪೀಠಿಕೆ | 3.1 | 33 |
| ಕಂಪನಿಯ ಸ್ಥಾಪನೆಗೆ ಸಂಬಂಧಿತ ವಿಷಯಗಳು | 3.2 | 35 |
| 3 ನಿರ್ದೇಶಕರುಗಳ ಮಂಡಳಿಯ ಸಂಯೋಜನೆ | 3.3 | 37 |
| ಸ್ವತಂತ್ರ ನಿರ್ದೇಶಕರುಗಳ ನೇಮಕಾತಿ ಮತ್ತು ಕಾರ್ಯನಿರ್ವಹಣೆ | 3.4 | 39 |
| ನಿರ್ದೇಶಕರುಗಳ ಮಂಡಳಿಯ ಸಭೆಗಳು | 3.5 | 42 |
| ನಿರ್ದೇಶಕರುಗಳ ಮಂಡಳಿಯ ಸಮಿತಿಗಳು | 3.6 | 45 |
| ವಾರ್ಷಿಕ ಸಾಮಾನ್ಯ ಸಭೆ | 3.7 | 48 |
| ವ್ಯವಸ್ಥಾವನೆ ಮತ್ತು ಆಡಳಿತ ನಿರ್ವಹಣೆ | 3.8 | 49 |
| ವಾರ್ಷಿಕ ಸಲ್ಲಿಕೆಗಳು | 3.9 | 50 |
| ಅನ್ವಯಗೊಳ್ಳುವ ಕಾನೂನುಗಳ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳಲು ಕಾರ್ಯವಿಧಾನ | 3.10 | 52 |
| ಆಂತರಿಕ ಲೆಕ್ಕಪರಿಶೋಧನಾ ಕಾರ್ಯಚೌಕಟ್ಟು | 3.11 | 54 |
| ವ್ಯಾಪ್ತಿ, ಕಾರ್ಯಾಚರಣೆ, ಕಾಲಾವಧಿ ಮತ್ತು ವಿಧಾನ | 3.12 | 55 |
| ಶಿಫಾರಸುಗಳು | | 56 |
| **ಅಧ್ಯಾಯ – IV** | | |
| **ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ** | | **57** |
| ಪೀಠಿಕೆ | 4.1 | 57 |
| ಕಾನೂನಿನ ಚೌಕಟ್ಟು | 4.2 | 57 |
| ವ್ಯಾಪ್ತಿ ಮತ್ತು ವಿಸ್ತರಣೆ | 4.3 | 58 |
| ಪೂರ್ವಭಾವಿ ಯೋಜನೆ | 4.4 | 59 |
| ಹಣಕಾಸಿನ ಘಟಕ | 4.5 | 61 |
| ಆಡಳಿತಾತ್ಮಕ ಮೇಲುವೆಚ್ಚಗಳು | 4.6 | 68 |
| ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಗಳಿಂದ ಮಿಗುತಾಯಗಳು, ಯಾವುದಾದರೂ ಇದ್ದಲ್ಲಿ | 4.7 | 68 |
| ಯೋಜನೆಯನ್ನು ಕಾರ್ಯಗತಗೊಳಿಸುವಿಕೆ | 4.8 | 68 |
| ವರದಿ ಮಾಡುವಿಕೆಯನ್ನು ಬಹಿರಂಗಪಡಿಸುವುದು | 4.9 | 71 |
| ಮೇಲ್ವಿಚಾರಣಾ ಕಾರ್ಯಚೌಕಟ್ಟು | 4.10 | 72 |
| ಶಿಫಾರಸುಗಳು | | 73 |
| **ಅಧ್ಯಾಯ – V** | | |
| **ಸರ್ಕಾರಿ ಕಂಪನಿಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆ** | | **75** |
| ಪೀಠಿಕೆ | 5.1 | 75 |

| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆ | 5.2 | 75 |
| ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಸ್ತಾರ | 5.3 | 76 |
| ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಮೊದಲ ಬಾರಿಗೆ ಅಳವಡಿಸಿಕೊಂಡಿರುವುದರ ಸಮೀಕ್ಷೆ | 5.4 | 77 |
| ಆಯ್ದ ಪ್ರಮುಖ ಕ್ಷೇತ್ರಗಳ ಮೇಲೆ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆಯ ಪ್ರಭಾವ | 5.5 | 81 |
| ಒಟ್ಟು ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳ/ಇಳಿಮುಖಕ್ಕೆ ಕೊಡುಗೆ ನೀಡುತ್ತಿರುವ ಅಂಶಗಳು | 5.6 | 86 |
| ನಿವ್ವಳ ಮೌಲ್ಯದ ಮೇಲಿನ ಪ್ರಭಾವ | 5.7 | 88 |
| ಹೊಸ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬಹಿರಂಗಪಡಿಸುವಿಕೆ ಅಗತ್ಯತೆಗಳನ್ನು ಅನುಪಾಲನೆ ಮಾಡದಿರುವಿಕೆ | 5.8 | 89 |
| **ಅಧ್ಯಾಯ – VI** | | |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು** | | **91** |
| **ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ** | | **91** |
| ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್)ದಲ್ಲಿನ ಖರೀದಿ ಚಟುವಟಿಕೆಗಳು | 6.1 | 91 |
| **ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ** | | **108** |
| *ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಕಾಮಗಾರಿಗಳನ್ನು ಪ್ರಾರಂಭಿಸುವುದು* | 6.2 | 108 |
| *ಗುತ್ತಿಗೆದಾರನಿಗೆ ಅನುಚಿತ ಆರ್ಥಿಕ ಲಾಭ* | 6.3 | 110 |
| *ಗುತ್ತಿಗೆದಾರರನಿಗೆ ಹೆಚ್ಚುವರಿ ಪಾವತಿ* | 6.4 | 112 |
| *ಕಾರ್ಯಗತಗೊಳಿಸದ ಕಾಮಗಾರಿಗಳಿಗೆ ವಂಚನೆಯ ಪಾವತಿ* | 6.5 | 114 |
| **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ** | | **116** |
| *ಹೆಚ್ಚುವರಿ ವೆಚ್ಚಗಳು* | 6.6 | 116 |
| *ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ* | 6.7 | 119 |
| *ನಿರುಪಯುಕ್ತ ವೆಚ್ಚ ಮತ್ತು ನಷ್ಟ* | 6.8 | 122 |
| **ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ** | | 125 |
| *ವಿದ್ಯುತ್ ಶುಲ್ಕದ ಹೆಚ್ಚುವರಿ ಪಾವತಿ* | 6.9 | 125 |
| **ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ** | | **127** |
| *ಗುತ್ತಿಗೆದಾರರುಗಳಿಗೆ ಮಾಡಿಕೊಡಲಾದ ಅನರ್ಹ ಲಾಭ* | 6.10 | 127 |
| **ಕೆಪಿಸಿ ಅನಿಲ ಇಂಧನ ನಿಗಮ ನಿಯಮಿತ** | | **131** |
| *ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚ* | 6.11 | 131 |

| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ಕರ್ನಾಟಕ ನೀರಾವರಿ ನಿಗಮ ನಿಯಮಿತ** | | **133** |
| *ನಕಲಿ ಇನ್‌ವಾಯ್ಸ್‌ಗಳ ಆಧಾರದ ಮೇಲೆ ಅನಿಯಮಿತ ಮುಂಗಡ ಪಾವತಿ* | 6.12 | 133 |
| **ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ** | | **136** |
| *ಧ್ಯೇಯೋದ್ದೇಶಗಳನ್ನು ಸಾಧಿಸದಿರುವುದು* | 6.13 | 136 |
| **ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ** | | **140** |
| *ದೋಷಪೂರಿತ ಕೆಲಸದ ಹೊಣೆಗಾರಿಕೆ ಷರತ್ತನ್ನು ಜಾರಿಗೊಳಿಸಲು ವಿಫಲವಾದರಿಂದ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು* | 6.14 | 140 |
| **ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್** | | **144** |
| *ತಪ್ಪಿಸಬಹುದಾಗಿದ್ದ ವೆಚ್ಚ* | 6.15 | 144 |

**ಅನುಬಂಧಗಳು**

| ಸಂಖ್ಯೆ | ವಿವರಗಳು | ಕಂಡಿಕೆಯ ಉಲ್ಲೇಖ | ಪುಟ ಸಂಖ್ಯೆ |
|---|---|---|---|
| 1 | ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ | 1.1.4.1 | 149 |
| 2 | ಇತ್ತೀಚಿನ ಪ್ರಮಾಣೀಕೃತ ಲೆಕ್ಕ ಪತ್ರಗಳ ಪ್ರಕಾರ ಕಾರ್ಯಾಚರಣೆಯ ಲಾಭವಿಲ್ಲದ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ವಿವರಗಳು (ಇತರ ಆದಾಯಕ್ಕಿಂತ ನಿವ್ವಳ ಲಾಭ ಕಡಿಮೆ) | 1.6.1 | 153 |
| 3 | *ಇತ್ತೀಚಿನ ಅಂತಿಮಗೊಳಿಸಿದ ಲೆಕ್ಕ ಪತ್ರಗಳ ಪ್ರಕಾರ ನಿವ್ವಳ ಮೌಲ್ಯವು ಸವೆದಿರುವ* ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ವಿವರಗಳು | 1.8.2 | 155 |
| 4 | 30 ಸೆಪ್ಟೆಂಬರ್ 2023 ರಂತೆ ಲೆಕ್ಕ ಪತ್ರಗಳ ಬಾಕಿಗಳ ಸ್ಥಿತಿಯನ್ನು ರಾಜ್ಯ ಸಾರ್ವಜನಿಕ ವಲಯದ ಉದ್ಯಮ-ವಾರು ತೋರಿಸುವ ಹೇಳಿಕೆ | 2.3.2 | 157 |
| 5 | *ಸಿಎಜಿ ನಡೆಸಿದ ಪೂರಕ ಲೆಕ್ಕಪರಿಶೋಧನೆಯ ಪರಿಣಾಮವಾಗಿ ಹಣಕಾಸು ಹೇಳಿಕೆಗಳನ್ನು ತಿದ್ದುಪಡಿ ಮಾಡಲಾದ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ವಿವರಗಳು* | 2.5.2 | 161 |
| 6 | ಸಿಎಜಿ ನಡೆಸಿದ ಪೂರಕ *ಲೆಕ್ಕಪರಿಶೋಧನೆಯ* ಪರಿಣಾಮವಾಗಿ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿ ಪರಿಷ್ಕರಿಸಲ್ಪಟ್ಟ ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ವಿವರಗಳು | 2.5.3 | 162 |
| 7 | ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ಮೇಲಿನ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗಳಿಗೆ ಪೂರಕವಾಗಿ ನೀಡಲಾದ ಸಿಎಜಿ ಯ ಮಹತ್ವದ ಕಾಮೆಂಟ್‌ಗಳು – ಲಾಭದಾಯಕತೆಯ ಮೇಲಿನ ಕಾಮೆಂಟ್‌ಗಳು | 2.5.4 | 164 |

| ವಿವರಗಳು | | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 8 | ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳ ಮೇಲಿನ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗಳಿಗೆ ಪೂರಕವಾಗಿ ನೀಡಿದ ಸಿಎಜಿಯ ಮಹತ್ವದ ಕಾಮೆಂಟ್‌ಗಳು –ಹಣಕಾಸಿನ ಸ್ಥಿತಿಯ ಕಾಮೆಂಟ್‌ಗಳು | 2.5.4 | 165 |
| 9 | 26 ಪಟ್ಟಿಮಾಡದ ಸರ್ಕಾರಿ/ಸರ್ಕಾರಿ ನಿಯಂತ್ರಿತ ಕಂಪನಿಗಳ ಪಟ್ಟಿ | 3.1.4 | 168 |
| 10 | ಮಂಡಳಿಯ ಸಭೆಗಳಿಗೆ ಹಾಜರಾಗಿರುವ / ಗೈರುಹಾಜರಾದ ಸ್ವತಂತ್ರ ನಿರ್ದೇಶಕರ ಸಂಖ್ಯೆಯನ್ನು ತೋರಿಸುವ ತ:ಖ್ತೆ | 3.4.5 | 169 |
| 11 | ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಿದ / ಗೈರುಹಾಜರಾದ ಸ್ವತಂತ್ರ ನಿರ್ದೇಶಕರ ಸಂಖ್ಯೆಯನ್ನು ತೋರಿಸುವ ತ:ಖ್ತೆ | 3.4.6 | 170 |
| 12 | 2022–23 ಹಣಕಾಸು ವರ್ಷದಲ್ಲಿ ಕೈಗೊಂಡ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ವಿವರವಾದ ಪರಿಶೀಲನೆಗಾಗಿ ಆಯ್ಕೆ ಮಾಡಲಾದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ | 4.3 | 171 |
| 13 | 2022–23 ರ ಹಣಕಾಸು ವರ್ಷದಲ್ಲಿ ಅಗತ್ಯವಿರುವ, ಅನುಮೋದಿಸಲಾದ ಮತ್ತು ನಿಯೋಜಿಸಲಾದ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ವೆಚ್ಚದ ತ:ಖ್ತೆ | 4.5.1 | 172 |
| 14 | 2022–23 ರ ಆರ್ಥಿಕ ವರ್ಷದಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ವೆಚ್ಚ ವರದಿ ಮತ್ತು ವಾಸ್ತವಿಕ ವೆಚ್ಚಗಳ ನಡುವಿನ ವ್ಯತ್ಯಾಸದ ತ:ಖ್ತೆ | 4.5.2 | 173 |
| 15 | 31 ಮಾರ್ಚ್ 2023 ರಂತೆ ಅನ್ವಯವಾಗುವ ಭಾರತೀಯ ಲೆಕ್ಕಪತ್ರ ಮಾನದಂಡಗಳ (ಖಟಿಜ ಂಖ) ವಿವರವಾದ ಪಟ್ಟಿ | 5.1 | 174 |
| 16 | 31 ಮಾರ್ಚ್ 2023 ರವರೆಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳ (ಖಟಿಜ ಂಖ) ನ್ನು ಅಳವಡಿಸಿಕೊಂಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ಗಳ ಪಟ್ಟಿ | 5.3.2 | 175 |
| 17 | ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಳ್ಳುವ ಸಮಯದಲ್ಲಿ ಐಚ್ಛಿಕ ವಿನಾಯಿತಿಗಳನ್ನು ಪಡೆದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ | 5.4.1 | 177 |
| 18 | ಲೆಕ್ಕಪರಿಶೋಧನೆಗಾಗಿ ಆಯ್ಕೆ ಮಾಡಲಾಗಿದ ಆರು ಇಲಾಖೆಗಳು/ಸಂಸ್ಥೆಗಳೊಂದಿಗಿನ ವಹಿವಾಟುಗಳ ವಿವರ | 6.1.5 | 179 |
| 19 | ನಿಯಮಿತ ಮುಕ್ತ ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸಲು ಕೆಟಿಪಿಪಿ ಕಾಯ್ದೆಯನ್ನು ಉಲ್ಲಂಘಿಸಿ ಒಂದೇ ಸರಕುಗಳಿಗೆ ಬಹು ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಬೇಡಿಕೆಯನ್ನು ವಿಭಜಿಸಿರುವುದು | 6.1.7.3 | 181 |

| ವಿವರಗಳು | | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 20 | ಕಿಯೋನಿಕ್ಸ್ ಖರೀದಿ'ದ ಐಟಿಯೇತರ ಉಪಕರಣಗಳು | 6.1.7.4 | 182 |
| 21 | ಆರಂಭಿಕ ಕಂಪನಿಗಳನ್ನು ಉನ್ನತ ವರ್ಗಕ್ಕೆ ವರ್ಗೀಕರಿಸಿದ್ದುದು ಮತ್ತು ಅರ್ಹತೆಗಿಂತ ಹೆಚ್ಚಿನ ಕೆಲಸವನ್ನು ವಹಿಸಿಕೊಟ್ಟಿರುವುದು | 6.1.7.5 | 186 |
| 22 | ಚಟುವಟಿಕೆಯ ಸಾಲಿನಲ್ಲಿ ಇಲ್ಲದಿದ್ದರೂ ವ್ಯಾಪಾರದ ಜವಾಬ್ದಾರಿ | 6.1.7.5 | 187 |
| 23 | ಚಟುವಟಿಕೆಯ ಸಾಲಿನಲ್ಲಿ ಇಲ್ಲದಿದ್ದರೂ ವ್ಯಾಪಾರದ ಜವಾಬ್ದಾರಿ | 6.1.7.6 | 189 |
| 24 | ಖರೀದಿ ಆದೇಶಗಳ ಮೂರನೇ ವ್ಯಕ್ತಿಯ ತಪಾಸಣೆಗಳನ್ನು ಒಂದೇ ದಿನದಲ್ಲಿ ವಿವಿಧ ಸ್ಥಳಗಳಲ್ಲಿ ಒಂದೇ ವ್ಯಕ್ತಿಯಿಂದ ನಡೆಸಲಾಗಿರುವ ವಿವರಗಳು | 6.1.10 | 195 |
| 24A | ನಕಲಿ TPV ವರದಿಗಳ ಮೇಲೆ ಮಾಡಿದ ಪಾವತಿ | 6.1.11 | 197 |
| 25 | ಸರಕುಗಳ ವಿತರಣೆಯಲ್ಲಿ ಅಥವಾ ಮೊದಲು ಮೂರನೇ ವ್ಯಕ್ತಿಯ ಪರಿಶೀಲನೆಯನ್ನು ನಡೆಸಲಾದ ಖರೀದಿ ಆದೇಶದ ವಿವರಗಳು | 6.1.12 | 198 |
| 26 | ಟೆಂಡರ್ ಪ್ರಕ್ರಿಯೆಯು ಪೂರ್ಣಗೊಳ್ಳುವ ಮೊದಲು ಮಾರಾಟಗಾರರಿಂದ ವಿತರಿಸಲಾದ ಸಲಕರಣೆಗಳು | 6.1.13 | 199 |
| 27 | ಕಿಯೋನಿಕ್ಸ್ ನಿಂದ ಬ್ಯುಸಿನೆಸ್ ಅಸೋಸಿಯೇಟ್ಸ್‌ಗೆ ನೀಡಿದ ಮುಂಗಡಗಳು | 6.1.14 | 200 |
| 28 | ಟೆಂಡರ್ ಮಾಡಿದ/ಪ್ರಾರಂಭಿಸಿದ –ಭೂಮಿಯ ಲಭ್ಯತೆಗೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ನಿಲ್ಲಿಸಲಾದ ಕಾಮಗಾರಿಗಳ ವಿವರಗಳು. | 6.2 | 206 |
| 29 | "ಪ್ಲಾಂಟ್ ಮತ್ತು ಮೆಷಿನರಿ ಸ್ಪೇರ್ಸ್" ಕಾಂಪೊನೆಂಟ್ ಅಡಿಯಲ್ಲಿ ಪಾವತಿಸಿದ ಹೆಚ್ಚುವರಿ ಬೆಲೆ ಹೊಂದಾಣಿಕೆ | 6.4 | 207 |
| 30 | "ಮೈಲ್ಡ್ ಸ್ಟೀಲ್ ಫ್ಲಾಟ್‌ಗಳು ಮತ್ತು ಶೀಟ್‌ಗಳು" ಕಾಂಪೊನೆಂಟ್ ಅಡಿಯಲ್ಲಿ ಪಾವತಿಸಿದ ಹೆಚ್ಚುವರಿ ಬೆಲೆ ಹೊಂದಾಣಿಕೆಯನ್ನು | 6.4 | 208 |
| 31 | ಶಾಂತಿಪುರ ಪಂಪ್ ಹೌಸ್‌ಗೆ ಹೆಚ್ಚುವರಿ ವಿದ್ಯುತ್ ಶುಲ್ಕದ ಲೆಕ್ಕಾಚಾರವನ್ನು ತೋರಿಸುವ ಹೇಳಿಕೆ | 6.9 | 210 |
| 32 | ಬೆಟ್ಟತಾವರೆಕೆರೆ ಪಂಪ್ ಹೌಸ್ ಗೆ ಹೆಚ್ಚುವರಿ ವಿದ್ಯುತ್ ಶುಲ್ಕದ ಲೆಕ್ಕ ತೋರಿಸುವ ಹೇಳಿಕೆ | 6.9 | 213 |
| 33 | ಜೆಸ್ಕಾಂನಿಂದ ಮರುಪಾವತಿ ಮಾಡಲಾಗಿರುವ ದಂಡಕ್ಕೆ ಸಂಬಂಧಿಸಿದಂತೆ ಆರ್–ಎ ಪಿ ಡಿ ಆರ್ ಪಿ, ಎನ್ ಜೆ ವೈ ಮತ್ತು ಕ್ಯಾಪೆಕ್ಸ್ ಅಂತರ್ಗತ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರಗಳು | 6.10 | 215 |
| 34 | ದಂಡ ಪಾವತಿಗಾಗಿ ಲೆಕ್ಕಪರಿಶೋಧನೆಯ ಟಿಪ್ಪಣಿಗಳು ಜೊತೆಜೊತೆಗೆ ಸಮರ್ಥನೆ | 6.10 | 217 |
| 35 | ಒಪ್ಪಂದದ ಬೇಡಿಕೆಯನ್ನು ಕಡಿಮೆ ಮಾಡದ ಕಾರಣದಿಂದ ತಪ್ಪಿಸಿಕೊಳ್ಳಬಹುದಾದ ಖರ್ಚು | 6.11 | 223 |

| ವಿವರಗಳು | | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 36 | ಪೂರೈಕೆದಾರರ ಜಿ.ಎಸ್.ಟಿ.ಆರ್ –1 ಡೇಟಾದೊಂದಿಗೆ ಗುತ್ತಿಗೆದಾರರು ಸಲ್ಲಿಸಿದ ತೆರಿಗೆ ಇನ್‌ವಾಯ್ಸ್‌ಗಳ ವಹಿವಾಟಿನ ವಿವರಗಳಲ್ಲಿ ಹೊಂದಿಕೆಯಾಗದಿರುವ ಹೇಳಿಕೆ ಮತ್ತು ಸಂಬಂಧಿಸಿದ ಆರ್.ಟಿ. ಒ ಅಧಿಕಾರಿಗಳಿಂದ ವಾಹನದ ವಿವರ | 6.12 | 225 |
| 37 | ಅಳತೆ ಪುಸ್ತಕದಲ್ಲಿ ನಮೂದಿಸಲಾದ "ಸೈಟ್ಗೆ ತಂದಿದ್ದು ಮತ್ತು ಅದನ್ನು ಕಾರ್ಯಗತಗೊಳಿಸಲಾದ" ಪೈಪ್‌ಲೈನ್‌ನ (ವ್ಯಾಸ, ಕೆಲಸದ ಒತ್ತಡ, ಉದ್ದ) ವಿವರಣೆಗಳ ನಡುವೆ ಹೊಂದಿಕೆಯಾಗದಿರುವುದನ್ನು ತೋರಿಸುವ ವಿವರಗಳು. | 6.12 | 234 |
| 38 | ಮುಂಗಡವಾಗಿ ₹ 40.16 ಕೋಟಿ ಪಾವತಿಸಿದ್ದರಿಂದ ಬಡ್ಡಿ ನಷ್ಟದ ಲೆಕ್ಕ ತೋರಿಸುವ ಹೇಳಿಕೆ. | 6.12 | 235 |
| 39 | ಕಲಬುರ್ಗಿಯಲ್ಲಿ ಗೋಡೌನ್ ಮತ್ತು ಕಚೇರಿಗೆ ತಪ್ಪಿಸಬಹುದಾದಾ ಬಾಡಿಗೆ ಪಾವತಿ | 6.15 | 236 |

# ಮುನ್ನುಡಿ

ಈ ವರದಿಯು ಮಾರ್ಚ್ 2023ಕ್ಕೆ ಅಂತ್ಯಗೊಂಡ ಸಾಲಿಗೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿರುತ್ತದೆ.

ಈ ಲೆಕ್ಕಪರಿಶೋಧನಾ ವರದಿಯು ಜಲಸಂಪನ್ಮೂಲ ಇಲಾಖೆ, ಇಂಧನ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ಗೃಹ ಇಲಾಖೆಗಳಿಗೆ ಸಂಬಂಧಿಸಿದ 10 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದ 15 ಅನುಸರಣಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಹೊಂದಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಅನುಸರಣಾ ಲೆಕ್ಕಪರಿಶೋಧನೆಯ ಸಂಶೋಧನೆಗಳ ಮೇಲೆ ಐದು ಅಧ್ಯಾಯಗಳು ಮತ್ತು ಒಂದು ಅಧ್ಯಾಯವನ್ನು ಒಳಗೊಂಡಿದೆ.

ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳನ್ನು (ಕಂಪನಿಗಳ ಅಧಿನಿಯಮದ ಅನುವುಗಳ ಅನುಸಾರ ಸರ್ಕಾರಿ ಕಂಪನಿಗಳೆಂದು ಪರಿಗಣಿಸಲಾದ ಕಂಪನಿಗಳು ಸೇರಿದಂತೆ) ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದಗಳು 139 ಮತ್ತು 143ರ ಅನುವುಗಳ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಸಿಎಜಿ) ಲೆಕ್ಕಪರಿಶೋಧನೆಯನ್ನು ನಡೆಸುವರು.. ಕಂಪನಿಗಳ ಅಧಿನಿಯಮದ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪರಿಚ್ಛೇದಗಳು 139 (5) ಮತ್ತು 139 (7)ರ ಅನುವುಗಳ ಅಡಿಯಲ್ಲಿ ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು (ಚಾರ್ಟರ್ಡ್ ಅಕೌಂಟೆಂಟ್ಸ್) ಪ್ರಮಾಣೀಕರಿಸುವಂತಹ ಲೆಕ್ಕಪತ್ರಗಳು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅಧಿಕಾರಿಗಳಿಂದ ಲೆಕ್ಕಪರಿಶೋಧನೆಯ ಷರತ್ತಿಗೆ ಒಳಪಟ್ಟಿರುತ್ತವೆ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ತಮ್ಮ ಟೀಕೆಟಿಪ್ಪಣಿಗಳನ್ನು ನೀಡುವರು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳಿಗೆ ಪೂರಕ ವರದಿಗಳನ್ನು ನೀಡುವರು. ಹೆಚ್ಚುವರಿಯಾಗಿ, ಈ ಕಂಪನಿಗಳು C&AG ಯ (DPC) ಕಾಯಿದೆ, 1971ರ ಸೆಕ್ಷನ್ 19ರ ಅಡಿಯಲ್ಲಿ CAG ಯಿಂದ ಪರೀಕ್ಷಾ ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತವೆ. ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಅವರ ಕಾನೂನುಗಳಿಂದ ನಿಯಂತ್ರಿಸಲ್ಪಡುತ್ತದೆ.

ಸರ್ಕಾರಿ ಕಂಪನಿ ಅಥವಾ ನಿಗಮದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ವರದಿಗಳನ್ನು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1971ರ ಪರಿಚ್ಛೇದ 19ಎ – ಇದರ ಅನುವುಗಳ ಅಡಿಯಲ್ಲಿ ಕರ್ನಾಟಕದ ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸರ್ಕಾರಕ್ಕೆ ಸಲ್ಲಿಸುವರು.

ಈ ವರದಿಯಲ್ಲಿ ತಿಳಿಸಲಾಗಿರುವಂತಹ ದೃಷ್ಟಾಂತಗಳು 2022–23ರ ಅವಧಿಗೆ ನಡೆಸಲಾದ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ ಗಮನಿಸಲಾದ ಹಾಗೂ ಈ ಹಿಂದಿನ ಸಾಲುಗಳಲ್ಲಿ ಗಮನಿಸಿದ, ಆದರೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದವು ಸಹ ಆಗಿರುತ್ತವೆ. 2022–23ಕ್ಕೆ ತದನಂತರದ ಅವಧಿಗೆ ಸಂಬಂಧಿತ ವಿಷಯಗಳನ್ನು ಕೂಡ ಅಗತ್ಯವಿದೆ ಎಂಬುದಾಗಿ ಭಾವಿಸಿರುವ ಕಡೆಗಳಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಕನ್ನಡ ಭಾಷಾಂತರ ಆವೃತ್ತಿಯ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಸ್ಥೂಲನೋಟ

# ಸ್ಥೂಲನೋಟ

ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯು, ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದಗಳು 139 ಹಾಗೂ 143 ರಿಂದ ನಿಯಂತ್ರಿಸಲ್ಪಡುತ್ತದೆ. ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಸಿಎಜಿ) ನೇಮಕ ಮಾಡುವ ಶಾಸನಬದ್ಧ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡುತ್ತಾರೆ. ಅಲ್ಲದೇ, ಈ ಲೆಕ್ಕಪತ್ರಗಳನ್ನು ಸಿಎಜಿರವರ ಪೂರಕ ಲೆಕ್ಕಪರಿಶೋಧನೆಗೆ ಒಳಪಡಿಸಲಾಗುತ್ತದೆ. ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಸಂಬಂಧಿತ ಶಾಸನಗಳಿಂದ ನಿಯಂತ್ರಿಸಲ್ಪಡುತ್ತದೆ.

ಈ ವರದಿಯು ಆರು ಅಧ್ಯಾಯಗಳನ್ನು ಹೊಂದಿದೆ:– I – ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸಿನ ಕಾರ್ಯನಿರ್ವಹಣೆಯ ಸಂಕ್ಷಿಪ್ತ ವಿವರಣೆ, II – ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣಾ ಪಾತ್ರ, III – ಸಾಂಸ್ಥಿಕ ಆಡಳಿತ ನಿರ್ವಹಣೆ, IV ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ, V – ಸರ್ಕಾರಿ ಕಂಪನಿಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆ ಮತ್ತು VI – ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು.

## I – ರಾಜ್ಯ ಸಾರ್ವಜನಿಕ ವಲಯದ ಆರ್ಥಿಕ ಕಾರ್ಯಕ್ಷಮತೆ

31 ಮಾರ್ಚ್ 2023ರಲ್ಲಿದ್ದಂತೆ ಕರ್ನಾಟಕದಲ್ಲಿ ಆರು ಶಾಸನಬದ್ಧ ನಿಗಮಗಳು, 121 ಸರ್ಕಾರಿ ಕಂಪನಿಗಳು/ ಸರ್ಕಾರಿ ನಿಯಂತ್ರಿತ ಇತರೆ ಕಂಪನಿಗಳು ಸೇರಿದಂತೆ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿದ್ದವು.

***(ಕಂಡಿಕೆ 1.1.4.1)***

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿ ಹಿಡುವಳಿ***

31 ಮಾರ್ಚ್ 2023ರಲ್ಲಿದ್ದಂತೆ 106 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಈಕ್ವಿಟಿಯ ಕಡೆಗೆ ಕರ್ನಾಟಕ ಸರ್ಕಾರವು (GoK) ರೂ.1,13,005.23 ಕೋಟಿ ಮೊತ್ತದ ಕಾಣಿಕೆಯನ್ನು ನೀಡಿರುವುದು, ಎಲ್ಲಾ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಒಟ್ಟಾರೆ ಈಕ್ವಿಟಿ ಮೊತ್ತ ರೂ.1,18,629.01 ಲಕ್ಷ ಮೊತ್ತಕ್ಕೆ ಹೋಲಿಸಿದಂತೆ ಶೇಕಡಾ 95.26 ಆಗಿರುವುದು. ಇದು 14 ಕೆಲಸ ಮಾಡದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ 12 ರಲ್ಲಿ ಹೂಡಿಕೆ ಮಾಡಲಾದ ₹ 151.37 ಕೋಟಿ ಮೊತ್ತದ ಈಕ್ವಿಟಿಯನ್ನು ಒಳಗೊಂಡಿದೆ.

***(ಕಂಡಿಕೆ 1.2.1)***

***ಸಾಲಗಳು***

30 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ GoK ನೀಡಿದ ₹ 10,308.94 ಕೋಟಿ ಮೊತ್ತದ ದೀರ್ಘಾವಧಿಯ ಸಾಲಗಳು 31 ಮಾರ್ಚ್ 2023 ಕ್ಕೆ ಬಾಕಿ ಉಳಿದಿವೆ, ಅದರಲ್ಲಿ ₹ 444.60 ಕೋಟಿ ಮೊತ್ತದ ಸಾಲಗಳು ಒಂಬತ್ತು ಕೆಲಸ ಮಾಡದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬಾಕಿ ಉಳಿದಿವೆ. ಇದಲ್ಲದೆ, 30 ರಲ್ಲಿ 15 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹ 1,891.62 ಕೋಟಿ ಮೊತ್ತದ ಬಾಕಿ ಉಳಿದಿರುವ ಬಡ್ಡಿಯನ್ನು ಹೊಂದಿದ್ದವು, ಅದರಲ್ಲಿ ₹ 1,541.26 ಕೋಟಿ ಮೂರು ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಉಳಿದಿವೆ.

***(ಕಂಡಿಕೆಗಳು 1.2.3, 1.2.4 ಮತ್ತು 1.5.2)***

31 ಮಾರ್ಚ್ 2023 ರಂತೆ ಬಾಕಿ ಉಳಿದಿರುವ ಸಾಲಗಳಿಗಿಂತ ಆಸ್ತಿಗಳ ಮೌಲ್ಯವು ಕಡಿಮೆಯಿರುವುದರಿಂದ 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಆಸ್ತಿ ಕವರೇಜ್ ಋಣಾತ್ಮಕವಾಗಿದೆ. ಬಡ್ಡಿ ಕವರೇಜ್ ಅನುಪಾತವು 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಒಂದಕ್ಕಿಂತ ಕಡಿಮೆಯಾಗಿದೆ, ಇದು ಬಡ್ಡಿ ವೆಚ್ಚಗಳನ್ನು ಪೂರೈಸಲು ಸಾಕಷ್ಟು ಆದಾಯವನ್ನು ಗಳಿಸಲು ಅವರ ಅಸಮರ್ಥತೆಯನ್ನು ಸೂಚಿಸುತ್ತದೆ.

***(ಕಂಡಿಕೆಗಳು 1.2.5 ಮತ್ತು 1.5.1)***

### *ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಪಾವತಿಸಿರುವ ಷೇರು ಲಾಭಾಂಶಗಳು*

ಲಾಭ ಗಳಿಸುವ 57 ರಲ್ಲಿ 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹ 307.46 ಕೋಟಿ ಮೊತ್ತದ ಲಾಭಾಂಶವನ್ನು ಪಾವತಿಸಿವೆ. GoK ಈಕ್ವಿಟಿಯನ್ನು ತುಂಬಿದ 13 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಒಂಬತ್ತು, ತೆರಿಗೆಯ ನಂತರದ ಲಾಭದ (PAT) 30 ಪ್ರತಿಶತಕ್ಕೆ ಸಮಾನವಾದ ಲಾಭಾಂಶವನ್ನು ಪಾವತಿಸಲಿಲ್ಲ. ಡಿವಿಡೆಂಡ್ ಪಾವತಿಯು PAT ಯ 5.89 ಪ್ರತಿಶತದಿಂದ 25.96 ಪ್ರತಿಶತದವರೆಗೆ ಇರುತ್ತದೆ.

***(ಕಂಡಿಕೆ 1.4.2)***

### *ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿರುವ ಲಾಭದ ವಿಶ್ಲೇಷಣೆ*

32 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿರುವ ₹ 408.72 ಕೋಟಿ ನಿವ್ವಳ ಲಾಭವು ವರದಿ ಮಾಡಿರುವ ₹ 1,063.80 ಕೋಟಿ ಇತರ ಆದಾಯಕ್ಕಿಂತ ಕಡಿಮೆಯಾಗಿದ್ದಿತ್ತು.

***(ಕಂಡಿಕೆ 1.6.1)***

### *ತೊಡಗಿಸಿರುವ ಬಂಡವಾಳದ ಮೇಲಿನ ಪ್ರತಿಫಲ ಮತ್ತು ಈಕ್ವಿಟಿ ಹೂಡಿಕೆ ಮೇಲಿನ ಪ್ರತಿಫಲ*

2020–2023ರ ಮೂರು ವರ್ಷಗಳ ಅವಧಿಯಲ್ಲಿ ಎಲ್ಲಾ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒಟ್ಟಾಗಿ ತೊಡಗಿಸಿರುವ ಬಂಡವಾಳದ ಮೇಲಿನ ಪ್ರತಿಫಲ (RoCE) ಸಕಾರಾತ್ಮಕವಾಗಿದ್ದಿತು ಆದರೆ ಅದೇ ಅವಧಿಯಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟಾರೆ ಋಣಾತ್ಮಕ ನಿವ್ವಳ ಆದಾಯದ ಕಾರಣ ಈಕ್ವಿಟಿ ಹೂಡಿಕೆ ಮೇಲಿನ ಪ್ರತಿಫಲ (ROE) ವನ್ನು ಲೆಕ್ಕಹಾಕಲಾಗುವುದಿಲ್ಲ.

***(ಕಂಡಿಕೆಗಳು 1.6.5 ಮತ್ತು 1.6.6)***

### *ರಾಜ್ಯ ಸರ್ಕಾರದಿಂದ ಮಾಡಲಾಗಿರುವ ಹೂಡಿಕೆಗಳಿಂದ ಪ್ರತಿಫಲಗಳು*

₹ 1,13,134.35 ಕೋಟಿಯ ಐತಿಹಾಸಿಕ ವೆಚ್ಚಕ್ಕೆ ಹೋಲಿಸಿದರೆ 31 ಮಾರ್ಚ್ 2023 ರಂತೆ ಹೂಡಿಕೆಯ ಪ್ರಸ್ತುತ ಮೌಲ್ಯವನ್ನು ₹ 1,92,327.87 ಕೋಟಿ ಎಂದು ಲೆಕ್ಕಹಾಕಲಾಗಿದೆ. ಐತಿಹಾಸಿಕ ವೆಚ್ಚದ ಆಧಾರದ ಮೇಲೆ ಸರ್ಕಾರಿ ಹೂಡಿಕೆಯ ಮೇಲಿನ ನೈಜ ಆದಾಯದ ದರ (RORR) ನಕಾರಾತ್ಮಕವಾಗಿತ್ತು.

***(ಕಂಡಿಕೆ 1.7)***

### *ನಷ್ಟ ಅನುಭವಿಸುತ್ತಿರುವ ಹಾಗೂ ಬಂಡವಾಳ ಮೊತ್ತಗಳು ಕರಗಿಹೋಗಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು*

56 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವರ್ಷದಲ್ಲಿ ₹ 7,449.75 ಕೋಟಿ ನಷ್ಟವನ್ನು ಅನುಭವಿಸಿವೆ. 31 ಮಾರ್ಚ್ 2023 ರಂತೆ 60 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹ 46,814.47 ಕೋಟಿ ಮೊತ್ತದಷ್ಟು ಕ್ರೋಡೀಕೃತ ನಷ್ಟಗಳನ್ನು ಹೊಂದಿದ್ದವು. ಈ 60 ಎಸ್‌ಪಿಎಸ್‌ಇಗಳಲ್ಲಿ 40 ರಲ್ಲಿ ನಿವ್ವಳ

ಮೌಲ್ಯವು ಸಂಪೂರ್ಣವಾಗಿ ಸವೆದು ಹೋಗಿದೆ ಅವರ ನಿವ್ವಳ ಮೌಲ್ಯವು ₹ 10,695.05 ಕೋಟಿಗಳ ಪಾವತಿಸಿದ ಈಕ್ವಿಟಿಯ ವಿರುದ್ಧ ₹ (–) 23,297.91 ಕೋಟಿಗಳಷ್ಟಿತ್ತು.

***(ಕಂಡಿಕೆಗಳು 1.8.1 ಮತ್ತು 1.8.2)***

## II – ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣಾ ಪಾತ್ರ

ಸಿಎಜಿಯ ಲೆಕ್ಕಪರಿಶೋಧನಾ ವ್ಯಾಪ್ತಿಗೆ ಒಳಪಡುವ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ, 2022–23ರ ಹಣಕಾಸು ತ:ಖ್ತೆಗಳನ್ನು ಕೇವಲ 25 ಎಸ್‌ಪಿಎಸ್‌ಇಗಳಿಂದ ಸ್ವೀಕರಿಸಲಾಗಿದೆ ಮತ್ತು 30 ಸೆಪ್ಟೆಂಬರ್ 2023 ರ ಮೊದಲು ಪ್ರಮಾಣೀಕರಿಸಲಾಗಿದೆ. 96 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು 233 ಲೆಕ್ಕಪತ್ರಗಳು ವಿವಿಧ ಕಾರಣಗಳಿಗಾಗಿ ಬಾಕಿ ಉಳಿಸಿಕೊಂಡಿದ್ದು, ಅದರಲ್ಲಿ 118 ಲೆಕ್ಕಪತ್ರಗಳು ಮೂರು ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಉಳಿಸಿಕೊಂಡಿವೆ. ಆರು ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳು 2022 23 ರ ಹಣಕಾಸು ವರ್ಷಕ್ಕೆ ಬಾಕಿ ಇವೆ.

***(ಕಂಡಿಕೆಗಳು 2.3.2 ಮತ್ತು 2.3.3)***

85 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಪಡೆದ 98 ಹಣಕಾಸು ತ:ಖ್ತೆಗಳಲ್ಲಿ 76 ಹಣಕಾಸು ತ:ಖ್ತೆಗಳನ್ನು ಪರಿಶೀಲಿಸಲಾಗಿದೆ ಮತ್ತು ಉಳಿದ 22 ಲೆಕ್ಕಪತ್ರಗಳಿಗೆ ಸಮೀಕ್ಷೇತರ ಪ್ರಮಾಣಪತ್ರವನ್ನು 22 ಲೆಕ್ಕಪತ್ರಗಳಿಗೆ ನೀಡಲಾಯಿತು.

***(ಕಂಡಿಕೆ 2.5.1)***

13 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸು ತ:ಖ್ತೆಗಳನ್ನು ಸಿಎಜಿಯ ಪೂರಕ ಲೆಕ್ಕಪರಿಶೋಧನೆಯ ಪರಿಣಾಮವಾಗಿ ತಿದ್ದುಪಡಿ ಮಾಡಲಾಗಿದೆ, ಇದರ ಪರಿಣಾಮವಾಗಿ ಲಾಭದ ಮೇಲೆ ₹ 357.15 ಕೋಟಿ ಮತ್ತು ಆಸ್ತಿ ಮತ್ತು ಹೊಣೆಗಾರಿಕೆಗಳಲ್ಲಿನ ಬದಲಾವಣೆಗಳಿಗೆ ₹ 509.55 ಕೋಟಿ ಆರ್ಥಿಕ ಪರಿಣಾಮ ಬೀರಿತು. 48 ಹಣಕಾಸು ತ:ಖ್ತೆಗಳ ಮೇಲಿನ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗಳನ್ನು ಪರಿಷ್ಕರಿಸಲಾಯಿತು.

***(ಕಂಡಿಕೆಗಳು 2.5.2 ಮತ್ತು 2.5.3)***

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸು ಹೇಳಿಕೆಗಳ ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ನೀಡಲಾದ ಮಹತ್ವದ ಕಾಮೆಂಟ್‌ಗಳು ಲಾಭದಾಯಕತೆಯ ಮೇಲೆ ₹ 88.01 ಕೋಟಿ ಮತ್ತು ಆಸ್ತಿ ಮತ್ತು ಹೊಣೆಗಾರಿಕೆಗಳಲ್ಲಿನ ಬದಲಾವಣೆಗಳಿಗೆ ₹ 130.45 ಕೋಟಿಗಳ ಆರ್ಥಿಕ ಪ್ರಭಾವವನ್ನು ಬೀರಿವೆ. ಶಾಸನಬದ್ಧ ನಿಗಮಗಳ ಹಣಕಾಸು ತ:ಖ್ತೆಗಳ ಪೂರಕ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ನೀಡಲಾದ ಮಹತ್ವದ ಕಾಮೆಂಟ್‌ಗಳು ಲಾಭದಾಯಕತೆಯ ಮೇಲೆ ₹ 241.48 ಕೋಟಿ ಮತ್ತು ಆಸ್ತಿ ಮತ್ತು ಹೊಣೆಗಾರಿಕೆಗಳಲ್ಲಿನ ಬದಲಾವಣೆಗಳಿಗೆ ₹ 55.36 ಕೋಟಿಗಳ ಆರ್ಥಿಕ ಪರಿಣಾಮ ಬೀರಿವೆ.

***(ಕಂಡಿಕೆಗಳು 2.5.4 ಮತ್ತು 2.5.5)***

ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ನಾಲ್ಕು ಸರ್ಕಾರಿ ಕಂಪನಿಗಳು ಮತ್ತು ನಾಲ್ಕು ಶಾಸನಬದ್ಧ ನಿಗಮಗಳು) ಹಣಕಾಸು ತ:ಖ್ತೆಗಳ ತಯಾರಿಕೆಯಲ್ಲಿ ಲೆಕ್ಕಪರಿಶೋಧಕ ಮಾನದಂಡಗಳು / ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅನುಸರಿಸದಿರುವುದು ಗಮನಕ್ಕೆ ಬಂದಿದೆ.

***(ಕಂಡಿಕೆಗಳು 2.6.1 ಮತ್ತು 2.6.2)***

## III – ಸಾಂಸ್ಥಿಕ ಆಡಳಿತ ನಿರ್ವಹಣೆ

ಬೋರ್ಡ್/ಸಮಿತಿಗಳ ಸಂವಿಧಾನ ಮತ್ತು ಆಂತರಿಕ ಲೆಕ್ಕಪರಿಶೋಧನಾ ಕಾರ್ಯವಿಧಾನದ ಸ್ಥಾಪನೆಯ ಮೇಲೆ ಕನಿಷ್ಠ ಒಂದು ಅನ್ವಯವಾಗುವ ಮಾನದಂಡವನ್ನು ಪೂರೈಸಿದ ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿಮಾಡದ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಸಾಂಸ್ಥಿಕ ಆಡಳಿತದ ನಿಬಂಧನೆಗಳ ಅನುಸರಣೆಯನ್ನು ವಿಮರ್ಶೆಯು ಒಳಗೊಳ್ಳುತ್ತದೆ.

ಹನ್ನೆರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ಮೆಮೊರಾಂಡಮ್ ಆಫ್ ಅಸೋಸಿಯೇಷನ್ / ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ಗೆ ಅಗತ್ಯವಾದ ಬದಲಾವಣೆಗಳನ್ನು ಅಳವಡಿಸಲು ಅಥವಾ ಕಾಯಿದೆಗೆ ಮೊದಲ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅನ್ವಯವಾಗುವ ನಮೂನೆಗಳನ್ನು ಅಳವಡಿಸಿಕೊಳ್ಳಲು ಬದಲಾಯಿಸಲಿಲ್ಲ.

***(ಕಂಡಿಕೆ 3.2.1)***

ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸ್ವತಂತ್ರ ನಿರ್ದೇಶಕರನ್ನು ಹೊಂದಿರಲಿಲ್ಲ ಮತ್ತು ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ತಮ್ಮ ಮಂಡಳಿಗಳಲ್ಲಿ ಮಹಿಳಾ ನಿರ್ದೇಶಕರನ್ನು ಹೊಂದಿರಲಿಲ್ಲ.

***(ಕಂಡಿಕೆಗಳು 3.3.2 ಮತ್ತು 3.3.3)***

ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಪೂರ್ಣಾವಧಿ ಉದ್ಯೋಗಿ ಸರ್ಕಾರಿ ಅಧಿಕಾರಿಗಳನ್ನು ಸ್ವತಂತ್ರ ನಿರ್ದೇಶಕರಾಗಿ ನೇಮಿಸಿದ್ದವು ಮತ್ತು ಕೇವಲ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸ್ವತಂತ್ರ ನಿರ್ದೇಶಕರಿಗೆ ತರಬೇತಿ ನೀಡಿದ್ದರು.

***(ಕಂಡಿಕೆಗಳು 3.4.3 ಮತ್ತು 3.4.4)***

2022–23 ರ ಆರ್ಥಿಕ ವರ್ಷದಲ್ಲಿ, 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ 44 ಸ್ವತಂತ್ರ ನಿರ್ದೇಶಕರಲ್ಲಿ 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ 20 ಸ್ವತಂತ್ರ ನಿರ್ದೇಶಕರು ತಮ್ಮ ಅಧಿಕಾರಾವಧಿಯಲ್ಲಿ ನಡೆದ ಒಂದರಿಂದ ಏಳು ಮಂಡಳಿಯ ಸಭೆಗಳಲ್ಲಿ ಉಪಸ್ಥಿತರಿರಲಿಲ್ಲ ಮತ್ತು ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹತ್ತು ನಿರ್ದೇಶಕರು ವರ್ಷದಲ್ಲಿ ನಡೆದ ವಾರ್ಷಿಕ ಸಾಮಾನ್ಯ ಸಭೆಗಳಗೆ ಹಾಜರಾಗಲು ವಿಫಲರಾಗಿದ್ದರು. 14 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸ್ವತಂತ್ರ ನಿರ್ದೇಶಕರು ಪ್ರತ್ಯೇಕ ಸಭೆ ನಡೆಸಲು ವಿಫಲರಾಗಿದ್ದಾರೆ.

***(ಕಂಡಿಕೆಗಳು 3.4.5, 3.4.6 ಮತ್ತು 3.4.8)***

ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವರ್ಷದಲ್ಲಿ ನಿಗದಿತ ಕನಿಷ್ಠ ಸಂಖ್ಯೆಯ ನಾಲ್ಕು ಮಂಡಳಿಯ ಸಭೆಗಳನ್ನು ನಡೆಸಲು ವಿಫಲವಾಗಿವೆ ಮತ್ತು ಆರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಎರಡು ಮಂಡಳಿಯ ಸಭೆಗಳ ನಡುವೆ 120 ದಿನಗಳಿಗಿಂತ ಹೆಚ್ಚಿನ ಅಂತರವನ್ನು ಗಮನಿಸಲಾಗಿದೆ.

***(ಕಂಡಿಕೆ 3.5.1)***

ಮಂಡಳಿಯಲ್ಲಿ ಸ್ವತಂತ್ರ ನಿರ್ದೇಶಕರನ್ನು ಹೊಂದಿದ್ದ 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಆಡಿಟ್ ಸಮಿತಿಗಳಲ್ಲಿ ಸ್ವತಂತ್ರ ನಿರ್ದೇಶಕರು ಬಹುಮತವನ್ನು ಹೊಂದಿದ್ದರು ಆರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಆಡಿಟ್ ಸಮಿತಿಗಳಿಗೆ ಉಲ್ಲೇಖದ ನಿಯಮಗಳನ್ನು ರೂಪಿಸಲು ವಿಫಲವಾಗಿವೆ.

***(ಕಂಡಿಕೆಗಳು 3.6.1 ಮತ್ತು 3.6.2)***

ಹತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸಲು ವಿಫಲವಾಗಿವೆ ಮತ್ತು ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಚಿಸಲಾದ ಸಮಿತಿಗಳು ಮಾನದಂಡಗಳನ್ನು ರೂಪಿಸಲು ಮತ್ತು ಸಂಭಾವನೆ ನೀತಿಯನ್ನು ಶಿಫಾರಸು ಮಾಡಲು ವಿಫಲವಾಗಿವೆ.

***(ಕಂಡಿಕೆಗಳು 3.6.4 ಮತ್ತು 3.6.6)***

ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ನಿಗದಿತ 60 ದಿನಗಳ ವಿರುದ್ಧ 64 ದಿನಗಳಿಂದ 283 ದಿನಗಳವರೆಗೆ ಅವಧಿಯ ನಂತರ ಹತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವಾರ್ಷಿಕ ಆದಾಯವನ್ನು ಸಲ್ಲಿಸಿವೆ.

***(ಕಂಡಿಕೆ 3.9.3)***

21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ, ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕಂಪನಿ ಕಾರ್ಯದರ್ಶಿಯನ್ನು ಶಾಶ್ವತ ಆಧಾರದ ಮೇಲೆ ನೇಮಿಸಲು ವಿಫಲವಾಗಿವೆ. ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕಂಪನಿಗೆ ಅನ್ವಯಿಸುವ ಕಾನೂನುಗಳ ಪಟ್ಟಿಯನ್ನು ಸಿದ್ಧಪಡಿಸಿಲ್ಲ ಮತ್ತು ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅನ್ವಯವಾಗುವ ಕಾನೂನುಗಳ ಅನುಸರಿಸದಿರುವುದನ್ನು ಒಪ್ಪಿಕೊಂಡಿವೆ.

***(ಕಂಡಿಕೆಗಳು 3.10.1 ಮತ್ತು 3.10.2)***

ಇಂಧನ ಇಲಾಖೆಯ ಅಡಿಯಲ್ಲಿರುವ ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕಂಪನಿಗಳಾಗಿ ತಮ್ಮ ಸಂಯೋಜನೆಗೆ ಮುಂಚಿತವಾಗಿ ರೂಪಿಸಲಾದ ಹಳೆಯ KEB ಆಂತರಿಕ ಆಡಿಟ್ ಕೈಪಿಡಿಯನ್ನು ಅನುಸರಿಸುತ್ತಿವೆ.

***(ಕಂಡಿಕೆ 3.12.1)***

## IV - ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ

2019–20 ರಿಂದ 2021–22 ರ ಹಿಂದಿನ ಮೂರು ಹಣಕಾಸು ವರ್ಷಗಳಲ್ಲಿ ಒಟ್ಟು ಲಾಭವನ್ನು ವರದಿ ಮಾಡಿದ 22 ಲಾಭ–ಮಾಡುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022–23 ರ ಆರ್ಥಿಕ ವರ್ಷದಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR) ಚಟುವಟಿಕೆಗಳಿಗೆ ಸಂಬಂಧಿಸಿದ ಶಾಸನಬದ್ಧ ನಿಬಂಧನೆಗಳ ಅನುಸರಣೆಯನ್ನು ವಿಮರ್ಶೆಯು ಒಳಗೊಳ್ಳುತ್ತದೆ.

***ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಸಂಯೋಜನೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ನವೀಕರಣ***

11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಸಿಎಸ್‌ಆರ್ ಸಮಿತಿಗಳು ಸ್ವತಂತ್ರ ನಿರ್ದೇಶಕರನ್ನು ಸದಸ್ಯರನ್ನಾಗಿ ಹೊಂದಿರಲಿಲ್ಲ. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ಸಮಗ್ರ ಸಿಎಸ್‌ಆರ್ ನೀತಿಯನ್ನು ರೂಪಿಸಲಿಲ್ಲ ಮತ್ತು ಕೇವಲ ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಿಎಸ್‌ಆರ್ ನಿಯಮಗಳಿಗೆ ತಿದ್ದುಪಡಿಗಳ (ಜನವರಿ 2021) ಪರಿಣಾಮವಾಗಿ ತಮ್ಮ ಸಿಎಸ್‌ಆರ್ ನೀತಿಗಳನ್ನು ನವೀಕರಿಸಿವೆ.

***(ಕಂಡಿಕೆಗಳು 4.4.2 ಮತ್ತು 4.4.4)***

***ಹಣಕಾಸಿನ ಹಂಚಿಕೆ ಮತ್ತು ಖರ್ಚಿನಲ್ಲಿ ಕೊರತೆ***

ಇಪ್ಪತ್ತೊಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವರ್ಷದಲ್ಲಿ ಸಿಎಸ್‌ಆರ್ ಚಟುವಟಿಕೆಗಳಿಗೆ ₹ 70.22 ಕೋಟಿ ಮಂಜೂರು ಮಾಡಿದ್ದು, ಅದರ ವಿರುದ್ಧ ಕೇವಲ ₹ 50.42 ಕೋಟಿ ಖರ್ಚು ಮಾಡಲಾಗಿದೆ. ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವರ್ಷಕ್ಕೆ ಮಾಡಿದ ಹಂಚಿಕೆಗಿಂತ

₹ 19.86 ಕೋಟಿ ಕಡಿಮೆ ಖರ್ಚು ಮಾಡಿವೆ. ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಐದು ಖರ್ಚು ಮಾಡದ ಮೊತ್ತವನ್ನು ನಿರ್ದಿಷ್ಟಪಡಿಸಿದ ಸಿಎಸ್ಆರ್ ಖಾತೆಗೆ ವರ್ಗಾಯಿಸಲು ವಿಫಲವಾಗಿವೆ.

***(ಕಂಡಿಕೆಗಳು 4.5.1 ಮತ್ತು 4.5.4)***

ಮೂರು ಕೇಂದ್ರೀಕೃತ ಕ್ಷೇತ್ರಗಳು, ಅಂದರೆ, ಶೆಡ್ಯೂಲ್ VII ರಲ್ಲಿ ನಿರ್ದಿಷ್ಟಪಡಿಸಿದ 12 ಕ್ಷೇತ್ರಗಳಲ್ಲಿ, ಆರೋಗ್ಯ, ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ, ಪ್ರತಿಶತ 90 ರಷ್ಟು ಹಣವನ್ನು ಖರ್ಚು ಮಾಡಿದೆ.

***(ಕಂಡಿಕೆ 4.8.3)***

***ವರದಿ ಮಾಡುವಿಕೆಯನ್ನು ಬಹಿರಂಗಪಡಿಸುವುದು***

ಸಿಎಸ್ಆರ್ ವಾರ್ಷಿಕ ವರದಿಯ ಬಹಿರಂಗಪಡಿಸುವಿಕೆಗಾಗಿ ಆರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಿದ್ದುಪಡಿ ಮಾಡಿದ ಸಿಎಸ್ಆರ್ ನೀತಿ ನಿಯಮಗಳು, 2022 ರ ಪ್ರಕಾರ ಅನುಬಂಧದ ನಿರ್ದಿಷ್ಟ ಸ್ವರೂಪವನ್ನು ಅಳವಡಿಸಿಕೊಳ್ಳಲು ವಿಫಲವಾಗಿವೆ. ಹನ್ನೆರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಿಎಸ್ಆರ್ ಸಮಿತಿಯ ಸಂಯೋಜನೆಯನ್ನು ಬಹಿರಂಗಪಡಿಸಲು ವಿಫಲವಾಗಿವೆ ಮತ್ತು 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅಧಿಕೃತ ವೆಬ್‌ಸೈಟ್‌ನಲ್ಲಿ ಮಂಡಳಿಯಿಂದ ಅನುಮೋದಿಸಲಾದ ಸಿಎಸ್ಆರ್ ಯೋಜನೆಗಳ ವಿವರಗಳನ್ನು ಬಹಿರಂಗಪಡಿಸಲು ವಿಫಲವಾಗಿವೆ.

***(ಕಂಡಿಕೆಗಳು 4.9.1 ಮತ್ತು 4.9.2)***

***ಮೇಲ್ವಿಚಾರಣಾ ಕಾರ್ಯಚೌಕಟ್ಟು***

ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಿಎಸ್ಆರ್ ನೀತಿಗಳು ಯಾವುದೇ ನಿರ್ದಿಷ್ಟ ಮೇಲ್ವಿಚಾರಣಾ ಕಾರ್ಯವಿಧಾನವನ್ನು ನಮೂದಿಸಲು ವಿಫಲವಾಗಿವೆ. 13 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹ 37.33 ಕೋಟಿ ವೆಚ್ಚವನ್ನು ಒಳಗೊಂಡಿರುವ 167 ಚಟುವಟಿಕೆಗಳಿಗೆ ಬಳಕೆಯ ಪ್ರಮಾಣಪತ್ರಗಳನ್ನು (ಯುಸಿ) ಪಡೆಯಲು ವಿಫಲವಾಗಿವೆ.

***(ಕಂಡಿಕೆ 4.10.1)***

## V – ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆಯ ಪ್ರಭಾವ

121 ಸರ್ಕಾರಿ /ಸರ್ಕಾರಿ ನಿಯಂತ್ರಿತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ, 29 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಐಜಿಎಎಪಿ ಫ್ರೇಮ್‌ವರ್ಕ್‌ನಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳ ಫ್ರೇಮ್‌ವರ್ಕ್‌ಗೆ ಪರಿವರ್ತನೆಗೊಂಡಿವೆ ಮತ್ತು ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ಮೊದಲ ಹಣಕಾಸು ಹೇಳಿಕೆಗಳಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳ ಚೌಕಟ್ಟನ್ನು ಅಳವಡಿಸಿಕೊಂಡಿವೆ.

***(ಕಂಡಿಕೆ 5.3.2)***

***ಹಿಂದಿನ ದಿನಾಂಕಗಳಿಂದ ಅನ್ವಯವಾಗುವುದಕ್ಕೆ ವಿನಾಯಿತಿಗಳು***

ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಗಾಗಿ ಪಡೆದ ಐಚ್ಛಿಕ ವಿನಾಯಿತಿಗಳನ್ನು ಪ್ರತ್ಯೇಕವಾಗಿ ಬಹಿರಂಗಪಡಿಸಲು ಹತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವಿಫಲವಾಗಿವೆ. ಹದಿನೆಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒಂದರಿಂದ ಏಳು ಐಚ್ಛಿಕ ವಿನಾಯಿತಿಗಳನ್ನು ಪಡೆದಿವೆ.

***(ಕಂಡಿಕೆ 5.4.1)***

***ಮೊದಲ ಬಾರಿ ಅಳವಡಿಸಿಕೊಳ್ಳುವುದರ ಮೇಲೆ ಸಮನ್ವಯಗೊಳಿಸುವ ತ:ಖ್ತೆಗಳನ್ನು ಬಹಿರಂಗಪಡಿಸುವಿಕೆ***

ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಮನ್ವಯದ ಎಲ್ಲಾ ಮೂರು ಹೇಳಿಕೆಗಳನ್ನು ಸೇರಿಸಲು ವಿಫಲವಾಗಿವೆ (ಈಕ್ವಿಟಿ, ಒಟ್ಟು ಸಮಗ್ರ ಆದಾಯ ಮತ್ತು ನಗದು ಹರಿವುಗಳಿಗಾಗಿ). 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ನಗದು ಹರಿವಿನ ಮೇಲಿನ ಹೇಳಿಕೆ ಸಮನ್ವಯವನ್ನು ಸೇರಿಸಲು ವಿಫಲವಾಗಿವೆ.

***(ಕಂಡಿಕೆ 5.4.2)***

***ಆಯ್ದ ಪ್ರಮುಖ ಕ್ಷೇತ್ರಗಳ ಮೇಲೆ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆಯ ಪ್ರಭಾವ***

ಹಣಕಾಸಿನ ಹೇಳಿಕೆಗಳ ಮೇಲೆ ಪರಿವರ್ತನೆಯ ಪರಿಣಾಮವನ್ನು ವಿವರಿಸುವ ಪ್ರತ್ಯೇಕ ಬಹಿರಂಗಪಡಿಸುವಿಕೆಯನ್ನು ಮಾಡಲು ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವಿಫಲವಾಗಿವೆ.

***(ಕಂಡಿಕೆ 5.5)***

***ತೆರಿಗೆಯ ನಂತರದ ಲಾಭದ ಮೇಲೆ ಪ್ರಭಾವ, ಆದಾಯ, ಒಟ್ಟು ಆಸ್ತಿಗಳ ಮೌಲ್ಯ ಮತ್ತು ನಿವ್ವಳ ಮೌಲ್ಯ***

ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆಯು 17 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ತೆರಿಗೆಯ ನಂತರದ ಲಾಭದ ಮೇಲೆ ಪರಿಣಾಮ ಬೀರಿದೆ (ನಿವ್ವಳ ಪರಿಣಾಮ – PAT ನಲ್ಲಿ ₹ 9,614.05 ಕೋಟಿಗಳಷ್ಟು ಇಳಿಕೆ), ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಆದಾಯ (ನಿವ್ವಳ ಪರಿಣಾಮ – ₹ 75.14 ಕೋಟಿ ಆದಾಯದಲ್ಲಿ ಇಳಿಕೆ), ಮತ್ತು 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಒಟ್ಟು ಆಸ್ತಿಗಳ ಮೌಲ್ಯ (ನಿವ್ವಳ ಪರಿಣಾಮ – ಆಸ್ತಿ ಮೌಲ್ಯದಲ್ಲಿ ₹ 1807 ಹೆಚ್ಚಳ). ಯಾವುದೇ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ನಿವ್ವಳ ಮೌಲ್ಯ ಮತ್ತು ಅದರ ಮೇಲೆ ಜವಾಬ್ದಾರರಾಗಿರುವ ಅಂಶಗಳ ಮೇಲಿನ ಪ್ರಭಾವವನ್ನು ಮೌಲ್ಯಮಾಪನ ಮಾಡಿಲ್ಲ ಮತ್ತು ಬಹಿರಂಗಪಡಿಸಿಲ್ಲ.

***(ಕಂಡಿಕೆಗಳು 5.5.1, 5.5.7, 5.5.9 ಮತ್ತು 5.7)***

***ಹೊಸ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬಹಿರಂಗಪಡಿಸುವಿಕೆ ಅಗತ್ಯತೆಗಳನ್ನು ಅನುಪಾಲನೆ ಮಾಡದಿರುವಿಕೆ***

ನಾಲ್ಕು ಹೊಸ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ಎರಡು ತಮ್ಮ ಮೊದಲ ಹಣಕಾಸು ಹೇಳಿಕೆಗಳಲ್ಲಿ ತುಲನಾತ್ಮಕ ಅಂಕಿಅಂಶಗಳನ್ನು ಪ್ರಸ್ತುತಪಡಿಸದಿರುವುದಕ್ಕೆ ಸಂಬಂಧಿಸಿದಂತೆ ವಾಸ್ತವಿಕ ಸ್ಥಿತಿಯನ್ನು ಬಹಿರಂಗಪಡಿಸಿರಲಿಲ್ಲ.

***(ಕಂಡಿಕೆ 5.8)***

## VI – ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

ಈ ಅಧ್ಯಾಯದಲ್ಲಿ ಸೇರಿಸಲಾದ ಅಂಶಗಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಿರ್ವಹಣೆಯಲ್ಲಿನ ಯೋಜನೆ, ಒಪ್ಪಂದ ನಿರ್ವಹಣೆ ಮತ್ತು ಇತರ ಚಟುವಟಿಕೆಗಳಲ್ಲಿನ ನಿರ್ವಹಣೆಯ ನ್ಯೂನತೆಗಳನ್ನು ಎತ್ತಿ ತೋರಿಸುತ್ತವೆ, ಇದು ಹಣಕಾಸಿನ ಅಕ್ರಮಗಳಿಗೆ ಕಾರಣವಾಯಿತು.

***ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಸಾರಾಂಶವನ್ನು, ಈ ಕೆಳಗೆ ನೀಡಲಾಗಿದೆ:***

***ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್))*** ಕರ್ನಾಟಕದಲ್ಲಿ ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳನ್ನು ಉತ್ತೇಜಿಸುವ ಏಕೈಕ ಉದ್ದೇಶದಿಂದ 1976 ರಲ್ಲಿ ಸ್ಥಾಪಿಸಲಾಯಿತು ಮತ್ತು ಐಟಿ ಕೈಗಾರಿಕೆಗಳಿಗೆ ಮೂಲಸೌಕರ್ಯ, ಜನಸಾಮಾನ್ಯರಿಗೆ ಐಟಿ ಶಿಕ್ಷಣ ಮತ್ತು ಇ–ಆಡಳಿತಕ್ಕಾಗಿ ಅತ್ಯಾಧುನಿಕ ಉತ್ಪನ್ನಗಳು ಮತ್ತು ಸೇವೆಯನ್ನು ಒದಗಿಸುವ ಅಧ್ಯಾದೇಶನೀಡಲಾಯಿತು. GoK, ಕಾಲಕಾಲಕ್ಕೆ, ಕಿಯೋನಿಕ್ಸ್ ನಿಂದ IT ಉಪಕರಣಗಳ ಖರೀದಿಯಲ್ಲಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆಗಳ (KTPP ಕಾಯಿದೆ) ಅಡಿಯಲ್ಲಿ ನಿಗದಿಪಡಿಸಿದ ಟೆಂಡರ್ ಪ್ರಕ್ರಿಯೆಯಿಂದ ಎಲ್ಲಾ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ವಿನಾಯಿತಿ ನೀಡಿದೆ. ಏಪ್ರಿಲ್ 2018 ಮತ್ತು ಮಾರ್ಚ್ 2023 ರ ನಡುವೆ ಸರ್ಕಾರಿ ಇಲಾಖೆಗಳು/ಸಂಸ್ಥೆಗಳಿಗೆ ಕಿಯೋನಿಕ್ಸ್ ನಿಂದ ಉಪಕರಣಗಳ ಸಂಗ್ರಹಣೆ ಮತ್ತು ಪೂರೈಕೆಯ ಲೆಕ್ಕಪರಿಶೋಧನಾ ವಿಶ್ಲೇಷಣೆಯು ಈ ಕೆಳಗಿನ ಅಕ್ರಮಗಳನ್ನು ಬಹಿರಂಗಪಡಿಸಿತು:

- ಖರೀದಿ ಇಲಾಖೆಗಳು ಮತ್ತು ಕಿಯೋನಿಕ್ಸ್ ಏಖಿಕಕ ಕಾಯಿದೆಯಡಿಯಲ್ಲಿ GoK ನೀಡಿದ ವಿನಾಯಿತಿಯ ಷರತ್ತುಗಳನ್ನು ಉಲ್ಲಂಘಿಸಿಲಾಗಿತ್ತು ಮತ್ತು IT ಯೇತರ ಉಪಕರಣಗಳನ್ನು ಖರೀದಿಸಲಾಗಿತ್ತು. ಸಲಕರಣೆಗಳ ಖರೀದಿಯ ಸಮಯದಲ್ಲಿ, ಖರೀದಿ ಆದೇಶಗಳನ್ನು ವಿಭಜಿಸುವ ಮೂಲಕ ನಿಗದಿತ ವಿತ್ತೀಯ ಮಿತಿಗಳನ್ನು ಉಲ್ಲಂಘಿಸಲಾಗಿತ್ತು.
- ಕಿಯೋನಿಕ್ಸ್ ಬ್ಯುಸಿನೆಸ್ ಅಸೋಸಿಯೇಟ್ಸ್ (BAs) ಎಂಬ ಪೂರೈಕೆದಾರರನ್ನು ದಾಖಲಿಸಿಕೊಂಡಿದೆ, ಅವರು ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಿಗಾಗಿ ಉಪಕರಣಗಳನ್ನು ಸಂಗ್ರಹಿಸುತ್ತಾರೆ ಮತ್ತು ಸರಬರಾಜು ಮಾಡುತ್ತಾರೆ. ಆದಾಗ್ಯೂ, BAಗಳ ದಾಖಲಾತಿಯಲ್ಲಿ ಯಾವುದೇ ಪಾರದರ್ಶಕತೆ ಇಲ್ಲ ಎಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು ಮತ್ತು ಕಿಯೋನಿಕ್ಸ್ ಮೂಲ ಸಲಕರಣೆ ತಯಾರಕರು (OEM ಗಳು) ಅಥವಾ OEM ಗಳ ಅಧಿಕೃತ ಡೀಲರ್‌ಗಳನ್ನು BA ಗಳಾಗಿ ನೋಂದಾಯಿಸಲಿಲ್ಲ. ಇದಲ್ಲದೆ, ಕಿಯೋನಿಕ್ಸ್ KTPP ಕಾಯಿದೆ ಅಡಿಯಲ್ಲಿ GoK ಹೊರಡಿಸಿದ ವಿನಾಯಿತಿ ಅಧಿಸೂಚನೆಯ ಅಡಿಯಲ್ಲಿ ಅಗತ್ಯವಿರುವಂತೆ ಃಂಗಳೊಂದಿಗೆ 'ದರ ಒಪ್ಪಂದ' ಒಪ್ಪಂದಗಳಿಗೆ ಪ್ರವೇಶಿಸಲಿಲ್ಲ. ಕಿಯೋನಿಕ್ಸ್ ಸಹ BAಗಳಿಗೆ ಆದೇಶಗಳನ್ನು ಪಡೆಯಲು ಬಳಕೆದಾರರ ಇಲಾಖೆಗಳು/ಸಂಸ್ಥೆಗಳನ್ನು ನೇರವಾಗಿ ಸಂಪರ್ಕಿಸಲು ಅನುಮತಿ ನೀಡಿದೆ.
- ಕಿಯೋನಿಕ್ಸ್ ಉಪಕರಣಗಳ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ದರದಲ್ಲಿ ಉಪಕರಣಗಳನ್ನು ಸಂಗ್ರಹಿಸಿದೆ ಮತ್ತು ಸರಬರಾಜು ಮಾಡಿದೆ. ಮೂರು ಬಳಕೆದಾರರ ಇಲಾಖೆಗಳು/ಸಂಸ್ಥೆಗಳ ಖರೀದಿಗೆ ಸಂಬಂಧಿಸಿದಂತೆ (ಮೌಲ್ಯ: ₹ 75.81 ಕೋಟಿ), ವೆಬ್‌ಸೈಟ್‌ಗಳು, ಃಂಗಳಿಂದ ಉಪಕರಣಗಳನ್ನು ವಿತರಿಸಿದ ಪೆಟ್ಟಿಗೆಗಳ ಮೇಲೆ ಮುದ್ರಿಸಲಾದ ಗರಿಷ್ಠ ಚಿಲ್ಲರೆ ಬೆಲೆಯೊಂದಿಗೆ (MRP), ಇತ್ಯಾದಿಗಳಿಂದ ಬೆಲೆಯ ಕ್ರಾಸ್ ಪರಿಶೀಲನೆಯು ನಿಜವಾದ ಬೆಲೆಯನ್ನು ಬಹಿರಂಗಪಡಿಸಿತು. ಉಪಕರಣಗಳ ಮೌಲ್ಯ ಕೇವಲ ₹ 27.84 ಕೋಟಿ. ಹೀಗಾಗಿ, ಕಿಯೋನಿಕ್ಸ್ ಮೂಲಕ ಖರೀದಿಯಿಂದ ಸಾರ್ವಜನಿಕ ಬೊಕ್ಕಸಕ್ಕೆ ₹ 47.97 ಕೋಟಿ ಹೆಚ್ಚುವರಿ ಆರ್ಥಿಕ ಹೊರೆಯಾಗಿತ್ತು.
- ಆಯ್ದ 347 POಗಳ ಮಾದರಿಯ (ಆಯ್ದ ಆರು PEಗಳಲ್ಲಿ) ₹ 240.25 ಕೋಟಿ ಮೊತ್ತದ ಆಡಿಟ್ ಪರಿಶೀಲನೆಯಲ್ಲಿ ₹ 154.44 ಕೋಟಿ ಮೌಲ್ಯದ ನಾಲ್ಕು ಕಇಗಳ 18 ಆರ್ಡರ್‌ಗಳನ್ನು 4(ರ) ವಿನಾಯಿತಿ ಪಡೆಯಲು ಮತ್ತು ಪೂರೈಕೆ ಆದೇಶಗಳನ್ನು ನೇರವಾಗಿ ಕಿಯೋನಿಕ್ಸ್‌ಗೆ ವಹಿಸಲು (ವಿವರವಾದ ಪರಿಶೀಲನೆಗಾಗಿ ಆಯ್ಕೆ ಮಾಡಲಾದ ಮಾದರಿಯ ಶೇಕಡಾ 64.28) ₹ 1 ಕೋಟಿಗಿಂತ ಕಡಿಮೆ ಮೌಲ್ಯದ 195 ಖರೀದಿ ಆರ್ಡರ್‌ಗಳಾಗಿ ವಿಂಗಡಿಸಲಾಗಿದೆ ಎಂದು ತಿಳಿದುಬಂದಿದೆ...

- ಸಂಬಂಧಪಟ್ಟ ಬಳಕೆದಾರರ ಇಲಾಖೆ/ಸಂಸ್ಥೆಗೆ ಉಪಕರಣಗಳ ನಿಜವಾದ ವಿತರಣೆಯನ್ನು ಖಾತ್ರಿಪಡಿಸದೆಯೇ ₹ 9.36 ಕೋಟಿ ಮೊತ್ತದ ಪಾವತಿಗಳನ್ನು BA ಗಳಿಗೆ ಮಾಡಲಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು.
- ಪರಿಶೋಧನೆಯು ಸಲಕರಣೆಗಳ ನಿಜವಾದ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಕಿಯೋನಿಕ್ಸ್ ನ ಮೂರನೇ ವ್ಯಕ್ತಿಯ ಪರಿಶೀಲನೆ (TPV) ವ್ಯವಸ್ಥೆಯಲ್ಲಿ ಸಮಸ್ಯೆಗಳನ್ನು ಗಮನಿಸಲಾಯಿತು. BA ಗಳಿಂದಲೇ ಮೂರನೇ ವ್ಯಕ್ತಿಗಳನ್ನು ನೇಮಿಸಲಾಗಿತ್ತು, ಕಿಯೋನಿಕ್ಸ್ ನಿಂದ TPV ಸಿಬ್ಬಂದಿಗೆ ಯಾವುದೇ ಸ್ಪಷ್ಟ ನಿರ್ದೇಶನಗಳು/ ಮಾರ್ಗಸೂಚಿಗಳು, ಇತ್ಯಾದಿ ಇರಲಿಲ್ಲ. ಅಲ್ಲದೆ, 347 ಪರೀಕ್ಷಿಸಿದ ಪ್ರಕರಣಗಳಲ್ಲಿ 155 ರಲ್ಲಿ TPV ನಡೆಸದೆಯೇ ₹ 85.98 ಕೋಟಿ ಪಾವತಿ ಮಾಡಲಾಗಿತ್ತು. ನಕಲಿ ವಿತರಣಾ ಚಲನ್‌ಗಳು ಮತ್ತು ನಕಲಿ/ನಕಲಿ TPV ವರದಿಗಳ ಮೇಲೆ BAಗಳಿಗೆ ಪಾವತಿ ಮಾಡಿದ ನಿದರ್ಶನಗಳನ್ನು ಆಡಿಟ್ ಗಮನಿಸಿದೆ. ಇದಲ್ಲದೆ, ಉಪಕರಣಗಳ ವಿತರಣೆಯ ನಿಜವಾದ ದಿನಾಂಕಕ್ಕಿಂತ ಮುಂಚೆಯೇ TPV ಅನ್ನು ನಡೆಸಲಾಗುವುದು ಎಂದು ತೋರಿಸಲಾಗಿದೆ.

***(ಕಂಡಿಕೆ 6.1)***

***ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ***ದಿಂದ ಅಗತ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಕಾಮಗಾರಿ ಆರಂಭಿಸಿದ ಪರಿಣಾಮ ಕಾಮಗಾರಿ ಸ್ಥಗಿತಗೊಂಡಿದ್ದು, ₹ 30.00 ಕೋಟಿ ವೆಚ್ಚವನ್ನು ತಡೆಹಿಡಿಯಲಾಗಿದೆ.

***(ಕಂಡಿಕೆ 6.2)***

***ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು*** ಕಾಮಗಾರಿಯ ವ್ಯಾಪ್ತಿಯ ಬದಲಾವಣೆಗೆ ಅನುಗುಣವಾಗಿ ಒಪ್ಪಂದದ ಮೊತ್ತದ ಬೆಲೆಯಲ್ಲಿನ ಬದಲಾವಣೆಗೆ ಸಂಬಂಧಿಸಿದ ಒಪ್ಪಂದದ ಷರತ್ತನ್ನು ಅನ್ವಯಿಸಲು ವಿಫಲವಾದ ಕಾರಣ ಗುತ್ತಿಗೆದಾರರಿಗೆ ₹ 29.77 ಕೋಟಿಯ **ಅನುಚಿತ ಆರ್ಥಿಕ ಲಾಭ ಉಂಟಾಗಿದೆ.**

***(ಕಂಡಿಕೆ 6.3)***

***ಕೃಷ್ಣಾ ಭಾಗ್ಯ ಜಲ ನಿಗಮ ಲಿಮಿಟೆಡ್‌ನಿಂದ*** ಬೆಲೆ ಹೊಂದಾಣಿಕೆ ಪಾವತಿಗಳನ್ನು ನಿಯಂತ್ರಿಸಲು ತಪ್ಪಾದ ಬೆಲೆ ಸೂಚ್ಯಂಕಗಳನ್ನು ಅಳವಡಿಸಿಕೊಂಡಿದ್ದರಿಂದ ₹ 5.78 ಕೋಟಿ ಹೆಚ್ಚುವರಿ ಪಾವತಿಯಾಗಿದೆ.

***(ಕಂಡಿಕೆ 6.4)***

***ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ*** ವತಿಯಿಂದ ಜಾರಿಯಾಗದಿರುವ ಚರಂಡಿ ಕಾಮಗಾರಿಗೆ ₹ 33.95 ಲಕ್ಷ ಮೊತ್ತದ ಸುಳ್ಳು ಪ್ರಮಾಣ ಪತ್ರ ನೀಡಿ ವಂಚನೆ ಮಾಡಲಾಗಿದ್ದು,

***(ಕಂಡಿಕೆ 6.5)***

220 ಕಿವ್ಯಾ ಉಪ–ಸ್ಟೇಷನ್ನಿನ ನಿರ್ಮಾಣಕ್ಕಾಗಿ ಹಂಚಿಕೆ ಮಾಡಲಾಗಿದ್ದಂತಹ ಭೂಮಿಯ ಸೂಕ್ತತೆಯನ್ನು ಪರಿಶೀಲಿಸುವಲ್ಲಿನ ***ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಲಿಮಿಟೆಡ್*** ವೈಫಲ್ಯತೆಯು ಸಮೀಪದಲ್ಲಿದ್ದಂತ ಕೆರೆಯ ಹಿನ್ನೀರಿನಲ್ಲಿ ಉಪ–ಸ್ಟೇಷನ್ನು ಮುಳುಗಡೆಗೊಳ್ಳುವುದನ್ನು ತಡೆಯುವ ಸಲುವಾಗಿ ₹ 5.35 ಕೋಟಿ ಹೆಚ್ಚುವರಿ ಖರ್ಚುವೆಚ್ಚವನ್ನು ಭರಿಸುವ ಮೂಲಕ ತಡೆಗೋಡೆ ನಿರ್ಮಿಸುವಲ್ಲಿ ಪರಿಣಮಿಸಿದ್ದಿತು.

***(ಕಂಡಿಕೆ 6.6)***

ನಿರ್ಧಾರ ಕೈಗೊಳ್ಳುವಲ್ಲಿ ವಿವಿಧ ಹಂತಗಳಲ್ಲಿ ಉಂಟಾಗಿರುವ ವಿಳಂಬದಿಂದ ***ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಲಿಮಿಟೆಡ್‌ನಿಂದ*** ₹ 3.97 ಕೋಟಿ ಮೊತ್ತದಷ್ಟು ತಪ್ಪಿಸಬಹುದಾದ ಬಡ್ಡಿಯನ್ನು ಪಾವತಿ ಮಾಡುವಂತಾಗಿದೆ.

***(ಕಂಡಿಕೆ 6.7)***

ವಿವಿಧ ಹಂತಗಳಲ್ಲಿ ಉಂಟಾದ ಲೋಪಗಳು, ಯೋಜನೆಯು ಪೂರ್ಣಗೊಳ್ಳುವಲ್ಲಿ 15 ವರ್ಷಗಳ ವಿಳಂಬವಾಗುವಲ್ಲಿ, ದುಬಾರಿ ಉಪಾಕರಣಗಳು ದಶಕದ ಕಾಲ ನಿರುಪಯುಕ್ತವಾಗಿ ಉಳಿಯಲು ಹಾಗೂ ***ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್ ಲಿಮಿಟೆಡ್***ನಿಂದ ₹ 3.16 ಕೋಟಿ ಮೊತ್ತದಷ್ಟು ನಷ್ಟ ಉಂಟಾಗುವಲ್ಲಿ ಪರಿಣಮಿಸಿದ್ದಿತು

***(ಕಂಡಿಕೆ 6.8)***

ವಿದ್ಯುತ್ ಬಿಲ್‌ಗಳ ನಿಖರತೆಯನ್ನು ಪರಿಶೀಲಿಸುವಲ್ಲಿ ***ವಿಶ್ವೇಶ್ವರಯ್ಯ ಜಲ ನಿಗಮ ಲಿಮಿಟೆಡ್*** ವಿಫಲವಾದ ಕಾರಣ ₹ 16.89 ಕೋಟಿ ಮೊತ್ತದ ವಿದ್ಯುತ್ ಶುಲ್ಕವನ್ನು ಹೆಚ್ಚುವರಿಯಾಗಿ ಪಾವತಿಸಲಾಗಿದೆ.

***(ಕಂಡಿಕೆ 6.9)***

***ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ*** ಕೇಂದ್ರೀಯ ಖರೀದಿ ಸಮಿತಿಯು ಯಾವುದೇ ಸಮಂಜಸವಾದ ಕಾರಣಗಳಿಲ್ಲದೆಯೇ ಮತ್ತು ಗುತ್ತಿಗೆದಾರರ ಮೇಲೆ ವಹಿಸಬಹುದಾಗಿದ್ದ ವಿಳಂಬಗಳನ್ನು ನಿರ್ಲಕ್ಷಿಸಿ ₹ 10.26 ಕೋಟಿ ಮೊತ್ತದಷ್ಟು ಸಮಾಪನ ನಷ್ಟಗಳ ಮರುಪಾವತಿಯನ್ನು ಅಂಗೀಕರಿಸಿತ್ತು, ಇದರಿಂದಾಗಿ ಗುತ್ತಿಗೆದಾರರುಗಳಿಗೆ ಅನಗತ್ಯ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿದ್ದಿತು.

***(ಕಂಡಿಕೆ 6.10)***

ಸ್ಟಾರ್ಟ್-ಅಪ್ ವಿದ್ಯುತ್ ಆವಶ್ಯಕತೆಯನ್ನು ಮರು-ನಿರ್ಧಾರಣೆ ಮಾಡುವಲ್ಲಿನ ***ಕೆಪಿಸಿ ಅನಿಲ ಇಂಧನ ನಿಗಮ ನಿಯಮಿತದ*** ವಿಫಲತೆಯು ₹ 10.17 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿದ್ದಿತು.

***(ಕಂಡಿಕೆ 6.11)***

***ಕರ್ನಾಟಕ ನೀರಾವರಿ ನಿಗಮ ನಿಯಮಿತವು*** ವಂಚನೆಯ ಇನ್‌ವಾಯ್ಸ್‌ಗಳ ಆಧಾರದ ಮೇಲೆ ₹ 40.16 ಕೋಟಿ ಮುಂಗಡ ಪಾವತಿ ಮಾಡಿದೆ. ಇದರಿಂದ ₹ 4.53 ಕೋಟಿ ಬಡ್ಡಿ ನಷ್ಟವಾಗಿದೆ.

***(ಕಂಡಿಕೆ 6.12)***

# ಅಧ್ಯಾಯ - I

## ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸಿನ ಕಾರ್ಯನಿರ್ವಹಣೆಯ ಸಂಕ್ಷಿಪ್ತ ವಿವರಣೆ

# ಅಧ್ಯಾಯ – I

## ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸಿನ ಕಾರ್ಯನಿರ್ವಹಣೆಯ ಸಂಕ್ಷಿಪ್ತ ವಿವರಣೆ

### 1.1 ಪೀಠಿಕೆ

***ಈ ವರದಿಯ ಉದ್ದೇಶ***

**1.1.1** ಈ ವರದಿಯು ಸರ್ಕಾರಿ ಕಂಪನಿಗಳು, ಶಾಸನಬದ್ಧ ನಿಗಮಗಳು ಹಾಗೂ ಸರ್ಕಾರದ ನಿಯಂತ್ರಣದಲ್ಲಿರುವ ಇತರೆ ಕಂಪನಿಗಳ ಹಣಕಾಸು ಕಾರ್ಯನಿರ್ವಹಣೆಯ ಸಂಕ್ಷಿಪ್ತ ವಿವರಗಳನ್ನು ಮಂಡಿಸುತ್ತಿರುವುದು. ಈ ವರದಿಯಲ್ಲಿ ಕಂಪನಿಗಳು / ನಿಗಮಗಳ ಹಣಕಾಸು ಕಾರ್ಯನಿರ್ವಹಣೆಯ ಒಂದು ಒಟ್ಟಾರೆ ಚಿತ್ರಣವನ್ನು ಅವುಗಳ ಲೆಕ್ಕಪತ್ರಗಳು ಮತ್ತು ಸಲ್ಲಿಸಿರುವ ಮಾಹಿತಿಗಳು ಬಹಿರಂಗಪಡಿಸಿರುವಂತೆ ನೀಡಲಾಗಿರುವುದು[1]. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 2022-23 ಹಣಕಾಸು ಸಾಲಿಗೆ ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಎಸ್ ಪಿ ಎಸ್ ಇಗಳು) ಪೂರಕ ಲೆಕ್ಕಪರಿಶೋಧನೆಯ ಪರಿಣಾಮವಾಗಿ (ಅಥವಾ ಹಿಂದಿನ ಸಾಲುಗಳಿಗೆ ಸಂಬಂಧಿಸಿದ್ದು ಚಾಲ್ತಿ ವರ್ಷದಲ್ಲಿ ಅಂತಿಮ ರೂಪಕ್ಕೆ ತರಲಾಗಿರುವಂತಹ[2]) ಗಮನಾರ್ಹವಾದಂತಹ ಟೀಕೆಟಿಪ್ಪಣಿಗಳ ಪ್ರಭಾವಗಳನ್ನೂ ಸಹ ವರದಿಯ ಅಧ್ಯಾಯ IIರಲ್ಲಿ ಚರ್ಚಿಸಲಾಗಿರುವುದು.

ವರದಿಯು ಹಣಕಾಸು ವರ್ಷ 2022-23ರ ಅವಧಿಯಲ್ಲಿ ಕ್ರಮವಾಗಿ ಅಧ್ಯಾಯ III ಮತ್ತು IVರಲ್ಲಿ ಕಂಪನಿಗಳ ಅಧಿನಿಯಮ, 2013ರ ಅನುವುಗಳು ಮತ್ತು ಸಾಂಸ್ಥಿಕ ನಿರ್ವಹಣೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಮೇಲಿನ ಇತರೆ ಅನ್ವಯಗೊಳ್ಳುವಂತಹ ನಿಯಮಗಳ ಪಾಲನೆಗೆ ಆಯ್ದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬದ್ಧತೆಯ ಸ್ಥಿತಿಗತಿ ಕುರಿತು ಒಂದು ಒಳನೋಟವನ್ನೂ ಸಹ ಒದಗಿಸುತ್ತದೆ. ವರದಿಯು, ಅಧ್ಯಾಯ Vರಲ್ಲಿ, ಭಾರತೀಯ ಲೆಕ್ಕವನ್ನಿಡುವಿಕೆ ಮಾನದಂಡಗಳನ್ನು ಕಾರ್ಯಗತಗೊಳಿಸಿರುವಿಕೆಯ ಪರಿಣಾಮ ಮತ್ತು ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂಥ ಲೆಕ್ಕವನ್ನಿಡುವಿಕೆಯ ತತ್ವಗಳಿಂದ ಪರಿವರ್ತನೆ ಹೊಂದಿರುವ ಅಥವಾ ತಮ್ಮ ಮೊದಲ ಹಣಕಾಸು ತ:ಖ್ತೆಗಳಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬಹಿರಂಗಪಡಿಸುವಿಕೆ ಅವಶ್ಯಕತೆಗಳ ಪಾಲನೆಯ ಮೇಲಿನ ಸ್ಥಿತಿಗತಿಯನ್ನೂ ಸಹ ಪ್ರಸ್ತುತಪಡಿಸುತ್ತದೆ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಈ ವರದಿಯ ಅಧ್ಯಾಯ-VI ರಲ್ಲಿ ಸೇರಿಸಲಾಗಿರುವುದು.

***ಸರ್ಕಾರಿ ಕಂಪನಿಗಳು/ನಿಗಮಗಳ ವಿವರಣೆ***

**1.1.2** ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 2(45)ರಲ್ಲಿ ಸರ್ಕಾರಿ ಕಂಪನಿಯನ್ನು ಪಾವತಿಸಲ್ಪಟ್ಟಿರುವ ಷೇರು ಬಂಡವಾಳದ ಶೇಕಡಾ 51ಕ್ಕಿಂತ ಕಡಿಮೆ ಇಲ್ಲದ ಬಂಡವಾಳವನ್ನು ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳಿಂದ, ಅಥವಾ ಭಾಗಶ:ವಾಗಿ ಕೇಂದ್ರ ಸರ್ಕಾರದಿಂದ ಮತ್ತು ಭಾಗಶ:ವಾಗಿ ಒಂದು ಅಥವಾ ಹೆಚ್ಚಿನ ರಾಜ್ಯ ಸರ್ಕಾರಗಳಿಂದ ಹೊಂದಿರುವ ಕಂಪನಿ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ ಮತ್ತು ಇದು ಸರ್ಕಾರಿ ಕಂಪನಿಯ ಒಂದು ಅಂಗ ಸಂಸ್ಥೆ ಆಗಿರುವಂತಹ ಕಂಪನಿಯನ್ನೂ ಒಳಗೊಂಡಿರುತ್ತದೆ. ರಾಜ್ಯ ಸರ್ಕಾರವು ಸಂಸತ್ತಿನಿಂದ /ರಾಜ್ಯ ಶಾಸಕಾಂಗದಿಂದ (ಶಾಸನಬದ್ಧ ನಿಗಮಗಳು) ನಿರ್ದಿಷ್ಟ ಅಧಿನಿಯಮಗಳ ಅಡಿಯಲ್ಲಿ ಸ್ಥಾಪಿಸಿರುವಂತಹ ಅಂಗ ಸಂಸ್ಥೆಗಳನ್ನೂ ಸಹ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಎಂಬುದಾಗಿ ವರ್ಗೀಕರಿಸಲಾಗಿರುವುದು.

---

[1] ಆರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕೋರಿದ ಸಂಬಂಧಿತ ಮಾಹಿತಿಯನ್ನು ಒದಗಿಸಿಲ್ಲ. ಇದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ, ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಎಂಬ ಎರಡು ಕಾರ್ಯನಿರತ ಕಂಪನಿಗಳನ್ನು ಒಳಗೊಂಡಿದೆ.

[2] 30 ಸೆಪ್ಟೆಂಬರ್ 2023 ರವರೆಗೆ ಪ್ರಮಾಣೀಕರಿಸಲಾದ ಇತ್ತೀಚಿನ ಲೆಕ್ಕಪತ್ರಗಳು.

ಅಲ್ಲದೆಯೇ, ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳಿಂದ ಮತ್ತು ಭಾಗಶ: ಕೇಂದ್ರ ಸರ್ಕಾರ ಮತ್ತು ಒಂದು ಅಥವಾ ಹೆಚ್ಚಿನ ರಾಜ್ಯ ಸರ್ಕಾರಗಳಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಮಾಲೀಕತ್ವದಲ್ಲಿರುವಂತಹ ಅಥವಾ ನಿಯಂತ್ರಣದಲ್ಲಿರುವಂತಹ ಯಾವುದೇ ಇತರೆ ಕಂಪನಿಯನ್ನು[3] ಈ ವರದಿಯಲ್ಲಿ "ಸರ್ಕಾರಿ ನಿಯಂತ್ರಿತ ಇತರೆ ಕಂಪನಿ" ಎಂಬುದಾಗಿ ಉಲ್ಲೇಖಿಸಲಾಗಿರುವುದು.

***ಲೆಕ್ಕಪರಿಶೋಧನೆಗೆ ಆದೇಶ***

**1.1.3** ಸರ್ಕಾರಿ ಕಂಪನಿಗಳು ಮತ್ತು ಸರ್ಕಾರದಿಂದ ನಿಯಂತ್ರಿತ ಇತರೆ ಕಂಪನಿಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (5)ರಿಂದ 143 (7)ರ ಅನುವುಗಳ ಅಡಿಯಲ್ಲಿ ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಂತ್ರಣಗಳ ಅಡಿಯಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಲ್ಪಡುವುದು. ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಕಂಪನಿಗಳಿಗೆ ಚಾರ್ಟರ್ಡ್ ಅಕೌಂಟೆಂಟುಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳನ್ನಾಗಿ ನೇಮಕ ಮಾಡುವರು ಹಾಗೂ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಬೇಕಾದ ವಿಧಾನದ ಬಗ್ಗೆ ನಿರ್ದೇಶನಗಳನ್ನು ನೀಡುವರು. ಅಲ್ಲದೆಯೇ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸುವ ಹಕ್ಕನ್ನು ಸಹ ಹೊಂದಿರುತ್ತಾರೆ.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ, 1950ರ ಪರಿಚ್ಛೇದ 33 (2)ರ ಅನುಸಾರ ನಾಲ್ಕು ಸಾರಿಗೆ ನಿಗಮಗಳ[4] ಏಕೈಕ ಲೆಕ್ಕಪರಿಶೋಧಕರಾಗಿರುತ್ತಾರೆ. ಅಲ್ಲದೆಯೇ, ರಾಜ್ಯ ಹಣಕಾಸು ನಿಗಮ ಅಧಿನಿಯಮ 1951ರ ಪರಿಚ್ಛೇದ 37(6)ರ ಅಡಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮಕ್ಕೆ ಹಾಗೂ ಸರಕುಸಾಮಗ್ರಿಗಳ ಉಗ್ರಾಣಗಳ ನಿಗಮಗಳ ಅಧಿನಿಯಮ, 1962ರ ಪರಿಚ್ಛೇದ 31 (8)ರ ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆಗಳು ಕಡ್ಡಾಯವಾಗಿರುತ್ತವೆ.

### 1.1.4 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ರಾಜ್ಯದ ಒಟ್ಟಾರೆ ರಾಜ್ಯ ದೇಶೀಯ ಉತ್ಪನ್ನ (ಜಿಎಸ್‌ಡಿಪಿ)ಕ್ಕೆ ಅವುಗಳ ಕೊಡುಗೆ

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ***

**1.1.4.1** ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳು ರಾಜ್ಯ ಸರ್ಕಾರದ ಕಂಪನಿಗಳು ಮತ್ತು ಶಾಸನಬದ್ಧ ನಿಗಮಗಳನ್ನು ಒಳಗೊಂಡಿರುತ್ತವೆ. ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಜನತೆಯ ಯೋಗಕ್ಷೇಮವನ್ನು ಗಮನದಲ್ಲಿಟ್ಟುಕೊಂಡು ವಾಣಿಜ್ಯ ಮಾದರಿ ಚಟುವಟಿಕೆಗಳನ್ನು ನಡೆಸುವ ಸಲುವಾಗಿ ಸ್ಥಾಪಿಸಲಾಗಿರುವುದು ಹಾಗೂ ಅವುಗಳು ರಾಜ್ಯದ ಆರ್ಥಿಕ ಕ್ಷೇತ್ರದಲ್ಲಿ ಒಂದು ಪ್ರಮುಖ ಸ್ಥಾನವನ್ನು ಹೊಂದಿರುತ್ತವೆ. 31 ಮಾರ್ಚ್ 2023ರಲ್ಲಿದ್ದಂತೆ ಕರ್ನಾಟಕದಲ್ಲಿ ಆರು ಶಾಸನಬದ್ಧ ನಿಗಮಗಳು[5], 102 ಸರ್ಕಾರಿ ಕಂಪನಿಗಳು (ಹದಿನಾಲ್ಕು[6] ನಿಷ್ಕ್ರಿಯ ಸರ್ಕಾರಿ ಕಂಪನಿಗಳೂ

---

[3] ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು 4 ಸೆಪ್ಟೆಂಬರ್ 2014 ರಂದು ಹೊರಡಿಸಿದ ಕಂಪನಿಗಳು (ತೊಂದರೆಗಳನ್ನು ತೆಗೆದುಹಾಕುವುದು) ಏಳನೇ ಆದೇಶ, 2014 ರ ಗೆಜೆಟ್ ಅಧಿಸೂಚನೆ.

[4] ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ *(ಹಿಂದೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ* ನಿಗಮ) ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮ.

[5] ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಹಿಂದೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ), ಬೆಂಗಳೂರು ಮಹಾನಗರ ಸಾರಿಗೆ ನಿಗಮ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಮತ್ತು ಕರ್ನಾಟಕ ರಾಜ್ಯ ಉಗ್ರಾಣ ನಿಗಮ.

ಸೇರಿದಂತೆ[7]) ಮತ್ತು 19 ಸರ್ಕಾರಿ ನಿಯಂತ್ರಿತ ಇತರೆ ಕಂಪನಿಗಳು ಸೇರಿದಂತೆ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿದ್ದವು. ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹೆಸರುಗಳನ್ನು ***ಅನುಬಂಧ – 1***ರಲ್ಲಿ ನೀಡಲಾಗಿದೆ. ಈ ಸರ್ಕಾರಿ ಕಂಪನಿಗಳ ಪೈಕಿ, ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ (ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್) ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ. ನಿಷ್ಕ್ರಿಯಗೊಂಡಿರುವಂತಹ 14 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಬಂಡವಾಳದ ಕಡೆಗೆ ₹ 160.21 ಕೋಟಿ (ವಿವರಗಳು ಟೇಬಲ್ ಸಂಖ್ಯೆ 1.3ರಲ್ಲಿ) ಮತ್ತು ₹ 449.39 ಕೋಟಿ ಧೀರ್ಘಕಾಲೀನ ಸಾಲಗಳ ಕಡೆಗೆ (ವಿವರಗಳು ಟೇಬಲ್ ಸಂಖ್ಯೆ 1.5ರಲ್ಲಿ) ಹೂಡಿಕೆಗಳನ್ನು ಹೊಂದಿರುತ್ತವೆ. ನಿಷ್ಕ್ರಿಯಗೊಂಡಿರುವಂತಹ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಹೂಡಿಕೆಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುವುದಿಲ್ಲವಾದ ಕಾರಣ ಇದೊಂದು ಕ್ಲಿಷ್ಟ ಕ್ಷೇತ್ರವಾಗಿರುತ್ತದೆ.

### ***ರಾಜ್ಯದ ಒಟ್ಟಾರೆ ರಾಜ್ಯ ದೇಶೀಯ ಉತ್ಪನ್ನಕ್ಕೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕೊಡುಗೆ***

**1.1.4.2** ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ರಾಜ್ಯದ ಒಟ್ಟಾರೆ ರಾಜ್ಯ ದೇಶೀಯ ಉತ್ಪನ್ನಕ್ಕೆ ವಹಿವಾಟಿನ ಅನುಪಾತವು ರಾಜ್ಯದ ಆರ್ಥಿಕ ಕ್ಷೇತ್ರದಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಚಟುವಟಿಕೆಗಳ ಮಟ್ಟವನ್ನು ತೋರಿಸುತ್ತದೆ. 31 ಮಾರ್ಚ್ 2023ಕ್ಕೆ ಅಂತ್ಯಗೊಂಡ ಮೂರು ವರ್ಷಗಳ ಅವಧಿಗೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟುಗಳು ಮತ್ತು ಜಿ ಎಸ್ ಡಿ ಪಿ ವಹಿವಾಟಿನ ವಿವರಗಳನ್ನು ಈ ಕೆಳಗೆ **ಕೋಷ್ಟಕ ಸಂಖ್ಯೆ 1.1**ರಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.1: ಕರ್ನಾಟಕದ ಒಟ್ಟಾರೆ ರಾಜ್ಯ ದೇಶೀಯ ಉತ್ಪನ್ನಕ್ಕೆ ಹೋಲಿಸಿದಂತೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಹಿವಾಟಿನ ವಿವರಗಳು**

**(₹ ಕೋಟಿ ಗಳಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2020-21 | 2021-22 | 2022-23 |
|---|---|---|---|---|
| 1 | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು/ನಿಗಮಗಳ ಸಂಖ್ಯೆ | 124 | 125 | 127 |
| 2 | ವಹಿವಾಟು[8] | 77,636 | 77,410 | 88,825 |
| 3 | ಕರ್ನಾಟಕದ ಒಟ್ಟಾರೆ ರಾಜ್ಯ ದೇಶೀಯ ಉತ್ಪನ್ನ[9] | 16,25,073 | 19,62,725 | 21,81,217 |
| 4 | ಕರ್ನಾಟಕದ ರಾಜ್ಯ ದೇಶೀಯ ಉತ್ಪನ್ನಕ್ಕೆ ಶೇಕಡಾವಾರು ವಹಿವಾಟು | **4.78** | **3.94** | **4.07** |

ಎಲ್ಲಾ ಮೂರು ವರ್ಷಗಳಲ್ಲಿ ಒಟ್ಟಾರೆ ರಾಜ್ಯ ದೇಶೀಯ ಉತ್ಪನ್ನಕ್ಕೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕೊಡುಗೆಯು ಅತ್ಯಂತ ಕನಿಷ್ಠ ಪ್ರಮಾಣದ್ದಾಗಿರುತ್ತದೆ.

## 1.2 ಸರ್ಕಾರಿ ಕಂಪನಿಗಳು ಮತ್ತು ನಿಗಮಗಳಲ್ಲಿ ಹೂಡಿಕೆಗಳು ಹಾಗೂ ಆಯವ್ಯಯ ಬೆಂಬಲಗಳು

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ 31 ಮಾರ್ಚ್ 2023ರಲ್ಲಿದ್ದಂತೆ ಮಾಡಲಾಗಿದ್ದಂತಹ ಒಟ್ಟು ಹೂಡಿಕೆಗಳು ₹ 2,17,953.64 ಕೋಟಿ ಆಗಿದ್ದಿತು, ಈ ಮೊತ್ತವು ₹ 1,18,629.01 ಕೋಟಿ

[6] ಕರ್ನಾಟಕ ಆಗ್ರೋ ಕೈಗಾರಿಕೆಗಳ ನಿಗಮ ನಿಯಮಿತ, ಮೈಸೂರು ಟೊಬ್ಯಾಕೊ ಕಂಪನಿ ನಿಯಮಿತ, ಕರ್ನಾಟಕ ಪಲ್ಪ್‌ವುಡ್ ನಿಯಮಿತ, ಕರ್ನಾಟಕ ರಾಜ್ಯ ವಿನೀರ್ಸ್ ನಿಯಮಿತ, ಮೈಸೂರು ಮ್ಯಾಚ್ ಕಂಪನಿ ನಿಯಮಿತ, ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ, ಮೈಸೂರು ಕಾಸ್ಮೆಟಿಕ್ಸ್ ನಿಯಮಿತ, ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ, ಎನ್‌ಜಿಇಎಫ್ ನಿಯಮಿತ, ಕರ್ನಾಟಕ ಟೆಲಿಕಾಂ ನಿಯಮಿತ, ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ನಿಯಮಿತ, ಬೆಂಗಳೂರು ಸಬರ್ಬನ್ ರೇಲ್ ಕಂಪನಿ ನಿಯಮಿತ, ವಿಜಯನಗರ ಉಕ್ಕು ನಿಯಮಿತ ಮತ್ತು ಬೆಂಗಳೂರು ಏರ್‌ಪೋರ್ಟ್ ರೇಲ್ ಲಿಂಕ್ ಲಿಮಿಟೆಡ್ (ಸ್ವಯಂಪ್ರೇರಿತ ದಿವಾಳಿಯ ಅಡಿಯಲ್ಲಿ).

[7] ನಿಷ್ಕ್ರಿಯ ಸರ್ಕಾರಿ ಕಂಪನಿ ಎಂದರೆ ಯಾವುದೇ ವ್ಯವಹಾರ ಅಥವಾ ಕಾರ್ಯಾಚರಣೆಯನ್ನು ನಡೆಸದ ಕಂಪನಿ.

[8] ಹಿಂದಿನ ಕಾರ್ಯಾಚರಣೆಗಳಿಂದ ಆದಾಯವೆಂದು ಪರಿಗಣಿಸಲಾಗಿಲ್ಲದ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಬಡ್ಡಿ ಆದಾಯವನ್ನು ಹಣಕಾಸಿನ ವರ್ಷ 2020–21 ಮತ್ತು 2021–22 ಕ್ಕೆ ನವೀಕರಿಸಲಾದ ಅಂಕಿಅಂಶಗಳಲ್ಲಿ ಸರಿಯಾಗಿ ಪರಿಗಣಿಸಲಾಗಿದೆ.

[9] ಹಣಕಾಸಿನ ವರ್ಷ 2020–21 ಮತ್ತು 2021–22 ಕ್ಕೆ ನವೀಕರಿಸಲಾದ ಅಂಕಿಅಂಶಗಳನ್ನು ಪರಿಗಣಿಸಲಾಗಿದೆ.

ಮೊತ್ತದ ಈಕ್ವಿಟಿ ಮತ್ತು ₹ 99,324.63 ಕೋಟಿ ಮೊತ್ತದ ಸಾಲಗಳನ್ನು ಒಳಗೊಂಡಿದ್ದಿತು. ಹೂಡಿಕೆಗಳ ವಿವರಗಳನ್ನು ಮುಂದಿನ ಖಂಡಿಕೆಗಳಲ್ಲಿ ನೀಡಲಾಗಿದೆ.

### *ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿ ಹಿಡುವಳಿ*

**1.2.1** 31 ಮಾರ್ಚ್ 2023ರಲ್ಲಿದ್ದಂತೆ 106 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಈಕ್ವಿಟಿಯ ಕಡೆಗೆ ರಾಜ್ಯ ಸರ್ಕಾರವು ರೂ.1,13,005.23 ಕೋಟಿ ಮೊತ್ತದ ಕಾಣಿಕೆಯನ್ನು ನೀಡಿರುವುದು, ಇದು 31 ಮಾರ್ಚ್ 2023ರಲ್ಲಿದ್ದಂತೆ ಎಲ್ಲಾ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಒಟ್ಟಾರೆ ಈಕ್ವಿಟಿ ಮೊತ್ತ ರೂ.1,18,629.01 ಲಕ್ಷ ಮೊತ್ತಕ್ಕೆ ಹೋಲಿಸಿದಂತೆ ಶೇಕಡಾ 95.26 ಆಗಿರುವುದು. 106 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿಒಟ್ಟು ಈಕ್ವಿಟಿಯು ರೂ.1,13,654.21 ಆಗಿರುವುದು ಹಾಗೂ ಇದರಲ್ಲಿ ರಾಜ್ಯ ಸರ್ಕಾರದ ಈಕ್ವಿಟಿ ಹೂಡಿಕೆಯು ಶೇಕಡ 99.43 ಆಗಿದ್ದಿತು.

ರಾಜ್ಯ ಸರ್ಕಾರದಿಂದ ಈಕ್ವಿಟಿಯಲ್ಲಿನ ಕ್ಷೇತ್ರವಾರು ಕೊಡುಗೆ ಮತ್ತು 106 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಒಟ್ಟು ಈಕ್ವಿಟಿಗೆ ಹಾಗೂ ಪ್ರತಿಯೊಂದು ಕ್ಷೇತ್ರಕ್ಕೆ ಅಂತಹ ಶೇಕಡಾವಾರು ಕೊಡುಗೆಯನ್ನು **ಕೋಷ್ಟಕ ಸಂಖ್ಯೆ 1.2**ರಲ್ಲಿ ಈ ಕೆಳಗೆ ತೋರಿಸಲಾಗಿದೆ.

**ಕೋಷ್ಟಕ ಸಂಖ್ಯೆ 1.2: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯದ ಈಕ್ವಿಟಿಯ ಕ್ಷೇತ್ರವಾರು ಹೂಡಿಕೆ**

(₹ ಕೋಟಿ ಗಳಲ್ಲಿ)

| ಕ್ರಮ ಸಂಖ್ಯೆ | ಕ್ಷೇತ್ರದ ಹೆಸರು | ಒಟ್ಟು ಈಕ್ವಿಟಿ | | ರಾಜ್ಯ ಸರ್ಕಾರದ ಕೊಡುಗೆ* | | | ಒಟ್ಟು ಈಕ್ವಿಟಿಗೆ ರಾಜ್ಯ ಸರ್ಕಾರದ ಶೇಕಡಾವಾರು ಕೊಡುಗೆ | ರಾಜ್ಯ ಸರ್ಕಾರದ ಕ್ಷೇತ್ರ–ವಾರು ಕೊಡುಗೆ |
|---|---|---|---|---|---|---|---|---|
| | | ಎಸ್‌ಪಿಎಸ್‌ಇಗಳ ಸಂಖ್ಯೆ | ಮೊತ್ತ | ಎಸ್‌ಪಿಎಸ್‌ಇಗಳ ಸಂಖ್ಯೆ | ಒಟ್ಟು ಈಕ್ವಿಟಿ | ರಾಜ್ಯದ ಈಕ್ವಿಟಿ | | |
| 1 | ವಿದ್ಯುತ್ | 11 | 18,815.04 | 8 | 15,048.61 | 15,048.61 | 100.00 | 13.32 |
| 2 | ಹಣಕಾಸು | 26 | 3,816.35 | 24 | 3,815.84 | 3,721.49 | 97.53 | 3.29 |
| 3 | ಸೇವೆಗಳು | 10 | 2,350.03 | 10 | 2,350.03 | 2,300.91 | 97.91 | 2.04 |
| 4 | ಮೂಲಸೌಕರ್ಯ | 27 | 92,870.04 | 19 | 91,671.36 | 91,250.46 | 99.54 | 80.75 |
| 5 | ಇತರವುಗಳು | 53 | 777.55 | 45 | 768.37 | 683.76 | 88.99 | 0.61 |
| ಒಟ್ಟು | | **127** | **1,18,629.01** | **106** | **1,13,654.21** | **1,13,005.23** | **99.43** | **100.00** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು*

** ಆರು ಶಾಸನಬದ್ಧ ನಿಗಮಗಳಲ್ಲಿ ಒಟ್ಟು ಈಕ್ವಿಟಿ ₹ 3,347.82 ಕೋಟಿಯ ಪೈಕಿ ರಾಜ್ಯ ಸರ್ಕಾರದ ಈಕ್ವಿಟಿ ₹ 3,291.92 ಕೋಟಿಗಳು ಸೇರಿರುತ್ತವೆ.*

ರಾಜ್ಯ ಸರ್ಕಾರವು ಪ್ರಮುಖವಾಗಿ ಮೂಲಸೌಕರ್ಯ ವಲಯದಲ್ಲಿ (ಶೇಕಡಾ 80.75) ಹಾಗೂ ಅದನ್ನು ಅನುಸರಿಸಿದಂತೆ ನಂತರದಲ್ಲಿ ವಿದ್ಯುತ್ ವಲಯದಲ್ಲಿ (ಶೇಕಡಾ 13.32 ) ಹೂಡಿಕೆ ಮಾಡಿರುವುದು.

### *ಕಾರ್ಯನಿರತವಲ್ಲದ /ನಿಷ್ಕ್ರಿಯ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಈಕ್ವಿಟಿ ಹಿಡುವಳಿಗಳು*

**1.2.2** ಮಾರ್ಚ್ 2023ರ ಅಂತ್ಯದಲ್ಲಿದ್ದಂತೆ 14 ಕಾರ್ಯನಿರತವಲ್ಲದ ಅಥವಾ ನಿಷ್ಕ್ರಿಯ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 12ರಲ್ಲಿ ₹ 160.21 ಕೋಟಿ ಈಕ್ವಿಟಿಯನ್ನು ಹೂಡಿಕೆ ಮಾಡಲಾಗಿದ್ದಿತು. ಈಪೈಕಿ, ರಾಜ್ಯ ಸರ್ಕಾರವು ಕೆಳಗೆ **ಕೋಷ್ಟಕ ಸಂಖ್ಯೆ 1.3**ರಲ್ಲಿ ವಿವರಿಸಿರುವಂತೆ ತನ್ನ ಪಾಲಿನ ಈಕ್ವಿಟಿಯಾಗಿ ₹ 151.37 ಕೋಟಿ ಹೂಡಿಕೆ ಮಾಡಿದ್ದಿತು:

**ಕೋಷ್ಟಕ ಸಂಖ್ಯೆ 1.3: ಕಾರ್ಯನಿರತವಲ್ಲದ /ನಿಷ್ಕ್ರಿಯ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿರುವ ಹೂಡಿಕೆಯನ್ನು ತೋರಿಸುವ ತ:ಖ್ತೆ**

(₹ ಕೋಟಿ ಗಳಲ್ಲಿ)

| ಕ್ರಮ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ ಹೆಸರು | ರಾಜ್ಯ ಸರ್ಕಾರದ ಕೊಡುಗೆ | ಈಕ್ವಿಟಿ ಕೊಡುಗೆ ಇತರರಿಂದ | ಒಟ್ಟು ಈಕ್ವಿಟಿ |
|---|---|---|---|---|
| 1 | ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಶನ್ (ಕೆಎಐಸಿ) | 55.90 | 0.00 | 55.90 |
| 2 | ದಿ ಮೈಸೂರು ಟೊಬ್ಯಾಕೋ ಕಂಪನಿ ಲಿಮಿಟೆಡ್ (ಎಂಟಿಸಿ) | 0.62 | 0.15 | 0.77 |
| 3 | ಕರ್ನಾಟಕ ಪಲ್ಪ್ ವುಡ್ ಲಿಮಿಟೆಡ್ ಕೆಪಿಎಲ್ (ಪಲ್ಪ್ ವುಡ್) | 13.91 | 1.25 | 15.16 |
| 4 | ದಿ ಕರ್ನಾಟಕ ಸ್ಟೇಟ್ ವಿನೀರ್ಸ್ ಲಿಮಿಟೆಡ್ (ಕೆ ಎಸ್ ವಿ ಎಲ್) | 0.00 | 1.00 | 1.00 |
| 5 | ದಿ ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ (ಎಂಎಂಸಿಎಲ್) | 0.01 | 0.04 | 0.05 |
| 6 | ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ (ಎಂ ಎಲ್ ಡಬ್ಲು) | 10.76 | 1.05 | 11.81 |
| 7 | ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್ (ಎಂಸಿಎಲ್) | 0.01 | 0.15 | 0.16 |
| 8 | ದಿ ಮೈಸೂರು ಕ್ರೋಮ್ ಟ್ಯಾನ್ನಿಂಗ್ ಕಂಪನಿ ಲಿಮಿಟೆಡ್ (ಎಂಸಿಟಿ) | 0.00 | 0.76 | 0.76 |
| 9 | ಎನ್ ಜಿ ಇ ಎಫ್ ಲಿಮಿಟೆಡ್ (ಎನ್ ಜಿ ಇ ಎಫ್) | 46.51 | 0.00 | 46.51 |
| 10 | ಕರ್ನಾಟಕ ಟೆಲಿಕಾಂ ಲಿಮಿಟೆಡ್ (ಕೆಟಿಎಲ್) | 0.78 | 2.22 | 3.00 |
| 11 | ದಿ ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ಲಿಮಿಟೆಡ್ (ಎಂಎಸಿಸಿಎಲ್) | 9.96 | 2.22 | 12.18 |
| 12 | ವಿಜಯನಗರ ಸ್ಟೀಲ್ ಲಿಮಿಟೆಡ್ (ವಿ ಎಸ್ ಎಲ್) | 12.91 | 0.00 | 12.91 |
| | **ಒಟ್ಟು** | **151.37** | **8.84** | **160.21** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು*

ಉಳಿದ ಎರಡು ಕಾರ್ಯನಿರತವಲ್ಲದ ಅಥವಾ ನಿಷ್ಕ್ರಿಯ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಈಕ್ವಿಟಿಯು (ಬಿ ಎಸ್ ಆರ್ ಸಿ ಎಲ್ ಮತ್ತು ಬಿ ಎ ಆರ್ ಎಲ್) ಯಾವುದೂ ಇರಲಿಲ್ಲ.

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ನೀಡಲಾಗಿರುವ ಸಾಲಗಳು***

**1.2.3** ಮಾರ್ಚ್ 2023ರ ಅಂತ್ಯದಲ್ಲಿದ್ದಂತೆ 51 ಸಾರ್ವಜನಿಕ ವಲಯ ಉದ್ದಿಮೆಗಳು (i) ಕೇಂದ್ರ ಸರ್ಕಾರ / ಇತರ ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡಿರುವ ₹ 89,015.69 ಕೋಟಿ (ಶೇಕಡಾ 89.62) ಮೊತ್ತದ ಸಾಲ ಮತ್ತು (ii) ರಾಜ್ಯ ಸರ್ಕಾರವು ನೀಡಿರುವ ₹ 10,308.94 ಕೋಟಿ (ಶೇಕಡಾ 10.38) ಸಾಲವನ್ನು ಒಳಗೊಂಡಿರುವ ₹ 99,324.63 ಕೋಟಿ ಬಾಕಿಯಿರುವ ಸಾಲಗಳನ್ನು ಹೊಂದಿದ್ದವು.

31 ಮಾರ್ಚ್ 2023ರಲ್ಲಿದ್ದಂತೆ ರಾಜ್ಯ ಸರ್ಕಾರವು 30 ಸಾರ್ವಜನಿಕ ವಲಯ ಉದ್ದಿಮೆಗಳಿಗೆ ನೀಡಿರುವ ಸಾಲಗಳೂ ಸೇರಿದಂತೆ ಧೀರ್ಘಕಾಲೀನ ಸಾಲಗಳ ಕ್ಷೇತ್ರವಾರು ವಿಂಗಡಣೆಯನ್ನು ಈ ಕೆಳಗೆ **ಕೋಷ್ಟಕ ಸಂಖ್ಯೆ 1.4**ರಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.4: ಸಾಲಗಳ ಕಡೆಗೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಕ್ಷೇತ್ರವಾರು ಹೂಡಿಕೆ**

(₹ ಕೋಟಿ ಗಳಲ್ಲಿ)

| ಕ್ರಮ ಸಂಖ್ಯೆ | ಕ್ಷೇತ್ರದ ಹೆಸರು | ಒಟ್ಟು ಧೀರ್ಘಕಾಲೀನ ಸಾಲ | | ರಾಜ್ಯ ಸರ್ಕಾರದ ಸಾಲಗಳು | | ಒಟ್ಟು ಬಾಕಿಯಿರುವ ಸಾಲಗಳಿಗೆ ರಾಜ್ಯ ಸರ್ಕಾರದ ಕ್ಷೇತ್ರ–ವಾರು ಶೇಕಡಾವಾರು ಸಾಲ |
|---|---|---|---|---|---|---|
| | | ಎಸ್‌ಪಿಎಸ್‌ಇಗಳ ಸಂಖ್ಯೆ | ಮೊತ್ತ | ಎಸ್‌ಪಿಎಸ್‌ಇಗಳ ಸಂಖ್ಯೆ | ಮೊತ್ತ | |
| 1 | ವಿದ್ಯುತ್ | 10 | 70,996.86 | 3 | 1,730.4 | 2.44 |
| 2 | ಹಣಕಾಸು | 8 | 866.27 | 5 | 71.75 | 8.28 |
| 3 | ಸೇವೆಗಳು | 4 | 1,228.95 | 0 | 0.00 | 0.00 |
| 4 | ಮೂಲಸೌಕರ್ಯ | 8 | 23,744.88 | 3 | 6,716.09 | 28.28 |
| 5 | ಇತರವುಗಳು | 21 | 2,487.67 | 19 | 1,790.70 | 71.98 |
| | **ಒಟ್ಟು** | **51** | **99,324.63** | **30** | **10,308.94** | **10.38** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು*

ಮೇಲೆ ಕಂಡುಬಂದಂತೆ ಮೂಲಸೌಕರ್ಯ ಮತ್ತು ವಿದ್ಯುತ್ ಕ್ಷೇತ್ರಗಳಲ್ಲಿನ 06 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ರಾಜ್ಯ ಸರ್ಕಾರದ ಸಾಲಗಳ ಮೇಲೆ ಭಾರೀ ಪ್ರಮಾಣದಲ್ಲಿ ಅವಲಂಬನೆಯನ್ನು ಹೊಂದಿರುತ್ತವೆ.

***ಕಾರ್ಯನಿರತವಲ್ಲದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬಾಕಿಯಿರುವ ಸಾಲಗಳು***

**1.2.4** ಒಂಬತ್ತು ಕಾರ್ಯನಿರತವಲ್ಲದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ₹ 449.39 ಕೋಟಿ ಮೊತ್ತದ ಸಾಲಗಳು ಈ ಕೆಳಗೆ **ಕೋಷ್ಟಕ ಸಂಖ್ಯೆ 1.5**ರಲ್ಲಿ ಸೂಚಿಸಿರುವಂತೆ ಬಾಕಿಯಿದ್ದವು:

**ಕೋಷ್ಟಕ ಸಂಖ್ಯೆ 1.5: ಕಾರ್ಯನಿರತವಲ್ಲದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬಾಕಿಯಿರುವ ಸಾಲಗಳನ್ನು ತೋರಿಸುವ ತ:ಖ್ತೆ**

(₹ ಕೋಟಿ ಗಳಲ್ಲಿ)

| ಕ್ರಮ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ ಹೆಸರು | ರಾಜ್ಯ ಸರ್ಕಾರದಿಂದ ಬಾಕಿಯಿರುವ ಸಾಲ | ಇತರರಿಂದ ಬಾಕಿಯಿರುವ ಸಾಲ | ಒಟ್ಟು ಬಾಕಿಯಿರುವ ಸಾಲ |
|---|---|---|---|---|
| 1 | ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಶನ್ (ಕೆಎಐಸಿ) | 68.98 | 0.00 | 68.98 |
| 2 | ದಿ ಮೈಸೂರು ಟೊಬ್ಯಾಕೋ ಕಂಪನಿ ಲಿಮಿಟೆಡ್ (ಎಂಟಿಸಿ) | 1.54 | 0.00 | 1.54 |
| 3 | ದಿ ಕರ್ನಾಟಕ ಸ್ಟೇಟ್ ವಿನೀರ್ಸ್ ಲಿಮಿಟೆಡ್ (ಕೆ ಎಸ್ ವಿ ಎಲ್) | 0.00 | 1.00 | 1.00 |
| 4 | ದಿ ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ (ಎಂಎಂಸಿಎಲ್) | 0.23 | 0.00 | 0.23 |
| 5 | ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ (ಎಂ ಎಲ್ ಡಬ್ಲು) | 120.97 | 3.50 | 124.47 |
| 6 | ದಿ ಮೈಸೂರು ಕ್ರೋಮ್ ಟ್ಯಾನ್ನಿಂಗ್ ಕಂಪನಿ ಲಿಮಿಟೆಡ್ (ಎಂಸಿಟಿ) | 0.12 | 0.29 | 0.41 |
| 7 | ಎನ್ ಜಿ ಇ ಎಫ್ ಲಿಮಿಟೆಡ್ (ಎನ್ ಜಿ ಇ ಎಫ್) | 239.07 | 0.00 | 239.07 |
| 8 | ದಿ ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ಲಿಮಿಟೆಡ್ (ಎಂಎಸಿಸಿಎಲ್) | 13.11 | 0.00 | 13.11 |
| 9 | ವಿಜಯನಗರ ಸ್ಟೀಲ್ ಲಿಮಿಟೆಡ್ (ವಿ ಎಸ್ ಎಲ್) | 0.58 | 0.00 | 0.58 |
| | | **444.60** | **4.79** | **449.39** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು*

ಈ ಕಾರ್ಯನಿರತವಲ್ಲದ ಕಂಪನಿಗಳಲ್ಲಿ ರಾಜ್ಯ ಸರ್ಕಾರದ ಒಟ್ಟು ಬಾಕಿಯಿರುವ ಸಾಲವು (₹ 444.60 ಕೋಟಿ) ಒಟ್ಟು ಬಾಕಿಯಿರುವ ಸಾಲಗಳ ಶೇಕಡಾ 98.93 ಆಗಿದ್ದಿತ್ತು.

***ಸಾಲದ ಬಾಧ್ಯತೆಗಳನ್ನು ಪೂರೈಸಲು ಆಸ್ತಿಗಳ ಸಮರ್ಪಕತೆ***

**1.2.5** ಒಟ್ಟು ಆಸ್ತಿಗಳಿಗೆ ಒಟ್ಟು ಸಾಲ/ಋಣದ ಅನುಪಾತವು ಒಂದು ಕಂಪನಿಯು ಸಶಕ್ತವಾಗಿದೆಯೇ ಎಂದು ನಿರ್ಣಯಿಸಲು ಬಳಸಲಾಗುವ ವಿಧಾನಗಳಲ್ಲಿ ಒಂದಾಗಿದೆ. ಸಶಕ್ತವೆಂದು ಪರಿಗಣಿಸಬೇಕಾದರೆ, ಒಂದು ಸಂಸ್ಥೆಯ ಆಸ್ತಿಗಳ ಮೌಲ್ಯವು ಅದರ ಸಾಲಗಳು/ಋಣಗಳ ಒಟ್ಟು ಮೊತ್ತಕ್ಕಿಂತ ಅಧಿಕವಾಗಿರಬೇಕು. 31 ಮಾರ್ಚ್ 2023ರಲ್ಲಿದ್ದಂತೆ ಸಾಲಗಳ ಬಾಕಿಗಳನ್ನು ಹೊಂದಿದ್ದ 51 ಕಾರ್ಯನಿರತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಒಟ್ಟು ಆಸ್ತಿಗಳ ಮೌಲ್ಯದಿಂದ ಧೀರ್ಘ–ಕಾಲೀನ ಸಾಲಗಳ ವ್ಯಾಪ್ತಿಯನ್ನು **ಕೋಷ್ಟಕ ಸಂಖ್ಯೆ 1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.6: ವರ್ಗವಾರು ಆಸ್ತಿಗಳ ವ್ಯಾಪ್ತಿಯನ್ನು ತೋರಿಸುವ ತ:ಖ್ತೆ**

(₹ ಕೋಟಿ ಗಳಲ್ಲಿ)

| ಕ್ರಮ ಸಂಖ್ಯೆ | ವರ್ಗ | ಸಕಾರಾತ್ಮಕ ವ್ಯಾಪ್ತಿ (ಆಸ್ತಿಗಳು>ಋಣಗಳು) | | | ನಕಾರಾತ್ಮಕ ವ್ಯಾಪ್ತಿ (ಆಸ್ತಿಗಳು<ಋಣಗಳು) | | |
|---|---|---|---|---|---|---|---|
| | | ಎಸ್‌ಪಿಎಸ್‌ಇಗಳ ಸಂಖ್ಯೆ | ಧೀರ್ಘ ಕಾಲೀನ ಸಾಲಗಳು | ಆಸ್ತಿಗಳು | ಎಸ್‌ಪಿಎಸ್‌ಇಗಳ ಸಂಖ್ಯೆ | ಧೀರ್ಘ ಕಾಲೀನ ಸಾಲಗಳು | ಆಸ್ತಿಗಳು |
| 1 | ಶಾಸನಬದ್ಧ ನಿಗಮಗಳು | 6 | 2,674.17 | 16,014.19 | 0 | 0.00 | 0.00 |
| 2 | ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿರುವ ಕಂಪನಿಗಳು | 0 | 0.00 | 0.00 | 1 | 849.55 | 396.64 |
| 3 | ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿರದ ಕಂಪನಿಗಳು (ಕಾರ್ಯನಿರತ) | 30 | 77,279.67 | 2,90,416.49 | 5 | 18,071.85 | 12,919.40 |
| 4 | ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿರದ ಕಂಪನಿಗಳು (ಕಾರ್ಯಸ್ಥಗಿತ) | 4 | 241.60 | 342.97 | 5 | 207.79 | 23.16 |
| | **ಒಟ್ಟು** | **40** | **80,195.44** | **3,06,773.65** | **11** | **19,129.19** | **13,339.20** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿ'ರುವ ಮಾಹಿತಿ/ದತ್ತಂಶಗಳ ದತ್ತಾಂಶಗಳು*

ಒಟ್ಟು ಆಸ್ತಿಗಳ ಮೌಲ್ಯವು ಬಾಕಿಯಿರುವ ದೀರ್ಘಾವಧಿ ಸಾಲಗಳಿಗಿಂತ ಕಡಿಮೆಯಾಗಿದ್ದ 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಿವರಗಳನ್ನು **ಕೋಷ್ಟಕ ಸಂಖ್ಯೆ 1.7**ರಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.7: ನಕಾರಾತ್ಮಕ ಆಸ್ತಿಗಳ ವ್ಯಾಪ್ತಿಯೊಂದಿಗಿನ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿಯನ್ನು ತೋರಿಸುವ ತ:ಖ್ತೆ**

(₹ ಕೋಟಿ ಗಳಲ್ಲಿ)

| ಕ್ರಮ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ ಹೆಸರು | ಕಾರ್ಯ–ಸ್ಥಿತಿಗತಿ | ಧೀರ್ಘ ಕಾಲೀನ ಸಾಲಗಳು | ಆಸ್ತಿಗಳು | ಸಾಲಗಳಿಗೆ ಆಸ್ತಿಗಳ ವ್ಯಾಪ್ತಿ |
|---|---|---|---|---|---|
| 1 | ರಾಯಚೂರು ವಿದ್ಯುತ್ ನಿಗಮ ನಿಯಮಿತ (ಆರ್ ಪಿ ಸಿ ಎಲ್) | ಕಾರ್ಯನಿರತ– ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿ ಇರುವುದಿಲ್ಲ | 17,529.14 | 12663.50 | 72.24 |
| 2 | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ ಎಚ್ ಡಿ ಸಿ ಎಲ್ ಹ್ಯಾಂಡ್ಲೂಮ್) | ಕಾರ್ಯನಿರತ– ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿ ಇರುವುದಿಲ್ಲ | 60.13 | 53.92 | 89.67 |
| 3 | ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ನಿಯಮಿತ (ಕೆ ಎಸ್ ಎಂ ಬಿ) | ಕಾರ್ಯನಿರತ– ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿ ಇರುವುದಿಲ್ಲ | 22.00 | 15.16 | 68.91 |
| 4 | ಕರ್ನಾಟಕ ರಾಜ್ಯ ಅಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ (ಕೆ ಎಸ್ ಎ ಸಿ ಪಿ ಎಲ್) | ಕಾರ್ಯನಿರತ– ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿ ಇರುವುದಿಲ್ಲ | 24.32 | 7.26 | 29.85 |
| 5 | ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ ವಿ ಟಿ ಎಸ್ ಡಿ ಸಿ ಎಲ್) | ಕಾರ್ಯನಿರತ– ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿ ಇರುವುದಿಲ್ಲ | 436.26 | 179.56 | 41.16 |
| 6 | ದಿ ಮೈಸೂರು ಪೇಪರ್ ಮಿಲ್ಸ್ ನಿಯಮಿತ (ಎಂಪಿಎಂ) | ಕಾರ್ಯನಿರತ– ಷೇರುವಿನಿಮಯ ಕೇಂದ್ರದ ಪಟ್ಟಿಯಲ್ಲಿ ಇರುವುದು | 849.55 | 396.64 | 46.69 |
| 7 | ಕರ್ನಾಟಕ ಕೃಷಿ ಕೈಗಾರಿಕೆಗಳ ನಿಗಮ ನಿಯಮಿತ (ಕೆ ಎ ಐ ಸಿ) | ಕಾರ್ಯಸ್ಥಗಿತ | 68.98 | 9.90 | 14.35 |
| 8 | ಕರ್ನಾಟಕ ರಾಜ್ಯ ವಿನೀರ್ಸ್ ಲಿಮಿಟೆಡ್ (ಕೆ ಎಸ್ ವಿ ಎಲ್) | ಕಾರ್ಯಸ್ಥಗಿತ | 1.00 | 0.00 | 0.00 |
| 9 | ದಿ ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ (ಎಂಎಂಸಿಎಲ್) | ಕಾರ್ಯಸ್ಥಗಿತ | 0.23 | 0.03 | 13.04 |
| 10 | ದಿ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ (ಎಂ ಎಲ್ ಡಬ್ಲು) | ಕಾರ್ಯಸ್ಥಗಿತ | 124.47 | 13.23 | 10.63 |
| 11 | ದಿ ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ಲಿಮಿಟೆಡ್ (ಎಂ ಎ ಸಿ ಸಿ ಎಲ್) | ಕಾರ್ಯಸ್ಥಗಿತ | 13.11 | 0.00 | 0.00 |
| | **ಒಟ್ಟು ಮೊತ್ತ** | | **19,129.19** | **13,339.2** | **69.73** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು*

* **ಅನುಕ್ರಮವಾಗಿ 2002–03 ಮತ್ತು 2004–05 ವರ್ಷಗಳಿಂದ ಬಾಕಿಯಲ್ಲಿರುವ ಲೆಕ್ಕಪತ್ರಗಳನ್ನು ಹೊಂದಿರುವ ಎರಡು ಕಾರ್ಯನಿರತವಲ್ಲದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗಾಗಿ (ಎಂಎಸಿಸಿಎಲ್ ಮತ್ತು ಕೆಎಸ್‌ವಿಎಲ್) ಆಸ್ತಿಗಳ ಮೌಲ್ಯವು ದಾಖಲೆಗಳಿಂದ ಕಂಡುಬರಲಿಲ್ಲ.**

### *ಸರ್ಕಾರಿ ಕಂಪನಿಗಳಲ್ಲಿ ಈಕ್ವಿಟಿ ಹೂಡಿಕೆಗಳ ಮಾರುಕಟ್ಟೆ ಬಂಡವಾಳೀಕರಣ*

**1.2.6** 31 ಮಾರ್ಚ್ 2023ರಲ್ಲಿದ್ದಂತೆ, ಕೇವಲ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು ಅದೆಂದರೆ ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ಮಾತ್ರ ಬಾಂಬೆ ಷೇರು ವಿನಿಮಯ ಕೇಂದ್ರದಲ್ಲಿ (ಬಿ ಎಸ್ ಇ) ತನ್ನ ಷೇರುಗಳನ್ನು ಪಟ್ಟಿಯಲ್ಲಿ ಹೊಂದಿತ್ತು. ಹಣಕಾಸು ವರ್ಷ 2014–15ರ ಅವಧಿಯಲ್ಲಿ, ಕಂಪನಿಯನ್ನು ಬಿಐಎಫ್‌ಆರ್ ಅಡಿಯಲ್ಲಿ ಸುಸ್ಥಿತಿಯಲ್ಲಿರದ ಅನಾರೋಗ್ಯದ ಕಂಪನಿ ಎಂಬುದಾಗಿ ನೋಂದಾಯಿಸಲಾಗಿತ್ತು, ಇದರ ತರುವಾಯ, 2015–16ರಲ್ಲಿ ಕಂಪನಿಯ ಕಾರ್ಯಾಚರಣೆಗಳು ಸ್ಥಗಿತಗೊಂಡವು. 06 ಜೂನ್ 2017ರಂದು ಅಧಿಸೂಚನೆ ನೀಡಿರುವಂತೆ, ಈ ಷೇರುಗಳು, ಎಸ್‌ಇಬಿಐ (ಪಟ್ಟಿಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಂತ್ರಣಗಳು, 2015ರ ಅನುಪಾಲನೆ ಮಾಡದ ಹಿನ್ನೆಲೆಯಲ್ಲಿ ಬಾಂಬೆ ಸ್ಟಾಕ್

ಎಕ್ಸ್‌ಚೇಂಜ್‌ನಿಂದ ಭದ್ರತೆಗಳ ವ್ಯವಹಾರಗಳನ್ನು ಅಮಾನತ್ತಿನಲ್ಲಿಟ್ಟ ಕಾರಣ ಷೇರುಗಳ ವ್ಯವಹಾರಗಳನ್ನು ಮಾಡಿರುವುದಿಲ್ಲ.

**ರಾಜ್ಯ / ಕೇಂದ್ರ ಸರ್ಕಾರದಿಂದ ಸಹಾಯಧನ, ಅನುದಾನಗಳ ಬಗ್ಗೆ ಮಾಹಿತಿ**

**1.2.7** ಈಕ್ವಿಟಿಯಲ್ಲಿ ಹೂಡಿಕೆ ಹಾಗೂ ಧೀರ್ಘಕಾಲೀನ ಸಾಲಗಳ ಮೂಲಕ ಹೂಡಿಕೆಗಳಲ್ಲದೆ, ರಾಜ್ಯ ಸರ್ಕಾರವು ತನ್ನ ವಾರ್ಷಿಕ ಆಯವ್ಯಯಗಳ ಮೂಲಕ ವಿವಿಧ ರೂಪಗಳಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಆರ್ಥಿಕ ಬೆಂಬಲಗಳನ್ನೂ ಸಹ ನೀಡುತ್ತದೆ. ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಆಯವ್ಯಯದಿಂದ ನೀಡಲ್ಪಟ್ಟಿರುವ ಈಕ್ವಿಟಿ, ಸಾಲಗಳು, ಅನುದಾನಗಳು/ಸಹಾಯಧನಗಳು, ಸಾಲಗಳನ್ನು ಮನ್ನಾ ಮಾಡುವಿಕೆ ಮತ್ತು ಬಡ್ಡಿಯ ಮನ್ನಾ ಮಾಡುವಿಕೆಗಳನ್ನು **ಕೋಷ್ಟಕ ಸಂಖ್ಯೆ 1.8**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ ಸಂಖ್ಯೆ 1.8: ರಾಜ್ಯ ಸರ್ಕಾರದಿಂದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಬಜೆಟ್ ಬೆಂಬಲ ಕುರಿತಂತೆ ವಿವರಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2020-21 | | 2021-22 | | 2022-23 | |
|---|---|---|---|---|---|---|---|
| | | ಎಸ್‌ಪಿಎಸ್‌ಇಗಳ ಸಂಖ್ಯೆ | ಮೊತ್ತ | ಎಸ್‌ಪಿಎಸ್‌ಇಗಳ ಸಂಖ್ಯೆ | ಮೊತ್ತ | ಎಸ್‌ಪಿಎಸ್‌ಇಗಳ ಸಂಖ್ಯೆ | ಮೊತ್ತ |
| 1 | ಈಕ್ವಿಟಿ[10] | 15 | 8,098.12 | 31 | 15,074.36 | 23 | 12,334.66 |
| 2 | ದೀರ್ಘಾವಧಿ ಸಾಲಗಳು | 3 | 844.31 | 5 | 860.08 | 5 | 512.21 |
| 3 | ಅನುದಾನ / ಸಹಾಯಧನ[11] | 46 | 24,316.41 | 55 | 33,220.97 | 61 | 31,509.56 |
| | **ಒಟ್ಟು** | | **33,258.84** | | **49,155.41** | | **44,356.43** |
| 4 | ಸಾಲಗಳು ಮತ್ತು ಬಡ್ಡಿಯ ಮನ್ನಾ | 0 | 0 | 0 | 0 | 0 | 0 |
| 5 | ಗ್ಯಾರಂಟಿಗಳ ನೀಡಿಕೆ | 9 | 8,887.37 | 11 | 6,180.03 | 11 | 12,112.92 |
| 6 | ಗ್ಯಾರಂಟಿಗಳ ಬದ್ಧತೆ | 16 | 26,812.70 | 20 | 31,411.51 | 19 | 35,452.08 |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು*

2022–23ರ ಅವಧಿಯಲ್ಲಿ ವಿತರಿಸಲಾದ ದೀರ್ಘಾವಧಿ ಸಾಲಗಳು ನಬಾರ್ಡ್‌ನಿಂದ ಪಡೆದ ಸಾಲವನ್ನು ಪೂರೈಸಲು ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ನೀಡಲಾದ ₹ 78 ಕೋಟಿಗಳನ್ನು ಒಳಗೊಂಡಿರುವುದನ್ನು ಲೆಕ್ಕಪರಿಶೋಧನೆ ಗಮನಿಸಿದೆ. ಆದಾಗ್ಯೂ, ಈ ಸರ್ಕಾರಿ ಸಾಲದ ಬಿಡುಗಡೆಗೆ ಸಂಬಂಧಿಸಿದ ಸರ್ಕಾರಿ ಆದೇಶವು ಬಡ್ಡಿಯ ದರ ಅಥವಾ ಸಾಲ ಮರುಪಾವತಿಯ ವೇಳಾಪಟ್ಟಿಯನ್ನು ನಿರ್ದಿಷ್ಟಪಡಿಸಿರಲಿಲ್ಲ.

## 1.3 ಹೂಡಿಕೆಗಳನ್ನು ಹಿಂಪಡೆಯುವಿಕೆ, ಪುನರ್–ರಚನೆ ಮತ್ತು ಖಾಸಗೀಕರಣ

***ಹೂಡಿಕೆಗಳನ್ನು ಹಿಂಪಡೆಯುವಿಕೆ***

**1.3.1** ರಾಜ್ಯ ಸರ್ಕಾರವು ಬೆಂಗಳೂರು ವಿಮಾನ ನಿಲ್ದಾಣ ರೈಲು ಸಂಪರ್ಕ ನಿಯಮಿತವನ್ನು ಸ್ವಪ್ರೇರಿತವಾಗಿ ಸಮಾಪನಗೊಳಿಸಲು (ಲಿಕ್ವಿಡೇಶನ್) ಅಂಗೀಕಾರ ನೀಡಿರುವುದು (ಮೇ 2022) ಮತ್ತು ಬಳಸಿರದ ಮೊತ್ತವಾದ ₹ 1.17 ಕೋಟಿಯನ್ನು ಕಂಪನಿಯು (ಮಾರ್ಚ್ 2023) ಷೇರು ಹಿಡುವಳಿದಾರರುಗಳಿಗೆ (ಕರ್ನಾಟಕ ಸರ್ಕಾರ ಮತ್ತು ಕೆಎಸ್‌ಐಐಡಿಸಿ) ಹಿಂದಿರುಗಿಸಿದೆ.

[10] ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿದ ಪರಿಷ್ಕೃತ ಅಂಕಿಅಂಶಗಳ ಆಧಾರದ ಮೇಲೆ 2021–22 ರ ಹಣಕಾಸು ವರ್ಷದ ಅಂಕಿಅಂಶಗಳನ್ನು ನವೀಕರಿಸಲಾಗಿದೆ.

[11] ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿದ ಪರಿಷ್ಕೃತ ಅಂಕಿಅಂಶಗಳ ಆಧಾರದ ಮೇಲೆ ಅಂಕಿಅಂಶಗಳನ್ನು ನವೀಕರಿಸಲಾಗಿದೆ.

***ಪುನರ್ – ರಚನೆ***

**1.3.2** ರಾಜ್ಯ ಸರ್ಕಾರವು ಮೂರು ಕಂಪನಿಗಳು ಅವೆಂದರೆ, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ ನಿಯಮಿತ, ಮತ್ತು ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತವನ್ನು ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ ವಿಜ್ಞಾನ ಮತ್ತು ಪರಿಸರ ಇಲಾಖೆಯ ವ್ಯಾಪ್ತಿಯ ಅಡಿಯಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದೊಂದಿಗೆ ವಿಲೀನಗೊಳಿಸುವ ಮೂಲಕ ಒಂದು ಹೊಸ ಕಂಪನಿಯನ್ನು (ಕರ್ನಾಟಕ ಅರಣ್ಯ ನಿಗಮ ನಿಯಮಿತ) ಸ್ಥಾಪಿಸುವಂತೆ ನಿರ್ದೇಶಿಸಿರುವುದು (ಆಗಸ್ಟ್ 2022). ವಿಲೀನ / ಸಂಯೋಜನಾ ಪ್ರಕ್ರಿಯೆಯು ಡಿಸೆಂಬರ್ 2023ರವರೆವಿಗೂ ಪೂರ್ಣಗೊಂಡಿರುವುದಿಲ್ಲ.

***ಖಾಸಗೀಕರಣ***

**1.3.3** ಹಣಕಾಸು ವರ್ಷ 2022–23ರ ಅವಧಿಯಲ್ಲಿ ಸರ್ಕಾರಿ ಕಂಪನಿಗಳ ಖಾಸಗೀಕರಣದ ಯಾವುದೇ ದೃಷ್ಟಾಂತಗಳು ಇರುವುದಿಲ್ಲ.

## 1.4 ಸರ್ಕಾರಿ ಕಂಪನಿಗಳು ಮತ್ತು ನಿಗಮಗಳಿಂದ ಪ್ರತಿಫಲ

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿರುವ ಲಾಭ***

**1.4.1** ಅವುಗಳ ಇತ್ತೀಚಿನ ಪ್ರಮಾಣೀಕೃತ ಲೆಕ್ಕಪತ್ರಗಳ ಅನುಸಾರ, 55 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2021–22ರಲ್ಲಿ ವರದಿ ಮಾಡಿರುವ ₹ 2608.22 ಕೋಟಿ ರೂ.ಗಳ ಲಾಭಕ್ಕೆ ಹೋಲಿಸಿದಲ್ಲಿ 57[12] ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022–23ರಲ್ಲಿ ₹ 3132.14 ಕೋಟಿ ರೂ.ಗಳ ಲಾಭವನ್ನು ವರದಿ ಮಾಡಿರುವವು. 2021–22ರಲ್ಲಿ 55 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಶೇಕಡಾ 6.70 ಈಕ್ವಿಟಿ ಮೇಲಿನ ಪ್ರತಿಫಲಕ್ಕೆ ಹೋಲಿಸಿದಲ್ಲಿ 2022–23ರಲ್ಲಿ 57 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಈಕ್ವಿಟಿ ಮೇಲಿನ ಪ್ರತಿಫಲವು ಶೇಕಡಾ 14.80ಕ್ಕೆ ಹೆಚ್ಚಳಗೊಂಡಿರುವುದು. 56 ನಷ್ಟದಲ್ಲಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳೂ ಸೇರಿದಂತೆ, ಎಲ್ಲಾ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಈಕ್ವಿಟಿ ಮೇಲಿನ ಪ್ರತಿಫಲವು 2022–23ರಲ್ಲಿ ಶೇಕಡಾ (–) 6.96 ಆಗಿದ್ದಿತ್ತು.

2022–23ರ ಅವಧಿಯಲ್ಲಿ ಗರಿಷ್ಠ ಲಾಭದ ಕೊಡುಗೆ ನೀಡಿರುವಂತಹ ಉನ್ನತ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಿವರಗಳನ್ನು ಈ ಕೆಳಗೆ **ಕೋಷ್ಟಕ ಸಂಖ್ಯೆ** 1.9ರಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 1.9: ಗರಿಷ್ಠ ಲಾಭದ ಕೊಡುಗೆ ನೀಡಿರುವಂತಹ ಉನ್ನತ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ ಹೆಸರು | ಗಳಿಸಿದ ನಿವ್ವಳ ಲಾಭ | ಒಟ್ಟು ಎಸ್‌ಪಿಎಸ್‌ಇ ಗಳ ಲಾಭಕ್ಕೆ ಶೇಕಡಾವಾರು ಲಾಭ |
|---|---|---|---|
| 1 | ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ (ಕೆ ಪಿ ಟಿ ಸಿ ಎಲ್) | 828.61 | 26.46 |
| 2 | ಕರ್ನಾಟಕ ರಾಜ್ಯ ಖನಿಜಗಳ ನಿಗಮ ನಿಯಮಿತ (ಕೆ ಎಸ್ ಎಂ ಸಿ ಎಲ್) | 790.92 | 25.25 |
| 3 | ಕರ್ನಾಟಕ ರಾಜ್ಯ ಹೂಡಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ ಎಸ್ ಐ ಐ ಡಿ ಸಿ) | 269.78 | *8.61* |
| | **ಒಟ್ಟು** | **1,889.31** | **60.32** |

***ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು***

[12] 57 ಲಾಭ ಗಳಿಸಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ, 36 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳು ಒಂದು ವರ್ಷಕ್ಕೆ ಬಾಕಿ ಉಳಿದಿವೆ ಮತ್ತು 10 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳು ಎರಡು ಅಥವಾ ಅದಕ್ಕಿಂತ ಹೆಚ್ಚಿನ ವರ್ಷಗಳವರೆಗೆ ಬಾಕಿ ಉಳಿದಿವೆ.

ಮೇಲ್ಕಂಡ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕೊಡುಗೆ ನೀಡಿರುವ ₹ 1,889.31 ಕೋಟಿ ನಿವ್ವಳ ಲಾಭವು 57 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿರುವ ₹ 3,132.14 ಕೋಟಿಯ ಒಟ್ಟು ಲಾಭದ ಶೇಕಡಾ 60.32 ಆಗಿರುತ್ತದೆ.

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಪಾವತಿಸಿರುವ ಷೇರು ಲಾಭಾಂಶಗಳು***

**1.4.2** ರಾಜ್ಯ ಸರ್ಕಾರದಿಂದ ರೂಪಿಸಿರುವ (ನವೆಂಬರ್ 2021)[13], ಮತ್ತು ತದನಂತರ ಆದೇಶದ ಮೂಲಕ ಅಧಿಸೂಚಿಸಲಾಗಿರುವ (ಅಕ್ಟೋಬರ್ 2022)[14] ಮಾರ್ಗಸೂಚಿಗಳು[15] ಕರ್ನಾಟಕ ಸರ್ಕಾರದ ಸಂಪೂರ್ಣ ಮಾಲೀಕತ್ವದಲ್ಲಿರುವ ಅಥವಾ ಭಾಗಶ: ಹಣಕಾಸು ಒದಗಿಸಲಾಗುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಿರ್ದೇಶಕರುಗಳ ಮಂಡಳಿಯು ನಿರ್ದಿಷ್ಟ ಸಾಲಿನಲ್ಲಿ ತನ್ನ ಕಾರ್ಯಾಚರಣೆ ಮತ್ತು ಹಣಕಾಸು ಕಾರ್ಯಸಾಧನೆಯನ್ನು ಕರ್ನಾಟಕ ಸರ್ಕಾರದ ಸಲಹೆ ಮತ್ತು ಇತರ ಸಂಬಂಧಿತ ವಿಷಯಗಳನ್ನು ಸೂಕ್ತವಾಗಿ ಪರಿಗಣಿಸುವ ಮೂಲಕ, ತೆರಿಗೆ ನಂತರದ ಲಾಭದ ಶೇಕಡಾ 30ಕ್ಕಿಂತ ಕಡಿಮೆಯಿಲ್ಲದಂತೆ ಷೇರು ಲಾಭಾಂಶ ಪಾವತಿಯನ್ನು ನಿರ್ಧರಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟ ಪಡಿಸಿರುವುದು. ರಾಜ್ಯದಲ್ಲಿರುವ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ಕರ್ನಾಟಕ ಸರ್ಕಾರವು 106 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ಆರು ಶಾಸನಬದ್ಧ ನಿಗಮಗಳೂ ಸೇರಿದಂತೆ) ಈಕ್ವಿಟಿಯನ್ನು ಹೂಡಿಕೆ ಮಾಡಿರುವುದು. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಕಳೆದ ಮೂರು ವರ್ಷಗಳಲ್ಲಿ ಪಾವತಿಸಲಾಗಿರುವ ಷೇರು ಲಾಭಾಂಶಗಳ ವಿವರಗಳನ್ನು ಈಕೆಳಗೆ **ಕೋಷ್ಟಕ ಸಂಖ್ಯೆ 1.10**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ ಸಂಖ್ಯೆ 1.10: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಪಾವತಿಸಿರುವ ಷೇರು ಲಾಭಾಂಶ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಸಂಖ್ಯೆ | ಲಾಭಗಳಿಸಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಸಂಖ್ಯೆ | ಲಾಭಾಂಶ ಪಾವತಿ ಮಾಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಸಂಖ್ಯೆ | ಪಾವತಿಸಲಾಗಿರುವ ಬಂಡವಾಳ | ಕರ್ನಾಟಕ ಸರ್ಕಾರದ ಈಕ್ವಿಟಿ | ನಿವ್ವಳ ಲಾಭ | ಪಾವತಿಸಲಾಗಿರುವ ಲಾಭಾಂಶ |
|---|---|---|---|---|---|---|---|---|
| 1 | 2020-21 | 124 | 50 | 16 | 208.65 | 178.11 | 583.28 | 59.01 |
| 2 | 2021-22 | 125 | 55 | 18 | 222.15 | 191.61 | 1,116.45 | 189.35 |
| 3 | 2022-23 | 127 | 57 | 16 | 220.44 | 193.13 | 1,439.37 | 307.46 |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆ*

ಸೆಪ್ಟೆಂಬರ್ 2023ರವರೆಗೆ ದೃಢೀಕರಿಸಲಾಗಿರುವ ಇತ್ತೀಚಿನ ಹಣಕಾಸು ತ:ಖ್ತೆಗಳ ಅನುಸಾರ ರಾಜ್ಯ ಸರ್ಕಾರವು ಡಿವಿಡೆಂಡ್ ಪಾವತಿ ಮಾಡಿರುವ 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 13ರಲ್ಲಿ ಈಕ್ವಿಟಿಯನ್ನು ತುಂಬಿದೆ. ಈ 13ರ ಪೈಕಿ, ಕೇವಲ ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[16] ತೆರಿಗೆ ನಂತರದ ಲಾಭದ (ಪಿಎಟಿ) ಶೇಕಡಾ 30ಕ್ಕೆ ಸಮನಾದ ಡಿವಿಡೆಂಡ್ ಪಾವತಿಯನ್ನು ಮಾಡಿದವು. ಉಳಿದ ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ[17]

[13] ಹಣಕಾಸು ಇಲಾಖೆ ಸುತ್ತೋಲೆ ಸಂಖ್ಯೆ 25.11.2021.

[14] ಸರ್ಕಾರಿ ಆದೇಶ ದಿನಾಂಕ 19.10.2022.

[15] ಮೇ 2003ರಲ್ಲಿ ನೀಡಲಾಗಿದ್ದ ಮೂಲ ಮಾರ್ಗಸೂಚಿಗಳನ್ನು ದಿನಾಂಕ 29.03.2021ರ ಸುತ್ತೋಲೆಯಿಂದ ಬದಲಾಯಿಸುವ ಮೂಲಕ ತೆರಿಗೆ ಪಾವತಿಯ ನಂತರದ ಲಾಭದ ಶೇಕಡಾ 30ರಷ್ಟು ಅಥವಾ ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ನಿವ್ವಳ ವ್ಯತ್ಯಾಸದ ಮೊತ್ತದ ಶೇಕಡಾ 5 ಇವೆರಡಲ್ಲಿ ಯಾವುದು ಅಧಿಕವಿದೆಯೋ ಆ ಷೇರು ಲಾಭಾಂಶವನ್ನು ಚಿಂತಿಸಲಾಗಿದ್ದಿತು. ಈ ಸುತ್ತೋಲೆಯನ್ನು ತೆರಿಗೆ ಪಾವತಿಯ ನಂತರ ಶೇಕಡಾ 30ಕ್ಕೆ ಸಮನಾದ ಷೇರು ಲಾಭಾಂಶ ಪಾವತಿಯನ್ನು ನಿರ್ದಿಷ್ಟಪಡಿಸುವ ಮೂಲಕ ಹೊಸ ಸುತ್ತೋಲೆಯನ್ನು ನೀಡಲಾಗಿರುವುದು.

[16] ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಪಾನೀಯಗಳ ನಿಗಮ ನಿಯಮಿತ.

[17] ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ, ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್

ಡಿವಿಡೆಂಡ್ ಪಾವತಿಯು ಪಿಎಟಿಯ ಶೇಕಡಾ 5.89 ರಿಂದ ಹಿಡಿದು ಶೇಕಡಾ 25.96 ರವರೆಗಿನ ಶ್ರೇಣಿಯಲ್ಲಿ ಶೇಕಡಾ 30 ಕ್ಕಿಂತ ಕಡಿಮೆ ಆಗಿತ್ತು. ಲಾಭ ಗಳಿಸಿರುವ ಎರಡು[18] ಶಾಸನಬದ್ಧ ನಿಗಮಗಳು ಯಾವುದೇ ಡಿವಿಡೆಂಡ್ ಪಾವತಿಯನ್ನು ಮಾಡಲಿಲ್ಲ.

5.89ರಿಂದ ಹಿಡಿದು ಶೇಕಡಾ 25.96ರವರೆಗಿನ ಶ್ರೇಣಿಯಲ್ಲಿ ಶೇಕಡಾ 30ಕ್ಕಿಂತ ಕಡಿಮೆ ಆಗಿತ್ತು. ಲಾಭ ಗಳಿಸಿರುವ ಎರಡು[13] ಶಾಸನಬದ್ಧ ನಿಗಮಗಳು ಯಾವುದೇ ಡಿವಿಡೆಂಡ್ ಪಾವತಿಯನ್ನು ಮಾಡಲಿಲ್ಲ.

## 1.5 ಸಾಲದ ಮೇಲಿನ ಬಡ್ಡಿ ಪಾವತಿ ಮತ್ತು ಕಾನೂನು ನಿಯಮ ನಿಬಂಧನೆಗಳ ಅನುಪಾಲನೆಗಳು

***ಬಡ್ಡಿ ವ್ಯಾಪ್ತಿ ಅನುಪಾತ (ಐಸಿಆರ್)***

**1.5.1** ಬಡ್ಡಿ ವ್ಯಾಪ್ತಿ ಅನುಪಾತವನ್ನು (ಐಸಿಆರ್) ಬಾಕಿಯಿರುವ ಋಣದ ಮೇಲೆ ಬಡ್ಡಿ ಪಾವತಿಸುವ ಕಂಪನಿಯೊಂದರ ಸಾಮರ್ಥ್ಯವನ್ನು ನಿರ್ಣಯಿಸಲು ಬಳಸಲಾಗುತ್ತದೆ ಮತ್ತು ಇದನ್ನು ಕಂಪನಿಯ ಬಡ್ಡಿ ಮತ್ತು ತೆರಿಗೆಗಳ ಮುಂಚಿನ ಗಳಿಕೆಗಳನ್ನು (ಇಬಿಐಟಿ) ಅದೇ ಅವಧಿಯ ಬಡ್ಡಿ ವೆಚ್ಚಗಳಿಂದ ಭಾಗಿಸುವ ಮೂಲಕ ಲೆಕ್ಕಾಚಾರ ಮಾಡಲಾಗುತ್ತದೆ. ಅನುಪಾತವು ಕಡಿಮೆಯಾದಷ್ಟೂ, ಸಾಲಋಣದ ಮೇಲೆ ಬಡ್ಡಿ ಪಾವತಿಸುವ ಕಂಪನಿಯ ಸಾಮರ್ಥ್ಯವು ಕಡಿಮೆ ಆಗಿರುತ್ತದೆ. ಒಂದಕ್ಕಿಂತ ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತವು ಬಡ್ಡಿಯ ಮೇಲಿನ ತನ್ನ ವೆಚ್ಚಗಳನ್ನು ಭರಿಸಲು ಕಂಪನಿಯು ಸಾಕಷ್ಟು ಆದಾಯಗಳನ್ನು ಉತ್ಪಾದಿಸುತ್ತಿಲ್ಲ ಎಂಬುದಾಗಿ ಸೂಚಿಸುತ್ತದೆ. 2020–21ರಿಂದ 2022–23ರ ಅವಧಿಯಲ್ಲಿ ಬಾಕಿಯಿರುವ ಸಾಲಗಳನ್ನು ಹೊಂದಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಬಡ್ಡಿ ವ್ಯಾಪ್ತಿ ಅನುಪಾತದ ವಿವರಗಳನ್ನು **ಕೋಷ್ಟಕ ಸಂಖ್ಯೆ 1.11**ರಲ್ಲಿ ಕೊಡಲಾಗಿದೆ.

**ಕೋಷ್ಟಕ ಸಂಖ್ಯೆ: 1.11: ಬಡ್ಡಿ ವ್ಯಾಪ್ತಿ ಅನುಪಾತ**

| ಕ್ರಮ ಸಂಖ್ಯೆ | ವರ್ಷ | ಪಾವತಿಸಿರುವ ಒಟ್ಟು ಬಡ್ಡಿ (₹ ಕೋಟಿಗಳಲ್ಲಿ) | ಬಡ್ಡಿ ಮತ್ತು ತೆರಿಗೆಯ ಮುಂಚಿನ ಒಟ್ಟು ಗಳಿಕೆಗಳು (ಇಬಿಐಟಿ) (₹ ಕೋಟಿಗಳಲ್ಲಿ) | ಸರ್ಕಾರ ಮತ್ತು ಇತರ ಹಣಕಾಸು ಸಂಸ್ಥೆಗಳ ಸಾಲದ ಬಾಧ್ಯತೆಗಳನ್ನು ಹೊಂದಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಒಂದಕ್ಕಿಂತ ಹೆಚ್ಚು ಬಡ್ಡಿ ವ್ಯಾಪ್ತಿ ಅನುಪಾತ ಹೊಂದಿರುವ ಕಂಪನಿಗಳ ಸಂಖ್ಯೆ | ಒಂದಕ್ಕಿಂತ ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತ ಹೊಂದಿರುವ ಕಂಪನಿಗಳ ಸಂಖ್ಯೆ | ಬಡ್ಡಿ ವ್ಯಾಪ್ತಿ ಅನುಪಾತ ಲೆಕ್ಕಾಚಾರ ಮಾಡಲಾಗದ ಕಂಪನಿಗಳ ಸಂಖ್ಯೆ |
|---|---|---|---|---|---|---|---|
| 1 | 2020-21 | 9,285.89 | 5,041.69 | 52 | 15 | 24 | 13 |
| 2 | 2021-22 | 9,887.90 | 1,873.97 | 52 | 17 | 23 | 12 |
| 3 | 2022-23 | 10,344.07 | 7,452.80 | 51 | 13 | 26 | 12 |

***ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಪ***

ಮುಂದುವರೆದು 2020–21 ರಿಂದ ಒಂದಕ್ಕಿಂತ ಕಡಿಮೆ ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿದ್ದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ 24ರಿಂದ 26ಕ್ಕೆ ಹೆಚ್ಚಳಗೊಂಡಿತ್ತು ಕೇವಲ 13 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒಂದಕ್ಕಿಂತ ಹೆಚ್ಚು ಬಡ್ಡಿ ವ್ಯಾಪ್ತಿ ಅನುಪಾತವನ್ನು ಹೊಂದಿದ್ದವು. ಮತ್ತು ಉಳಿದ 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಬಡ್ಡಿ ವ್ಯಾಪ್ತಿ ಅನುಪಾತವನ್ನು ವೆಚ್ಚಗಳು ಅಥವಾ ಬಡ್ಡಿ ಪಾವತಿ ಮತ್ತು ತೆರಿಗೆಗಳ ಪಾವತಿಗಳಿಗೆ ಮುಂಚಿನ ಗಳಿಕೆಗಳ ಶೂನ್ಯ ಮೌಲ್ಯದ ಕಾರಣ ಬಡ್ಡಿ ವ್ಯಾಪ್ತಿ ಅನುಪಾತವನ್ನು ಲೆಕ್ಕಾಚಾರ ಮಾಡಲು ಆಗಿರಲಿಲ್ಲ.

***ಅಸಲಿನ ಮೇಲೆ ಬಾಕಿಯಾಗಿರುವ ಆದರೂ ಮರುಪಾವತಿ ಮಾಡಿರದ ಬಡ್ಡಿಯ ಅವಧಿವಾರು ವಿಶ್ಲೇಷಣೆ***

**1.5.2** ***ಕಂಡಿಕೆ 1.2.3***ಯಲ್ಲಿ ತಿಳಿರುವಂತೆ, 32 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 31 ಮಾರ್ಚ್ 2023ರಂತೆ ₹ 12,684.67 ಕೋಟಿ ಮೊತ್ತದಷ್ಟು ರಾಜ್ಯ ಸರ್ಕಾರದ ಸಾಲದ ಬಾಕಿಯನ್ನು

ನಿಯಮತ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮತ, ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ.

[18] ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮ.

ಹೊಂದಿದ್ದವು. ಈ 32 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, 15 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ರಾಜ್ಯ ಸರ್ಕಾರವು ಒದಗಿಸಿರುವ ಸಾಲದ ಮೇಲೆ ಬಾಕಿಯಿರುವ ₹ 1,891.62 ಕೋಟಿ ಮೊತ್ತದಷ್ಟು ಬಡ್ಡಿಯ ಬಾಬ್ತನ್ನೂ ಸಹ ಹೊಂದಿದ್ದವು, ಇದರ ಅವಧಿವಾರು ವಿಶ್ಲೇಷಣೆಯನ್ನು **ಕೋಷ್ಟಕ ಸಂಖ್ಯೆ 1.12**ರಲ್ಲಿ ತೋರಿಸಲಾಗಿರುವುದು:

**ಕೋಷ್ಟಕ ಸಂಖ್ಯೆ 1.12: ರಾಜ್ಯ ಸರ್ಕಾರದಿಂದ ನೀಡಲಾಗಿರುವ ಸಾಲಗಳ ಮೇಲೆ ಬಾಕಿಯಿರುವ ಬಡ್ಡಿಯ ಅವಧಿವಾರು ವಿಶ್ಲೇಷಣೆಯನ್ನು ತೋರಿಸುವ ತ:ಖ್ತೆ.**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಗ | ಎಸ್‌ಪಿಎಸ್ಇ ಗಳ ಸಂಖ್ಯೆ | ಬಾಕಿಯಿರುವ ಬಡ್ಡಿಯ ಮೊತ್ತ | ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಬಾಕಿ ಉಳಿದಿರುವ ಬಡ್ಡಿ | ಒಂದರಿಂದ ಮೂರು ವರ್ಷಗಳವರೆಗೆ ಬಾಕಿ ಉಳಿದಿರುವ ಬಡ್ಡಿ | ಮೂರು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಬಾಕಿ ಉಳಿದಿರುವ ಬಡ್ಡಿ |
|---|---|---|---|---|---|---|
| 1 | ಕಾರ್ಯನಿರತವಾಗಿರುವ – ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿ ಮಾಡಿರುವ | 1 | 85.00 | 0.00 | 0.00 | 85.00 |
| 2 | ಕಾರ್ಯನಿರತವಾಗಿರುವ – ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿ ಮಾಡಿರದ | 8 | 75.75 | 8.91 | 19.22 | 47.62 |
| 3 | ಕಾರ್ಯಸ್ಥಗಿತ | 5 | 1,581.02 | 77.23 | 245.00 | 1,258.79 |
| 4 | ಕಾರ್ಯನಿರತ ಶಾಸನಬದ್ಧ ನಿಗಮ | 1 | 149.85 | 0.00 | 0.00 | 149.85 |
| | **ಒಟ್ಟು** | **15** | **1,891.62** | **86.14** | **264.22** | **1,541.26** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ ದತ್ತಾಂಶಗಳು*

ಒಟ್ಟು ಬಾಕಿ ಉಳಿದಿರುವ ಬಡ್ಡಿಯ ಪೈಕಿ, ಶೇಕಡಾ 83.58 (₹ 1581.02 ಕೋಟಿ ಮೊತ್ತ) ಐದು ಕಾರ್ಯನಿರತವಾಗಿರದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿರುತ್ತದೆ.

## 1.6 ಸರ್ಕಾರಿ ಕಂಪನಿಗಳ ಕಾರ್ಯಾಚರಣೆಗಳಲ್ಲಿನ ದಕ್ಷತೆ

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿರುವ ಲಾಭದ ವಿಶ್ಲೇಷಣೆ***

**1.6.1** ಕಂಡಿಕೆ 1.4.1ರಲ್ಲಿ ತಿಳಿರುವಂತೆ, 57 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ನಾಲ್ಕು ಕಾರ್ಯಸ್ಥಗಿತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಎರಡು ಶಾಸನಬದ್ಧ ನಿಗಮಗಳೂ ಸೇರಿದಂತೆ) 30 ಸೆಪ್ಟೆಂಬರ್ 2023ರವರೆಗೆ ದೃಢೀಕರಿಸಲಾಗಿರುವ ಅವುಗಳ ಇತ್ತೀಚಿನ ಹಣಕಾಸು ತ:ಖ್ತೆಗಳ ಅನುಸಾರ ₹ 3,132.14 ಕೋಟಿ ಲಾಭವನ್ನು ವರದಿ ಮಾಡಿದವು.

ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಂಬಂಧಿತ ವರ್ಷಗಳಿಗೆ ವರದಿ ಮಾಡಿರುವ ಒಟ್ಟು ಆದಾಯದ (ಕಾರ್ಯಾಚರಣೆಗಳಿಂದ ಆದಾಯ ಮತ್ತು ಇತರೆ ಆದಾಯ) ಲೆಕ್ಕಪರಿಶೋಧನೆಯ ವಿಶ್ಲೇಷಣೆಯು 32 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[19] (ಒಂದು ಶಾಸನಬದ್ಧ ನಿಗಮವೂ ಸೇರಿದಂತೆ) ಗಳಿಸಿರುವ ₹ 408.72 ಕೋಟಿ ನಿವ್ವಳ ಲಾಭವು ಸಂಬಂಧಿತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವರದಿ ಮಾಡಿರುವ ₹ 1,063.80 ಕೋಟಿ ಇತರ ಆದಾಯಕ್ಕಿಂತ ಕಡಿಮೆಯಾಗಿದ್ದಿತ್ತು ***(ವಿವರಗಳು ಅನುಬಂಧ – 2ರಲ್ಲಿ)*** ಮತ್ತು ಆದ್ದರಿಂದ, ಅದು ಕಾರ್ಯಾಚರಣೆಗಳಿಂದ ಲಾಭವನ್ನು ಪ್ರತಿನಿಧಿಸಲಿಲ್ಲ.

***ಖಾಸಗಿ ಕಂಪನಿಗಳೊಂದಿಗೆ ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯನಿರ್ವಹಣೆಯ ಹೋಲಿಕೆ***

[19] 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಕಾರ್ಯಾಚರಣೆಗಳಿಂದ ವರಮಾನವು ಶೂನ್ಯವಾಗಿದ್ದಿತು.

**1.6.2** ಪ್ರಮುಖವಾಗಿ ಕಾಗದ ಉತ್ಪನ್ನಗಳು, ಸಕ್ಕರೆ, ತಿಳ್ಳುಮರ ಇತ್ಯಾದಿಯಲ್ಲಿ ವ್ಯವಹರಿಸುತ್ತಿರುವ ಕರ್ನಾಟಕದ ಒಂದು ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿರುವಂತಹ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್), ಹಣಕಾಸು ವರ್ಷ 2015–16ರಿಂದ ತನ್ನ ಯಾವುದೇ ಕಾರ್ಯಾಚರಣೆಗಳನ್ನು ನಡೆಸಿರುವುದಿಲ್ಲ. ಹೀಗಾಗಿ, ಖಾಸಗಿ ಕ್ಷೇತ್ರದೊಂದಿಗೆ ಯಾವುದೇ ತುಲನಾತ್ಮಕ ವಿಶ್ಲೇಷಣೆಯನ್ನು ಮಾಡಿರುವುದಿಲ್ಲ.

***ಮಾರಾಟ ಮತ್ತು ಮಾರುಕಟ್ಟೆ ವ್ಯವಸ್ಥೆ***

**1.6.3** 113 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ (14 ಕಾರ್ಯಸ್ಥಗಿತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಹೊರತುಪಡಿಸಿ), ಇತ್ತೀಚಿನ ದೃಢೀಕೃತ ಹಣಕಾಸು ತ:ಖ್ತೆಗಳ ಅನುಸಾರ, ಹಿಂದಿನ ವರ್ಷ ದಾಖಲಿಸಿರುವ ₹ 77,410.25 ಕೋಟಿ ವಹಿವಾಟಿಗೆ ಹೋಲಿಸಿದಲ್ಲಿ, 77 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವರ್ಷದ ಅವಧಿಯಲ್ಲಿ ₹ 88,824.61 ಕೋಟಿ ಮೊತ್ತದಷ್ಟು ಕಾರ್ಯಾಚರಣೆಗಳ ವಹಿವಾಟನ್ನು ಸರಕುಗಳ ಮಾರಾಟ /ಸೇವೆಗಳ ಮೂಲಕ ದಾಖಲಿಸಿದ್ದವು. ಉಳಿದ 36 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯಾಚರಣೆಗಳ ಆದಾಯವನ್ನು ಸಾಧಿಸಿರುವುದಿಲ್ಲ.

ಕಾರ್ಯಾಚರಣೆಗಳಿಂದ ವರಮಾನದ ವಿಭಜನೆಯನ್ನು ಈ ಕೆಳಗೆ **ಕೋಷ್ಟಕ ಸಂಖ್ಯೆ 1.13**ರಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.13: ಕಾರ್ಯಾಚರಣೆಗಳಿಂದ ವರಮಾನದ ವಿಭಜನೆಯನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ವರ್ಗ | 2021-22 | | | 2022-23 | | |
|---|---|---|---|---|---|---|---|
| | | ಕಂಪನಿ | ಶಾಸನಬದ್ಧ ನಿಗಮ | ಒಟ್ಟು | ಕಂಪನಿ | ಶಾಸನಬದ್ಧ ನಿಗಮ | ಒಟ್ಟು |
| 1 | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | 70 | 6 | 76 | 71 | 6 | 77 |
| 2 | ದೇಶೀಯ | 70,206.77 | 7,182.48 | 77,389.25 | 83,188.38 | 5,609.36 | 88,797.74 |
| 3 | ರಫ್ತು | 21.00 | 0.00 | 21.00 | 26.87 | 0.00 | 26.87 |
| **4** | **ಒಟ್ಟು ಕಾರ್ಯಾಚರಣೆಗಳ ಆದಾಯ** | **70,227.77** | **7,182.48** | **77,410.25** | **83,215.25** | **5,609.36** | **88,824.61** |

***ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆ***

ಕೇವಲ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆ ಎಸ್ ಡಿ ಎಲ್ ಮತ್ತು ಎಂ ಪಿ ವಿ ಎಲ್) ₹ 26.87 ಕೋಟಿ ರಫ್ತು ವಹಿವಾಟು ವರದಿ ಮಾಡಿದವು.

***ಸಂಶೋಧನೆ ಮತ್ತು ಅಭಿವೃದ್ಧಿ ಮೇಲಿನ ವೆಚ್ಚಗಳು (ಆರ್ ಅಂಡ್ ಡಿ)***

**1.6.4** ಇತ್ತೀಚಿನ ಹಣಕಾಸು ತ:ಖ್ತೆಗಳಲ್ಲಿನ ನಿರ್ದೇಶಕರುಗಳ ವರದಿಗಳಲ್ಲಿ ಬಹಿರಂಗಪಡಿಸುವಿಕೆಗಳನ್ನು[20] ಸಮೀಕ್ಷಿಸಲಾಗಿ ರಾಜ್ಯದ ಸಾರ್ವಜನಿಕ ವಲಯ ಉದ್ದಿಮೆಗಳು ಸಂಶೋಧನೆ ಮತ್ತು ಅಭಿವೃದ್ಧಿ ಮೇಲೆ ಯಾವುದೇ ಗಮನಾರ್ಹ ವೆಚ್ಚವನ್ನು ಮಾಡದಿರುವುದು ಕಂಡುಬರುತ್ತದೆ. ಕೇವಲ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ (ಎಂಪಿವಿಎಲ್) ಹಣಕಾಸು ವರ್ಷ 2022–23ರಲ್ಲಿ ₹ 0.99 ಲಕ್ಷ ಮೊತ್ತವನ್ನು ವೆಚ್ಚ ಮಾಡಿದ್ದಿತು (ಹಿಂದಿನ ವರ್ಷ – ₹ 1.67 ಲಕ್ಷ).

[20] ತಂತ್ರಜ್ಞಾನ ಒಳಸೇರ್ಪಡೆಗೊಳಿಸಿಕೊಳ್ಳುವಿಕೆ ಅಗತ್ಯತೆಯ ಮೇಲೆ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳ 2014 ನಿಯಮ 8(ಬಿ) ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 134 (3) ಸಂಶೋಧನೆ ಮತ್ತು ಅಭಿವೃದ್ಧಿಯ ಮೇಲೆ ಭರಿಸಲಾಗಿರುವ ವೆಚ್ಚಗಳನ್ನು ಬಹಿರಂಗಪಡಿಸುವ ಅಗತ್ಯತೆಯನ್ನು ಹೊಂದಿರುತ್ತದೆ.

### *ತೊಡಗಿಸಿರುವ ಬಂಡವಾಳದ ಮೇಲಿನ ಪ್ರತಿಫಲ (ಆರ್‌ಓಸಿಇ)*

**1.6.5** ತೊಡಗಿಸಿರುವ ಬಂಡವಾಳದ ಮೇಲಿನ ಪ್ರತಿಫಲವು ಒಂದು ಅನುಪಾತವಾಗಿದ್ದು ಇದು ಒಂದು ಕಂಪನಿಯ ಲಾಭದಾಯಕತೆ ಮತ್ತು ಅದರ ಬಂಡವಾಳವನ್ನು ತೊಡಗಿಸಿರುವ ದಕ್ಷತೆಯನ್ನು ನಿರ್ಧಾರಣೆ ಮಾಡುತ್ತದೆ. ಬಂಡವಾಳದ ಮೇಲಿನ ಪ್ರತಿಫಲವನ್ನು ಕಂಪನಿಯ ಬಡ್ಡಿ ಮತ್ತು ತೆರಿಗೆಗಳ ಮುಂಚಿನ ಗಳಿಕೆಗಳನ್ನು (ಇಬಿಐಟಿ) ತೊಡಗಿಸಿರುವ ಬಂಡವಾಳದಿಂದ[21] ಭಾಗಿಸುವ ಮೂಲಕ ಲೆಕ್ಕಾಚಾರ ಮಾಡಲಾಗುತ್ತದೆ. 2020–21ರಿಂದ 2022–23ರವರೆಗಿನ ಬಂಡವಾಳದ ಮೇಲಿನ ಪ್ರತಿಫಲದ ವಿವರಗಳನ್ನು ಈಕೆಳಗೆ **ಕೋಷ್ಟಕ ಸಂಖ್ಯೆ 1.14**ರಲ್ಲಿ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1.14: ಹೂಡಿಕೆ ಮಾದಲಾಗಿರುವ ಬಂಡವಾಳದ ಮೇಲಿನ ಪ್ರತಿಫಲ**

| ಕ್ರಮ ಸಂಖ್ಯೆ | ವರ್ಷ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಇಬಿಐಟಿ (₹ ಕೋಟಿಗಳಲ್ಲಿ) | ತೊಡಗಿಸಿರುವ ಬಂಡವಾಳ (₹ ಕೋಟಿಗಳಲ್ಲಿ) | ಆರ್ ಓ ಸಿ ಇ (ಶೇಕಡಾ) |
|---|---|---|---|---|---|
| 1 | 2020-21 | 124 | 5,041.69 | 1,45,117.01 | 3.47 |
| 2 | 2021-22 | 125 | 1,873.97 | 1,58,153.43 | 1.18 |
| 3 | 2022-23 | 127 | 7,452.80 | 1,58,382.98 | 4.71 |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆ*

ಬಂಡವಾಳ ಹೂಡಿಕೆಯ ಮೇಲಿನ ಪ್ರತಿಫಲವು 2020–21ರಿಂದ 2022–23ರವರೆಗೆ ಸಕಾರಾತ್ಮಕವಾಗಿದ್ದಿತು ಹಾಗೂ ಅದು 2020–21ರಲ್ಲಿ ಶೇಕಡಾ 3.47ರಿಂದ 2022–23ರಲ್ಲಿ ಶೇಕಡಾ 4.71ಕ್ಕೆ ಏರಿಕೆ ಕಂಡಿತು. 2021–22ರ ಸಾಲಿಗಾಗಿ ಸಾಧಿಸಲಾದಂತಹ ಶೇಕಡಾ 1.18ರ ಕಡಿಮೆ ಪ್ರಮಾಣದ ಬಂಡವಾಳ ಹೂಡಿಕೆಗಳ ಮೇಲಿನ ಪ್ರತಿಫಲಕ್ಕೆ ದಾಖಲಾಗಿರುವ ಕಾರಣವೆಂದರೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭದಾಯಕತೆಯಲ್ಲಿ ಗಮನಾರ್ಹವಾದ ರೀತಿಯಲ್ಲಿ ಇಳಿಮುಖ ಉಂಟಾಗಿರುವುದು.

### *ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿರುವ ಈಕ್ವಿಟಿ ಹೂಡಿಕೆ ಮೇಲಿನ ಪ್ರತಿಫಲ*

**1.6.6** ಈಕ್ವಿಟಿ ಮೇಲಿನ ಪ್ರತಿಫಲವು ಲಾಭಗಳನ್ನು ಪಡೆಯುವ ಸಲುವಾಗಿ ಕಂಪನಿಯ ಆಸ್ತಿಗಳನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ ಎನ್ನುವುದನ್ನು ವಿಶ್ಲೇಷಿಸಲು ಹಣಕಾಸು ಕಾರ್ಯಸಾಧನೆಯ ಒಂದು ಮಾಪಕವಾಗಿರುತ್ತದೆ. ಈಕ್ವಿಟಿ ಹೂಡಿಕೆಯ ಮೇಲಿನ ಪ್ರತಿಫಲವನ್ನು ನಿವ್ವಳ ಆದಾಯವನ್ನು (ಅಂದರೆ ತೆರಿಗೆಗಳ ನಂತರದ ಲಾಭ) ಷೇರು ಹಿಡುವಳಿದಾರರ ನಿಧಿಯಿಂದ ಭಾಗಿಸುವ ಮೂಲಕ ಲೆಕ್ಕಾಚಾರ ಮಾಡಲಾಗುತ್ತದೆ. ಅದನ್ನು ಶೇಕಡಾವಾರು ರೂಪದಲ್ಲಿ ವ್ಯಕ್ತಪಡಿಸಲಾಗುತ್ತದೆ ಮತ್ತು ನಿವ್ವಳ ಆದಾಯ ಮತ್ತು ಷೇರು ಹಿಡುವಳಿದಾರರ ನಿಧಿಗಳು ಸಕಾರಾತ್ಮಕ ಸಂಖ್ಯೆಗಳಲ್ಲಿ ಇದ್ದಲ್ಲಿ. ಯಾವುದೇ ಕಂಪನಿಗಾಗಿಯೂ ಅದನ್ನು ಲೆಕ್ಕಾಚಾರ ಮಾಡಬಹುದು,

ಷೇರು ಹಿಡುವಳಿದಾರರುಗಳ ನಿಧಿಗಳನ್ನು ಪಾವತಿಸಲ್ಪಟ್ಟಿರುವ ಬಂಡವಾಳ ಮತ್ತು ನಿರುಪಾದಿತ ಮೀಸಲಿರಿಸಿರುವಿಕೆಗಳನ್ನು ಕೂಡುವ ಮೂಲಕ, ಕ್ರೋಢೀಕೃತ ನಷ್ಟಗಳು ಮತ್ತು ಮುಂದೂಡಿರುವ ಆದಾಯ ವೆಚ್ಚವನ್ನು ಕಳೆಯುವ ಮೂಲಕ ಲೆಕ್ಕಾಚಾರ ಮಾಡಲಾಗುತ್ತದೆ ಮತ್ತು ಇದು ಎಲ್ಲಾ ಆಸ್ತಿಗಳನ್ನು ಮಾರಿದರೆ ಮತ್ತು ಎಲ್ಲಾ ಋಣಗಳನ್ನು ಪಾವತಿಸಿದರೆ ಕಂಪನಿಯ ಸಹಭಾಗಿಗಳಿಗೆ ಎಷ್ಟು ಲಾಭ ಉಳಿಯುತ್ತದೆ ಎಂಬುದನ್ನು ಬಹಿರಂಗಪಡಿಸುತ್ತದೆ. ಸಕಾರಾತ್ಮಕ ಷೇರು ಹಿಡುವಳಿದಾರರುಗಳ ನಿಧಿಯು ಕಂಪನಿಯು ತನ್ನ ಬಾಧ್ಯತೆಗಳನ್ನು ಒಳಗೊಳ್ಳಲು ಸಾಕಷ್ಟು ಆಸ್ತಿಗಳನ್ನು ಹೊಂದಿರುವುದನ್ನು ಬಹಿರಂಗಪಡಿಸುತ್ತದೆ, ಅದೇ ನಕಾರಾತ್ಮಕ ಷೇರು ಹಿಡುವಳಿದಾರರುಗಳ ನಿಧಿ ಈಕ್ವಿಟಿ ಎಂದರೆ ಬಾಧ್ಯತೆಗಳು ಆಸ್ತಿಗಳನ್ನು ಮೀರಿರುವುದು.

[21] ಹೂಡಿಕೆ ಮಾಡಲಾಗಿರುವ ಬಂಡವಾಳವು ಪಾವತಿಸಲ್ಪಟ್ಟಿರುವ ಷೇರು ಬಂಡವಾಳ, ಇದಕ್ಕೆ ನಿರುಪಾದಿತ ಮೀಸಲಿರುಸುವಿಕೆಗಳು ಮತ್ತು ಮಿಗುತಾಯಗಳನ್ನು ಕೂಡಿಸುವುದು, ಬಂದ ಮೊತ್ತಕೆ ದೀರ್ಘಾವಧಿ ಸಾಲಗಳನ್ನು ಕೂಡಿಸುವುದು, ಇದರಿಂದ ಬಂದ ಮೊತ್ತದಿಂದ ಕ್ರೋಡೀಕೃತ ನಷ್ಟಗಳನ್ನು ಕಳೆಯುವುದು, ಇದರಿಂದ ಬಂದ ಮೊತ್ತದಿಂದ ಮುಂದೂಡಲ್ಪಟ್ಟಿರುವ ವರಮಾನ ವೆಚ್ಚವನ್ನು ಕಳೆದನಂತರ ಬಂದ ಮೊತ್ತಕ್ಕೆ ಸಮನಾಗಿರುವುದು.

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ನಿವ್ವಳ ಆದಾಯ, ಷೇರು ಹಿಡುವಳಿದಾರರುಗಳ ನಿಧಿ ಮತ್ತು ಈಕ್ವಿಟಿಯ ಮೇಲಿನ ಪ್ರತಿಫಲದ ವಿವರಗಳನ್ನು ಈ ಕೆಳಗಿನ **ಕೋಷ್ಟಕ ಸಂಖ್ಯೆ** 1.15ರಲ್ಲಿ ಕೊಡಲಾಗಿದೆ.

**ಕೋಷ್ಟಕ ಸಂಖ್ಯೆ 1.15: ರಾಜ್ಯ ಸರ್ಕಾರವು ಹಣವನ್ನು ಹೂಡಿಕೆ ಮಾಡಿರುವ ಕಡೆಗಳಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಈಕ್ವಿಟಿಯ ಮೇಲಿನ ಪ್ರತಿಫಲ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವರ್ಷ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ನಿವ್ವಳ ಆದಾಯ (ಪಿಎಟಿ) | ಷೇರು ಹಿಡುವಳಿದಾರರುಗಳ ನಿಧಿ | ಈಕ್ವಿಟಿ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|---|
| 1 | 2020-21 | 124 | -5,259.47 | 54,429.18 | - |
| 2 | 2021-22 | 125 | -8,839.63 | 60,956.73 | - |
| 3 | 2022-23 | 127 | -4,317.61 | 62,056.99 | - |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆ*

2020–2023ರ ಅವಧಿಯಲ್ಲಿ ಎಲ್ಲಾ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಿವಳ ಆದಾಯವು ಒಟ್ಟಾರೆಯಾಗಿ ನಕಾರಾತ್ಮಕವಾಗಿದ್ದಿತಾದ್ದರಿಂದ, ಲಾಭಗಳಿಸುತ್ತಿದ್ದಂತಹ /ನಷ್ಟ ಅನುಭವಿಸುತ್ತಿದ್ದಂತಹ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ವರ್ಷವಾರು ಈಕ್ವಿಟಿ ಮೇಲಿನ ಪ್ರತಿಫಲವನ್ನು ಈ ಕೆಳಗಿನ **ಕೋಷ್ಟಕ ಸಂಖ್ಯೆ** 1.16ರಲ್ಲಿ ಟೇಬಲ್ಲಿನಲ್ಲಿ ಲೆಕ್ಕಹಾಕಲಾಗಿರುವುದು ಮತ್ತು ಕ್ರೋಢೀಕರಣಗೊಳಿಸಲಾಗಿರುವುದು.

**ಕೋಷ್ಟಕ ಸಂಖ್ಯೆ 1.16: ರಾಜ್ಯ ಸರ್ಕಾರವು ಈಕ್ವಿಟಿ ಬಂಡವಾಳ ಹೂಡಿಕೆ ಮಾಡಿರುವ ಕಡೆಗಳಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಳಿಸಿರುವ ಲಾಭ /ಭರಿಸಿರುವ ನಷ್ಟಗಳಿಗೆ ಸಂಬಂಧಿಸಿದಂತೆ ಈಕ್ವಿಟಿ ಮೇಲಿನ ಪ್ರತಿಫಲ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ನಿವ್ವಳ ಆದಾಯ (ಪಿಎಟಿ) | ಷೇರು ಹಿಡುವಳಿದಾರರುಗಳ ನಿಧಿ | ಈಕ್ವಿಟಿ ಮೇಲಿನ ಪ್ರತಿಫಲ (ಶೇಕಡಾವಾರು) |
|---|---|---|---|---|---|
| **2020-21** | | | | | |
| 1 | ಲಾಭದಲ್ಲಿ ಇರುವಂತಹವುಗಳು | 50 | 2,987.00 | 35,006.81 | 8.53 |
| 2 | ನಷ್ಟದಲ್ಲಿ ಇರುವಂತಹವುಗಳು | 50 | -8,246.47 | 19,379.71 | -42.55 |
| 3 | ಇತರವುಗಳು | 24 | 0.00 | 42.66 | 0.00 |
| | ಒಟ್ಟು | 124 | **-5,259.47** | **54,429.18** | |
| **2021-22** | | | | | |
| 4 | ಲಾಭದಲ್ಲಿ ಇರುವಂತಹವುಗಳು | 55 | 2,608.22 | 38,912.35 | 6.70 |
| 5 | ನಷ್ಟದಲ್ಲಿ ಇರುವಂತಹವುಗಳು | 50 | -11,447.85 | 22,018.83 | -51.99 |
| 6 | ಇತರವುಗಳು | 20 | 0.00 | 25.55 | 0.00 |
| | ಒಟ್ಟು | 125 | **-8,839.63** | **60,956.73** | |
| **2022-23** | | | | | |
| 7 | ಲಾಭದಲ್ಲಿ ಇರುವಂತಹವುಗಳು | 57 | 3,132.14 | 21,172.95[22] | 14.79 |
| 8 | ನಷ್ಟದಲ್ಲಿ ಇರುವಂತಹವುಗಳು | 56 | -7,449.75 | 40,684.65 | -18.31 |
| 9 | ಇತರವುಗಳು | 14 | 0.00 | 199.39 | 0.00 |
| | ಒಟ್ಟು | 127 | **-4,317.61** | **62,056.99** | |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆ*

ಈಕ್ವಿಟಿ ಮೇಲಿನ ಪ್ರತಿಫಲಗಳಿಗೆ ಸಂಬಂಧಿತ ಮಾಹಿತಿಯನ್ನು ಲೆಕ್ಕಪರಿಶೋಧನೆಯು ವಿಶ್ಲೇಷಣೆ ಮಾಡಲಾಗಿ, 2020–21ರಲ್ಲಿ ಲಾಭವನ್ನು ವರದಿ ಮಾಡಿದ್ದಂತಹ 50 ರಾಜ್ಯ ಸಾರ್ವಜನಿಕ ವಲಯ

[22] ಷೇರುದಾರರ ನಿಧಿಯ ಲಾಭ ಮತ್ತು ನಷ್ಟದ ಘಟಕದ ಪ್ರಮಾಣದಲ್ಲಿ ಪ್ರಮುಖ ಬದಲಾವಣೆಯು ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರಣದಿಂದಾಗಿದೆ ಅಂದರೆ ಕೆಪಿಸಿಎಲ್ ಮತ್ತು ಸಿಎನ್‌ಎನ್‌ಎಲ್ ಅನುಕ್ರಮವಾಗಿ ₹ 10,249 ಕೋಟಿ ಮತ್ತು ₹ 8,246 ಕೋಟಿ ಷೇರುದಾರರ ನಿಧಿಯನ್ನು ಹೊಂದಿದ್ದು, ಇದು 2022–23ರಲ್ಲಿ ನಷ್ಟ‌ಅನುಭವಿಸಿವೆ.

ಉದ್ದಿಮೆಗಳ ಪೈಕಿ 14 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022–23 ಸಾಲಿನಲ್ಲಿ ನಷ್ಟಗಳನ್ನು ಅನುಭವಿಸಿದ್ದವು. ಅದೇ ಅವಧಿಯಲ್ಲಿ, 2020–21 ಸಾಲಿನಲ್ಲಿ ನಷ್ಟಗಳನ್ನು ಅನುಭವಿಸಿದ್ದಂತಹ 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022–23 ಸಾಲಿನಲ್ಲಿ ಲಾಭಗಳನ್ನು ವರದಿ ಮಾಡಿದ್ದವು. ಇತ್ತೀಚಿನ ಪ್ರಮಾಣೀಕೃತ ಹಣಕಾಸು ತ;ಖ್ತೆಗಳ ಅನುಸಾರ 33 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮೂರೂ ವರ್ಷಗಳಲ್ಲಿ ನಷ್ಟಗಳನ್ನು ಅನುಭವಿಸಿದ್ದವು.

2022–23 ಸಾಲಿನಲ್ಲಿ ಲಾಭ ಗಳಿಸಿದ್ದಂತಹ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭಾಂಶ ಗಳಿಕೆಯಲ್ಲಿನ ಸುಧಾರಣೆಯು ಕಡಿಮೆ ಪ್ರಮಾಣದ ಷೇರು ಹಿಡುವಳಿದಾರರ ನಿಧಿಯನ್ನು ಹೊಂದಿರುವಂತಹ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಒಳಸೇರ್ಪಡೆಗೊಳಿಸಿಕೊಂಡಿದ್ದರ ಕಾರಣದಿಂದಾಗಿ ಲಾಭ ಗಳಿಸುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಯೋಜನೆಯಲ್ಲಿನ ಬದಲಾವಣೆ ಅಥವಾ ಮಾರ್ಪಾಡಿನಿಂದ ಆಗಿರುತ್ತದೆ.

## 1.7 ರಾಜ್ಯ ಸರ್ಕಾರದಿಂದ ಮಾಡಲಾಗಿರುವ ಹೂಡಿಕೆಗಳಿಂದ ಪ್ರತಿಫಲಗಳು

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಸರ್ಕಾರವು ಮಾಡಿರುವ ಹೂಡಿಕೆಗಳ ಮೇಲಿನ ಪ್ರತಿಫಲಗಳು ಮುಖ ಬೆಲೆಯ ಆಧಾರದ ಮೇರೆಗೆ***

**1.7.1** ಹೂಡಿಕೆಗಳ ಮೇಲಿನ ಪ್ರತಿಫಲವನ್ನು ಷೇರುಗಳ ಮೂಲ ಬೆಲೆ ಅಥವಾ ಮುಖ ಬೆಲೆಯ ಮೇಲೆ ಲೆಕ್ಕಹಾಕಲಾಗುತ್ತದೆ, ಅದರಲ್ಲಿ ಸರ್ಕಾರದಿಂದ ಮಾಡಲಾಗಿರುವ ಹೂಡಿಕೆಗಳ ಮೇಲೆ ಪ್ರತಿಫಲವನ್ನು ಒಟ್ಟಾರೆ ಗಳಿಕೆಗಳನ್ನು / ನಷ್ಟಗಳನ್ನು ಮಾಡಲಾಗಿರುವ ಕ್ರೋಡೀಕೃತ ಹೂಡಿಕೆಯಿಂದ ಭಾಗಿಸುವ ಮೂಲಕ ಲೆಕ್ಕಾಚಾರ ಮಾಡಲಾಗುತ್ತದೆ. ಈ ಉದ್ದೇಶಕ್ಕಾಗಿ ಈಕ್ವಿಟಿಯಲ್ಲಿನ ಹೂಡಿಕೆಗಳಲ್ಲದೆಯೇ, ರಾಜ್ಯ ಸರ್ಕಾರವು ನೀಡಿರುವಂತಹ ಬಡ್ಡಿ ಮುಕ್ತ ಸಾಲಗಳ ಬಾಕಿಯನ್ನೂ ಸಹ ಪರಿಗಣಿಸಲಾಗುವುದು, ಏಕೆಂದರೆ ಅವುಗಳನ್ನು ಮರುಪಾವತಿ ಮಾಡಲಾಗಿರದ ಕಾರಣ ಅವುಗಳು ಈಕ್ವಿಟಿಯ ರೀತಿಯೇ ಆಗಿರುತ್ತವೆ.

ರಾಜ್ಯ ಸರ್ಕಾರವು ದೀರ್ಘಾವಧಿ ಸಾಲಗಳ ಮೇಲೆ ಹೂಡಿಕೆ ಮಾಡಿದ್ದಂತಹ ₹ 12,684.67 ಕೋಟಿ ಮೊತ್ತದ ಪೈಕಿ ₹ 129.12 ಕೋಟಿ ಮೊತ್ತವು ಬಡ್ಡಿ ರಹಿತ ಸಾಲಗಳಾಗಿದ್ದವು. ₹ 1,13,005.23 ಕೋಟಿ ಮೊತ್ತದಷ್ಟು ಈಕ್ವಿಟಿ ಹಾಗೂ ₹ 129.12 ಕೋಟಿ ಮೊತ್ತದಷ್ಟು ಬಡ್ಡಿ ರಹಿತ ಸಾಲವು 31 ಮಾರ್ಚ್ 2023ರಲ್ಲಿದ್ದಂತೆ ಈ 107 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ರಾಜ್ಯ ಸರ್ಕಾರದಿಂದ ₹ 1,13,134.35 ಕೋಟಿ ಒಟ್ಟಾರೆ ಹೂಡಿಕೆಯ ಮೊತ್ತವಾಗಿರು ತ್ತದೆ.

2020–21ರಿಂದ 2022–23ರವರೆಗಿನ ಮೂರು ಹಣಕಾಸು ಸಾಲುಗಳಲ್ಲಿ ಮೂಲ ಬೆಲೆ ಅಥವಾ ಮುಖ ಬೆಲೆಯ ಆಧಾರದ ಮೇರೆಗೆ ಕ್ಷೇತ್ರವಾರು ಹೂಡಿಕೆಯ ಮೇಲಿನ ಪ್ರತಿಫಲವನ್ನು ಈ ಕೆಳಗಿನ **ಕೋಷ್ಟಕ 1.17**ರಲ್ಲಿ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 1.17: 2010–11ರಿಂದ 2022–23ರ ಅವಧಿಗೆ ಮೂಲ ಬೆಲೆ ಅಥವಾ ಮುಖ ಬೆಲೆ ಆಧಾರದಲ್ಲಿ ಹೂಡಿಕೆಗಳ ಮೇಲಿನ ಪ್ರತಿಫಲದ ವರ್ಷ–ವಾರು ವಿವರಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಕ್ಷೇತ್ರದ ಹೆಸರು | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ[23] | ಒಟ್ಟು ಗಳಿಕೆಗಳು/ ನಷ್ಟಗಳು (–) | ವರ್ಷಾಂತ್ಯದಲ್ಲಿ ಇದ್ದಂತೆ ಈಕ್ವಿಟಿ ಮತ್ತು ಬಡ್ಡಿ ಮುಕ್ತ ಸಾಲಗಳು | ಹೂಡಿಕೆ ಮೇಲಿನ ಪ್ರತಿಫಲ (ಶೇಕಡವಾರು) |
|---|---|---|---|---|---|
| | | | **2020-21** | | |
| 1 | ವಿದ್ಯುತ್ | 8 | -2,417.18 | 14,009.66 | -17.25 |
| 2 | ಹಣಕಾಸು | 17 | -83.40 | 3,070.83 | -2.72 |
| 3 | ಸೇವೆಗಳು | 10 | -973.02 | 938.23 | -103.71 |
| 4 | ಮೂಲಸೌಕರ್ಯ | 19 | -635.30 | 66,981.54 | -0.95 |

[23] ಹೂಡಿಕೆಗಳನ್ನು ಮಾಡಿರದ ಮತ್ತು ಕೇವಲ ಬಡ್ಡಿ ರಹಿತ ಸಾಲಗಳನ್ನು ನೀಡಲಾಗಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಒಳಗೊಂಡಿರುತ್ತವೆ.

| ಕ್ರಮ ಸಂಖ್ಯೆ | ಕ್ಷೇತ್ರದ ಹೆಸರು | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ[23] | ಒಟ್ಟು ಗಳಿಕೆಗಳು/ ನಷ್ಟಗಳು (–) | ವರ್ಷಾಂತ್ಯದಲ್ಲಿ ಇದ್ದಂತೆ ಈಕ್ವಿಟಿ ಮತ್ತು ಬಡ್ಡಿ ಮುಕ್ತ ಸಾಲಗಳು | ಹೂಡಿಕೆ ಮೇಲಿನ ಪ್ರತಿಫಲ (ಶೇಕಡವಾರು) |
|---|---|---|---|---|---|
| 5 | ಇತರವುಗಳು | 44 | 283.27 | 681.59 | 41.56 |
| | **ಒಟ್ಟು** | **98** | **-3,825.63** | **85,681.85** | **-4.46** |
| | | | **2021-22** | | |
| 1 | ವಿದ್ಯುತ್ | 8 | -6,017.45 | 14,321.58 | -42.02 |
| 2 | ಹಣಕಾಸು | 21 | 488.94 | 3,822.75 | 12.79 |
| 3 | ಸೇವೆಗಳು | 10 | -1,296.43 | 1,166.13 | -111.18 |
| 4 | ಮೂಲಸೌಕರ್ಯ | 20 | -1,299.59 | 80,746.03 | -1.61 |
| 5 | ಇತರವುಗಳು | 46 | 727.16 | 718.20 | 101.25 |
| | **ಒಟ್ಟು** | **105** | **-7,397.37** | **1,00,774.69** | **-7.34** |
| | | | **2022-23** | | |
| 1 | ವಿದ್ಯುತ್ | 8 | -2,151.54 | 15,049.55 | -14.30 |
| 2 | ಹಣಕಾಸು | 23 | 398.87 | 3,805.35 | 10.48 |
| 3 | ಸೇವೆಗಳು | 10 | -1,123.03 | 2,303.91 | -48.74 |
| 4 | ಮೂಲಸೌಕರ್ಯ | 19 | -1,825.79 | 91,252.81 | -2.00 |
| 5 | ಇತರವುಗಳು | 47 | 1,037.41 | 722.73 | 143.54 |
| | **ಒಟ್ಟು** | **107** | **-3, 664.08** | **1,13,134.35** | **-3.24** |

***ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆ ಮತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಲ್ಲಿಸಿರುವ ಮಾಹಿತಿ / ದತ್ತಾಂಶ***

ರಾಜ್ಯ ಸರ್ಕಾರದ ಹೂಡಿಕೆಯ ಮೇಲಿನ ಪ್ರತಿಫಲವನ್ನು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಗಳಿಕೆಗಳನ್ನು ಈಕ್ವಿಟಿ ಹಾಗೂ ಬಡ್ಡಿ ಮುಕ್ತ ಸಾಲದ ರೂಪದ ರಾಜ್ಯ ಸರ್ಕಾರದ ಹೂಡಿಕೆಯೊಂದಿಗೆ ಭಾಗಿಸುವ ಮೂಲಕ ಲೆಕ್ಕಾಚಾರ ಮಾಡಲಾಗುತ್ತದೆ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟಾರೆ ಹೂಡಿಕೆಯ ಮೇಲಿನ ಪ್ರತಿಫಲವು ಎಲ್ಲಾ ಮೂರು ವರ್ಷಗಳಲ್ಲಿ ನಕಾರಾತ್ಮಕವಾಗಿದ್ದಿತ್ತು. ಇದು 2020–21ರಲ್ಲಿ ಶೇಕಡಾ (–) 4.46 ರಿಂದ 2021–22ರಲ್ಲಿ ಶೇಕಡಾ (–) 7.34ಕ್ಕೆ ಮತ್ತು 2022–23ರಲ್ಲಿ ಶೇಕಡಾ (–) 3.24ಕ್ಕೆ ವ್ಯತ್ಯಾಸಗೊಂಡಿದ್ದಿತು, ಇದು ಪ್ರಮುಖವಾಗಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವಿದ್ಯುತ್, ಸೇವೆ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಅನುಭವಿಸಿದ ನಷ್ಟಗಳ ಪರಿಣಾಮದಿಂದ ಸಂಭವಿಸಿದ್ದಿತು.

ಇತ್ತೀಚಿನ ಪ್ರಮಾಣೀಕೃತ ಹಣಕಾಸು ತ:ಖ್ತೆಗಳ ಅನುಸಾರ, ವಿಭಿನ್ನ ಕ್ಷೇತ್ರಗಳಿಗೆ ಸೇರಿದ 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[24] ಹೂಡಿಕೆಯ ಮೇಲಿನ ಒಟ್ಟಾರೆ ನಕಾರಾತ್ಮಕ ಪ್ರತಿಫಲಗಳಿಗೆ ಪ್ರಮುಖ ಕೊಡುಗೆ ನೀಡಿರುತ್ತವೆ.

***ಸರ್ಕಾರಿಹೂಡಿಕೆಯ ಮೇಲಿನ ವಾಸ್ತವಿಕ ರಿಟರ್ನ್ ದರ (ಆರ್‌ಓಆರ್‌ಆರ್)***

**1.7.2** ಹೂಡಿಕೆಯ ಐತಿಹಾಸಿಕ ವೆಚ್ಚವನ್ನು ಆದರಿಸಿದ ರಿಟರ್ನ್ ಲೆಕ್ಕಾಚಾರವೂ ಸಹ ರಿಟರ್ನ್ ಸಮರ್ಪಕತೆಯ ನಿಖರ ಸೂಚಕ ಆಗಿರದಿರಬಹುದು, ಏಕೆಂದರೆ ಅಂತಹ ಲೆಕ್ಕಾಚಾರಗಳು ಹಣದ ಪ್ರಸಕ್ತ ಮೌಲ್ಯವನ್ನು (ಪಿವಿ) ಕಡೆಗಣಿಸಬಹುದು.

ಸರ್ಕಾರೀ ಹೂಡಿಕೆಯ ಮೇಲಿನ ವಾಸ್ತವಿಕ ರಿಟರ್ನ್ ದರವು (ಆರ್ ಓ ಆರ್ ಆರ್) ಈಕ್ವಿಟಿ ಮತ್ತು ಅಂತಹ ಬಡ್ಡಿ–ರಹಿತ ನಿಧಿಗಳನ್ನು ಅವುಗಳನ್ನು ಕಾಲದ ಮೌಲ್ಯಕ್ಕೆ ಹೊಂದಿಸಿದ ನಂತರ ಹೇಗೆ ಲಾಭದಾಯಕತೆ ಮತ್ತು ದಕ್ಷತೆಯೊಂದಿಗೆ ತೊಡಗಿಸಲಾಯಿತು ಎಂಬುದನ್ನು ಮಾಪನ ಮಾಡುತ್ತದೆ ಮತ್ತು ಇದು ಐತಿಹಾಸಿಕ ವೆಚ್ಚದ ಆಧಾರದ ಮೇಲೆ ಕೇವಲ ಒಟ್ಟು ಗಳಿಕೆಗಳು / ನಷ್ಟಗಳನ್ನು ಅಂತಹ

[24] ವಿದ್ಯುತ್ ವಲಯದಲ್ಲಿ ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಬೆಸ್ಕಾಂ, ಹೆಸ್ಕಾಂ, ಸೆಸ್ಕ್ ಮತ್ತು ಜೆಸ್ಕಾಂ), ಮೂಲಸೌಕರ್ಯ ವಲಯದಲ್ಲಿ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎನ್‌ಎನ್‌ಎಲ್ ಕೆಬಿಜೆಎನ್‌ಎಲ್ ಮತ್ತು ವಿಜೆಎನ್‌ಎಲ್) ಮತ್ತು ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಆರ್‌ಟಿಸಿ, ಬಿಎಮ್‌ಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ ಮತ್ತು ಕೆಕೆಆರ್‌ಟಿಸಿ) ಸೇವಾ ವಲಯದಲ್ಲಿ.

ಎಲ್ಲಾ ಹೂಡಿಕೆಯ ಮೊತ್ತದಿಂದ ಭಾಗಿಸುವ ಮೂಲಕ ಲೆಕ್ಕ ಹಾಕುವ ಸಾಂಪ್ರದಾಯಿಕ ರಿಟರ್ನ್ಸ್ ದರದೊಂದಿಗೆ ಹೋಲಿಸಿದಾಗ ಗಮನಾರ್ಹ ಆಗುತ್ತದೆ.

31 ಮಾರ್ಚ್ 2023ರವರೆಗೆ ಪ್ರತೀ ವರ್ಷದ ಅಂತ್ಯದಲ್ಲಿ ಹೂಡಿಕೆಗಳ ಮೂಲ ಅಥವಾ ಮುಖ ಬೆಲೆಯ ಮೌಲ್ಯವನ್ನು ಅದರ ಚಾಲ್ತಿ ಮೌಲ್ಯಕ್ಕೆ ತರುವ ಸಲುವಾಗಿ ಕರ್ನಾಟಕ ಸರ್ಕಾರವು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ ಮಾಡಿರುವಂತಹ ಹಿಂದಿನ ಹೂಡಿಕೆಗಳು/ ವರ್ಷವಾರು ನಿಧಿಗಳನ್ನು ಸಂಬಂಧಿತ ವರ್ಷಕ್ಕಾಗಿ ನಿಧಿಗಳ ಕನಿಷ್ಠ ವೆಚ್ಚವೆಂದು ಪರಿಗಣಿಸಲಾಗುವ ಸರ್ಕಾರವು ಪಡೆಯುವ ಸಾಲಗಳ ಮೇಲಿನ ವರ್ಷವಾರು ಸರಾಸರಿ ಬಡ್ಡಿಯ ದರದಲ್ಲಿ ಅಸಲು ಮತ್ತು ಬಡ್ಡಿಯನ್ನು ಸೇರಿಸಿ ಕಾಂಪೌಂಡ್ ಮಾಡಲಾಗಿರುವುದು. ಆದ್ದರಿಂದ, ರಾಜ್ಯ ಸರ್ಕಾರದ ಹೂಡಿಕೆಗಳ ಪ್ರಸಕ್ತ ಮೌಲ್ಯವನ್ನು (ಪಿವಿ) ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 2010–11ರಿಂದ 2022–23ರವರೆಗೆ ಲೆಕ್ಕಹಾಕಲಾಯಿತು. ಸರ್ಕಾರದ ಹೂಡಿಕೆಗಳ ಬಡ್ಡಿ ಮುಕ್ತ ಸಾಲಗಳನ್ನು ರಾಜ್ಯ ಸರ್ಕಾರದಿಂದ ಹೂಡಿಕೆಯನ್ನು ಮಾಡಲಾಗಿರುವ ಮೌಲ್ಯ ಎಂಬುದಾಗಿ ಪರಿಗಣಿಸಲಾಗಿರುವುದು ಏಕೆಂದರೆ ಅಂತಹ ಸಾಲಗಳ ಮೇಲೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಯಾವುದೇ ಬಡ್ಡಿಯನ್ನು ಪಾವತಿಸಿರುವುದಿಲ್ಲ ಎಂಬ ಕಲ್ಪನೆಯೊಂದಿಗೆ ವಾಸ್ತವಿಕ ಪ್ರತಿಫಲದ ದರವನ್ನು ನಿರ್ಧಾರಣೆ ಮಾಡುವ ಸಲುವಾಗಿ ಪ್ರಸಕ್ತ ಮೌಲ್ಯವನ್ನು ಲೆಕ್ಕ ಹಾಕಲಾಗಿರುವುದು. ಅಲ್ಲದೆಯೇ, ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ನೀಡಲಾದ ಬಡ್ಡಿ ಮುಕ್ತ ಸಾಲಗಳನ್ನು ತರುವಾಯ ಈಕ್ವಿಟಿಯಾಗಿ ಪರಿವರ್ತಿಸಲಾದಂತಹ ಪ್ರಕರಣಗಳಲ್ಲಿ, ಈಕ್ವಿಟಿಯಾಗಿ ಪರಿವರ್ತಿಸಲಾಗಿರುವ ಸಾಲದ ಮೊತ್ತವನ್ನು ಬಡ್ಡಿ ಮುಕ್ತ ಸಾಲದ ಮೊತ್ತದಿಂದ ಕಳೆಯಲಾಗಿದೆ ಮತ್ತು ಆ ವರ್ಷದ ಈಕ್ವಿಟಿಗೆ ಸೇರಿಸಲಾಗಿದೆ. ಅನುದಾನಗಳು/ಸಹಾಯಧನಗಳ ರೂಪದಲ್ಲಿ ಒದಗಿಸಲಾದ ಹಣಕಾಸನ್ನು ಹೂಡಿಕೆ ಎಂಬುದಾಗಿ ಲೆಕ್ಕ ಹಾಕಲಾಗಿರುವುದಿಲ್ಲ, ಏಕೆಂದರೆ ಅವುಗಳು ಹೂಡಿಕೆ ಎಂಬುದಾಗಿ ಪರಿಗಣಿಸುವ ಅರ್ಹತೆಯನ್ನು ಹೊಂದಿರುವುದಿಲ್ಲ.

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಹಣಕಾಸಿನ ಹೂಡಿಕೆಗಳ ಪ್ರಸಕ್ತ ಮೌಲ್ಯದ (ಪಿವಿ) ಕ್ರೋಡೀಕೃತ ಸ್ಥಿತಿಗತಿಯನ್ನು ಈ ಕೆಳಗಿನ **ಕೋಷ್ಟಕ ಸಂಖ್ಯೆ 1.18**ರಲ್ಲಿ ತಿಳಿಸಲಾಗಿರುವುದು.

**ಕೋಷ್ಟಕ ಸಂಖ್ಯೆ 1.18: ರಾಜ್ಯ ಸರ್ಕಾರವು ಹೂಡಿಕೆ ಮಾಡಿರುವ ಹಣಕಾಸಿನ ವರ್ಷವಾರು ವಿವರಗಳು ಮತ್ತು 2010–11ರಿಂದ 2022–23ರವರೆಗಿನ ಅವಧಿಗೆ ಸರ್ಕಾರದ ಹಣಕಾಸಿನ ಹೂಡಿಕೆಗಳ ಪ್ರಸಕ್ತ ಮೌಲ್ಯಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಹಣಕಾಸು ವರ್ಷ | ವರ್ಷದ ಪ್ರಾರಂಭದಲ್ಲಿ ಒಟ್ಟು ಹೂಡಿಕೆಯ ಪ್ರಸಕ್ತ ಮೌಲ್ಯ (ಪಿವಿ) | ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ತೊಡಗಿಸಿರುವ ಈಕ್ವಿಟಿ | ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ನೀಡಿರುವ ಬಡ್ಡಿ ಮುಕ್ತ ಸಾಲಗಳು | ವರ್ಷದ ಅಂತ್ಯದಲ್ಲಿ ಒಟ್ಟು ಹೂಡಿಕೆಗಳು | ಸರ್ಕಾರವು ಪಡೆದ ಸಾಲಗಳ ಮೇಲಿನ ಸರಾಸರಿ ಬಡ್ಡಿ ದರ[25] (ಶೇಕಡಾವಾರು) | ವರ್ಷದ ಅಂತ್ಯದಲ್ಲಿ ಒಟ್ಟು ಹೂಡಿಕೆಯ ಮೇಲಿನ ಪ್ರಸಕ್ತ ಮೌಲ್ಯ | ಪ್ರಸಕ್ತ ಸಾಲಿಗೆ ಹಣಕಾಸು ಹೂಡಿಕೆಯ ವೆಚ್ಚದ ವಸೂಲಾತಿಗಾಗಿ ನಿರೀಕ್ಷಿತ ಕನಿಷ್ಠ ಪ್ರತಿಫಲ | ವರ್ಷದ ಒಟ್ಟು ಗಳಿಕೆಗಳು [26] |
|---|---|---|---|---|---|---|---|---|---|
| (a) | (b) | (c) | (d) | (e) | (f=(c+d+e)) | (g) | (h=f×(1+g)/100) | (i= f×(g/100)) | (j) |
| 1 | 2009–10ರವರೆಗೆ | | 28,042.07 | 17.97 | 28,060.04 | 6.70 | 29,940.06 | 1,880.02 | |
| 2 | 2010-11 | 28,487.45[27] | 4,604.75 | 15.94 | 33,108.14 | 6.40 | 35,227.06 | 2,118.92 | 988.43 |
| 3 | 2011-12 | 35,227.06 | 4,437.83 | 10.25 | 39,675.14 | 6.60 | 42,293.70 | 2,618.56 | 411.19 |
| 4 | 2012-13 | 42,293.70 | 4,704.12 | 0.50 | 46,998.32 | 6.60 | 50,100.21 | 3,101.89 | 415.64 |
| 5 | 2013-14 | 50,100.21 | 4,076.13 | 0.00 | 54,176.34 | 6.20 | 57,535.28 | 3,358.93 | -169.62 |
| 6 | 2014-15 | 57,533.73[28] | 4,097.80 | 3.65 | 61,635.18 | 6.50 | 65,641.46 | 4,006.29 | 359.63 |
| 7 | 2015-16 | 65,641.46 | 4,199.52 | 0.00 | 69,840.98 | 6.50 | 74,380.65 | 4,539.66 | -327.18 |
| 8 | 2016-17 | 74,380.65 | 5,092.60 | 0.00 | 79,473.25 | 6.30 | 84,480.06 | 5,006.81 | -28.44 |
| 9 | 2017-18 | 84,480.06 | 4,906.14 | 0.00 | 89,386.20 | 7.70 | 96,268.94 | 6,882.74 | -721.65 |
| 10 | 2018-19 | 96,268.94 | 7,215.22 | 0.00 | 1,03,484.16 | 8.20 | 1,11,969.86 | 8,485.70 | -1,271.33 |
| 11 | 2019-20 | 1,11,969.86 | 7,484.45 | 20.32 | 1,19,474.63 | 6.40 | 1,27,121.01 | 7,646.38 | -1,841.16 |
| 12 | 2020-21 | 1,27,121.01 | 8,098.12 | 17.00 | 1,35,236.13 | 6.20 | 1,43,620.77 | 8,384.64 | -3,825.63 |
| 13 | 2021-22 | 1,43,620.77 | 15,074.35 | 18.49 | 1,58,713.61 | 6.00 | 1,68,236.42 | 9,522.82 | -7,397.37 |
| 14 | 2022-23 | 1,68,224.89[29] | 12,339.66 | 25.00 | 1,80,589.55 | 6.50 | 1,92,327.87 | 11,738.32 | -3,664.08 |
| | ಒಟ್ಟು | | **1,13,005.23[30]** | **129.12** | | | | | |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆ ಮತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಲ್ಲಿಸಿರುವ ಮಾಹಿತಿ /ದತ್ತಾಂಶ*

ರಾಜ್ಯ ಸರ್ಕಾರವು 2010–11ರಿಂದ 2022–23ರ ಅವಧಿಯಲ್ಲಿ ರಾಜ್ಯ ಸರ್ಕಾರವು ಈಕ್ವಿಟಿ ಬಂಡವಾಳವನ್ನು (₹ 84,963.16 ಕೋಟಿ) ಹಾಗೂ ಬಡ್ಡಿ ರಹಿತ ಸಾಲಗಳನ್ನು (₹ 129.12 ಕೋಟಿ) ಹೂಡಿಕೆ ಮಾಡಿರುವುದರಿಂದ, 31 ಮಾರ್ಚ್ 2010ರಲ್ಲಿದ್ದಂತೆ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ ಮಾಡಿದ್ದಂತಹ ₹ 28,042.07 ಕೋಟಿ ಮೊತ್ತದಿಂದ 31 ಮಾರ್ಚ್ 2023ರಲ್ಲಿದ್ದಂತೆ ಅದು

25 ರಾಜ್ಯ ಸರ್ಕಾರದ ಸಾಲಗಳ ಮೇಲಿನ ಸರಾಸರಿ ಬಡ್ಡಿ ದರವನ್ನು ಕರ್ನಾಟಕ ಸರ್ಕಾರಕ್ಕೆ ಸಂಬಂಧಿಸಿದಂತೆ ರಾಜ್ಯ ಹಣಕಾಸಿನ ಸ್ಥಿತಿಗತಿಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಮೋದಿತ ಲೆಕ್ಕಪರಿಶೋಧನಾ ವರದಿಗಳ ಅನುಸಾರ ಅಳವಡಿಸಿಕೊಳ್ಳಲಾಗಿದೆ.

26 ಪ್ರಸಕ್ತ ಸಾಲಿನ ಒಟ್ಟಾರೆ ಗಳಿಕೆಯು, ರಾಜ್ಯ ಸರ್ಕಾರವು ಹಣಕಾಸನ್ನು ಹೂಡಿಕೆ ಮಾಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಬಂಧಿತ ಆಯಾ ವರ್ಷಗಳಲ್ಲಿ ಅವುಗಳ ಇತ್ತೀಚಿನ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ನಿವ್ವಳ ಗಳಿಕೆಗಳ (ಲಾಭ/ನಷ್ಟ) ಒಟ್ಟಾರೆ ಅಂಕಿಸಂಖ್ಯೆಯನ್ನು ತೋರಿಸುತ್ತದೆ.

27 ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ (ಬಿಎಂಆರ್‌ಸಿಎಲ್) ಮಾಡಲಾಗಿದ್ದ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು,(₹ 1,451.16 ಕೋಟಿ) ಆ ನಿಗಮದ ಲೆಕ್ಕಪರಿಶೋಧನಾ ಅಧಿಕಾರ ವ್ಯಾಪ್ತಿಯನ್ನು ಮತ್ತೊಂದು ಕಚೇರಿಗೆ ವರ್ಗಾಯಿಸಿದ್ದರಿಂದ ಮತ್ತು ಕರ್ನಾಟಕ ರಾಜ್ಯ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತವನ್ನು (ಕೆಎಸ್‌ಐಎಂಸಿ –– ₹ 1.45 ಕೋಟಿ) ಕೆಎಸ್‌ಎಸ್‌ಐಡಿಸಿಯೊಂದಿಗೆ ವಿಲೀನ ಗೊಳಿಸಿರುವುದರಿಂದ, ಈ.ನಿಗಮಗಳ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು ಕೈಬಿಡಲಾಗಿರುವುದು.

28 ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ (ಸಿಎಂಟಿಎಲ್ – ₹ 0.86 ಕೋಟಿ) ಮತ್ತು ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ (ಕೆಎಸ್‌ಟಿಎಲ್ – ₹ 0.69 ಕೋಟಿ) ನಲ್ಲಿ ಮಾಡಿದ ಮಾಡಲಾಗಿದ್ದ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು ದಿವಾಳಿಯಾದ ಮೇಲೆ ಹೊರಗಿಡಲಾಗಿದೆ.

29 ಬೆಂಗಳೂರು ಏರ್‌ಪೋರ್ಟ್ ರೈಲ್–ಲಿಂಕ್ ಲಿಮಿಟೆಡ್‌ನಲ್ಲಿ (ಬಿಎಆರ್‌ಎಲ್– ₹ 11.53 ಕೋಟಿ) ಮಾಡಿದ ಹೂಡಿಕೆಯ ಪ್ರಸಕ್ತ ಮೌಲ್ಯವನ್ನು ಸ್ವಯಂಪ್ರೇರಿತ ದಿವಾಳಿಯ ಮೇಲೆ ಹೊರಗಿಡಲಾಗಿದೆ.

30 ಬಿಎಂಆರ್‌ಸಿಎಲ್ (₹ 1,360.04 ಕೋಟಿ), ಕೆಎಸ್‌ಐಎಂಸಿ (₹ 1.36 ಕೋಟಿ), ಸಿಎಂಟಿಎಲ್ (₹ 0.63 ಕೋಟಿ), ಕೆಎಸ್‌ಟಿಎಲ್ (₹ 0.50 ಕೋಟಿ), ಮತ್ತು ಬಿಎಆರ್‌ಎಲ್ (₹ 5.00 ಕೋಟಿ) ಈಕ್ವಿಟಿಯನ್ನು ಹೊರತುಪಡಿಸಿ ಮಾರ್ಚ್ 2023 ರ ಅಂತ್ಯದ ವೇಳೆಗೆ ಈಕ್ವಿಟಿಯಲ್ಲಿ ನಿಜವಾದ ಹೂಡಿಕೆಯನ್ನು ಪ್ರತಿನಿಧಿಸುತ್ತದೆ) ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ವರ್ಗಾಯಿಸಲಾಗಿದೆ/ವಿಲೀನಗೊಳಿಸಲಾಗಿದೆ/ ದಿವಾಳಿಯಾಗಿದೆ.

₹ 1,13,134.35 ಕೋಟಿ ಮೊತ್ತಕ್ಕೆ ಹೆಚ್ಚಳಗೊಂಡಿರುವುದು. ರಾಜ್ಯ ಸರ್ಕಾರವು 31 ಮಾರ್ಚ್ 2023ರವರೆವಿಗೂ ಮಾಡಲಾಗಿದ್ದ ಹೂಡಿಕೆಗಳ ಪ್ರಸಕ್ತ ಮೌಲ್ಯವು ₹ 1,92,327.87 ಕೋಟಿ ಆಗಿದ್ದಿತು.

2010–11ರಿಂದ 2022–23ರ ಅವಧಿಯಲ್ಲಿ, ವರ್ಷದ ಒಟ್ಟಾರೆ ಗಳಿಕೆಗಳು ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆ ಮಾಡಲಾಗಿರುವ ಹಣಕಾಸಿನ ವೆಚ್ಚಗಳನ್ನು ವಸೂಲಾತಿ ಮಾಡಲೂ ಸಹ ನಿರೀಕ್ಷಿತ ಕನಿಷ್ಠ ಪ್ರತಿಫಲಕ್ಕಿಂತಲೂ ಕಡಿಮೆಯಿದ್ದವು ಮತ್ತು 2014–15ರಿಂದ ಸತತವಾಗಿ ನಕಾರಾತ್ಮಕ ಸ್ಥಿತಿಯಲ್ಲಿದ್ದವು. ಒಟ್ಟು ಗಳಿಕೆಗಳ ಬಗ್ಗೆ ಲೆಕ್ಕಪರಿಶೋಧನೆಯು ಮಾಡಿದ ವಿಶ್ಲೇಷಣೆಯು 29 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2020–2023ರ ಅವಧಿಯಲ್ಲಿ ಎಲ್ಲಾ ಮೂರೂ ಹಣಕಾಸು ವರ್ಷಗಳಲ್ಲಿ ನಷ್ಟಗಳನ್ನು ಅನುಭವಿಸಿರುವುದನ್ನು ಸೂಚಿಸಿತು. 29 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ಒಂಬತ್ತು[31] ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವರದಿಯಾಗಿರುವ ನಷ್ಟಗಳಿಗೆ ಸಂಬಂಧಿಸಿದಂತೆ ಗಮನಾರ್ಹವಾದಂತಹ ಕೊಡುಗೆಯನ್ನು ನೀಡಿರುತ್ತವೆ (₹ 100 ಕೋಟಿಗೂ ಹೆಚ್ಚು).

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆಗಳನ್ನು ಮಾಡಿರುವ ರಾಜ್ಯ ಸರ್ಕಾರದ ಹಣಕಾಸಿನ ಮೇಲೆ (ಪ್ರಸಕ್ತ ಮೌಲ್ಯ) ಪ್ರತಿಫಲವು ಲಾಭದಾಯಕತೆಯನ್ನು ಮತ್ತು ದಕ್ಷತೆಯನ್ನು ತೋರಿಸುತ್ತವೆ. ರಾಜ್ಯ ಸರ್ಕಾರದ ಹಣಕಾಸಿನ ಮೇಲಿನ ಪ್ರತಿಫಲವನ್ನು ಈ ಸಾರ್ವಜನಿಕ ವಲಯ ಉದ್ದಿಮೆಗಳ ಒಟ್ಟು ಗಳಿಕೆಗಳನ್ನು[32] ರಾಜ್ಯ ಸರ್ಕಾರದ ಹೂಡಿಕೆಗಳ ಪ್ರಸಕ್ತ ಮೌಲ್ಯದಿಂದ ಭಾಗಿಸುವ ಮೂಲಕ ಲೆಕ್ಕ ಹಾಕಲಾಗುತ್ತದೆ. 2020–21ರಿಂದ 2022–23ರ ಅವಧಿಯಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಹೂಡಿಕೆಯ ಮೇಲಿನ ಒಟ್ಟಾರೆ ನಕಾರಾತ್ಮಕ ಪ್ರತಿಫಲದ ಕಾರಣ (**ಕೋಷ್ಟಕ ಸಂಖ್ಯೆ 1.18**ನ್ನು ಗಮನಿಸುವುದು), ಪ್ರತಿಫಲವನ್ನು ಲೆಕ್ಕಾಚಾರ ಮಾಡಲಿಲ್ಲ.

## 1.8 ನಷ್ಟ ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅನುಭವಿಸಿರುವ ನಷ್ಟಗಳು***

**1.8.1** 56 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[33] ಅವುಗಳ ಇತ್ತೀಚಿನ ಪ್ರಮಾಣೀಕೃತ ಲೆಕ್ಕಪತ್ರಗಳ ಅನುಸಾರ ನಷ್ಟಗಳನ್ನು ಅನುಭವಿಸಿರುತ್ತವೆ. ಈ ಕೆಳಗಿನ **ಕೋಷ್ಟಕ ಸಂಖ್ಯೆ 1.19**ರಲ್ಲಿ ನೀಡಿರುವಂತೆ 2020–21ರಲ್ಲಿ ಅನುಭವಿಸಿದ ನಷ್ಟ ₹ 8,246.47 ಕೋಟಿಗೆ ಹೋಲಿಸಿದಂತೆ, ನಷ್ಟಗಳು ₹ 7,449.75 ಕೋಟಿಗೆ ತಗ್ಗಿದ್ದವು.

[31] ವಿದ್ಯುತ್ ವಲಯದಲ್ಲಿ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಹುವಿಸಕಂ ಮತ್ತು ಚಾವಿಸಕಂ), ಮೂಲಸೌಕರ್ಯ ವಲಯದಲ್ಲಿ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ( ಕನೀನಿನಿ, ಕಭಾಜನಿನಿ ಮತ್ತು ವಿಜನಿನಿ) ಸಾರಿಗೆ ವಲಯದಲ್ಲಿ ನಾಲ್ಕು ಶಾಸನಬದ್ಧ ನಿಗಮಗಳು (ಬೆಂಮಸಾನಿ, ವಾಯವ್ಯ ಕರಾಸಾನಿ, ಕರಾಸಾನಿ ಮತ್ತು ಕಲ್ಯಾಣ ಕಸಾನಿ).

[32] ಸೆಪ್ಟೆಂಬರ್ 2023ರವರೆಗೆ ತಮ್ಮ ಇತ್ತೀಚಿನ ಪ್ರಮಾಣೀಕೃತ ಹಣಕಾಸು ತ:ಖ್ತೆಗಳಲ್ಲಿ ವರದಿ ಮಾಡಿರುವಂತೆ.

[33] 56 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಎಂಟು ಕಾರ್ಯಸ್ಥಗಿತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಒಳಗೊಂಡಿರುತ್ತವೆ.

**ಕೋಷ್ಟಕ ಸಂಖ್ಯೆ 1.19: 2020–21ರಿಂದ 2022–23ರ ಅವಧಿಯಲ್ಲಿ ನಷ್ಟ ಅನುಭವಿಸಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ನಷ್ಟ ಅನುಭವಿಸುತ್ತಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪ್ರಸಕ್ತ ಸಾಲಿಗೆ ನಿವ್ವಳ ನಷ್ಟ | ಕ್ರೋಢೀಕೃತ ನಷ್ಟ | ನಿವ್ವಳ ಮೌಲ್ಯ[34] |
|---|---|---|---|---|---|
| ಶಾಸನಬದ್ಧ ನಿಗಮಗಳು | | | | | |
| 1 | 2020-21 | 5 | (-) 985.32 | (-) 3,141.26 | (-) 2,464.55 |
| 2 | 2021-22 | 4 | (-) 1,282.43 | (-) 3,877.52 | (-) 2,981.46 |
| 3 | 2022-23 | 4 | (-)1,289.96 | (-) 5,912.82 | (-) 4,806.56 |
| ಸರ್ಕಾರಿ ಕಂಪನಿಗಳು | | | | | |
| 1 | 2020-21 | 45 | (-) 7,261.15 | (-) 26,567.37 | 21,844.26 |
| 2 | 2021-22 | 46 | (-) 10,165.42 | (-) 32,951.29 | 25,000.29 |
| 3 | 2022-23 | 52 | (-) 6,159.79 | (-) 31,764.40 | 45,491.21 |
| ಒಟ್ಟು | | | | | |
| 1 | **2020-21** | **50** | **(-) 8,246.47** | **(-) 29,708.63** | **19,379.71** |
| 2 | **2021-22** | **50** | **(-)11,447.85** | **(-)36,828.81** | **22,018.83** |
| 3 | **2022-23** | **56** | **(-) 7,449.75** | **(-) 37,677.22** | **40,684.65** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಇತ್ತೀಚಿನ ಹಣಕಾಸು ತ:ಖ್ತೆಗಳು*

2022–23ರಲ್ಲಿ, 56 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅನುಭವಿಸಿದ ಒಟ್ಟು ₹7,449.75 ಕೋಟಿ ನಷ್ಟದ ಪೈಕಿ, ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[35] ಇದಕ್ಕೆ ₹ 4,417.77 ಕೋಟಿಯಷ್ಟು ಗಮನಾರ್ಹವಾದಂತಹ ಪ್ರಮಾಣದಲ್ಲಿ ನಷ್ಟದ ಕೊಡುಗೆಯನ್ನು ನೀಡಿದವು.

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಬಂಡವಾಳ ಮೊತ್ತಗಳು ಕರಗಿಹೋಗಿರುವುದು***

**1.8.2** ಇತ್ತೀಚೆಗೆ ಅಂತಿಮಗೊಳಿಸಿರುವ ಲೆಕ್ಕಪತ್ರಗಳ ಅನುಸಾರ, 60 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹ 46,814.47 ಕೋಟಿ ಮೊತ್ತದಷ್ಟು ಕ್ರೋಢೀಕೃತ ನಷ್ಟಗಳನ್ನು ಹೊಂದಿದ್ದವು. ಈ ಪೈಕಿ, 45 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ₹ 7,231.07 ಕೋಟಿ ಮೊತ್ತದಷ್ಟು ನಷ್ಟಗಳನ್ನು ಅನುಭವಿಸಿದ್ದವು ಮತ್ತು 15 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ಇತ್ತೀಚಿನ ಪ್ರಮಾಣೀಕೃತ ಲೆಕ್ಕಪತ್ರಗಳ ಅನುಸಾರ ₹ 3,551.88 ಕೋಟಿ ಕ್ರೋಢೀಕೃತ ನಷ್ಟಗಳನ್ನು ಹೊಂದಿದ್ದವಾದರೂ, ಅವುಗಳು ನಷ್ಟಗಳನ್ನು ಭರಿಸಿರಲಿಲ್ಲ 60 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಮೂರು ಸಮಾಪನ ಪ್ರಕ್ರಿಯೆಯ[36] ಅಡಿಯಲ್ಲಿದ್ದವು.

60 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 40ರ ನಿವ್ವಳ ಮೌಲ್ಯವು (ನೆಟ್ ವರ್ತ್) ಕ್ರೋಢೀಕೃತ ನಷ್ಟಗಳಿಂದ ಸಂಪೂರ್ಣವಾಗಿ ಕೊರೆದುಹೋಗಿದ್ದವು/ಸವೆದುಹೋಗಿದ್ದವು ಮತ್ತು ಅವುಗಳ ನೆಟ್ ವರ್ತ್ ಶೂನ್ಯವಾಗಿತ್ತು ಅಥವಾ ನಕಾರಾತ್ಮಕವಾಗಿತ್ತು (ವಿವರಗಳನ್ನು ***ಅನುಬಂಧ – 3***ರಲ್ಲಿ ತಿಳಿಸಲಾಗಿದೆ) 31 ಮಾರ್ಚ್ 2023ರಲ್ಲಿದ್ದಂತೆ. ₹ 10,695.05 ಕೋಟಿ ಪಾವತಿಸಲ್ಪಟ್ಟಿರುವ ಈಕ್ವಿಟಿಗೆ ಹೋಲಿಸಿದಲ್ಲಿ ಈ 40 ಸಾರ್ವಜನಿಕ ವಲಯ ಉದ್ದಿಮೆಗಳ ನೆಟ್ ವರ್ತ್ ₹ (–) 23,297.91 ಆಗಿದ್ದಿತು. ಬಂಡವಾಳ ಮೊತ್ತಗಳು ಕರಗಿಹೋಗಿರುವಂತಹ (ಶೂನ್ಯ ಅಥವಾ ನಕಾರಾತ್ಮಕ ಮೊತ್ತ) 40 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ಆರು ಸಾರ್ವಜನಿಕ ವಲಯ ಉದ್ದಿಮೆಗಳು 2022–

[34] ನಿವ್ವಳ ಮೌಲ್ಯ ಎಂದರೆ ಪಾವತಿಸಿದ ಷೇರು ಬಂಡವಾಳ ಮತ್ತು ನಿರುಪಾದಿತ ಮೀಸಲು ಮತ್ತು ಹೆಚ್ಚುವರಿಗಳು ಇದರಿಂದ ಸಂಗ್ರಹವಾದ ನಷ್ಟ ಮತ್ತು ಮುಂದೂಡಲ್ಪಟ್ಟ ಆದಾಯ ವೆಚ್ಚಗಳ ಒಟ್ಟು ಮೊತ್ತವನ್ನು ಕಳೆಯುವುದು. ನಿರುಪಾದಿತ ಮೀಸಲು ಎಂದರೆ ಲಾಭ ಮತ್ತು ಷೇರು ಪ್ರೀಮಿಯಂ ಖಾತೆಯಿಂದ ರಚಿಸಲಾದ ಎಲ್ಲಾ ಮೀಸಲುಗಳು ಆದರೆ ಸ್ವತ್ತುಗಳ ಮರುಮೌಲ್ಯಮಾಪನದಿಂದ ರಚಿಸಲಾದ ಮೀಸಲುಗಳನ್ನು ಒಳಗೊಂಡಿಲ್ಲ ಮತ್ತು ಸವಕಳಿ ನಿಬಂಧನೆಯನ್ನು ಹಿಂಪಡೆದಿರುವಿಕೆಯನ್ನು ಒಳಗೊಂಡಿಲ್ಲ.

[35] ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ರಾಯಚೂರು ವಿದ್ಯುತ್ ನಿಗಮ ನಿಯಮಿತ ಮತ್ತು ಕರ್ನಾಟಕ ನೀರಾವರಿ ನಿಗಮ ನಿಯಮಿತ.

[36] ಕರ್ನಾಟಕ ರಾಜ್ಯ ವಿನೀರ್ಸ್ ನಿಯಮಿತ, ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್ ಮತ್ತು ಬೆಂಗಳೂರು ಏರ್‌ಪೋರ್ಟ್ ರೈಲ್ ಲಿಂಕ್ ಲಿಮಿಟೆಡ್ (ಸ್ವಇಚ್ಛೆಯಿಂದ ಸಮಾಪನ ಪ್ರಕ್ರಿಯೆಯ ಅಡಿಯಲ್ಲಿರುವುದು).

23ರ ಅವಧಿಯಲ್ಲಿ ₹ 32.10 ಕೋಟಿ ಲಾಭ ಗಳಿಸಿದ್ದವು. ಬಂಡವಾಳ ಮೊತ್ತಗಳು ಕರಗಿಹೋಗಿರುವಂತಹ (ಶೂನ್ಯ ಅಥವಾ ನಕಾರಾತ್ಮಕ ಮೊತ್ತ) 40 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 19ರಲ್ಲಿ 31 ಮಾರ್ಚ್ 2023ರಲ್ಲಿದ್ದಂತೆ ರಾಜ್ಯ ಸರ್ಕಾರಕ್ಕೆ ಬಾಕಿ ಉಳಿದಿರುವ ಸಾಲಗಳು ₹ 3,231.65 ಕೋಟಿ ಮೊತ್ತದಷ್ಟು ಆಗಿದ್ದಿತ್ತು.

**ಶಿಫಾರಸುಗಳು:**

1. *ಕರ್ನಾಟಕದಲ್ಲಿ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಇರುತ್ತವೆ, ಇವುಗಳ ಪೈಕಿ ಹದಿನಾಲ್ಕು ಕಾರ್ಯಸ್ಥಗಿತವಾಗಿದ್ದವು.ಈ ಕಂಪನಿಗಳು ನಿಷ್ಕ್ರಿಯಗೊಂಡಿರುತ್ತವೆ ಅಥವಾ ಅದರ ವ್ಯವಹಾರಗಳು ಸಮಾಪನಗೊಳ್ಳುವಿಕೆಯ ವಿವಿಧ ಹಂತಗಳಲ್ಲಿರುತ್ತವೆ. ಈಗಾಗಲೇ ವಿಪರೀತವಾದಂತಹ ವಿಳಂಬಗಳು ಆಗಿರುವುದರಿಂದ ಸಾರ್ವಜನಿಕರ ಹಣಕಾಸಿನ ಮೇಲೆ ಒತ್ತಡವನ್ನು ತಪ್ಪಿಸುವ ಸಲುವಾಗಿ ಸರ್ಕಾರವು ಇಂತಹ ನಿಷ್ಕ್ರಿಯ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಮಾಪನಗೊಳ್ಳುವಿಕೆಯ ಪ್ರಕ್ರಿಯೆಗಳನ್ನು ತ್ವರಿತಗೊಳಿಸಬೇಕು.*

2. *ಅವುಗಳ ಹಣಕಾಸು ನಷ್ಟಗಳ ಮೂಲ ಕಾರಣಗಳಿಗೆ ಪರಿಹಾರ ಕಂಡುಹಿಡಿಯಲು ಸರ್ಕಾರವು ನಷ್ಟ ಅನುಭವಿಸುತ್ತಿರುವಂತಹ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವ್ಯಾಪಾರವ್ಯವಹಾರಗಳ ಮಾದರಿಗಳನ್ನು ವಿಶ್ಲೇಷಿಸಬೇಕು. ವ್ಯಾಪಾರವ್ಯವಹಾರ ಮಾದರಿಗಳು ಊರ್ಜಿತಗೊಳ್ಳುವ ಸ್ಥಿತಿಯಲ್ಲಿ ಇಲ್ಲವಾದಲ್ಲಿ ಸರ್ಕಾರವು ಅಂತಹ ಕಂಪನಿಗಳಲ್ಲಿ ವಿಶೇಷವಾಗಿ ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ನಡುವೆ ವ್ಯತ್ಯಾಸ ಮೊತ್ತವು (ನೆಟ್ ವರ್ತ್) ಸಂಪೂರ್ಣವಾಗಿ ಕರಗಿಹೋಗಿರುವಂತಹ ಕಂಪನಿಗಳನ್ನು, ಸರ್ಕಾರವು ಸಮೀಕ್ಷಿಸಬೇಕು ಹಾಗೂ ಅವುಗಳನ್ನು ಮುಚ್ಚುವುದನ್ನು/ ತಾನು ಹೂಡಿರುವ ಬಂಡವಾಳವನ್ನು ಹಿಂಪಡೆದುಕೊಳ್ಳುವುದನ್ನು ಪರಿಗಣಿಸಬೇಕು.*

# ಅಧ್ಯಾಯ - II

## ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣಾ ಪಾತ್ರ

# ಅಧ್ಯಾಯ-II

## ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣಾ ಪಾತ್ರ

### 2.1 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪರಿಶೋಧನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಸಿಎಜಿ) ಕಂಪನಿಗಳ ಅಧಿನಿಯಮ (ಅಧಿನಿಯಮ) ಪರಿಚ್ಛೇದ 139 (5) ಮತ್ತು (7) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಚಲಾಯಿಸಿ, ಸರ್ಕಾರದ ಕಂಪನಿಗಳು ಮತ್ತು ಸರ್ಕಾರದ ನಿಯಂತ್ರಣದಲ್ಲಿರುವ ಇತರೆ ಕಂಪನಿಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರುಗಳನ್ನು ನೇಮಿಸುತ್ತಾರೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಲು ಮತ್ತು ಅದರ ಮೇಲೆ ಟೀಕೆಟಿಪ್ಪಣಿಗಳನ್ನು ನೀಡಲು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಯನ್ನು ಪೂರಕಗೊಳಿಸುವ ಹಕ್ಕನ್ನು ಹೊಂದಿರುತ್ತಾರೆ. ಕೆಲವು ನಿಗಮಗಳನ್ನು ನಿರ್ವಹಿಸುತ್ತಿರುವ ಅಧಿನಿಯಮ-ನಿಯಮಗಳು, ನಿಬಂಧನೆಗಳು ಅಂತಹ ಕಂಪನಿಗಳ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಡೆಸುವ ಮತ್ತು ಅವರ ವರದಿಯನ್ನು ಶಾಸನಸಭೆಗೆ ಸಲ್ಲಿಸುವ ಅಗತ್ಯತೆಯನ್ನು ಹೊಂದಿರುತ್ತವೆ.

### 2.2 ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ

ಅಧಿನಿಯಮದ ಪರಿಚ್ಛೇದ 139 (5) ಸರ್ಕಾರಿ ಕಂಪನಿ ಅಥವಾ ಸರ್ಕಾರದ ನಿಯಂತ್ರಣದಲ್ಲಿರುವ ಇತರ ಕಂಪನಿಯ ಸಂದರ್ಭದಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಹಣಕಾಸು ವರ್ಷ ಪ್ರಾರಂಭದಿಂದ 180 ದಿನಗಳ ಅವಧಿಯೊಳಗೆ ನೇಮಕ ಮಾಡಬೇಕು. ಹೊಸ ಸರ್ಕಾರಿ ಕಂಪನಿಯ ವಿಷಯದಲ್ಲಿ, ಅಧಿನಿಯಮದ ಪರಿಚ್ಛೇದ 139 (7)ರ ಅನುಸಾರ, ಕಂಪನಿಯ ನೋಂದಣಿ ದಿನಾಂಕದಿಂದ ಅರವತ್ತು ದಿನಗಳೊಳಗೆ ಅಂತಹ ನೇಮಕಾತಿ ಮಾಡಬೇಕು ಎಂಬುದಾಗಿ ಅನುವು ಮಾಡಿರುವುದು.

2022-23ರ ಸಾಲಿಗಾಗಿ ಸರ್ಕಾರಿ ಕಂಪನಿಗಳ ಶಾಸನಬದ್ಧ ಲೆಕ್ಕಪರಿಶೋಧಕರುಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಆಗಸ್ಟ್ / ಸೆಪ್ಟೆಂಬರ್ 2022ರ ಅವಧಿಯಲ್ಲಿ ನೇಮಕ ಮಾಡಿರುವರು.

### 2.3 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ

***ಸಕಾಲಿಕ ಸಲ್ಲಿಕೆಯ ಅವಶ್ಯಕತೆ***

**2.3.1** ಅಧಿನಿಯಮದ ಪರಿಚ್ಛೇದ 395 (1) (ಎ) ಅನುಸಾರ, ರಾಜ್ಯ ಸರ್ಕಾರದ ಕಂಪನಿಯೊಂದರ ಕಾರ್ಯಾಚರಣೆ ಮತ್ತು ವ್ಯವಹಾರಗಳ ಮೇಲಿನ ವಾರ್ಷಿಕ ವರದಿಯನ್ನು ಅದರ ವಾರ್ಷಿಕ ಸರ್ವಸದಸ್ಯರ ಸಭೆಯ ದಿನಾಂಕದಿಂದ[37] (ಎಜಿಎಂ) ಮೂರು[38] ತಿಂಗಳುಗಳ ಒಳಗೆ ತಯಾರಿಸತಕ್ಕದ್ದು. ಆ ರೀತಿ ಆದ ಕೂಡಲೆಯೇ ವಾರ್ಷಿಕ ವರದಿಯನ್ನು ರಾಜ್ಯ ಶಾಸನಸಭೆಯ ಮುಂದೆ ಅಥವಾ ಎರಡೂ ಸದನಗಳ ಮುಂದೆ, ಲೆಕ್ಕಪರಿಶೋಧನೆಯ ಪ್ರತಿ ಮತ್ತು ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳೊಂದಿಗೆ ಅಥವಾ ಲೆಕ್ಕಪರಿಶೋಧನೆಯ ವರದಿಗೆ ಪೂರಕ ವರದಿಯನ್ನು ಮಂಡಿಸತಕ್ಕದ್ದು. ಶಾಸನಬದ್ಧ ನಿಗಮಗಳನ್ನು ನಿಯಂತ್ರಿಸುವ ಸಂಬಂಧಿತ

[37] ಮೊದಲ ವಾರ್ಷಿಕ ಸಾಮಾನ್ಯ ಸಭೆಯಾದಲ್ಲಿ, ಕಂಪನಿಯ ಮೊದಲ ಹಣಕಾಸು ಸಾಲು ಮುಕ್ತಾಯಗೊಂಡ ದಿನಾಂಕದಿಂದ ಒಂಬತ್ತು ತಿಂಗಳುಗಳ ಒಳಗೆ ಹಾಗೂ ಇತರೆ ಪ್ರಕರಣಗಳಲ್ಲಿ ಹಣಕಾಸು ಸಾಲು ಮುಕ್ತಾಯಗೊಂಡ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ 30 ಸೆಪ್ಟೆಂಬರ್ 30ರ ಒಳಗೆ ನಡೆಸತಕ್ಕದ್ದು.

[38] ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 394 (1) (a) ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಾಲಮಿತಿ.

ಅಧಿನಿಯಮಗಳಲ್ಲಿ ಬಹುತೇಕ ಇಂತಹುದೇ ಅನುವುಗಳು ಇರುತ್ತವೆ. ಈ ವ್ಯವಸ್ಥೆಯು ರಾಜ್ಯದ ಸಂಚಿತ ನಿಧಿಯಿಂದ ಕಂಪನಿಗಳಲ್ಲಿ ಹೂಡಿಕೆ ಮಾಡಿರುವ ಸಾರ್ವಜನಿಕ ಹಣಗಳ ಬಳಕೆಯ ಮೇಲೆ ಅಗತ್ಯವಾದ ಶಾಸನಬದ್ಧ ನಿಯಂತ್ರಣವನ್ನು ಒದಗಿಸುತ್ತದೆ.

ಅಧಿನಿಯಮದ ಪರಿಚ್ಛೇದ 96ರ ಅನುಸಾರ, ಪ್ರತೀ ಕಂಪನಿಯು ಪ್ರತೀ ಕ್ಯಾಲೆಂಡರ್ ವರ್ಷದಲ್ಲಿ ಒಂದು ಬಾರಿ ಷೇರು ಹಿಡುವಳಿದಾರರುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸತಕ್ಕದ್ದು. ಒಂದು ವಾರ್ಷಿಕ ಸಾಮಾನ್ಯ ಸಭೆ ಮತ್ತು ತದನಂತರದ ವಾರ್ಷಿಕ ಸಾಮಾನ್ಯ ಸಭೆಯ ನಡುವೆ 15 ತಿಂಗಳುಗಳಿಗಿಂತ ಹೆಚ್ಚಿನ ಅಂತರವು ಇರುವಂತಿಲ್ಲ ಎಂಬುದಾಗಿಯೂ ಸಹ ತಿಳಿಸಲಾಗಿದೆ. ಅಲ್ಲದೆಯೇ ಅಧಿನಿಯಮದ ಪರಿಚ್ಛೇದ 129, ಸದರಿ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಅದರ ಪರಿಗಣನೆಗಾಗಿ ಹಣಕಾಸು ಸಾಲಿಗಾಗಿ ಲೆಕ್ಕಪರಿಶೋಧನೆಗೆ ಒಳಪಟ್ಟಿರುವ ಹಣಕಾಸು ತ:ಖ್ತೆಗಳನ್ನು ಮಂಡಿಸತಕ್ಕದ್ದು.

ಅಧಿನಿಯಮದ ಪರಿಚ್ಛೇದ 129 (7), ಅಧಿನಿಯಮದ ಪರಿಚ್ಛೇದ 129ರ ಅನುವುಗಳ ಅನುಪಾಲನೆ ಮಾಡದಿರುವುದಕ್ಕಾಗಿ ಜವಾಬ್ದಾರಿ ಹೊಂದಿರುವ ಕಂಪನಿಯ ನಿರ್ದೇಶಕರುಗಳೂ ಸೇರಿದಂತೆ ಸಂಬಂಧಿತ ವ್ಯಕ್ತಿಗಳಿಗೆ ದಂಡ ಮತ್ತು ಸೆರೆವಾಸದಂತಹ ಶಿಕ್ಷೆ ವಿಧಿಸುವಂತಹ ಅನುವುಗಳು ಇರುತ್ತವೆ

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುವಲ್ಲಿ ತೋರುವಂತಹ ಅನಿಶ್ಚಿತ ವಿಳಂಬವನ್ನು ಗಮನಿಸಿರುವ ರಾಜ್ಯ ಸರ್ಕಾರವು ಕಾಲಮಿತಿಯಲ್ಲಿ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಿಕೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸುವಿಕೆಗೆ ಜೂನ್ 30, ಮಂಡಳಿಯ ಅನುಮೋದನೆ / ಶಾಸನಬದ್ಧ ಲೆಕ್ಕಪರಿಶೋಧನಾ ವರದಿ / ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಟೀಕೆಟಿಪ್ಪಣಿಗಳನ್ನು ಪಡೆಯಲು ಆಗಸ್ಟ್ 31 ಮತ್ತು ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟೆಂಬರ್ 30ರಂದು ಅಥವಾ ಅದಕ್ಕೆ ಮುಂಚಿತವಾಗಿ ನಡೆಸುವಂತೆ ನಿರ್ದಿಷ್ಟಪಡಿಸಿರುವುದು (ಜನವರಿ 2023). ಮೇಲ್ಕಂಡ ನಿರ್ದೇಶನಗಳ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳುವುದು ಸರ್ಕಾರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು, ಹಣಕಾಸು ಮುಖ್ಯಸ್ಥರು ಮತ್ತು / ಅಥವಾ ಲೆಕ್ಕಪತ್ರ ವಿಭಾಗದ ಮುಖ್ಯಸ್ಥರ ಜವಾಬ್ದಾರಿಯಾಗಿರುತ್ತದೆ.

ಈ ಕೆಳಗಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ, 102 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 30 ಸೆಪ್ಟೆಂಬರ್ 2023ರಲ್ಲಿದ್ದಂತೆ[39] ಅವುಗಳ ವಾರ್ಷಿಕ ಲೆಕ್ಕಪತ್ರಗಳು ಬಾಕಿ ಉಳಿದಿದ್ದ ಕಾರಣ ಸರ್ಕಾರಿ ನಿರ್ದೇಶನಗಳ ಅನುಪಾಲನೆ ಮಾಡುವಲ್ಲಿ ವಿಫಲಗೊಂಡಿರುತ್ತವೆ.

***ಕಂಪನಿಗಳು ಲೆಕ್ಕಪತ್ರಗಳನ್ನು ಸಕಾಲದಲ್ಲಿ ಸಿದ್ಧಪಡಿಸುವಿಕೆ***

**2.3.2** 31 ಮಾರ್ಚ್ 2023ರಲ್ಲಿದ್ದಂತೆ, 121 ಕಂಪನಿಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆಯ ವ್ಯಾಪ್ತಿಯ ಒಳಗೆ ಇದ್ದವು. ಇವುಗಳಲ್ಲಿ, ಕೇವಲ 85 ಕಂಪನಿಗಳು ಮಾತ್ರ 98 ಲೆಕ್ಕಪತ್ರಗಳನ್ನು (ಹಿಂದಿನ ವರ್ಷಗಳ ಲೆಕ್ಕಪತ್ರಗಳೂ ಸೇರಿದಂತೆ) ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪೂರಕ ಲೆಕ್ಕಪರಿಶೋಧನೆಗಾಗಿ ಸಲ್ಲಿಸಿದವು ಹಾಗೂ ಅವುಗಳಿಗೆ 30 ಸೆಪ್ಟೆಂಬರ್ 2023ರ ವೇಳೆಗೆ ಪ್ರಮಾಣಪತ್ರಗಳನ್ನು ಪಡೆದವು. ಇವುಗಳ ಪೈಕಿ 2022–23ರ ಹಣಕಾಸು ಸಾಲಿಗೆ ಸಂಬಂಧಿಸಿದ 25 ಲೆಕ್ಕಪತ್ರಗಳು[40] ಮಾತ್ರ ಸೇರಿದ್ದವು

ಒಟ್ಟಾರೆಯಾಗಿ 96 ಕಂಪನಿಗಳ 233 ಲೆಕ್ಕಪತ್ರಗಳು (ಸಮಾಪನ ಪ್ರಕ್ರಿಯೆಯ ಅಡಿಯಲ್ಲಿರುವ ಐದು ಕಂಪನಿಗಳ 77 ಲೆಕ್ಕಪತ್ರಗಳು, ಆರು ನಿಷ್ಕ್ರಿಯ ಕಂಪನಿಗಳ 16 ಲೆಕ್ಕಪತ್ರಗಳು ಮತ್ತು 85 ಕಾರ್ಯನಿರತ ಕಂಪನಿಗಳ 140 ಲೆಕ್ಕಪತ್ರಗಳು) ವಿವಿಧ ಕಾರಣಗಳಿಗಾಗಿ ಬಾಕಿಯಲ್ಲಿದ್ದವು. 121 ಕಂಪನಿಗಳ

---

[39] ಕಂಪನಿಗಳ ಅಧಿನಿಯಮ, 2013ರ ಅನುಸಾರ 2022–23 ಹಣಕಾಸು ಸಾಲಿಗೆ ಕಂಪನಿಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ನಿಗದಿತ ದಿನಾಂಕವು 30 ಸೆಪ್ಟೆಂಬರ್ 2023 ಆಗಿದ್ದಿತು.

[40] ಸ್ವೀಕರಿಸಲಾಗಿರುವ ಲೆಕ್ಕಪತ್ರಗಳು ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪ್ರಮಾಣೀಕರಿಸಿರುವಂತಹ ಲೆಕ್ಕಪತ್ರಗಳ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ.

ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿ ಬಾಕಿಗಳು ಇರುವ ಅವಧಿವಾರು ವಿವರಗಳನ್ನು **ಕೋಷ್ಟಕ ಸಂಖ್ಯೆ 2.1**ರಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 2.1: ಕಂಪನಿಗಳ ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿ ಬಾಕಿಗಳ ವಿವರಗಳು**

| ಕ್ರಮ ಸಂಖ್ಯೆ | ಕಾರ್ಯ– ಸ್ಥಿತಿಗತಿ | ಬಾಕಿಗಳ ಸ್ಥಿತಿಗತಿ | ಸಕಾರಾತ್ಮಕವಾಗಿರುವ ನಿವ್ವಳ ಮೌಲ್ಯದೊಂದಿಗಿನ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು | | ನಕಾರಾತ್ಮಕವಾಗಿರುವ ನಿವ್ವಳ ಮೌಲ್ಯ ದೊಂದಿಗಿನ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು | | ಒಟ್ಟು | |
|---|---|---|---|---|---|---|---|---|
| | | | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಲೆಕ್ಕಪತ್ರಗಳ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಲೆಕ್ಕಪತ್ರಗಳ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಲೆಕ್ಕಪತ್ರಗಳ ಸಂಖ್ಯೆ |
| 1 | ಕಾರ್ಯನಿರತ ಕಂಪನಿಗಳು | ಬಾಕಿಗಳಿಲ್ಲ | 17 | 0 | 5 | 0 | 22 | 0 |
| | | 1 ವರ್ಷ | 46 | 46 | 16 | 16 | 62 | 62 |
| | | 2 - 3 ವರ್ಷಗಳು | 14 | 35 | 3 | 9 | 17 | 44 |
| | | > 3 ವರ್ಷಗಳು | 3 | 14 | 3 | 20 | 6 | 34 |
| | | **ಒಟ್ಟು** | **80** | **95** | **27** | **45** | **107** | 140 |
| 2 | ಕಾರ್ಯಸ್ಥಗಿತ ಕಂಪನಿಗಳು (ದಿವಾಳಿತನದ ಅಡಿಯಲ್ಲಿ) | ಬಾಕಿಗಳಿಲ್ಲ | 0 | 0 | 0 | 0 | 0 | 0 |
| | | 1 ವರ್ಷ | 1 | 1 | 0 | 0 | 1 | 1 |
| | | 2 - 3 ವರ್ಷಗಳು | 0 | 0 | 0 | 0 | 0 | 0 |
| | | > 3 ವರ್ಷಗಳು | 2 | 39 | 2 | 37 | 4 | 76 |
| | | **ಒಟ್ಟು** | **3** | **40** | **2** | **37** | **5** | 77 |
| 3 | ಕಾರ್ಯಸ್ಥಗಿತ ಕಂಪನಿಗಳು (ನಿಷ್ಕ್ರಿಯ) | ಬಾಕಿಗಳಿಲ್ಲ | 0 | 0 | 3 | 0 | 3 | 0 |
| | | 1 ವರ್ಷ | 1 | 1 | 2 | 2 | 3 | 3 |
| | | 2 - 3 ವರ್ಷಗಳು | 0 | 0 | 2 | 5 | 2 | 5 |
| | | > 3 ವರ್ಷಗಳು | 1 | 8 | 0 | 0 | 1 | 8 |
| | | **ಒಟ್ಟು** | **2** | **9** | **7** | **7** | **9** | 16 |
| 4 | **ಒಟ್ಟು** | ಬಾಕಿಗಳಿಲ್ಲ | **17** | **0** | **8** | **0** | **25** | **0** |
| | | 1 ವರ್ಷ | **48** | **48** | **18** | **18** | **66** | **66** |
| | | 2 - 3 ವರ್ಷಗಳು | **14** | **35** | **5** | **14** | **19** | **49** |
| | | > 3 ವರ್ಷಗಳು | **6** | **61** | **5** | **57** | **11** | **118** |
| | | **ಒಟ್ಟು** | **85** | **144** | **36** | **89** | **121** | **233**[41] |

***ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಲಾದ ಮಾಹಿತಿ/ದತ್ತಾಂಶ***

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 36 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 28ಕ್ಕೆ ಸಂಬಂಧಿಸಿದಂತೆ 89 ಲೆಕ್ಕಪತ್ರಗಳು ಬಾಕಿಗಳಲ್ಲಿ ಇದ್ದು ಇವುಗಳ ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ನಡುವಿನ ವ್ಯತ್ಯಾಸದ ನಿವ್ವಳ ಮೌಲ್ಯದ ಮೊತ್ತವು ಸಂಪೂರ್ಣವಾಗಿ ಕೊರೆದು ಹೋಗಿರುತ್ತವೆ. ಒಟ್ಟಿನಲ್ಲಿ, 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಮೂರು ವರ್ಷಗಳಿಗೂ ಹೆಚ್ಚು ಕಾಲದಿಂದ 118 ಲೆಕ್ಕಪತ್ರಗಳು ಬಾಕಿಗಳಲ್ಲಿ ಇರುತ್ತವೆ (ಆರು ಕಾರ್ಯನಿರತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ 34 ಲೆಕ್ಕಪತ್ರಗಳೂ ಸೇರಿದಂತೆ). ರಾಜ್ಯ ಸಾರ್ವಜನಿಕ ವಲಯ ಉದ್ದಿಮೆವಾರುಲೆಕ್ಕಪತ್ರಗಳಲ್ಲಿನ ಬಾಕಿಗಳ ವಿವರಗಳನ್ನು ***ಅನುಬಂಧ – 4**ರಲ್ಲಿ* ನೀಡಲಾಗಿರುವುದು.

ಬಾಕಿಗಳಲ್ಲಿ ಇರುವ ಲೆಕ್ಕಪತ್ರಗಳನ್ನು ಹೊಂದಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ರಾಜ್ಯ ಸರ್ಕಾರವು ಈಕ್ವಿಟಿ ಮತ್ತು ಸಾಲಗಳ ರೂಪದಲ್ಲಿ ಹೂಡಿಕೆ ಮಾಡಿರುವುದರಿಂದ, ಈ ಕಂಪನಿಗಳ ಲೆಕ್ಕಪತ್ರಗಳನ್ನು ಅಂತಿಮಗೊಳಿಸದೆಯೇ ಇರುವುದು ಸರ್ಕಾರಿ ಹೂಡಿಕೆಗಳು ಲೆಕ್ಕಪರಿಶೋಧನೆ ಹಾಗೂ ರಾಜ್ಯದ ಶಾಸಕಾಂಗದ ಮೇಲ್ವಿಚಾರಣೆಯಿಂದ ಹೊರಗೆ ಇರುವಂತೆ ಮಾಡಿರುತ್ತದೆ ತನ್ಮೂಲಕ ಅವುಗಳು ವಂಚನೆ ಮತ್ತು ದುರ್ಬಳಕೆಯ ಸಂಭಾವ್ಯತೆಗೆ ಒಳಗಾಗುವಂತೆ ಮಾಡಲಾಗಿರುವುದು.

[41] ಬಾಕಿಯು 21 ಕಂಪನಿಗಳಿಂದ (ಒಂದು ಕಾರ್ಯಸ್ಥಗಿತ ಕಂಪನಿಯನ್ನು ಒಳಗೊಂಡಂತೆ) ಸೆಪ್ಟೆಂಬರ್ 2023ರ ಮೊದಲು ಸ್ವೀಕರಿಸಿದ ಆಡಿಟ್/ಪ್ರಮಾಣೀಕರಣದ ವಿವಿಧ ಹಂತಗಳಲ್ಲಿರುವ 22 ಹಣಕಾಸು ತ:ಖ್ತೆಗಳನ್ನು ಒಳಗೊಂಡಿದೆ.

ಜನವರಿ 2023ರಲ್ಲಿ ನೀಡಲಾಗಿರುವ ನಿರ್ದೇಶನಗಳಿಗೆ ಬದ್ಧರಾಗಿಲ್ಲದಿರುವುದನ್ನು ಉಲ್ಲೇಖಿಸಿ ಮತ್ತು ಹಣಕಾಸು ನಿಯಂತ್ರಣದ ಕ್ರಮವಾಗಿ ಹಾಗೂ ಹಣಕಾಸು ಶಿಸ್ತನ್ನು ಖಚಿತಪಡಿಸಿಕೊಳ್ಳಲು, ರಾಜ್ಯ ಸರ್ಕಾರವು 01.04.2024ರಿಂದ ಜಾರಿಗೆ ಬರುವಂತೆ ತ್ರೈಮಾಸಿಕ ಹಣಕಾಸು ತ:ಖ್ತೆಗಳನ್ನು ಸಿದ್ಧಪಡಿಸುವಂತೆ ಮತ್ತು ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ತ್ರೈಮಾಸಿಕ ಹಣಕಾಸು ತ:ಖ್ತೆಗಳನ್ನು ಕರಡು ವರದಿಗಳೊಂದಿಗೆ ಲೆಕ್ಕಪರಿಶೋಧನಾ ಸಮಿತಿಯ ಮುಂದೆ, ಯಾವುದಾದರೂ ಇದ್ದಲ್ಲಿ, ಶಿಫಾರಸಿಗಾಗಿ ಮತ್ತು ನಿರ್ದೇಶಕರುಗಳ ಮಂಡಳಿಯ ಸಮೀಕ್ಷೆಗಾಗಿ ಸಲ್ಲಿಸುವಂತೆ ಎಲ್ಲಾ ಸರ್ಕಾರಿ ಸ್ವಾಮ್ಯದ ಕಂಪನಿಗಳಿಗೆ ನಿರ್ದೇಶನ ನೀಡಿರುವುದು (ನವೆಂಬರ್ 2023).

***ಶಾಸನಬದ್ಧ ನಿಗಮಗಳು ಲೆಕ್ಕಪತ್ರಗಳನ್ನು ಸಕಾಲದಲ್ಲಿ ಸಿದ್ಧಪಡಿಸುವಿಕೆ***

**2.3.3** ಆರು ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯನ್ನೂ ಸಹ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನಡೆಸುವರು. ಇವುಗಳ ಪೈಕಿ, ನಾಲ್ಕು ಶಾಸನಬದ್ಧ ನಿಗಮಗಳಿಗೆ (ಸಾರಿಗೆ ಕ್ಷೇತ್ರದಲ್ಲಿ[42]) ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಏಕೈಕ ಲೆಕ್ಕಪರಿಶೋಧಕರಾಗಿರುವರು ಮತ್ತು ಇತರೆ ಎರಡು[43] ಶಾಸನಬದ್ಧ ನಿಗಮಗಳಿಗೆ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಾದನಂತರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆಯನ್ನು ನಡೆಸುವರು.

30 ಸೆಪ್ಟೆಂಬರ್ 2023ರಲ್ಲಿದ್ದಂತೆ ಆರು (ಬಿಎಂಟಿಸಿ, ಕರಾರಸಾಸಂ, ವಾಕರಸಾಸಂ, ಕಕರಸಾಸಂ, ಕರಾಹನಿ ಮತ್ತು ಕರಾಉನಿ) ಶಾಸನಬದ್ಧ ನಿಗಮಗಳಿಗೆ[44] ಸಂಬಂಧಿಸಿದಂತೆ, 2022–23ರ ಸಾಲಿಗಾಗಿ ಮಾತ್ರ ಲೆಕ್ಕಪತ್ರಗಳು ಬಾಕಿಯಲ್ಲಿ ಉಳಿದಿವೆ, ಈ ಪೈಕಿ ಸಾರಿಗೆ ಕ್ಷೇತ್ರದ ನಾಲ್ಕು ಶಾಸನಬದ್ಧ ನಿಗಮಗಳಲ್ಲಿ ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ನಡುವಿನ ವ್ಯತ್ಯಾಸದ ಮೊತ್ತ ನಿವ್ವಳ ಮೌಲ್ಯವು (ನೆಟ್ ವರ್ತ್) ಸಂಪೂರ್ಣವಾಗಿ ನಶಿಸಿಹೋಗಿರುತ್ತವೆ.

## 2.4 ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣೆ: ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮತ್ತು ಪೂರಕ ಲೆಕ್ಕಪರಿಶೋಧನೆ

***ಹಣಕಾಸು ವರದಿ ಸಂಬಂಧಿತ ಕಾರ್ಯಚೌಕಟ್ಟು***

**2.4.1** ಕಂಪನಿಗಳು ತಮ್ಮ ಹಣಕಾಸು ತ:ಖ್ತೆಗಳನ್ನು ಕಂಪನಿಗಳ ಅಧಿನಿಯಮ, 2013ರ ಷೆಡ್ಯೂಲು ಖಖಖರಲ್ಲಿ ನಿರ್ದಿಷ್ಟಪಡಿಸಿರುವಂತಹ ನಮೂನೆಯಲ್ಲಿ ಹಾಗೂ ಕೇಂದ್ರ ಸರ್ಕಾರವು, ಲೆಕ್ಕಪತ್ರಗಳ ಮಾನದಂಡಗಳ ಮೇಲಿನ ರಾಷ್ಟ್ರೀಯ ಸಲಹಾ ಸಮಿತಿಯ ಜೊತೆಗೆ ಸಮಾಲೋಚಿಸುವುದರೊಂದಿಗೆ, ನಿಗದಿಪಡಿಸಿರುವಂತಹ ಕಡ್ಡಾಯ ಲೆಕ್ಕಪತ್ರ ಮಾನದಂಡಗಳನ್ನು ಪಾಲಿಸುವ ಮೂಲಕ ಸಿದ್ಧಪಡಿಸುವ ಅಗತ್ಯತೆಯಿರುತ್ತದೆ. ಶಾಸನಬದ್ಧ ನಿಗಮಗಳು ತಮ್ಮ ಲೆಕ್ಕ ಪತ್ರಗಳನ್ನು ನಿಯಮಗಳ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರೊಂದಿಗೆ ಸಮಾಲೋಚನೆಯ ನಂತರ ನಿಗದಿಪಡಿಸಿರುವಂತಹ ನಮೂನೆಯಲ್ಲಿ ಮತ್ತು ಅಂತಹ ನಿಗಮಗಳನ್ನು ನಿಯಂತ್ರಿಸುವ ಅಧಿನಿಯಮಗಳಲ್ಲಿ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಇರಬಹುದಾದ ಯಾವುದೇ ಇತರ ನಿರ್ದಿಷ್ಟ ಅನುವುಗಳಅನುಸಾರ ಸಿದ್ದಪಡಿಸತಕ್ಕದ್ದು.

***ಶಾಸನಬದ್ಧ ಲೆಕ್ಕಪರಿಶೋಧಕರುಗಳಿಂದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ***

**2.4.2** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139ರ ಅಡಿಯಲ್ಲಿ ನೇಮಕಗೊಂಡಿರುವಂತಹ ಶಾಸನಬದ್ಧ ಲೆಕ್ಕಪರಿಶೋಧಕರುಗಳು

---

[42] ಬಿಎಂಟಿಸಿ, ಕರಾರಸಾಸಂ, ವಾಕರಸಾಸಂ ಮತ್ತು ಕಕರಸಾಸಂ.

[43] ಕರ್ನಾಟಕ ರಾಜ್ಯ ಹಣಕಾಸು ನಿಗಮ ಮತ್ತು ಕರ್ನಾಟಕ ರಾಜ್ಯ ಉಗ್ರಾಣ ನಿಗಮ.

[44] ಸೆಪ್ಟಂಬರ್ 2023ರಲ್ಲಿದ್ದಂತೆ ಮೂರು ಶಾಸನಬದ್ಧ ನಿಗಮಗಳ (ಬಿಎಂಟಿಸಿ, ವಾಯುವ್ಯ ಕರಸಾನಿ ಮತ್ತು ಕರಾಹನಿ) ಲೆಕ್ಕಪತ್ರಗಳನ್ನು ಸ್ವೀಕರಿಸಲಾಗಿರುವುದು ಹಾಗೂ ಅವುಗಳ ಲೆಕ್ಕಪರಿಶೋಧನೆ/ಪ್ರಮಾಣೀಕರಣ ವಿವಿದ ಹಂತಗಳಲ್ಲಿರುತ್ತವೆ.

ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನಡೆಸುವರು ಮತ್ತು ಅವುಗಳ ಮೇಲಿನ ತಮ್ಮ ವರದಿಯನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ಕ್ಕೆ ಅನುಗುಣವಾಗಿ ಸಲ್ಲಿಸುವರು.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರು ಶಾಸನಬದ್ಧ ಲೆಕ್ಕಪರಿಶೋಧಕರು ತಮಗೆ ನೀಡಿರುವ ಕೆಲಸಗಳನ್ನು ಸೂಕ್ತರೀತಿಯಲ್ಲಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎಂಬ ಒಟ್ಟಾರೆ ಧ್ಯೇಯೋದ್ದೇಶದಿಂದ ಸಾರ್ವಜನಿಕ ವಲಯಗಳ ಉದ್ದಿಮೆಗಳ ಲೆಕ್ಕಪರಿಶೋಧನೆಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರುಗಳು ತಮಗೆ ವಹಿಸಲಾಗಿರುವ ಕರ್ತವ್ಯಗಳನ್ನು ಗಮನಿಸುವ ಮೂಲಕ ಮೇಲ್ವಿಚಾರಣೆಯ ಪಾತ್ರವನ್ನು ನೋಡಿಕೊಳ್ಳುತ್ತಾರೆ. ಈ ಕರ್ತವ್ಯವನ್ನು ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಅಧಿಕಾರವನ್ನು ಚಲಾಯಿಸುವ ಮೂಲಕ ಮಾಡಲಾಗುತ್ತದೆ

- ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (5)ರ ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರುಗಳಿಗೆ ನಿರ್ದೇಶನಗಳನ್ನು ನೀಡುವುದು; ಮತ್ತು
- ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (6)ರ ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕ ವರದಿ ಸಿದ್ಧಪಡಿಸುವುದು ಅಥವಾ ಅವರ ವರದಿಯ ಮೇಲೆ ಟೀಕೆಟಿಪ್ಪಣಿಗಳನ್ನು ಮಾಡುವುದು.

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳ ಪೂರಕ ಲೆಕ್ಕಪರಿಶೋಧನೆ***

**2.4.3** ಕಂಪನಿಗಳ ಅಧಿನಿಯಮ, 2013 ಅಥವಾ ಇತರೆ ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಹಣಕಾಸು ವರದಿಗೆ ಸಂಬಂಧಿತ ಕಾರ್ಯಚೌಕಟ್ಟಿಗೆ (ಫ್ರೇಮ್‌ವರ್ಕ್) ಅನುಗುಣವಾಗಿ ಹಣಕಾಸು ತ:ಖ್ತೆಗಳನ್ನು ಸಿದ್ಧಪಡಿಸುವ ಪ್ರಮುಖ ಜವಾಬ್ದಾರಿಯು ಕಂಪನಿಯ ಆಡಳಿತವರ್ಗಕ್ಕೆ ಸೇರಿರುತ್ತದೆ.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139(5) ಅಥವಾ 139(7)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನೇಮಕಗೊಂಡಿರುವ ಶಾಸನಬದ್ಧ ಲೆಕ್ಕಪರಿಶೋಧಕರುಗಳು ಭಾರತದ ಚಾರ್ಟರ್ಡ್ ಅಕೌಂಟೆಂಟುಗಳ ಸಂಸ್ಥೆಯ ಪ್ರಮಾಣಿತ ಲೆಕ್ಕಪರಿಶೋಧನಾ ಪರಿಪಾಠಗಳು ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ನಿರ್ದೇಶನಗಳಿಗೆ ಅನುಗುಣವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಆಧಾರಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಅಡಿಯಲ್ಲಿ ಹಣಕಾಸು ತ:ಖ್ತೆಗಳ ಮೇಲೆ ಅಭಿಪ್ರಾಯ ವ್ಯಕ್ತಪಡಿಸಲು ಜವಾಬ್ದಾರರಾಗಿರುತ್ತಾರೆ. ಶಾಸನಬದ್ಧ ಲೆಕ್ಕಪರಿಶೋಧಕರುಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರಿಗೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (5)ರ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸತಕ್ಕದ್ದು.

ಆಯ್ದ ಸರ್ಕಾರಿ ಕಂಪನಿಗಳ ಪ್ರಮಾಣೀಕೃತ ಲೆಕ್ಕಪತ್ರಗಳು, ಜೊತೆಗೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆ ನಡೆಸುವ ಮೂಲಕ ಸಮೀಕ್ಷಿಸುವರು. ಅಂತಹ ಸಮೀಕ್ಷೆಯ ಆಧಾರದ ಮೇರೆಗೆ ಲೆಕ್ಕಪರಿಶೋಧನೆಯಲ್ಲಿ ಗಮನಾರ್ಹ ಅಂಶಗಳನ್ನು, ಯಾವುದಾದರೂ ಗಮನಿಸಿದಲ್ಲಿ, ಅವುಗಳನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (6)ರ ಅಡಿಯಲ್ಲಿ ವರದಿ ಮಾಡತಕ್ಕದ್ದು ಹಾಗೂ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು.

## 2.5 ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮೇಲ್ವಿಚಾರಣಾ ಪಾತ್ರದ ಫಲಿತಾಂಶ

***ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಅಡಿಯಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ***

2.5.1 30 ಸೆಪ್ಟೆಂಬರ್ 2023ರಲ್ಲಿದ್ದಂತೆ (2022–23 ಸಾಲಿಗಾಗಿ 25 ಮತ್ತು ಉಳಿದ 73 ಈ ಹಿಂದಿನ ಸಾಲುಗಳಿಗಾಗಿ) 85 ಸರ್ಕಾರಿ ಕಂಪನಿಗಳಿಂದ 98 ಹಣಕಾಸು ತ:ಖ್ತೆಗಳನ್ನು ಸ್ವೀಕರಿಸಲಾಯಿತು ಮತ್ತು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರು ಲೆಕ್ಕಪರಿಶೋಧನೆ ಮಾಡಿದರು. ಇವುಗಳ ಪೈಕಿ, ಸರ್ಕಾರಿ ಕಂಪನಿಗಳ 76 ಹಣಕಾಸು ತ:ಖ್ತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಸಮೀಕ್ಷಿಸಲಾಯಿತು ಹಾಗೂ 22 ಸರ್ಕಾರಿ ಕಂಪನಿಗಳಿಗೆ ಸಮೀಕ್ಷೇತರ ಪ್ರಮಾಣಪತ್ರವನ್ನು ನೀಡಲಾಯಿತು. ಸಮೀಕ್ಷೆಯ ಫಲಿತಾಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ:

***ಹಣಕಾಸು ತ:ಖ್ತೆಗಳ ತಿದ್ದುಪಡಿ***

**2.5.2** 13 ಸರ್ಕಾರಿ ಕಂಪನಿಗಳ ಹಣಕಾಸು ತ:ಖ್ತೆಗಳಿಗೆ ಅವುಗಳನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸುವ ಮೊದಲು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ನಡೆಸಲಾದ ಪೂರಕ ಲೆಕ್ಕಪರಿಶೋಧನೆಯ ಫಲವಾಗಿ ತಿದ್ದುಪಡಿ ಮಾಡಲಾಯಿತು. ತಿದ್ದುಪಡಿಗಳಿಂದಾಗಿ ಹಣಕಾಸು ಪ್ರಭಾವಗಳು ***ಅನುಬಂಧ – 5*** ರಲ್ಲಿ ಸೂಚಿಸಿರುವಂತೆ ಈ ರೀತಿಯದಾಗಿದ್ದವು: (i) ₹ 357.15 ಕೋಟಿ ಲಾಭದಾಯಕತೆಯ ಮೇಲೆ ಪ್ರಭಾವ ಮತ್ತು (ii) ₹ 509.55 ಕೋಟಿಗಳಷ್ಟು ಆಸ್ತಿಗಳು ಮತ್ತು ಜವಾಬ್ದಾರಿಗಳಲ್ಲಿ ಬದಲಾವಣೆ.

***ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಪರಿಷ್ಕರಣೆ***

**2.5.3** 48 ಹಣಕಾಸು ತ:ಖ್ತೆಗಳ ಮೇಲಿನ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹಣಕಾಸು ತ:ಖ್ತೆಗಳ ಮೇಲೆ ನಡೆಸಿದ ಪೂರಕ ಲೆಕ್ಕಪರಿಶೋಧನೆಯ ಫಲವಾಗಿ ***ಅನುಬಂಧ – 6***ರಲ್ಲಿ ಸೂಚಿಸಿರುವಂತೆ ಪರಿಷ್ಕರಿಸಲಾಯಿತು.

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರ ಗಮನಾರ್ಹವಾದಂತಹ ಟೀಕೆಟಿಪ್ಪಣಿಗಳು***

**2.5.4** ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸು ತ:ಖ್ತೆಗಳ ಮೇಲಿನ ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಟೀಕೆಟಿಪ್ಪಣಿಗಳು ಈ ಮುಂದೆ ತೋರಿಸಲಾಗಿರುವಂತೆ ಪ್ರಭಾವವನ್ನು ಹೊಂದಿದ್ದವು: (i) ₹ 88.01 ಕೋಟಿ ಲಾಭದಾಯಕತೆಯ ಮೇಲೆ (ii) ₹ 130.45 ಕೋಟಿ ಆಸ್ತಿಗಳು/ಬಾಧ್ಯತೆಗಳ ಮೇಲೆ. ಇವುಗಳನ್ನು ***ಅನುಬಂಧ – 7*** ಮತ್ತು ***ಅನುಬಂಧ – 8*** ರಲ್ಲಿ ವಿವರಿಸಲಾಗಿರುವುದು.

**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕೈಕ ಲೆಕ್ಕಪರಿಶೋಧಕರಾಗಿರುವ ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳ ಮೇಲೆ ಗಮನಾರ್ಹವಾದಂತಹ ಟೀಕೆಟಿಪ್ಪಣಿಗಳು**

**2.5.5** ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಟೀಕೆಟಿಪ್ಪಣಿಗಳು (ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕೈಕ ಲೆಕ್ಕಪರಿಶೋಧಕರು ಆಗಿರುವ ಕಡೆ) ಈ ಮುಂದೆ ತೋರಿಸಿರುವಂತೆ ಪ್ರಭಾವವನ್ನು ಹೊಂದಿದ್ದವು: (1) ₹ 241.48 ಕೋಟಿ ಲಾಭದಾಯಕತೆಯ ಮೇಲೆ ಮತ್ತು (2) ₹ 55.36 ಕೋಟಿ ಆಸ್ತಿಗಳು/ ಜವಾಬ್ದಾರಿಗಳ ಮೇಲೆ. ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳ ಮೇಲೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು

ಮಹಾಲೆಕ್ಕಪರಿಶೋಧಕರಿಂದ ಸೇರ್ಪಡೆ ಮಾಡಲಾಗಿರುವ ಗಮನಾರ್ಹವಾದಂತಹ ಟೀಕೆಟಿಪ್ಪಣಿಗಳನ್ನು ಈ ಕೆಳಗೆ ವಿವರಿಸಲಾಗಿದೆ:

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್‌ಟಿಸಿ – 2020–21 ಆರ್ಥಿಕ ವರ್ಷ)**

- ಜೂನ್ 2018ರಿಂದ ಮಾರ್ಚ್ 2021ರ ಅವಧಿಯಲ್ಲಿ 671 ಅಪಘಾತದ ಸಾವಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಮಾರ್ಗದರ್ಶನಗಳ ಕಾರಣ ಪಾವತಿಸಬೇಕಾದ ಪರಿಹಾರಕ್ಕಾಗಿ ಹಣಕಾಸನ್ನು ಮೀಸಲಿರಿಸದಿರುವುದು ಮೋಟಾರು ವಾಹನ ಅಪಘಾತ ಕ್ಲೇಮುಗಳ ಬಾಧ್ಯತೆಯನ್ನು 2020–21ರಲ್ಲಿ ₹5.72 ಕೋಟಿ ಮತ್ತು ಹಿಂದಿನ ವರ್ಷಗಳಿಗಾಗಿ ₹ 25.14 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಮತ್ತು ಅಷ್ಟರಮಟ್ಟಿಗೆ ಆ ವರ್ಷದ ನಷ್ಟವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿದ್ದಿತು.

- ಮಾರ್ಚ್ 2021ರ ಅಂತ್ಯದ ಮುಂಚಿನ ಅವಧಿಯಲ್ಲಿ ಆದೇಶಿಸಲಾಗಿರುವ 36 ಮೋಟಾರು ವಾಹನ ಅಪಘಾತ ಕ್ಲೇಮು ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರಕ್ಕಾಗಿ ಹಣವನ್ನು ಮೀಸಲು ಇರಿಸದಿರುವುದು ಮೋಟಾರು ವಾಹನ ಅಪಘಾತ ಕ್ಲೇಮುಗಳ ಕಡೆಗಿನ ಬಾಧ್ಯತೆಯನ್ನು ₹ 2.24 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಹಾಗೂ ಅಷ್ಟರಮಟ್ಟಿಗೆ ಆ ವರ್ಷದ ನಷ್ಟವನ್ನು ಕಡಿಮೆ ತೋರಿಸುವಲ್ಲಿ ಪರಿಣಮಿಸಿರುವುದು.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್‌ಟಿಸಿ – 2021–22 ಆರ್ಥಿಕ ವರ್ಷ)**

- ಬಸ್ಸು ನಿಲ್ದಾಣದ ನಿರ್ಮಾಣಕ್ಕಾಗಿ ಹುಣಸೂರಿನ ದೊಡ್ಡಹುಣಸೂರಿನಲ್ಲಿ ಸ್ವಾಧೀನಪಡಿಸಿಕೊಂಡಿರುವ ಭೂಮಿಗೆ ಸಂಬಂಧಿಸಿದಂತೆ ಕರ್ನಾಟಕದ ಉಚ್ಚ ನ್ಯಾಯಾಲಯವು ಆದೇಶಿಸಿದಂತೆ ಹೆಚ್ಚಳಗೊಳಿಸಲ್ಪಟ್ಟಿರುವ ಪರಿಹಾರದ ಮೇಲಿನ ಬಡ್ಡಿ ಪಾವತಿಯ ಬಾಬ್ತು ₹ 2.95 ಕೋಟಿಯನ್ನು ಸೇರ್ಪಡೆ ಮಾಡದಿರುವುದು, ಜವಾಬ್ದಾರಿಗಳನ್ನು, ವೆಚ್ಚವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಮತ್ತು ತತ್ಪರಿಣಾಮವಾಗಿ ನಷ್ಟವನ್ನು ₹ 2.95 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿರುವುದು.

- ಮಾರ್ಚ್ 2021ರ ಅಂತ್ಯದ ಮುಂಚಿನ ಅವಧಿಯಲ್ಲಿ ಆದೇಶಿಸಲಾಗಿರುವಂತಹ ಮಂಡ್ಯ, ಮೈಸೂರು ಗ್ರಾಮೀಣ, ರಾಮನಗರ, ಚಿತ್ರದುರ್ಗ, ಕೋಲಾರ ಮತ್ತು ಬೆಂಗಳೂರು ಕೇಂದ್ರ ವಿಭಾಗಕ್ಕೆ ಸಂಬಂಧಿಸಿದ 68 ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಪರಿಹಾರಕ್ಕಾಗಿ ಮೀಸಲಿರಿಸದಿರುವುದು ಜವಾಬ್ದಾರಿಯನ್ನು ₹ 2.79 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಹಾಗೂ ಪ್ರಸಕ್ತ ಸಾಲಿಗೆ ನಷ್ಟವನ್ನು ಅಷ್ಟರ ಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿರುವುದು.

**ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ - ಆರ್ಥಿಕ ವರ್ಷ 2020-21)**

- ಕೆಯುಐಡಿಎಫ್‌ಸಿಯಿಂದ ಬೇಡಿಕೆ ಸಲ್ಲಿಸಲಾಗಿರುವಂತೆ ಜೆಎನ್ಎನ್‌ಯುಆರ್‌ಎಂ ಮಾರ್ಗಸೂಚಿಗಳ ಅಡಿಯಲ್ಲಿ ಆವರ್ತನಿಧಿಗಾಗಿ ಕಾಣಿಕೆಯಾಗಿ ಕೆಯುಐಡಿಎಫ್‌ಸಿಗೆ ಪಾವತಿಸಬೇಕಾದ ಮೊತ್ತ ₹ 124.68 ಕೋಟಿಯನ್ನು ಮೀಸಲು ಇರಿಸದಿರುವುದು ಜವಾಬ್ದಾರಿಯನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಹಾಗೂ ತತ್ಪರಿಣಾಮವಾಗಿ ನಷ್ಟವನ್ನು ₹ 124.68 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿರುವುದು.

- ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಕಟ್ಟಡ

ಮತ್ತು ಇತರ ನಿರ್ಮಾಣ ಸೆಸ್ಸು ಬಾಬ್ತು ಪಾವತಿಯ ವಿಳಂಬಕ್ಕಾಗಿ ವಿಧಿಸಲಾದ ಬಡ್ಡಿಯ ಸಂಬಂಧ ಪಾವತಿಸಬೇಕಾದ ಮೊತ್ತ ₹ 6.12 ಕೋಟಿಯನ್ನು ಮೀಸಲಿರಿಸದಿದ್ದುದರ ಫಲವಾಗಿ ಜವಾಬ್ದಾರಿಯನ್ನು, ವೆಚ್ಚಗಳನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ, ಮತ್ತು ₹ 6.12 ಕೋಟಿ ಮೊತ್ತದಷ್ಟು ನಷ್ಟವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿರುವುದು.

**ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ – ಆರ್ಥಿಕ ವರ್ಷ 2021–22)**

- ಮೆ. ಅಶೋಕ್ ಲೇಲ್ಯಾಂಡ್ ಕಂಪನಿಯ ಮೇಲೆ 450 ವಾಹನಗಳ ಕಡೆಗೆ ಕಡಿಮೆ ಪ್ರಮಾಣದಲ್ಲಿನ ಲೀಟರು ಒಂದಕ್ಕೆ ಕಿಮೀ ನೀಡಿಕೆ ಮತ್ತು ದೋಷಪೂರ್ಣ ಎಲ್ಇಡಿ ಬೋರ್ಡುಗಳು ಮತ್ತು ಧ್ವನಿ ಪ್ರಕಟಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ವಿಧಿಸಲಾಗಿದ್ದ ₹ 11.85 ಕೋಟಿ ಮೊತ್ತದ ದಂಡವನ್ನು ಜಾರಿಗೊಳಿಸುವಲ್ಲಿ ಆದಂತಹ ವಿಫಲತೆಯು ಸ್ವೀಕರಿಸಬೇಕಾದ ಕ್ಲೇಮುಗಳನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ, ಆದಾಯವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ನಷ್ಟವನ್ನು ₹ 11.85 ಕೋಟಿ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿರುವುದು.

- ಸಂಬಂಧಿಸಿದ ಇಲಾಖೆಗೆ ಪಾವತಿಸಬೇಕಾದ ಕಾರ್ಮಿಕ ಕಲ್ಯಾಣ ಸೆಸ್ಸು ಪಾವತಿಸುವಲ್ಲಿ ಉಂಟಾದ ವಿಳಂಬಕ್ಕಾಗಿ ವಿಧಿಸಲಾಗಿರುವ ಬಡ್ಡಿಯ ಮೊತ್ತ ₹ 5.51 ಕೋಟಿಯನ್ನು ಮೀಸಲಿರಿಸಿರದ ಫಲವಾಗಿ ಜವಾಬ್ದಾರಿ, ವೆಚ್ಚವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಮತ್ತು ತತ್ಪರಿಣಾಮವಾಗಿ ನಷ್ಟವನ್ನು ₹ 5.51 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿರುವುದು.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ – ಆರ್ಥಿಕ ವರ್ಷ 2021–22)**

- ಮೆ. ಟಾಟಾ ಮೋಟಾರ್ಸ್, ಮೆ. ಅಶೋಕ್ ಲೇಲ್ಯಾಂಡ್ ಮತ್ತು ಮೆ. ಕೆಎಂಎಸ್ ಬಸ್ ಬಾಡಿ ಬಿಲ್ಡರ್ಸ್ ಅವರ ಬಿಲ್ಲುಗಳಿಂದ ದಂಡ / ಸಮಾಪನ ಹಾನಿಗಳನ್ನು ನಿರ್ದಿಷ್ಟಪಡಿಸದ ಜವಾಬ್ದಾರಿಗಳ ಅಡಿಯಲ್ಲಿ ಸೇರ್ಪಡೆ ಮಾಡಿರುವುದು ಜವಾಬ್ದಾರಿಗಳನ್ನು ಅಧಿಕ ಪ್ರಮಾಣದಲ್ಲಿ ತೋರಿಸುವಲ್ಲಿ, ಆದಾಯವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಹಾಗು ತತ್ಪರಿಣಾಮವಾಗಿ ಪ್ರಸಕ್ತ ಸಾಲಿನ ನಷ್ಟವನ್ನು ₹ 5.66 ಕೋಟಿ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿರುವುದು.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ವಾಕರಸಾನಿ – ಆರ್ಥಿಕ ವರ್ಷ 2021–22)**

- ಸರ್ಕಾರದಿಂದ ಯಾವುದೇ ಔಪಚಾರಿಕ ಭರವಸೆಯಿಲ್ಲದೆಯೇ ಅನುಕ್ರಮವಾಗಿ ವಿದ್ಯಾರ್ಥಿಗಳ ರಿಯಾಯಿತಿ ಪಾಸುಗಳು ಮತ್ತು ಹಿರಿಯ ನಾಗರಿಕರ ರಿಯಾಯಿತಿಯ ಬಾಬ್ತು ಸ್ವೀಕರಿಸಬೇಕಾದ ಮೊತ್ತಗಳ ಅಡಿಯಲ್ಲಿ ₹ 52.51 ಕೋಟಿ ಮತ್ತು ₹ 26.34 ಕೋಟಿಯನ್ನು ಸೇರ್ಪಡೆ ಮಾಡಿರುವುದು, ಅವುಗಳ ಮರುಪಾವತಿಯು ಬಾಕಿಗಳಾಗಿ ಉಳಿದಿರುವುದು ಚಾಲ್ತಿ ಆಸ್ತಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೋರಿಸುವಲ್ಲಿ, ವೆಚ್ಚವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಹಾಗೂ ನಷ್ಟವನ್ನು ₹ 78.85 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತೋರಿಸುವಲ್ಲಿ ಪರಿಣಮಿಸಿರುವುದು.

## 2.6 ಲೆಕ್ಕಪತ್ರ ಮಾನದಂಡಗಳು / ಭಾರತೀಯ ಲೆಕ್ಕಪತ್ರ ಮಾನದಂಡಗಳು

***ಲೆಕ್ಕಪತ್ರ ಮಾನದಂಡಗಳು /ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅನುಸರಿಸದಿರುವುದು***

**2.6.1** ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129 (1). 132 ಮತ್ತು 133ರ ಜೊತೆಯಲ್ಲಿ ಓದಲ್ಪಡುವ ಪರಿಚ್ಛೇದ 469ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸುವ ಮೂಲಕ. ಕೇಂದ್ರ ಸರ್ಕಾರವು ಲೆಕ್ಕಪತ್ರ ಮಾನದಂಡ 1ರಿಂದ 7 ಮತ್ತು 9ರಿಂದ 29, ಇವುಗಳನ್ನು ನಿರ್ದಿಷ್ಟಪಡಿಸಿರುವುದು. ಅಲ್ಲದೆಯೇ, ಕೇಂದ್ರ ಸರ್ಕಾರವು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ (ಕಾಲಾನುಕಾಲಕ್ಕೆ ತಿದ್ದುಪಡಿಯಾಗಿರುವಂತೆ) ಮೂಲಕ 41 ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕೂಡ ಅಧಿಸೂಚಿಸಿರುವುದು.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ತಮ್ಮ ಪೂರಕ ಲೆಕ್ಕಪರಿಶೋಧನೆಗಳ ಮೂಲಕ, ಕೆಲವು ಕಂಪನಿಗಳು ಲೆಕ್ಕಪತ್ರ ಮಾನದಂಡಗಳು / ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅನುಸರಿಸಿರುವುದಿಲ್ಲ, ಈ ಬಗ್ಗೆ **ಕೋಷ್ಟಕ ಸಂಖ್ಯೆ 2.2**ರಲ್ಲಿ ನೀಡಲಾಗಿರುವಂತೆ ಸಂಬಂಧಿತ ಕಂಪನಿಗಳ ಶಾಸನಬದ್ಧ ಲೆಕ್ಕಪರಿಶೋಧಕರುಗಳು ವರದಿ ಮಾಡಿರುವುದಿಲ್ಲ ಎಂಬುದನ್ನೂ ಸಹ ಗಮನಿಸಿರುವರು.

**ಕೋಷ್ಟಕ ಸಂಖ್ಯೆ 2.2: ಲೆಕ್ಕಪತ್ರ ಮಾನದಂಡಗಳು / ಭಾರತೀಯ ಲೆಕ್ಕವನ್ನಿಡುವಿಕೆ ಮಾನದಂಡಗಳನ್ನು ಅನುಸರಿಸದಿರುವುದು**

| ಕ್ರಮ ಸಂಖ್ಯೆ | ಲೆಕ್ಕವನ್ನಿಡುವಿಕೆ ಮಾನದಂಡಗಳು /Ind AS ಸಂಖ್ಯೆ ಮತ್ತು ವಿವರಣೆ | | ಕಂಪನಿಯ ಹೆಸರು | ಮಾರ್ಗಾಂತರಣ |
|---|---|---|---|---|
| 1 | Ind AS 1 | ಹಣಕಾಸು ತ:ಖ್ತೆಗಳನ್ನು ಪ್ರಸ್ತುತಪಡಿಸುವುದು | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ | ನಿಗಮವು ಬಾಕಿಗಳನ್ನು ಲೆಕ್ಕ ಹಾಕುವಾಗ ಜಮೆ (ಕ್ರೆಡಿಟ್) ಮತ್ತು ಖರ್ಚು (ಡೆಬಿಟ್) ಬಾಕಿಗಳನ್ನು ನಿವ್ವಳಗೊಳಿಸಿದೆ.ಬಾಕಿಗಳನ್ನು ನಿವ್ವಳಗೊಳಿಸುವುದನ್ನು ಇಂಡ್ಎಎಸ್1ರ ಅವಶ್ಯಕತೆಗಳ ಅನುಸಾರ ಆಗಿರಲಿಲ್ಲ. |
| 2 | Ind AS 23 | ಸಾಲ ಪಡೆಯುವ ಸಲುವಾಗಿನ ವೆಚ್ಚಗಳು | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | ಕಂಪನಿಯು 2020-22ರ ಅವಧಿಗೆ ಸಾಲದ ಮೇಲಿನ ಬಡ್ಡಿ ಶುಲ್ಕಗಳನ್ನು Ind AS 23ರ ಅನುಸಾರ ಖರ್ಚಿಗೆ ಹಾಕುವ ಬದಲು ಬಂಡವಾಳೀಕರಿಸಿರುವುದು. |
| 3 | Ind AS 36 | ಆಸ್ತಿಗಳು ದುರ್ಬಲಗೊಳ್ಳುವಿಕೆ | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | ಕಂಪನಿಯು ತನ್ನ ಆಸ್ತಿಗಳನ್ನು ದುರ್ಬಲಗೊಳಿಸಿರುವ /ಕಳಚಿಹಾಕಿರುವ ಪ್ರಕರಣಗಳಲ್ಲಿ ದುರ್ಬಲಗೊಳಿಸಿರುವ ನಷ್ಟಗಳನ್ನು ವಿಶ್ಲೇಷಿಸುವಲ್ಲಿ ವಿಫಲಗೊಂಡಿದ್ದಿತು, ಇದು Ind AS 36ರ ಅನುಸಾರ ಆಗಿರಲಿಲ್ಲ. |
| 4 | AS 5 | ಪ್ರಸಕ್ತ ಅವಧಿಗೆ ನಿವ್ವಳ ಲಾಭ ಅಥವಾ ನಷ್ಟ, ಪೂರ್ವಾವಧಿ ಐಟಂಗಳು ಮತ್ತು ಲೆಕ್ಕವನ್ನಿಡುವಿಕೆ ಕಾರ್ಯನೀತಿಗಳಲ್ಲಿನ ಬದಲಾವಣೆಗಳು | ಶ್ರೀ ಬಾಬು ಜಗಜೀವನ ರಾಮ್ ಚರ್ಮ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ | ಕಂಪನಿಯು ಸವಕಳಿಯ ಮೇಲಿನ ಲೆಕ್ಕವನ್ನಿಡುವಿಕೆಯ ಕಾರ್ಯನೀತಿಯಲ್ಲಿನ ಬದಲಾವಣೆಯಿಂದ ಉಂಟಾದ ಪ್ರಭಾವ ಮತ್ತು ಹೊಂದಾಣಿಕೆಗಳನ್ನು ಬಹಿರಂಗಪಡಿಸಲಿಲ್ಲ. ಇದು AS 5ರ ಅನುಸಾರ ಆಗಿರುವುದಿಲ್ಲ. |

*ಮೂಲ: ಲೆಕ್ಕಪರಿಶೋಧನೆಯಲ್ಲಿ ಸಂಗ್ರಹಿಸಲಾಗಿರುವ ಮಾಹಿತಿ*

***ಶಾಸನಬದ್ಧ ನಿಗಮಗಳಿಂದ ಲೆಕ್ಕವನ್ನಿಡುವಿಕೆ ಪ್ರಮಾಣ 15ರ ಅನುಪಾಲನೆ ಆಗದಿರುವುದು***

**2.6.2** ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳ ಬಾಧ್ಯತೆಯನ್ನು ವಾಸ್ತವಿಕ ಮೌಲ್ಯಮಾಪನದ ಅನುಸಾರ ಲೆಕ್ಕಾಚಾರ ಮಾಡತಕ್ಕದ್ದು ಎಂಬುದಾಗಿ ಲೆಕ್ಕಪತ್ರ ಮಾನದಂಡ 15 ತಿಳಿಸುತ್ತದೆ. ವಾಸ್ತವಿಕ ಮೌಲ್ಯಮಾಪನದ ಅನುಪಸ್ಥಿತಿಯಲ್ಲಿ, ಕಂಪನಿಗಳು ಮಾಡಿರುವಂತಹ ಗ್ರಾಚ್ಯುಟಿ ಮತ್ತು ರಜೆ ನಗದೀಕರಣ ಸಂಬಂಧಿತ ಹಣ ಮೀಸಲಾತಿಯ ಸಮರ್ಪಕತೆಯನ್ನು ನಾಲ್ಕು ಶಾಸನಬದ್ಧ ನಿಗಮಗಳ (ಕರಾರಸಾಸಂ, ಬಿಎಂಟಿಸಿ, ಕಕರಸಾಸಂ ಮತ್ತು ವಾಕರಸಾಸಂ) ಯಾವುದೇ ಆರು ಹಣಕಾಸು ತ:ಖ್ತೆಗಳಲ್ಲಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಲೆಕ್ಕಪತ್ರ ಮಾನದಂಡ 15ರ ಅನುವುಗಳನ್ನು ಪಾಲನೆ ಮಾಡದಿರುವುದರ ಬಗ್ಗೆ ಪ್ರತೀ ವರ್ಷವೂ ನಿರಂತರವಾಗಿ ಟೀಕೆಟಿಪ್ಪಣಿ ಮಾಡಲಾಗುತ್ತಿದೆ.

## 2.7 ವ್ಯವಸ್ಥಾಪನಾ ಪತ್ರಗಳು

ಲೆಕ್ಕಪರಿಶೋಧಕರು ಮತ್ತು ಸಾಂಸ್ಥಿಕ ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊತ್ತಿರುವವರ ನಡುವೆ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಿಂದ ಉದ್ಭವಿಸುವ ಲೆಕ್ಕಪರಿಶೋಧನೆಯ ವಿಷಯಗಳಿಗೆ ಸಂಬಂಧಿಸಿದಂತೆ ಸಂವಹನವನ್ನು ಸ್ಥಾಪಿಸುವುದು ಹಣಕಾಸು ಲೆಕ್ಕಪರಿಶೋಧನೆಯ ಧ್ಯೇಯೋದ್ದೇಶಗಳಲ್ಲಿ ಒಂದಾಗಿರುತ್ತದೆ.

ಸಾರ್ವಜನಿಕ ವಲಯದ ಉದ್ದಿಮೆಗಳ ಹಣಕಾಸು ತ:ಖ್ತೆಗಳಲ್ಲಿ ಗಮನಿಸಲಾದಂತಹ ವಿಷಯಕ ಅಂಶಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಅಧಿನಿಯಮದ ಪರಿಚ್ಛೇದ 143 (6)(ಬಿ) ಅಡಿಯಲ್ಲಿ ಟೀಕೆಟಿಪ್ಪಣಿಗಳಾಗಿ ವರದಿ ಮಾಡಲಾಗಿದ್ದಿತು. ಈ ಟೀಕೆಟಿಪ್ಪಣಿಗಳ ಜೊತೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ ಹಣಕಾಸು ವರದಿಗಳು ಅಥವಾ ವರದಿ ಮಾಡುವ ಪ್ರಕ್ರಿಯೆಯಲ್ಲಿ ಗಮನಿಸಲಾದಂತಹ ನಿಯಮಬಾಹಿರತೆಗಳು ಮತ್ತು ಕೊರತೆಗಳು ಅಥವಾ ಲೋಪದೋಷಗಳನ್ನೂ ಸಹ ವ್ಯವಸ್ಥಾಪನೆ /ಆಡಳಿತ ಮಂಡಳಿಗೆ ವ್ಯವಸ್ಥಾಪನಾ ಪತ್ರಗಳ ಮೂಲಕ ಸರಿಪಡಿಸುವಿಕೆ ಕ್ರಮಗಳಿಗಾಗಿ ಕಳುಹಿಸಿಕೊಡಲಾಗಿದ್ದಿತು. ಪ್ರಸಕ್ತ ಸಾಲಿನಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರು 27 ಸರ್ಕಾರಿ ಕಂಪನಿಗಳು ಮತ್ತು ನಾಲ್ಕು ಶಾಸನಬದ್ಧ ನಿಗಮಗಳಿಗೆ 33 ಹಣಕಾಸು ತ:ಖ್ತೆಗಳಲ್ಲಿ ಗಮನಿಸಲಾದಂತಹ ಲೆಕ್ಕವನ್ನಿಡುವಿಕೆಯ ಪರಿಗಣನೆ ಮತ್ತು ಕಾರ್ಯನೀತಿಗಳ ಬಗ್ಗೆ ಲೋಪದೋಷಗಳ ಮೇಲೆ, ಬಹಿರಂಗಪಡಿಸುವಿಕೆಗಳ ಮೇಲೆ ಲೆಕ್ಕವನ್ನಿಡುವಿಕೆ ಮಾನದಂಡಗಳನ್ನು ಅನುಸರಿಸದಿರುವುದು ಹಾಗೂ ಹಣಕಾಸು ತ:ಖ್ತೆಗಳಲ್ಲಿ ಗಮನಿಸಲಾಗಿದ್ದಂತಹ ತಪ್ಪುಗಳು, ಮುಂತಾದವುಗಳ ಸರಿಪಡಿಸುವಿಕೆಯ ಮೇಲೆ ಲೆಕ್ಕಪರಿಶೋಧನೆಗೆ ನೀಡಲಾಗಿದ್ದಂತಹ ಭರವಸೆಗಳನ್ನು ಪಾಲಿಸದಿರುವುದು, ಮುಂತಾದವುಗಳಿಗೆ ಸಂಬಂಧಿಸಿದಂತೆ ವ್ಯವಸ್ಥಾಪನಾ ಪತ್ರಗಳನ್ನು ನೀಡಿದ್ದರು.

**ಶಿಫಾರಸುಗಳು:**

3. ***ಲೆಕ್ಕಪತ್ರಗಳ ಸಲ್ಲಿಕೆಯಲ್ಲಿ ಉಂಟಾಗುವ ವಿಳಂಬಕ್ಕೆ, ಸರ್ಕಾರವು ಸಂಬಂಧಿತ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯವರು/ಮುಖ್ಯ ವ್ಯವಸ್ಥಾಪಕ ನಿರ್ದೇಶಕರುಗಳು/ಮುಖ್ಯ ಹಣಕಾಸು ಅಧಿಕಾರಿಯವರುಗಳ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸುವುದನ್ನು ಪರಿಗಣಿಸಬೇಕು ಹಾಗೂ ಅವರುಗಳ ಸೇವಾ ಅವಧಿಯನ್ನು ಮತ್ತಷ್ಟು ವಿಸ್ತರಿಸಲು ಅಥವಾ ಇತರೆ ಕಂಪನಿಗಳಲ್ಲಿ ಮುಖ್ಯ ಕಾರ್ಯನಿರ್ವಹಣಾ ಹೊಸದಾಗಿ ನೇಮಕ ಮಾಡುವ ಸಲುವಾಗಿ ಲೆಕ್ಕಪತ್ರಗಳನ್ನು ಸಕಾಲದಲ್ಲಿ ಸಲ್ಲಿಸುವುದನ್ನು ಒಂದು ಮಾನದಂಡವನ್ನಾಗಿ ಪರಿಗಣಿಸಬೇಕು.***

4. ***ಸರ್ಕಾರವು ಎಲ್ಲಾ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳನ್ನು ಅಂತಿಮಗೊಳಿಸಲು ಮತ್ತು ಸಲ್ಲಿಸಲು ಶಾಸನಬದ್ಧ ಗಡುವುಗಳನ್ನು ಅನುಪಾಲಿಸುವುದನ್ನು ಖಚಿತಪಡಿಸಿಕೊಳ್ಳಲು ಒಂದು ಸದೃಢವಾದಂತಹ ಮತ್ತು ಉತ್ತರದಾಯಿತ್ವ ಅಥವಾ ಹೊಣೆಗಾರಿಕೆಯು ಇರುವಂತಹ ಒಂದು ವ್ಯವಸ್ಥೆಯನ್ನು ಸ್ಥಾಪಿಸಬೇಕು.***

5. ***ಸರ್ಕಾರವು ಸಕಾಲದಲ್ಲಿ ಲೆಕ್ಕಪತ್ರಗಳನ್ನು ಸಿದ್ಧಪಡಿಸದಿರುವುದಕ್ಕಾಗಿ ದಂಡಗಳು ಮತ್ತು/ಅಥವಾ ಸೆರೆವಾಸವನ್ನು ವಿಧಿಸುವ ಕಂಪನಿಗಳ ಅಧಿನಿಯಮದ ಪರಿಚ್ಛೇದ 129 (7) ಅನ್ವಯಗೊಳಿಸುವುದನ್ನು ಪರಿಗಣಿಸಬಹುದು.***

# ಅಧ್ಯಾಯ - III

## ಸಾಂಸ್ಥಿಕ ಆಡಳಿತ ನಿರ್ವಹಣೆ

# ಅಧ್ಯಾಯ – III

## ಸಾಂಸ್ಥಿಕ ಆಡಳಿತ ನಿರ್ವಹಣೆ

### 3.1 ಪೀಠಿಕೆ

***ಕಂಪನಿಗಳ ಅಧಿನಿಯಮ, 2013ರಲ್ಲಿರುವ ಅನುವುಗಳು***

**3.1.1** ಕಂಪನಿಗಳ ಅಧಿನಿಯಮ, 1956ರ ಬದಲಾಗಿ ಕಂಪನಿಗಳ ಅಧಿನಿಯಮ, 2013 (ಅಧಿನಿಯಮ) ಇದನ್ನು 29 ಆಗಸ್ಟ್ 2013ರಂದು ಜಾರಿಗೊಳಿಸಲಾಯಿತು. ಅಲ್ಲದೆಯೇ, 2014 ಸಾಲಿನಲ್ಲಿ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು (ಎಂಸಿಎ) ಸಹ ವ್ಯವಸ್ಥಾಪನೆ ಮತ್ತು ಆಡಳಿತ ನಿರ್ವಹಣೆ, ನಿರ್ದೇಶಕರುಗಳ ನೇಮಕಾತಿ ಮತ್ತು ಅವರುಗಳ ಅರ್ಹತೆ, ನಿರ್ದೇಶಕರುಗಳ ಮಂಡಳಿಯ ಸಭೆಗಳು ಮತ್ತು ಅದರ ಅಧಿಕಾರಗಳು ಮತ್ತು ಲೆಕ್ಕಪತ್ರಗಳ ಮೇಲೆ ವಿವಿಧ ನಿಯಮಗಳನ್ನು[45] (ಕಾಲಕಾಲಕ್ಕೆ ತಿದ್ದುಪಡಿ ಮಾಡಿರುವಂತೆ) ಅಧಿಸೂಚನೆಗಳನ್ನು ಹೊರಡಿಸಿರುವುದು.

ಅಧಿನಿಯಮವು, ನಿಯಮಗಳ ಜೊತೆಗೆ, ಸಾಂಸ್ಥಿಕ ಆಡಳಿತ ನಿರ್ವಹಣೆಗೆ ಒಂದು ಸದೃಢ ಚೌಕಟ್ಟನ್ನು ಒದಗಿಸುತ್ತದೆ. ನಿರ್ದಿಷ್ಟಪಡಿಸಲಾಗಿರುವ ಮಾನದಂಡಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟಂತೆ ಇನ್ನಿತರೆ ವಿಷಯಗಳ ಜೊತೆಗೆ, ಈ ಕೆಳಗಿನ ಅನುವುಗಳನ್ನು ಮಾಡಿರುತ್ತದೆ:

- ನಿರ್ದೇಶಕರುಗಳ ಮಂಡಳಿಯಲ್ಲಿ ಕನಿಷ್ಠ ಸಂಖ್ಯೆಯ ನಿರ್ದೇಶಕರುಗಳನ್ನು ಹೊಂದಿರುವುದು;
- ಕಂಪನಿಯ ನಿರ್ದೇಶಕರುಗಳ ಮಂಡಳಿಯಲ್ಲಿ ಸ್ವತಂತ್ರ ನಿರ್ದೇಶಕರುಗಳ ಕಡ್ಡಾಯ ನೇಮಕಾತಿ, ಅವರ ತರಬೇತಿ, ಮತ್ತು ಅವರು ಸಭೆಗಳಲ್ಲಿ ಭಾಗವಹಿಸುವುದು;
- ಕಂಪನಿಯ ನಿರ್ದೇಶಕರುಗಳ ಮಂಡಳಿಯಲ್ಲಿ ಮಹಿಳಾ ನಿರ್ದೇಶಕರುಗಳನ್ನು ಕಡ್ಡಾಯವಾಗಿ ನೇಮಕ ಮಾಡುವುದು;
- ಲೆಕ್ಕಪರಿಶೋಧನಾ ಸಮಿತಿ, ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ, ಇತ್ಯಾದಿ ಮಂಡಳಿಯ ಉಪ–ಸಮಿತಿಗಳನ್ನು ಕಡ್ಡಾಯವಾಗಿ ರಚಿಸುವುದು;
- ಪ್ರತೀ ವರ್ಷವೂ ಕನಿಷ್ಠ ಸಂಖ್ಯೆಯ ಸಭೆಗಳನ್ನು ನಡೆಸುವುದು ಮತ್ತು ಅವುಗಳ ಕಾಲಮಿತಿ; ಮತ್ತು
- ರೆಜಿಸ್ಟರುಗಳ ನಿರ್ವಹಣೆ, ವಾರ್ಷಿಕ ಸಲ್ಲಿಕೆಗಳನ್ನು ಸಲ್ಲಿಸುವಿಕೆ ಇತ್ಯಾದಿಯಂತಹ ವ್ಯವಸ್ಥಾಪನೆ ಮತ್ತು ಆಡಳಿತ ವಿಷಯಗಳು.

ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಕಾಲಕಾಲಕ್ಕೆ ನಿಯಮಗಳಿಗೆ ತಿದ್ದುಪಡಿಗಳನ್ನು ಮಾಡುತ್ತ ಆದೇಶಗಳು/ಸುತ್ತೋಲೆಗಳನ್ನು ಹೊರಡಿಸುತ್ತಿದೆ (ಜೂನ್ 2015/ ಜುಲೈ 2017/ ಜನವರಿ 2019 ಇತ್ಯಾದಿ) ಮತ್ತು ಅಧಿನಿಯಮದ ಕೆಲವು ನಿರ್ದಿಷ್ಟ ಅನುವುಗಳು ಅಥವಾ ಮಾರ್ಪಾಟು ಮಾಡಿರುವ ಅನುವುಗಳಿಂದ ಸರ್ಕಾರಿ ಕಂಪನಿಗಳಿಗೆ ವಿನಾಯಿತಿ ನೀಡುತ್ತಿರುವುದು.

---

[45] (1) ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ ನಿರ್ವಹಣೆ) ನಿಯಮಗಳು, 2014, (2) ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ಅವರುಗಳ ಅರ್ಹತೆ) ನಿಯಮಗಳು, 2014, (3) ಕಂಪನಿಗಳ (ನಿರ್ದೇಶಕರುಗಳ ಮಂಡಳಿಯ ಸಭೆಗಳು ಮತ್ತು ಅದರ ಅಧಿಕಾರಗಳು) ನಿಯಮಗಳು, 2014 (4) ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014, ಇತ್ಯಾದಿ.

***ಕಾರ್ಪೋರೇಟ್ ಆಡಳಿತದ ಮೇಲಿನ ಸೆಬಿ ಮಾರ್ಗದರ್ಶನಗಳು***

**3.1.2** ಅಧಿನಿಯಮವನ್ನು ಜಾರಿಗೊಳಿಸಿದ ನಂತರ, ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಳಿಯು (ಸೆಬಿ) ಸಾಂಸ್ಥಿಕ ವ್ಯವಸ್ಥಾಪನೆ/ಆಡಳಿತಗಳಿಗೆ ಸಂಬಂಧಿತ ಅನುವುಗಳನ್ನು ಒಳಗೊಂಡಿರುವ ಷೇರು ವಿನಿಮಯ ಕೇಂದ್ರದ ಪಟ್ಟಿ ಮಾಡುವ ಒಪ್ಪಂದದ ಪರಿಚ್ಛೇದ 49ನ್ನು ಪರಿಷ್ಕರಿಸಿತು. ಅದರ ಸುತ್ತೋಲೆಗಳು ದಿನಾಂಕ 17 ಏಪ್ರಿಲ್ 2014 ಮತ್ತು 15 ಸೆಪ್ಟೆಂಬರ್ 2014ರ ಅನುಸಾರ ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ಸೇರಿರುವ ಕಂಪನಿಗಳಿಗೆ ಈ ಅನುವುಗಳ ಅನುಪಾಲನೆಯು ಕಡ್ಡಾಯವಾಗಿದ್ದಿತ್ತು.

02 ಸೆಪ್ಟೆಂಬರ್ 2015ರಂದು, ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಳಿಯು (ಸೆಬಿ) ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಷೇರು ವಿನಿಮಯ ಕೇಂದ್ರದ ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಂತ್ರಣಗಳು, 2015ನ್ನು ಅಧಿಸೂಚನೆ ಹೊರಡಿಸಿತು ಮತ್ತು ಜೊತೆಗೆ ಎಲ್ಲಾ ಪ್ರಕಾರದ ಭದ್ರತೆಗಳಿಗೆ ಏಕಪ್ರಕಾರವಾದಂತಹ ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ಸೇರಿಸುವ ಒಪ್ಪಂದದ ನಮೂನೆಯನ್ನು (ಫೆಬ್ರವರಿ 2023) ನೀಡಿತು, ಇದರ ಅನುಸಾರ ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ಸೇರಿರುವ ಕಂಪನಿಯು ಭಾರತದ ಭದ್ರತೆಗಳು ಮತ್ತು ವಿನಿಮಯ ಮಂಡಳಿಯು (ಷೇರು ವಿನಿಮಯ ಕೇಂದ್ರದ ಪಟ್ಟಿ ಮಾಡುವ ಬದ್ಧತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಂತ್ರಣಗಳು, 2015ರ ಅನುವುಗಳನ್ನು ಪಾಲಿಸಬೇಕಿದ್ದಿತು.

***ಸಾಂಸ್ಥಿಕ ಸಂಸ್ಥೆಗಳ ಆಡಳಿತ ನಿರ್ವಹಣೆಗಾಗಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಮಾರ್ಗಸೂಚಿಗಳು***

**3.1.3** ಕ್ಯಾಬಿನೆಟ್ ಉಪ ಸಮಿತಿಯ ಶಿಫಾರಸುಗಳ ಅನುಸಾರ (ಫೆಬ್ರವರಿ 2021), ಕರ್ನಾಟಕ ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಇಲಾಖೆ (ಡಿಪಿಇ)ಯನ್ನು ರದ್ದುಗೊಳಿಸಿತು (ಮೇ 2022) ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ನಿರ್ವಹಿಸುತ್ತಿದ್ದ ಎಲ್ಲಾ ವಿಷಯಗಳನ್ನು ಹಣಕಾಸು ಇಲಾಖೆಯೊಂದಿಗೆ ವಿಲೀನಗೊಳಿಸಲಾಯಿತು. ವಿಲೀನದ ಪರಿಣಾಮವಾಗಿ, ಹಣಕಾಸು ಇಲಾಖೆಯಿಂದ ಸಾಂಸ್ಥಿಕ ವ್ಯವಹಾರಗಳ ಆಡಳಿತ ನಿರ್ವಹಣೆಯ ಕುರಿತು ಮಾರ್ಚ್ 2023ರ ತನಕ ಜನವರಿ 2023ರಲ್ಲಿ ಹೊರಡಿಸಿದ ಪ್ರತೀ ವರ್ಷ ಲೆಕ್ಕಪತ್ರಗಳನ್ನು ಅಂತಿಮಗೊಳಿಸಲು ಮತ್ತು ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಕಾಲಮಿತಿ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಸುತ್ತೋಲೆಯನ್ನು ಹೊರತುಪಡಿಸಿ ಯಾವುದೇ ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸಿರುವುದಿಲ್ಲ.

***ಕೆಲವು ಆಯ್ದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಸಾಂಸ್ಥಿಕ ಸಂಸ್ಥೆಗಳ ಆಡಳಿತ ನಿರ್ವಹಣೆಗೆ ಸಂಬಂಧಿತ ಅನುವುಗಳನ್ನು ಪಾಲಿಸಿರುವುದರ ಸಮೀಕ್ಷೆ***

**3.1.4** 31 ಮಾರ್ಚ್ 2023ರಲ್ಲಿದ್ದಂತೆ ಕರ್ನಾಟಕದಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯಲ್ಲಿ 127 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಇದ್ದವು, ಇದರಲ್ಲಿ ಆರು ಶಾಸನಬದ್ಧ ನಿಗಮಗಳು ಮತ್ತು 121 ಸರ್ಕಾರಿ / ಸರ್ಕಾರಿ ನಿಯಂತ್ರಣದ ಕಂಪನಿಗಳು (ಹದಿನಾಲ್ಕು ನಿಷ್ಕ್ರಿಯ ಕಂಪನಿಗಳೂ ಸೇರಿದಂತೆ) ಇದ್ದವು, ಜೊತೆಗೆ ಮೈಸೂರು ಕಾಗದ ಕಾರ್ಖಾನೆ ನಿಯಮಿತವು ಏಕಮಾತ್ರ ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿಯಲ್ಲಿ ಸೇರಿರುವ ಕಂಪನಿ ಆಗಿದ್ದಿತ್ತು. ಇವುಗಳ ಪೈಕಿ, ವಿವಿಧ ಇಲಾಖೆಗಳ ಆಡಳಿತಾತ್ಮಕ ನಿಯಂತ್ರಣದಲ್ಲಿದ್ದಂತಹ 26 ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ಸೇರಿರದ ಸರ್ಕಾರಿ[46] / ಸರ್ಕಾರಿ ನಿಯಂತ್ರಣದ ಕಂಪನಿಗಳನ್ನು[47] (***ಅನುಬಂಧ – 9***), ಈ ಕೆಳಗೆ **ಕೋಷ್ಟಕ ಸಂಖ್ಯೆ 3.1**ರಲ್ಲಿ ಸೂಚಿಸಿರುವಂತೆ, ನಿರ್ದೇಶಕರುಗಳ ಮಂಡಳಿ/ಸಮಿತಿಗಳ ರಚನೆ ಮತ್ತು ಆಂತರಿಕ ಲೆಕ್ಕಪರಿಶೋಧನಾ ವಿಧಾನಕ್ಕೆ ಸಂಬಂಧಿಸಿದಂತೆ ಅನ್ವಯವಾಗುವಂತಹ ಕನಿಷ್ಠ ಒಂದು ಮಾನದಂಡವನ್ನು ಪೂರೈಸುವುದರ

---

[46] ಖಾಸಗಿ ನಿಯಮಿತ ಕಂಪನಿಗಳಾಗಿ ನೋಂದಣಿಯಾಗಿರುವ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು (ಡಿಯುಬಿಸಿಡಿಸಿಎಲ್ ಮತ್ತು ಕೆಆರ್‌ಐಡಿಎಲ್) ಒಳಗೊಂಡಿರುತ್ತದೆ.

[47] ಸರ್ಕಾರೇತರ ಕಂಪನಿಗಳಾಗಿ ನೋಂದಣಿಯಾಗಿರುವುದು.

ಮೇಲಿನ ಸಾಂಸ್ಥಿಕ ಆಡಳಿತಗಳಿಗೆ ಸಂಬಂಧಿತ ಅನುವುಗಳ ಅನುಪಾಲನೆಯ ಸಮೀಕ್ಷೆಗಾಗಿ ಆಯ್ಕೆಮಾಡಲಾಯಿತು[48]:

**ಕೋಷ್ಟಕ ಸಂಖ್ಯೆ 3.1: ಅನುಪಾಲನೆಗಾಗಿ ಅನ್ವಯವಾಗುವ ಮಾನದಂಡಗಳ ತ:ಖ್ತೆ**

| ಕ್ರಮ ಸಂಖ್ಯೆ | ವರ್ಗ | ಪಾವತಿ ಸಲ್ಪಟ್ಟಿರುವ ಬಂಡವಾಳ | ಬಾಕಿ ಉಳಿದಿರುವ ಸಾಲಗಳು | ವಹಿವಾಟು |
|---|---|---|---|---|
| 1 | ಸ್ವತಂತ್ರ ನಿರ್ದೇಶಕರುಗಳು | ₹ 10 ಕೋಟಿ ಮತ್ತು ಮೇಲ್ಪಟ್ಟು | ₹ 50 ಕೋಟಿ ಮತ್ತು ಮೇಲ್ಪಟ್ಟು | ₹ 100 ಕೋಟಿ ಮತ್ತು ಮೇಲ್ಪಟ್ಟು |
| 2 | ಲೆಕ್ಕಪರಿಶೋಧನಾ ಸಮಿತಿ | | | |
| 3 | ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿ | | | |
| 4 | ಮಹಿಳಾ ನಿರ್ದೇಶಕರುಗಳು | ₹ 100 ಕೋಟಿ ಮತ್ತು ಮೇಲ್ಪಟ್ಟು | --- | ₹ 300 ಕೋಟಿ ಮತ್ತು ಮೇಲ್ಪಟ್ಟು |
| 5 | ಆಂತರಿಕ ಲೆಕ್ಕಪರಿಶೋಧನೆ | ₹ 50 ಕೋಟಿ ಮತ್ತು ಮೇಲ್ಪಟ್ಟು | ₹ 100 ಕೋಟಿ ಮತ್ತು ಮೇಲ್ಪಟ್ಟು | ₹ 200 ಕೋಟಿ ಮತ್ತು ಮೇಲ್ಪಟ್ಟು |

***ಮೂಲ: ಲೆಕ್ಕಪರಿಶೋಧನೆಯಲ್ಲಿ ಸಂಗ್ರಹಿಸಿರುವ ಮಾಹಿತಿ/ದತ್ತಾಂಶ***

ಸಾಂಸ್ಥಿಕ ಆಡಳಿತ ನಿರ್ವಹಣೆಗಳಿಗೆ ಸಂಬಂಧಿತ ಅನುವುಗಳ ಅನುಪಾಲನೆಯ ಮೇಲೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಈ ಕೆಳಗೆ ತಿಳಿಸಲಾಗಿರುವುದು.

## 3.2 ಕಂಪನಿಯ ಸ್ಥಾಪನೆಗೆ ಸಂಬಂಧಿತ ವಿಷಯಗಳು

ಕಂಪನಿಯ ರಚನೆ, ಉದ್ದೇಶಗಳು, ಅಧಿಕಾರಗಳೂ ಮತ್ತು ಇತಿಮಿತಿಗಳನ್ನು ವಿವರಿಸುವ ಕಾನೂನುಬದ್ಧ ದಾಖಲೆ ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಹಾಗೂ ಕಂಪನಿಯ ಕಾರ್ಯಾಚರಣೆಗಳಿಗಾಗಿ ನಿಯಮಗಳು ಮತ್ತು ನಿಬಂಧನೆಗಳನ್ನು ನಿರ್ದಿಷ್ಟಪಡಿಸಿರುವ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್

***ನಿರ್ದಿಷ್ಟಪಡಿಸಿರುವ ನಮೂನೆಗಳನ್ನು ಅಳವಡಿಸಿಕೊಳ್ಳುವಿಕೆ***

**3.2.1** ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ಇವುಗಳು ಕಂಪನಿಯು ಷೇರುಗಳಿಂದ ನಿಯಮಿತವಾಗಿರುವುದಕ್ಕೆ ಅನ್ವಯಗೊಳ್ಳುವ ರೀತಿಯಲ್ಲಿ ಅನುಕ್ರಮವಾಗಿ ಅಧಿನಿಯಮದ ಟೇಬಲ್ಲು ಎ ಮತ್ತು ಟೇಬಲ್ಲು ಎಫ್‌ನಲ್ಲಿ ನಿರ್ದಿಷ್ಟಪಡಿಸಿರುವಂತಹ ನಮೂನೆಗಳಲ್ಲಿ ಇರತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 4 (6) ಮತ್ತು ಪರಿಚ್ಛೇದ 5 (6) ತಿಳಿಸುತ್ತದೆ

ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಬೆಸ್ಕಾಂ, ಕೆಎಸ್‌ಡಿಎಲ್, ಕೆಎಸ್‌ಎಂಸಿಎಲ್, ಹೆಚ್.ಜಿ.ಎಮ್.ಎಲ್,.ಕೆಆರ್‌ಡಿಸಿಎಲ್, ಕೆಎನ್‌ಎನ್‌ಎಲ್ ಮತ್ತು ಕೆಎಫ್‌ಸಿಎಸ್‌ಸಿ) ತಮ್ಮ ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ಇವುಗಳನ್ನು ನಿರ್ದಿಷ್ಟ ನಮೂನೆಗೆ ಅಳವಡಿಸಿಕೊಳ್ಳುವ ಸಲುವಾಗಿ ಬದಲಾಯಿಸಿಕೊಳ್ಳುವ ಮೂಲಕ ಶಾಸನಬದ್ಧ ಅನುವುಗಳ ಅನುಪಾಲನೆಯನ್ನು ಮಾಡಿದ್ದವು. ಉಳಿದ 14 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಅನುಪಾಲನೆ ಮಾಡದಿರುವ/ ಅಸಮರ್ಪಕ ಅನುಪಾಲನೆಯ ಕೆಳಕಂಡ ಉದಾಹರಣೆಗಳನ್ನು ಗಮನಿಸಲಾಯಿತು:

- ಕಾಯಿದೆಯನ್ನು ಜಾರಿಗೊಳಿಸಿದ ಪರಿಣಾಮವಾಗಿ, ಅಸ್ತಿತ್ವದಲ್ಲಿರುವ 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[49] ಮೆಮೊರಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ಇವುಗಳನ್ನು ಆವಶ್ಯಕ ರೀತಿಯಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಅಥವಾ ಅಧಿನಿಯಮದ ಮೊದಲ ಷೆಡ್ಯೂಲಿನಲ್ಲಿ

[48] 2021–22 ಸಾಲಿಗೆ ಹಣಕಾಸು ತ:ಖ್ತೆಗಳನ್ನು ಸಮೀಕ್ಷೆಯ ಅವಧಿ ಸೆಪ್ಟಂಬರ್ 2023ರ ಅಂತ್ಯದಲ್ಲಿ ಪ್ರಮಾಣೀಕರಿಸಲಾಗಿರುವ ಕಂಪನಿಗಳು.

[49] ಕೆಪಿಸಿಎಲ್, ಕೆಪಿಟಿಸಿಎಲ್, ಹೆಸ್ಕಾಂ, ಮೆಸ್ಕಾಂ, ಸೆಸ್ಕ್, ಜೆಸ್ಕಾಂ, ಕೆಬಿಜೆಎನ್‌ಎಲ್, ಸಿಎನ್‌ಎನ್‌ಎಲ್, ಕಿಯಾನಿಕ್ಸ್, ಕೆಆರ್‌ಐಡಿಎಲ್, ಡಿಯುಬಿಸಿಡಿಸಿಎಲ್ ಮತ್ತು ಆರ್‌ಪಿಸಿಎಲ್.

ನಿರ್ದಿಷ್ಟಪಡಿಸಲಾಗಿ ಅನ್ವಯಗೊಳ್ಳುವಂತಹ ನಮೂನೆಗಳನ್ನು (ನಮೂನೆ ಎ ಮತ್ತು ನಮೂನೆ ಎಫ್) ಅಳವಡಿಸಿಕೊಳ್ಳುವ ಸಲುವಾಗಿ ತಿದ್ದುಪಡಿ ಮಾಡಿರಲಿಲ್ಲ.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಎಮ್ಎಸ್ಐಎಲ್) ಅಕ್ಟೋಬರ್ 2019ರಲ್ಲಿ ಕೇವಲ ಆರ್ಟಿಕಲ್ಸ್ ಆಫ್ ಅಸೋಸಿಯೇಷನನ್ನು, ಮಾತ್ರ ಬದಲಾಯಿಸಿತು ಮತ್ತು ಮೆಮೊರಾಂಡಮ್ ಆಫ್ ಅಸೋಸಿಯೇಷನ್ನಿನಲ್ಲಿರುವ ಹಳೆಯ ಅಧಿನಿಯಮದ ಅನುವುಗಳಿಗೆ ಉಲ್ಲೇಖಗಳನ್ನು ಬದಲಾಯಿಸಲು ಬೇಕಾದ ಅಗತ್ಯ ಬದಲಾವಣೆಗಳನ್ನು ಮಾಡಿರಲಿಲ್ಲ.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಸ್ಐಐಡಿಸಿ) ನಮೂನೆ ಎಫ್ ಅಳವಡಿಸಿಕೊಳ್ಳುವ ಸಲುವಾಗಿ ಆರ್ಟಿಕಲ್ಸ್ ಆಫ್ ಅಸೋಸಿಯೇಷನನ್ನು ಬದಲಾಯಿಸಿಕೊಳ್ಳಲಿಲ್ಲ.

***ಮೆಮೊರಾಂಡಮ್ ಆಫ್ ಅಸೋಸಿಯೇಷನ್/ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ಗಳಲ್ಲಿ ಮಾಡಿರುವ ಬದಲಾವಣೆಗಳನ್ನು ಬಹಿರಂಗಪಡಿಸುವುದು***

**3.2.2** ಕಂಪನಿಯೊಂದರ ಮೆಮೋರಾಂಡಮ್ ಅಥವಾ ಆರ್ಟಿಕಲ್ಸ್ ಒಳಗೆ ಮಾಡುವ ಪ್ರತಿಯೊಂದೂ ಬದಲಾವಣೆಯನ್ನು ಮೆಮೋರಾಂಡಮ್ ಅಥವಾ ಆರ್ಟಿಕಲ್ಸ್, ಸಂದರ್ಭಕ್ಕೆ ತಕ್ಕಂತೆ, ಪ್ರತಿಯೊಂದು ಪ್ರತಿಯಲ್ಲೂ ಸಹ ನಮೂದಿಸತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 15 (1) ನಿರ್ದಿಷ್ಟಪಡಿಸಿರುವುದು.

**ಸಂಬಂಧಿತ ಅನುವುಗಳ ಅಸಮರ್ಪಕ ಅನುಪಾಲನೆಯ ಎರಡು ದೃಷ್ಟಾಂತಗಳನ್ನು ಗಮನಿಸಲಾಯಿತು:**

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಡಿಯುಬಿಸಿಡಿಸಿಎಲ್) ತಾನು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ ಕಲಮು 6ಕ್ಕೆ ಮಾಡಿದ ನಿರ್ಣಯದ ಉಲ್ಲೇಖವನ್ನು ಕಲಮು 6ಕ್ಕೆ ಬದಲಾಗಿ ಕಲಮು 8ರಲ್ಲಿ ನಮೂದಿಸಿದ್ದಿತು.

- ಮತ್ತೊಂದು ಪ್ರಕರಣದಲ್ಲಿ, ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಬೆಸ್ಕಾಂ) ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನ ಎಲ್ಲಾ ಕಲಮುಗಳ ಬದಲಾವಣೆಗೆ ಅನುಮೋದಿಸಲಾದ (ಸೆಪ್ಟೆಂಬರ್ 2019) ವಿಶೇಷ ನಿರ್ಣಯದ ಉಲ್ಲೇಖವನ್ನು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನಿನಲ್ಲಿ ನಮೂದಿಸುವ ಬದಲಾಗಿ ಮೆಮೊರಾಂಡಮ್ ಆಫ್ ಅಸೋಸಿಯೇಷನ್ನಿನ ಪ್ರತಿಯಲ್ಲಿ ನಮೂದಿಸಿದ್ದಿತು.

***ಕಂಪನಿಯ ನೋಂದಾಯಿತ ಕಛೇರಿಗೆ ಸಂಬಂಧಿಸಿದಂತೆ ಬಹಿರಂಗಪಡಿಸುವಿಕೆಗಳು***

**3.2.3** ಪ್ರತೀ ಕಂಪನಿಯು ತನ್ನ ಹೆಸರು, ಮತ್ತು ತನ್ನ ನೋಂದಾಯಿತ ಕಛೇರಿಯ ವಿಳಾಸವನ್ನು ಪೈಂಟ್ ಮಾಡಿ, ಕಂಪನಿಯ ನಾಮಫಲಕವನ್ನು ಅದರ ನೋಂದಾಯಿತ ಕಚೇರಿಯ ಗೋಡೆಯ ಮೇಲೆ ಅಳವಡಿಸತಕ್ಕದ್ದು ಮತ್ತು ಅದನ್ನು ತನ್ನ ವ್ಯವಹಾರವನ್ನು ನಡೆಸುವ ಪ್ರತಿಯೊಂದು ಕಛೇರಿ ಅಥವಾ ಸ್ಥಳದ ಹೊರಗೆ, ಎದ್ದು ಕಾಣುವ ಸ್ಥಳದಲ್ಲಿ ಸ್ಪಷ್ಟ ಅಕ್ಷರಗಳಲ್ಲಿ ಪೈಂಟ್ ಮಾಡಿ, ಗೋಡೆಯ ಮೇಲೆ ಅಳವಡಿಸತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 12 (3) (ಎ) ನಿರ್ದಿಷ್ಟಪಡಿಸಿರುತ್ತದೆ.

ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಟಿಸಿಎಲ್, ಬೆಸ್ಕಾಂ, ಹೆಸ್ಕಾಂ, ಡಿಯುಬಿಸಿಡಿಸಿಎಲ್, ಕೆಎಸ್ಎಂಸಿಎಲ್, ಕೆಬಿಜೆಎನ್ಎಲ್, ಸಿಎನ್ಎನ್ಎಲ್ ಮತ್ತು ವಿಜೆಎನ್ಎಲ್) ಅಂತಹ ನಾಮಫಲಕಗಳಲ್ಲಿ ಅವುಗಳ ನೋಂದಾಯಿತ ಕಚೇರಿಗಳ ವಿಳಾಸವನ್ನು ನಮೂದಿಸಿರಲಿಲ್ಲವಾದ್ದರಿಂದ, ಅಂತಹ ನಾಮಫಲಕಗಳನ್ನು ಅಳವಡಿಸುವಲ್ಲಿ ಅಥವಾ ಪ್ರದರ್ಶಿಸುವಲ್ಲಿ ವಿಫಲಗೊಂಡಿದ್ದವು.

**3.2.4** ಪ್ರತಿಯೊಂದು ಕಂಪನಿಯು ತನ್ನ ಹೆಸರು, ತನ್ನ ನೋಂದಾಯಿತ ಕಛೇರಿಯ ವಿಳಾಸ ಮತ್ತು ಸಾಂಸ್ಥಿಕ ಗುರುತಿನ ಸಂಖ್ಯೆ (ಸಿಐಎನ್) ಜೊತೆಗೆ ದೂರವಾಣಿ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ, ಯಾವುದಾದರೂ ಇದ್ದಲ್ಲಿ, ಈ-ಮೇಲ್, ಮತ್ತು ವೆಬ್ ಸೈಟ್ ವಿಳಾಸ, ಯಾವುದಾದರೂ ಇದ್ದಲ್ಲಿ, ಇವುಗಳನ್ನು ತನ್ನ ಎಲ್ಲಾ ವ್ಯವಹಾರ ಪತ್ರಗಳು, ಬಿಲ್ ಹೆಡ್ಸ್, ಕಾಗದ ಪತ್ರಗಳು ಮತ್ತು ಎಲ್ಲಾ ಸೂಚನಾ ಪತ್ರಗಳು ಮತ್ತು ಇತರ ಅಧಿಕೃತ ಪ್ರಕಟಣೆಗಳಲ್ಲಿ ಮುದ್ರಿಸತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 12 (3) (ಸಿ) ನಿರ್ದಿಷ್ಟಪಡಿಸಿರುತ್ತದೆ.

ಮೇಲ್ಕಂಡ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಪಡೆದುಕೊಳ್ಳಲಾದ ಲೆಟರ್ ಹೆಡ್ಡುಗಳ ಪರಿಶೀಲನೆಯು ಈ ಕೆಳಕಂಡ ನ್ಯೂನತೆಗಳನ್ನು ತೋರಿಸಿಕೊಟ್ಟಿತು:

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಫ್‌ಸಿಎಸ್‌ಸಿಎಲ್) ಜಾಲತಾಣವನ್ನು (ವೆಬ್‌ಸೈಟ್) ಹೊಂದಿರುವುದು. ಆದರೆ ಅದನ್ನು ತನ್ನ ಲೆಟರ್ ಹೆಡ್ ಮೇಲೆ ನಮೂದಿಸಿರುವುದಿಲ್ಲ.

- ಸಂಪರ್ಕ ವಿವರಗಳಾದಂತಹ ಈ-ಮೇಲ್ ವಿಳಾಸ ಮತ್ತು / ಅಥವಾ ದೂರವಾಣಿ ಸಂಖ್ಯೆಗಳನ್ನು ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಆರ್‌ಪಿಸಿಎಲ್, ಕೆಎಸ್‌ಎಂಸಿಎಲ್, ಕೆಎನ್‌ಎನ್‌ಎಲ್ ಮತ್ತು ಕಿಯಾನಿಕ್ಸ್) ತಮ್ಮ ಲೆಟರ್ ಹೆಡ್ ಮೇಲೆ ಬಹಿರಂಗಪಡಿಸಿರಲಿಲ್ಲ.

- ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಯುಬಿಸಿಡಿಸಿಎಲ್, ಕೆ.ಆರ್.ಐ.ಡಿ.ಎಲ್ ಮತ್ತು ಕೆಎಫ್‌ಸಿಎಸ್‌ಸಿಎಲ್) ತಮ್ಮ ಸಾಂಸ್ಥಿಕ ಗುರುತಿನ ಸಂಖ್ಯೆಯನ್ನು (ಸಿಐಎನ್) ತಮ್ಮ ಲೆಟರ್ ಹೆಡ್‌ಗಳಲ್ಲಿ ನಮೂದಿಸಿರಲಿಲ್ಲ.

## 3.3 ನಿರ್ದೇಶಕರುಗಳ ಮಂಡಳಿಯ ಸಂಯೋಜನೆ

ನಿರ್ದೇಶಕರುಗಳ ಮಂಡಳಿಯು, ಕಂಪನಿಯ ನಿರ್ದೇಶಕರುಗಳ ಸಾಮೂಹಿಕ ಅಂಗವಾಗಿದ್ದು, ಸಾಂಸ್ಥಿಕ ಆಡಳಿತದ ಅತ್ಯಂತ ಮಹತ್ತರವಾದ ಸಾಧನವಾಗಿರುತ್ತದೆ. ಕಂಪನಿಯೊಂದರ ನಿರ್ದೇಶಕರುಗಳ ಮಂಡಳಿಯು ಅಧಿನಿಯಮಗಳ ಅನುವುಗಳು, ಅಥವಾ ಮೆಮೋರಾಂಡಮ್ ಅಥವಾ ಆರ್ಟಿಕಲ್ಸ್ ಒಳಗೆ ಅವಕಾಶವಿರುವಂತೆ, ಅಥವಾ ಕಂಪನಿಯು ತನ್ನ ಸರ್ವಸದಸ್ಯರ ಸಭೆಯಲ್ಲಿ ರೂಪಿಸಿರುವ ನಿಯಂತ್ರಣಗಳೂ ಸೇರಿದಂತೆ ಯಾವುದೇ ನಿಯಂತ್ರಣಗಳಲ್ಲಿರುವಂತೆ (ಅಧಿನಿಯಮದ ಪರಿಚ್ಛೇದ-179) ಕಂಪನಿಯು ಚಲಾಯಿಸಲು ಅಥವಾ ಕಾರ್ಯರೂಪಕ್ಕೆ ತರಲು ಅಧಿಕಾರ ಹೊಂದಿರುವಂತೆ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು, ಮತ್ತು ಎಲ್ಲಾ ಕ್ರಮಗಳು ಮತ್ತು ಕೆಲಸಗಳನ್ನು ಮಾಡಲು ಅರ್ಹತೆಯನ್ನು ಹೊಂದಿರುತ್ತದೆ.

***ನಿಗಧಿಪಡಿಸಲಾಗಿರುವ ಕನಿಷ್ಠ ಸಂಖ್ಯೆಯ ನಿರ್ದೇಶಕರುಗಳು***

3.3.1 ಪ್ರತಿಯೊಂದು ಕಂಪನಿಯೂ ಸಾರ್ವಜನಿಕ ಕಂಪನಿಯಾಗಿದ್ದಲ್ಲಿ ಕನಿಷ್ಠ ಮೂವರು ನಿರ್ದೇಶಕರು ಮತ್ತು ಖಾಸಗಿ ಕಂಪನಿಯಾಗಿದ್ದಲ್ಲಿ ಕನಿಷ್ಠ ಇಬ್ಬರು ನಿರ್ದೇಶಕರನ್ನು ಒಳಗೊಂಡಿರುವ ನಿರ್ದೇಶಕರ ಮಂಡಳಿಯನ್ನು ಹೊಂದಿರತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 149 (1) (ಎ) ನಿರ್ದಿಷ್ಟಪಡಿಸಿರುತ್ತದೆ. ಅಧಿನಿಯಮದ ಪರಿಚ್ಛೇದ 149 (1)(ಬಿ)ರ ಅನುವುಗಳ ಅಡಿಯಲ್ಲಿ ನಿರ್ದಿಷ್ಟಗೊಂಡಿರುವಂತೆ 15 ನಿರ್ದೇಶಕರುಗಳ ಗರಿಷ್ಠ ಮಿತಿಯು ಸರ್ಕಾರಿ ಕಂಪನಿಗಳಿಗೆ ಅನ್ವಯವಾಗುವುದಿಲ್ಲ[50].

[50] ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು 05.06.2015ರಂದು ನೀಡಿರುವ ಅಧಿಸೂಚನೆಯ ಅನುಸಾರ.

ಎಲ್ಲಾ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ನಿರ್ದೇಶಕರುಗಳ ಮಂಡಳಿಗಳಲ್ಲಿ ಕನಿಷ್ಠ 2 ಅಥವಾ 3 ನಿರ್ದೇಶಕರುಗಳನ್ನು ಹೊಂದಿರುವ ಮೂಲಕ ಅವಶ್ಯಕತೆಗಳ ಅನುಪಾಲನೆಯನ್ನು ಮಾಡಿರುತ್ತವೆ.

***ಸ್ವತಂತ್ರ ನಿರ್ದೇಶಕರುಗಳು***

**3.3.2** ಅಧಿನಿಯಮದ ಪರಿಚ್ಛೇದ 149 (4) ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ವಿದ್ಯಾರ್ಹತೆ) ನಿಯಮಗಳು, 2014ರ ನಿಯಮ 4 (1),[51] ಅನ್ವಯ (i) ₹ ಹತ್ತು ಕೋಟಿ ಮೊತ್ತದ ಅಥವಾ ಅದಕ್ಕೂ ಹೆಚ್ಚಿನ ಪಾವತಿಸಲ್ಪಟ್ಟಿರುವ ಷೇರು ಬಂಡವಾಳವನ್ನು ಹೊಂದಿರುವ ಅಥವಾ (ii) ₹ ಒಂದು ನೂರು ಕೋಟಿ ಮೊತ್ತದ ಅಥವಾ ಅದಕ್ಕೂ ಹೆಚ್ಚಿನ ವಹಿವಾಟನ್ನು ಹೊಂದಿರುವ ಅಥವಾ (iii) ₹ ಐವತ್ತು ಕೋಟಿ ಮೊತ್ತವನ್ನು ಮೀರಿದಂತೆ ಒಟ್ಟಾರೆ ಸಾಲಗಳನ್ನು ಡಿಬೆಂಚರುಗಳೂ ಮತ್ತು ಠೇವಣಿಗಳನ್ನು ಬಾಕಿಹೊಂದಿರುವ ಪ್ರತಿಯೊಂದು ಸಾರ್ವಜನಿಕ ಕಂಪನಿಯು ತನ್ನ ನಿರ್ದೇಶಕರುಗಳ ಮಂಡಳಿಯಲ್ಲಿ ಕನಿಷ್ಠ ಇಬ್ಬರು ಸ್ವತಂತ್ರ ನಿರ್ದೇಶಕರನ್ನು ಹೊಂದಿರಬೇಕು ಎಂಬುದಾಗಿ ನಿರ್ದಿಷ್ಟಪಡಿಸಿರುವುದು. ಅಂತಹ ಕಂಪನಿಯ ಲೆಕ್ಕಪರಿಶೋಧನಾ ಸಮಿತಿಯ ಸಂಯೋಜನೆಯು ಹೆಚ್ಚಿನ ಸಂಖ್ಯೆಯ ಸ್ವತಂತ್ರ ನಿರ್ದೇಶಕರನ್ನು ಹೊಂದಲು ಆವಶ್ಯವೆನಿಸಿದರೆ, ಅದು ಅನ್ವಯವಾಗತಕ್ಕದ್ದು ಎಂಬುದಾಗಿಯೂ ಸಹ ನಿಯಮ 4 (1) ತಿಳಿಸಿರುತ್ತದೆ.

ಕಾಯಿದೆಯ ಸೆಕ್ಷನ್ 149 (12) ರ ಪ್ರಕಾರ, ಸ್ವತಂತ್ರ ನಿರ್ದೇಶಕರು ತಮ್ಮ ಜ್ಞಾನದಿಂದ ಸಂಭವಿಸಿದ, ಮಂಡಳಿಯ ಪ್ರಕ್ರಿಯೆಗಳ ಮೂಲಕ ಮತ್ತು ಅವರ ಒಪ್ಪಿಗೆ ಅಥವಾ ಸಹಕಾರದೊಂದಿಗೆ ಅಥವಾ ಅವರು ಶ್ರದ್ಧೆಯಿಂದ ವರ್ತಿಸದಿರುವಲ್ಲಿ ಸಂಭವಿಸಿದ ಲೋಪ ಅಥವಾ ತಪ್ಪುಗಳಿಗೆ ಮಾತ್ರ ಜವಾಬ್ದಾರರಾಗಿರುತ್ತಾರೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಸ್ಪಷ್ಟಪಡಿಸಿದಂತೆ (ಮಾರ್ಚ್ 2, 2020ರ ಸುತ್ತೋಲೆಯಂತೆ) ಸಾಮಾನ್ಯವಾಗಿ ಸಂಪೂರ್ಣ ಸಮಯದ ನಿರ್ದೇಶಕರು ಮತ್ತು ಕಂಪನಿಯ ದಿನನಿತ್ಯದ ಕಾರ್ಯಚಟುವಟಿಕೆಗೆ ಸಂಬಂಧಿಸಿದ ಪ್ರಮುಖ ವ್ಯವಸ್ಥಾಪಕ ವ್ಯಕ್ತಿಗಳು ಕಂಪನಿಯು ಎಸಗುವ ಡೀಫಾಲ್ಟ್‌ಗಳಿಗೆ ಜವಾಬ್ದಾರರಾಗಿರುತ್ತಾರೆ ಮತ್ತು ಸೆಕ್ಷನ್ 149 (12) ರ ಎಕ್ಸ್‌ಪ್ರೆಸ್ ನಿಬಂಧನೆಗಳ ದೃಷ್ಟಿಯಿಂದ, ಸ್ವತಂತ್ರ ನಿರ್ದೇಶಕರನ್ನು ಕಾಯಿದೆ ಅಡಿಯಲ್ಲಿ ಮೇಲೆ ತಿಳಿಸಿದ ಮಾನದಂಡಗಳನ್ನು ಪೂರೈಸದ ಹೊರತು, ಯಾವುದೇ ಕ್ರಿಮಿನಲ್ ಅಥವಾ ಸಿವಿಲ್ ಪ್ರಕ್ರಿಯೆಗಳಲ್ಲಿ ಜೋಡಿಸಬಾರದು.

ನಿಯಮ 4 (2)ರ ಅನುಸಾರ ಕೆಲವು ದರ್ಜೆಯ ಪಟ್ಟಿಯಲ್ಲಿ ಸೇರಿರದ ಸಾರ್ವಜನಿಕ ಕಂಪನಿಗಳನ್ನು (ಜಂಟಿ ಉದ್ದಿಮೆಗಳು, ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಗಳು ಮತ್ತು ಡಾರ್ಮೆಂಟ್ ಕಂಪನಿಗಳು ಅಧಿನಿಯಮದ ಪರಿಚ್ಛೇದ 455ರ ಅಡಿಯಲ್ಲಿ ವಿವರಿಸಿರುವಂತೆ) ನಿಯಮ 4 (1)ರ ಅಡಿಯಲ್ಲಿ ವ್ಯಾಪಿಸಿರುವುದಿಲ್ಲ[52] ಮತ್ತು ಅವುಗಳು ಸ್ವತಂತ್ರ ನಿರ್ದೇಶಕರುಗಳನ್ನು ನೇಮಕ ಮಾಡಿಕೊಳ್ಳುವ ಅಗತ್ಯತೆ ಇರುವುದಿಲ್ಲ.

ಆಡಳಿತಾತ್ಮಕ ಇಲಾಖೆಯು 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಿರ್ದೇಶಕರುಗಳ ಮಂಡಳಿಗಳಿಗೆ 44 ಸ್ವತಂತ್ರ ನಿರ್ದೇಶಕರುಗಳನ್ನು ನೇಮಕ ಮಾಡಿತು. ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಯುಬಿಸಿಡಿಸಿಎಲ್ ಮತ್ತು ಕೆಆರ್‌ಐಡಿಎಲ್) ಖಾಸಗಿ ನಿಯಮಿತ ಕಂಪನಿಗಳಾಗಿ ನೋಂದಾಯಿಸಿರುವ ಕಾರಣ ನಿಯಮ 4 (1)ರ ಅಡಿಯಲ್ಲಿ ವ್ಯಾಪಿಸಿರುವುದಿಲ್ಲ. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಆರ್‌ಪಿಸಿಎಲ್) ಒಂದು ಸಂಯೋಜನೆಯಿಂದ ಅವಶ್ಯವಾಗಿದ್ದರಿಂದ ಜಂಟಿ–ಉದ್ದಿಮೆ ಕಂಪನಿಯಾಗಿದ್ದು, ತನ್ನ ಲೆಕ್ಕಪರಿಶೋಧನಾ ಸಮಿತಿಯು ಸ್ವತಂತ್ರ ನಿರ್ದೇಶಕರುಗಳ ಇಬ್ಬರು ಸ್ವತಂತ್ರ ನಿರ್ದೇಶಕರುಗಳನ್ನು ಹೊಂದುವ ಮೂಲಕ ನಿಯಮ 4 (1)ರ ಅನುಪಾಲನೆ ಮಾಡಿರುವುದು.

---

[51] 05.07.2017 ದಿನಾಂಕದ ಅಧಿಸೂಚನೆಯ ಮೂಲಕ ನಿಯಮ 4ನ್ನು ತಿದ್ದುಪಡಿ ಮಾಡಲಾಯಿತು ಹಾಗೂ ನಿಯಮ 4(1) ಎಂಬುದಾಗಿ ಪುನರ್–ಸಂಖ್ಯೆಯನ್ನು ನೀಡಲಾಯಿತು.

[52] ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2017 ದಿನಾಂಕ 05.09.2017.

ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಎಂಸಿಎಲ್, ಎಚ್‌ಜಿಎಂಎಲ್, ಕೆಎಸ್‌ಐಐಡಿಸಿ, ಕೆಆರ್‌ಡಿಸಿಎಲ್, ಬಿಎಸ್‌ಸಿಎಲ್–ಬೆಳಗಾವಿ, ಕಿಯಾನಿಕ್ಸ್, ಕೆಎಫ್‌ಸಿಎಸ್‌ಸಿಎಲ್ ಮತ್ತು ಸಿಬಿಐಸಿ–ತುಮಕೂರು) ತಮ್ಮ ನಿರ್ದೇಶಕರುಗಳ ಮಂಡಳಿಯಲ್ಲಿ ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರುವುದಿಲ್ಲ. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಸ್‌ಡಿಎಲ್) ತನ್ನ ನಿರ್ದೇಶಕರುಗಳ ಮಂಡಳಿಯಲ್ಲಿ ಕೇವಲ ಒಬ್ಬರೇ ಸ್ವತಂತ್ರ ನಿರ್ದೇಶಕರನ್ನು ಹೊಂದಿದ್ದಿತ್ತು ಮತ್ತು ತನ್ನ ಮಂಡಳಿಯಲ್ಲಿ ಕನಿಷ್ಠ ಸಂಖ್ಯೆಯ ಇಬ್ಬರು ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರಬೇಕೆಂಬ ಅವಶ್ಯಕತೆಯ ಅನುಪಾಲನೆಯನ್ನು ಮಾಡಿರಲಿಲ್ಲ.

***ಮಹಿಳಾ ನಿರ್ದೇಶಕರುಗಳು***

**3.3.3** ಅಧಿನಿಯಮದ ಪರಿಚ್ಛೇದ 149(1)ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ಅರ್ಹತೆ) ನಿಯಮಗಳು, 2014ರ ನಿಯಮ 3 ಒಂದು ನೂರು ಕೋಟಿ ಅಥವಾ ಇನ್ನೂ ಹೆಚ್ಚಿನ ಮೊತ್ತದ ಪಾವತಿಸಲ್ಪಟ್ಟಿರುವ ಷೇರು ಬಂಡವಾಳವನ್ನು ಹೊಂದಿರುವ ಅಥವಾ ಮೂರು ನೂರು ಕೋಟಿ ಅಥವಾ ಇನ್ನೂ ಹೆಚ್ಚಿನ ವಹಿವಾಟನ್ನು ಹೊಂದಿರುವಂತಹ ಪ್ರತಿಯೊಂದು ಕಂಪನಿಯೂ ತನ್ನ ನಿರ್ದೇಶಕರುಗಳ ಮಂಡಳಿಯಲ್ಲಿ ಕನಿಷ್ಠ ಒಬ್ಬರು ಮಹಿಳಾ ನಿರ್ದೇಶಕರನ್ನು ಹೊಂದಿರಬೇಕು ಎಂಬ ಅಗತ್ಯತೆಯನ್ನು ಹೊಂದಿರುವುದು.

ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ಕೆಆರ್‌ಡಿಸಿಎಲ್, ತನ್ನ ನಿರ್ದೇಶಕರುಗಳ ಮಂಡಳಿಯಲ್ಲಿ ಮಹಿಳಾ ನಿರ್ದೇಶಕರನ್ನು ಹೊಂದಿರಲಿಲ್ಲ (ಮಾರ್ಚ್ 2023).

***ನಿರ್ದೇಶಕರ ಗುರುತಿನ ಸಂಖ್ಯೆ***

**3.3.4** ಪ್ರತಿಯೋರ್ವ ನಿರ್ದೇಶಕರು ಅಧಿನಿಯಮದ ಪರಿಚ್ಛೇದ 154ರ ಅನುವುಗಳ ಅನುಪಾಲನೆಯಂತೆ ಕೇಂದ್ರ ಸರ್ಕಾರವು ಹಂಚಿಕೆ ಮಾಡಿರುವ ಒಂದು ವಿಶಿಷ್ಟ ನಿರ್ದೇಶಕರ ಗುರುತಿನ ಸಂಖ್ಯೆಯನ್ನು (ಡಿಐಎನ್) ಹೊಂದಿರತಕ್ಕದ್ದು.

2022–23 ಹಣಕಾಸು ಸಾಲಿನಲ್ಲಿ, ಕೆಆರ್‌ಐಡಿಎಲ್‌ನ ಇಬ್ಬರು ನಿರ್ದೇಶಕರುಗಳಿಗೆ ಡಿಐಎನ್ ಪಡೆದುಕೊಂಡಿರಲಿಲ್ಲ.

***ನಿರ್ದೇಶಕತ್ವಗಳ ಸಂಖ್ಯೆ***

**3.3.5** ಒಬ್ಬ ವ್ಯಕ್ತಿಯನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿಕೊಳ್ಳಬಹುದಾದ ಸಾರ್ವಜನಿಕ ಕಂಪನಿಗಳ ಗರಿಷ್ಟ ಸಂಖ್ಯೆಯು ಹತ್ತನ್ನು ಮೀರತಕ್ಕದ್ದಲ್ಲ ಎಂಬುದಾಗಿ ಅಧಿನಿಯಮದ ಪರಿಚ್ಛೇದ 165 (1) ನಿರ್ದಿಷ್ಟಪಡಿಸಿರುತ್ತದೆ.

ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಸೆಸ್ಕ್ ಮತ್ತು ಡಿಯುಬಿಸಿಡಿಸಿಎಲ್) ತಮ್ಮ ನಿರ್ದೇಶಕರುಗಳ ಮಂಡಳಿಯ ಒಬ್ಬರು ನಿರ್ದೇಶಕರು ಹತ್ತಕ್ಕಿಂತ ಹೆಚ್ಚು ಸಾರ್ವಜನಿಕ ಕಂಪನಿಗಳಲ್ಲಿ ನಿರ್ದೇಶಕರು ಆಗಿದ್ದಾರೆ ಎಂಬುದಾಗಿ ತಿಳಿಸಿರುತ್ತವೆ.

## 3.4 ಸ್ವತಂತ್ರ ನಿರ್ದೇಶಕರುಗಳ ನೇಮಕಾತಿ ಮತ್ತು ಕಾರ್ಯನಿರ್ವಹಣೆ

***ಔಪಚಾರಿಕ ನೇಮಕಾತಿಯ ಪತ್ರ ನೀಡಿಕೆ ಮತ್ತು ನೀತಿ ಸಂಹಿತೆ***

**3.4.1** ಸ್ವತಂತ್ರ ನಿರ್ದೇಶಕರುಗಳ ನೇಮಕಾತಿಯನ್ನು ಒಂದು ಔಪಚಾರಿಕ ನೇಮಕಾತಿ ಪತ್ರದ ಮೂಲಕ ಮಾಡತಕ್ಕದ್ದು, ಈ ಪತ್ರವು ಇನ್ನಿತರೆ ವಿಷಯಗಳ ಜೊತೆಗೆ, ನೇಮಕಾತಿಯ ನಿಯಮಗಳು, ಕರ್ತವ್ಯಗಳು, ವ್ಯವಹಾರ ನೀತಿ ಸಂಹಿತೆ ಮತ್ತು ಸಂಭಾವನೆ, ನಿಯತಕಾಲಿಕ ಶುಲ್ಕಗಳು, ಇತ್ಯಾದಿಯನ್ನು ಸ್ಪಷ್ಟಪಡಿಸಿರತಕ್ಕದ್ದು ಎಂಬುದಾಗಿ ಅಧಿನಿಯಮದ ಷೆಡ್ಯೂಲು IV ಕಂಡಿಕೆ (IV) (4) ನಿರ್ದಿಷ್ಟಪಡಿಸಿರುತ್ತದೆ. ಮುಂದುವರೆದು, ಸ್ವತಂತ್ರ ನಿರ್ದೇಶಕರ ನೇಮಕಾತಿಯ ನಿಯಮಗಳು ಮತ್ತು

ನಿಬಂಧನೆಗಳನ್ನು ಕಂಪನಿಯ ಜಾಲತಾಣದಲ್ಲಿಯೂ ಪ್ರಕಟಿಸಿರತಕ್ಕದ್ದು ಎಂಬುದಾಗಿ ಅಧಿನಿಯಮದ ಷೆಡ್ಯೂಲು IV ಕಂಡಿಕೆ (IV)(6) ನಿರ್ದಿಷ್ಟಪಡಿಸಿರುತ್ತದೆ.

ಸರ್ಕಾರಿ ಕಂಪನಿಗಳ ನಿರ್ದೇಶಕರುಗಳ ಮಂಡಳಿಗೆ ಸ್ವತಂತ್ರ ನಿರ್ದೇಶಕರುಗಳ ನೇಮಕಾತಿಯನ್ನು ರಾಜ್ಯ ಸರ್ಕಾರವು ಮಾಡಿದ್ದಿತು ಹಾಗೂ ಸರ್ಕಾರವು ಈ ನಿಟ್ಟಿನಲ್ಲಿ ನೀಡಿದ್ದಂತಹ ನೇಮಕಾತಿ ಪತ್ರಗಳು ನೇಮಕಾತಿಯ ಸ್ಥಾನಮಾನವನ್ನು ಮಾತ್ರ ತಿಳಿಸಿದ್ದವು. ಸ್ವತಂತ್ರ ನಿರ್ದೇಶಕರುಗಳ ನೇಮಕಾತಿಯ ಷರತ್ತುಗಳು ಮತ್ತು ನಿಬಂಧನೆಗಳನ್ನು ಕಂಪನಿಯ ಜಾಲತಾಣದಲ್ಲಿ ಪ್ರಕಟಿಸಿರಲಿಲ್ಲ.

***ಸ್ವತಂತ್ರ ನಿರ್ದೇಶಕರುಗಳಿಂದ ಘೋಷಣೆ***

**3.4.2** ಅಧಿನಿಯಮದ ಪರಿಚ್ಛೇದ 149 (7) ಪ್ರತಿಯೊಬ್ಬ ಸ್ವತಂತ್ರ ನಿರ್ದೇಶಕರು ಉಪ–ನಿಯಮ (6)ರಲ್ಲಿ ಅನುವು ಮಾಡಲಾಗಿರುವಂತೆ ಅವರುಗಳು ತಮ್ಮ ಸ್ವಾತಂತ್ರ್ಯತೆಯ ಮಾನದಂಡಗಳನ್ನು ಪೂರೈಸಿರುವುದಾಗಿ ಘೋಷಣೆಯೊಂದನ್ನು ಅವರು ಓರ್ವ ಸ್ವತಂತ್ರ ನಿರ್ದೇಶಕರಾಗಿ ಭಾಗವಹಿಸುವಂತಹ ನಿರ್ದೇಶಕರುಗಳ ಮಂಡಳಿಯ ಮೊದಲನೇ ಸಭೆಯಲ್ಲಿ ಮತ್ತು ಆನಂತರ, ಪ್ರತಿ ಹಣಕಾಸು ವರ್ಷದ ನಿರ್ದೇಶಕರುಗಳ ಮಂಡಳಿಯ ಮೊದಲನೇ ಸಭೆಯಲ್ಲಿ ಅಥವಾ ಒಬ್ಬರು ಸ್ವತಂತ್ರ ನಿರ್ದೇಶಕರಾಗಿ ಅವರ ಸ್ಥಿತಿಯ ಮೇಲೆ ಪ್ರಭಾವ ಬೀರಬಹುದಾದ ಪರಿಸ್ಥಿತಿಗಳಲ್ಲಿ ಯಾವುದೇ ಬದಲಾವಣೆ ಯಾವ ಸಮಯದಲ್ಲಾದರೂ ಉಂಟಾದಾಗ ಸಲ್ಲಿಸತಕ್ಕದ್ದು ಎಂಬ ಅಗತ್ಯತೆಯನ್ನು ಹೊಂದಿರುವುದು.

ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಬೆಸ್ಕಾಂ) 2022–23 ಹಣಕಾಸು ಸಾಲಿನಲ್ಲಿ ಓರ್ವ ಸ್ವತಂತ್ರ ನಿರ್ದೇಶಕರು ಈ ಘೋಷಣೆಯನ್ನು ನೀಡಿರುವರು ಎಂಬುದಾಗಿ ತಿಳಿಸಿರುವುದು.

***ಸರ್ಕಾರಿ ಅಧಿಕಾರಿಗಳನ್ನು ಸ್ವತಂತ್ರ ನಿರ್ದೇಶಕರಾಗಿ ನೇಮಕ ಮಾಡುವುದು***

**3.4.3** ಸ್ವತಂತ್ರ ನಿರ್ದೇಶಕರನ್ನು ನೇಮಕ ಮಾಡುವ ಉದ್ದೇಶವು ಕಂಪನಿಯ ವ್ಯವಹಾರಗಳ ಮೇಲೆ ಪ್ರವರ್ತಕರು ಮತ್ತು ಆಡಳಿತವರ್ಗ ಹೊರತು ಪಡಿಸಿದಂತೆ ಸ್ವತಂತ್ರವಾಗಿ ಹತೋಟಿ ಹೊಂದಿರುವುದಾಗಿರುತ್ತದೆ.

ಆಡಳಿತಾತ್ಮಕ ಇಲಾಖೆಗಳು 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಿರ್ದೇಶಕರುಗಳ ಮಂಡಳಿಗಳಿಗೆ ನೇಮಕ ಮಾಡಿದ 44 ಸ್ವತಂತ್ರ ನಿರ್ದೇಶಕರುಗಳ ಪೈಕಿ ಒಂಬತ್ತು[53] ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ 24 ಸ್ವತಂತ್ರ ನಿರ್ದೇಶಕರುಗಳು ಕರ್ನಾಟಕ ಸರ್ಕಾರ / ಸರ್ಕಾರಿ ಕಂಪನಿಗಳಲ್ಲಿ ಪೂರ್ಣವೇಳೆಯ ಉದ್ಯೋಗದ ಮೇಲೆ ಅಧಿಕಾರಿಗಳಾಗಿದ್ದರು, ಇದು ಅಂತಹ ವಿಷಯಗಳಲ್ಲಿ ಅಧಿನಿಯಮದ ಅನುವುಗಳು ಮತ್ತು ಉದ್ದೇಶಗಳಿಗೆ ವಿರುದ್ಧವಾಗಿರುವುದು.

ಅಂತಹ ದೃಷ್ಟಾಂತಗಳನ್ನು ಲೆಕ್ಕಪರಿಶೋಧನೆಯು ಗಮನಿಸಿದಾಗ, ಅಂತಹ ನಾಮನಿರ್ದೇಶನಗಳನ್ನು ಹಿಂಪಡೆದುಕೊಳ್ಳಲು ಹಾಗೂ ಅಧಿನಿಯಮದ ಅನುವುಗಳ ಅನುಸರಣೆಯಂತೆ ಸ್ವತಂತ್ರ ನಿರ್ದೇಶಕರುಗಳನ್ನು ನೇಮಕ ಮಾಡಲು ತತ್‌ಕ್ಷಣದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ನಿರ್ದೇಶಿಸಿರುವುದು (ಸೆಪ್ಟೆಂಬರ್ 2023[54]).

***ಸ್ವತಂತ್ರ ನಿರ್ದೇಶಕರ ತರಬೇತಿ***

**3.4.4** ಅಧಿನಿಯಮದ ಷೆಡ್ಯೂಲು IV ಕಂಡಿಕೆ (III) (1)ರಲ್ಲಿ ತಿಳಿಸಿರುವ ಕರ್ತವ್ಯಗಳಲ್ಲಿ ಒಂದೆಂದರೆ ಸ್ವತಂತ್ರ ನಿರ್ದೇಶಕರು ಸೂಕ್ತವಾದಂತಹ ಸೇರ್ಪಡೆ ತರಬೇತಿಯನ್ನು ಹೊಂದುವುದು ಮತ್ತು ಅವರ

[53] ಕೆಪಿಸಿಎಲ್ (3), ಕೆಪಿಟಿಸಿಎಲ್ (4), ಬೆಸ್ಕಾಂ (3), ಹೆಸ್ಕಾಂ (2), ಮೆಸ್ಕಾಂ (2), ಸೆಸ್ಕ್ (3), ಜೆಸ್ಕಾಂ (4), ಕೆಎಸ್‌ಡಿಎಲ್ (1) ಮತ್ತು ಎಮ್‌ಎಸ್‌ಐಎಲ್ (2).

[54] ಸುತ್ತೋಲೆ ಸಂಖ್ಯೆ ಹಇ 91 ಐಎನ್‌ವಿ 2023 ದಿನಾಂಕ 12.09.2023.

ಕೌಶಲ್ಯಗಳು, ಜ್ಞಾನ ಮತ್ತು ಕಂಪನಿಯ ಬಗೆಗಿನ ಅರಿವನ್ನು ನಿಯತವಾಗಿ ಪರಿಷ್ಕರಣೆ ಮಾಡಿಕೊಳ್ಳತಕ್ಕದ್ದು ಎಂಬುದಾಗಿರುತ್ತದೆ. ಇದಕ್ಕೆ ಅನುಗುಣವಾಗಿ, ಪ್ರತಿಯೊಂದು ಕಂಪನಿಯು ಸ್ವತಂತ್ರ ನಿರ್ದೇಶಕರಿಗೆ ಕಂಪನಿಯ ಬಗ್ಗೆ ಅರಿವು, ಕಂಪನಿಯಲ್ಲಿ ಅವರ ಪಾತ್ರಗಳು, ಹಕ್ಕುಗಳು, ಜವಾಬ್ದಾರಿಗಳು, ಕಂಪನಿಯು ಕಾರ್ಯನಿರ್ವಹಿಸುವ ಕೈಗಾರಿಕೆಯ ವಿಧ, ಕಂಪನಿಯ ವ್ಯವಹಾರ ಮಾದರಿ ಇತ್ಯಾದಿಗಳ ಕುರಿತು ಸೂಕ್ತವಾದ ತರಬೇತಿಯನ್ನು ನೀಡುವ ಅಗತ್ಯತೆ ಇರುತ್ತದೆ.

ಕೇವಲ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಡಿಎಲ್ ಮತ್ತು ಬಿಎಸ್‌ಸಿಎಲ್, ಬೆಂಗಳೂರು) ಸ್ವತಂತ್ರ ನಿರ್ದೇಶಕರುಗಳಿಗೆ ತರಬೇತಿ ನೀಡಿರುತ್ತವೆ.

***ನಿರ್ದೇಶಕರುಗಳ ಮಂಡಳಿಯ ಸಭೆಗಳಿಗೆ ಮತ್ತು ನಿರ್ದೇಶಕರುಗಳ ಮಂಡಳಿಯ ಸಮಿತಿಗಳ ಸಭೆಗಳಿಗೆ ಹಾಜರಾಗುವಿಕೆ***

**3.4.5** ಸ್ವತಂತ್ರ ನಿರ್ದೇಶಕರುಗಳು ನಿರ್ದೇಶಕ ಮಂಡಳಿಯ ಮತ್ತು ತಾವು ಸದಸ್ಯರಾಗಿರುವ ನಿರ್ದೇಶಕರುಗಳ ಮಂಡಳಿಯ ಸಮಿತಿಗಳ ಎಲ್ಲಾ ಸಭೆಗಳಲ್ಲೂ ಹಾಜರಿರಲು ಪ್ರಯತ್ನಿಸತಕ್ಕದ್ದು ಎಂಬುದಾಗಿ ಅಧಿನಿಯಮದ ಷೆಡ್ಯೂಲು IV ಕಂಡಿಕೆ (III) (3) ನಿರ್ದಿಷ್ಟಪಡಿಸಿರುವುದು.

ಹಣಕಾಸು ವರ್ಷ 2022–23ರ ತಮ್ಮ ಅವಧಿಯಲ್ಲಿ ನಡೆದಂತಹ ನಿರ್ದೇಶಕರುಗಳ ಮಂಡಳಿಯ ಸಭೆಗಳಲ್ಲಿ, 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ 44 ಸ್ವತಂತ್ರ ನಿರ್ದೇಶಕರುಗಳ ಪೈಕಿ, 15 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ 24 ಸ್ವತಂತ್ರ ನಿರ್ದೇಶಕರು ಎಲ್ಲಾ ಮಂಡಳಿಯ ಸಭೆಗಳಲ್ಲಿ ಹಾಜರಿದ್ದರು ಮತ್ತು 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ 20 ಸ್ವತಂತ್ರ ನಿರ್ದೇಶಕರು ಶೇಕಡಾ 14ರಿಂದ ಶೇಕಡಾ 100ರವರೆಗಿನ ಗೈರುಹಾಜರಿಯನ್ನು ದಾಖಲಿಸಿದ್ದರು (ವಿವರಗಳು ***ಅನುಬಂಧ – 10ರಲ್ಲಿ***).

***ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಹಾಜರಾಗುವುದು***

**3.4.6** ಸ್ವತಂತ್ರ ನಿರ್ದೇಶಕರು ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ (ಎಜಿಎಂ) ಹಾಜರಾಗಲು ಪ್ರಯತ್ನಿಸತಕ್ಕದ್ದು[55] ಎಂಬುದಾಗಿ ಅಧಿನಿಯಮದ ಷೆಡ್ಯೂಲು IV ಕಂಡಿಕೆ (III) (5) ನಿರ್ದಿಷ್ಟಪಡಿಸಿರುವುದು.

ಹಣಕಾಸು ವರ್ಷ 2022–23ರ ಸಾಲಿನಲ್ಲಿ ಜರುಗಿದ ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ (ಎಜಿಎಂ) 15 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ 38 ಸ್ವತಂತ್ರ ನಿರ್ದೇಶಕರುಗಳ ಪೈಕಿ, 28 ನಿರ್ದೇಶಕರುಗಳು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ (ಎಜಿಎಂ) ಹಾಜರಿದ್ದರು ಮತ್ತು ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹತ್ತು ನಿರ್ದೇಶಕರು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಹಾಜರಿರಲು ವಿಫಲರಾಗಿದ್ದರು (ವಿವರಗಳು ***ಅನುಬಂಧ –11ರಲ್ಲಿ***)

***ಸ್ವತಂತ್ರ ನಿರ್ದೇಶಕರುಗಳ ರಾಜೀನಾಮೆ ಅಥವಾ ತೆಗೆದುಹಾಕುವುದು***

**3.4.7** ಅಧಿನಿಯಮದ ಷೆಡ್ಯೂಲು IV ಕಂಡಿಕೆ (VI) (2)ರ ಅನುಸಾರ, ಕಂಪನಿಯ ನಿರ್ದೇಶಕರುಗಳ ಮಂಡಳಿಯಿಂದ ರಾಜೀನಾಮೆ ನೀಡಿದಾಗ ಅಥವಾ ಅವರನ್ನು ತೆಗೆದುಹಾಕಿದಾಗ ಅವರ ಬದಲಿಗೆ ಅಂತಹ ರಾಜೀನಾಮೆ ಅಥವಾ ತೆಗೆದುಹಾಕಿದ ದಿನಾಂಕದಿಂದ, ಯಾವುದು ಅನ್ವಯವೋ ಅದರಂತೆ, ಮೂರು ತಿಂಗಳುಗಳ ಒಳಗೆ ಹೊಸ ಸ್ವತಂತ್ರ ನಿರ್ದೇಶಕರನ್ನು ನೇಮಕ ಮಾಡತಕ್ಕದ್ದು.

[55] ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ಕವಿನಿನಿ, ಕವಿಪ್ರನಿನಿ ಮತ್ತು ಸಿಇಎಸ್‌ಸಿ) ಪ್ರಸಕ್ತ ಸಾಲಿನಲ್ಲಿ ವಾರ್ಷಿಕ ಸಾಮಾನ್ಯ ಸಭೆಯ ನಂತರ ಸ್ವತಂತ್ರ ನಿರ್ದೇಶಕರುಗಳನ್ನು ನೇಮಕ ಮಾಡಲಾಗಿದ್ದಿತಾದ್ದರಿಂದ ಮೂರು ಸ್ವತಂತ್ರ ನಿರ್ದೇಶಕರುಗಳಿಗೆ ಅನುವುಗಳು ಅನ್ವಯಗೊಳ್ಳುವುದಿಲ್ಲ. ಅದೇ ರೀತಿಯಲ್ಲಿ, 2021–22 ಹಣಕಾಸು ಸಾಲಿಗೆ ಮೂರು ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿದ್ದ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ (ಕಾನೀನಿನಿ) ಡಿಸೆಂಬರ್ 2022ರಲ್ಲಿ ನಡೆಸಲು ನಿಗದಿಯಾಗಿದ್ದ ವಾರ್ಷಿಕ ಸಾಮಾನ್ಯ ಸಭೆಯನ್ನು ಸೆಪ್ಟಂಬರ್ 2023ಕ್ಕೆ ಮುಂದೂಡಲಾಗಿದ್ದಿತು.

ನಿರ್ದೇಶಕರನ್ನು ನೇಮಕ ಮತ್ತು ತೆಗೆದುಹಾಕುವಿಕೆ / ಬದಲಾಯಿಸುವ ಕೆಲಸವು ಕರ್ನಾಟಕ ಸರ್ಕಾರದಿಂದ ಆಗಿರುವ ಕಾರಣ, ರಾಜೀನಾಮೆಯ ಯಾವುದೇ ಘಟನೆಗಳನ್ನು ಗಮನಿಸಲಿಲ್ಲ. ಕಂಪನಿಯಲ್ಲಿ ಎಲ್ಲೆಲ್ಲಿ ಸ್ವತಂತ್ರ ನಿರ್ದೇಶಕರುಗಳನ್ನು ಬದಲಾಯಿಸಲಾಗಿರುವುದೋ ಅಂತಹ ಕಡೆಗಳಲ್ಲಿ ಹೊಸ ನೇಮಕಾತಿಗಳನ್ನು ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿರುವುದು.

***ಸ್ವತಂತ್ರ ನಿರ್ದೇಶಕರುಗಳ ಪ್ರತ್ಯೇಕ ಸಭೆಗಳು***

**3.4.8** ಪ್ರತೀ ಹಣಕಾಸು ವರ್ಷವೂ, ತಮ್ಮ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ಮತ್ತು ಸಮಂಜಸವಾಗಿ ನಿರ್ವಹಿಸುವ ಸಲುವಾಗಿ ನಿರ್ದೇಶಕರುಗಳ ಮಂಡಳಿಗೆ ಅಗತ್ಯವಾದ ಕಂಪನಿಯ ಆಡಳಿತವರ್ಗ ಮತ್ತು ನಿರ್ದೇಶಕರುಗಳ ಮಂಡಳಿಯ ನಡುವೆ ಗುಣಮಟ್ಟದ, ಪರಿಮಾಣದ ಮತ್ತು ಸಮಯೋಚಿತ ಮಾಹಿತಿಯ ಹರಿವನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಕಂಪನಿಯ ಸ್ವತಂತ್ರ ನಿರ್ದೇಶಕರು, ನಿರ್ದೇಶಕರುಗಳ ಮಂಡಳಿಯ ಸ್ವತಂತ್ರಯೇತರ ನಿರ್ದೇಶಕರು ಮತ್ತು ಆಡಳಿತವರ್ಗದ ಸದಸ್ಯರ ಹಾಜರಾತಿ ಇಲ್ಲದೆಯೇ ಕನಿಷ್ಠ ಒಂದು ಸಭೆಯನ್ನಾದರೂ ನಡೆಸತಕ್ಕದ್ದು ಎಂಬುದಾಗಿ ಅಧಿನಿಯಮದ ಷೆಡ್ಯೂಲು IV ಕಂಡಿಕೆ (VII) (1) ನಿರ್ದಿಷ್ಟಪಡಿಸಿರುವುದು. ಮುಂದುವರೆದು, ಕಂಪನಿಯ ಎಲ್ಲಾ ಸ್ವತಂತ್ರ ನಿರ್ದೇಶಕರುಗಳು ಅಂತಹ ಸಭೆಯಲ್ಲಿ ಹಾಜರಿರಲು ಪ್ರಯತ್ನಿಸತಕ್ಕದ್ದು ಎಂಬುದಾಗಿ ಉಪ–ಕಂಡಿಕೆ (2) ನಿರ್ದಿಷ್ಟಪಡಿಸಿರುತ್ತದೆ.

ಕೇವಲ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ (ಸೆಸ್ಕ್) ಸ್ವತಂತ್ರ ನಿರ್ದೇಶಕರುಗಳು ಮಾತ್ರ 2022–23 ಹಣಕಾಸು ಸಾಲಿನಲ್ಲಿ ಪ್ರತ್ಯೇಕ ಸಭೆಯನ್ನು ನಡೆಸಿದ್ದರು. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯಲ್ಲಿ (ಕೆಎಸ್‌ಡಿಎಲ್) ನಿರ್ದೇಶಕರುಗಳ ಮಂಡಳಿಯಲ್ಲಿ ಕೇವಲ ಒಬ್ಬರು ಸ್ವತಂತ್ರ ನಿರ್ದೇಶಕರು ಇದ್ದರಾದ್ದರಿಂದ ಸಭೆಯನ್ನು ನಡೆಸುವ ಅಗತ್ಯತೆಯಿರಲಿಲ್ಲ.

## 3.5 ನಿರ್ದೇಶಕರುಗಳ ಮಂಡಳಿಯ ಸಭೆಗಳು

***ನಿರ್ದಿಷ್ಟಪಡಿಸಲಾಗಿರುವಂತಹ ಕನಿಷ್ಠ ಸಂಖ್ಯೆಗಳ ನಿರ್ದೇಶಕರುಗಳ ಮಂಡಳಿಯ ಸಭೆಗಳನ್ನು ನಡೆಸುವುದು***

**3.5.1** ಪ್ರತೀ ಕಂಪನಿಯು ಪ್ರತೀ ವರ್ಷವೂ ತನ್ನ ನಿರ್ದೇಶಕರುಗಳ ಮಂಡಳಿಯ ಕನಿಷ್ಠ ನಾಲ್ಕು ಸಭೆಗಳನ್ನು, ಸತತವಾದ ಎರಡು ಸಭೆಗಳ ನಡುವೆ ಒಂದು ನೂರ ಇಪ್ಪತ್ತು ದಿನಗಳಿಗಿಂತ ಅಧಿಕ ಅಂತರ ಇರದ ರೀತಿಯಲ್ಲಿ, ನಡೆಸತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 173 (1) ನಿರ್ದಿಷ್ಟಪಡಿಸಿರುವುದು.

ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಎಸ್‌ಸಿಎಲ್, ಕಿಯಾನಿಕ್ಸ್ ಮತ್ತು ಕೆಎಫ್‌ಸಿಎಸ್‌ಸಿಎಲ್) ಪ್ರಸಕ್ತ ಸಾಲಿನಲ್ಲಿ ನಿರ್ದೇಶಕರುಗಳ ಮಂಡಳಿಯ ಕೇವಲ ಮೂರು ಸಭೆಗಳನ್ನು ನಡೆಸಿದ್ದವಾದ್ದರಿಂದ ಅಗತ್ಯತೆಗಳ ಅನುಪಾಲನೆಯಲ್ಲಿ ವಿಫಲಗೊಂಡಿದ್ದವು.

ಈ ಕೆಳಗಿನ **ಕೋಷ್ಟಕ ಸಂಖ್ಯೆ 3.2**ರ ತಿಳಿಸಿರುವಂತೆ ಆರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ 120 ದಿನಗಳಿಗೂ ಅಧಿಕ ಅಂತರಗಳ ನಡುವೆ ನಿರ್ದೇಶಕರುಗಳ ಮಂಡಳಿಯ ಸಭೆಗಳನ್ನು ನಡೆಸಲಾಗಿದ್ದಿತು:

**ಕೋಷ್ಟಕ ಸಂಖ್ಯೆ 3.2: 120 ದಿನಗಳಿಗಿಂತ ಅಧಿಕ ಅಂತರದಲ್ಲಿ ನಿರ್ದೇಶಕರುಗಳ ಮಂಡಳಿಯ ಸಭೆಗಳನ್ನು ನಡೆಸಿರುವುದರ ವಿವರಗಳು**

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ಹಿಂದಿನ ಸಭೆಯ ದಿನಾಂಕ | ನಂತರದ ಸಭೆಯ ದಿನಾಂಕ | ದಿನಗಳ ನಡುವಿನ ಅಂತರ | ಷರಾ |
|---|---|---|---|---|---|
| 1 | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 137 / 11.03.2022 | 139 / 29.08.2022 | 171 | ಜುಲೈ 2022ರಲ್ಲಿ ನಿಗದಿಯಾಗಿದ್ದ ಒಂದು ಸಭೆಯನ್ನು ಕೋರಂ ಕೊರತೆಯಿಂದ ನಡೆಸಲಿಲ್ಲ. |
| 2 | ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ | 134 / 04.07.2022 | 135 / 28.11.2022 | 147 | ಯಾವುದೇ ಕಾರಣವನ್ನು ಕೊಟ್ಟಿರುವುದಿಲ್ಲ |
| 3 | ಕರ್ನಾಟಕ ನೀರಾವರಿ ನಿಗಮ ನಿಯಮಿತ | 99 / 04.07.2022 | 100 / 17.12.2022 | 166 | ಯಾವುದೇ ಕಾರಣವನ್ನು ಕೊಟ್ಟಿರುವುದಿಲ್ಲ |

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ಹಿಂದಿನ ಸಭೆಯ ದಿನಾಂಕ | ನಂತರದ ಸಭೆಯ ದಿನಾಂಕ | ದಿನಗಳ ನಡುವಿನ ಅಂತರ | ಷರಾ |
|---|---|---|---|---|---|
| 4 | ಕಾವೇರಿ ನೀರಾವರಿ ನಿಗಮ ನಿಯಮಿತ | 77 / 05.07.2022 | 78 / 30.12.2022 | 178 | ಯಾವುದೇ ಕಾರಣವನ್ನು ಕೊಟ್ಟಿರುವುದಿಲ್ಲ |
| 5 | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ | 204 / 21.10.2022 | xxx | 161 | 205ನೇ ಸಭೆಯನ್ನು ಮಾರ್ಚ್ 2023ರವರೆಗೆ ನಡೆಸಲಿಲ್ಲ |
| 6 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ | 305/ 13.01.2022 | 306 /02.08.2022 | 201 | ಯಾವುದೇ ಕಾರಣವನ್ನು ಕೊಟ್ಟಿರುವುದಿಲ್ಲ |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹವಾದ ಮಾಹಿತಿ/ದತ್ತಾಂಶ*

***ನಿರ್ದೇಶಕರುಗಳ ಮಂಡಳಿಯ ಸಭೆ ನಡೆಸಲು ನೋಟೀಸು ನೀಡುವಿಕೆ***

**3.5.2** ಅಧಿನಿಯಮದ ಪರಿಚ್ಛೇದ 173 (3) ಅನುಸಾರ, ಮಂಡಳಿಯ ಸಭೆಯನ್ನು ಏಳು ದಿನಗಳಿಗಿಂತ ಕಡಿಮೆ ಇಲ್ಲದಂತೆ ನೋಟೀಸು ನೀಡುವ ಮೂಲಕ ಕರೆಯಬೇಕು, ನೋಟೀಸನ್ನು ಲಿಖಿತ ರೂಪದಲ್ಲಿ, ಖುದ್ದಾಗಿ ಡೆಲಿವರಿ ಮಾಡುವ ಮೂಲಕ ಅಥವಾ ಅಂಚೆಯ ಮೂಲಕ ಅಥವಾ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಕಳುಹಿಸಬೇಕು. ಕಡೆಯ ಪಕ್ಷ ಒಬ್ಬರು ಸ್ವತಂತ್ರ ನಿರ್ದೇಶಕರು ಹಾಜರಿದ್ದರೆ, ಸಭೆಯನ್ನು ಕಡಿಮೆ ನೋಟೀಸು ಅವಧಿಯಲ್ಲಿ ಕರೆಯಬಹುದು. ಸ್ವತಂತ್ರ ನಿರ್ದೇಶಕರ ಅನುಪಸ್ಥಿತಿಯಲ್ಲಿ, ಮಂಡಳಿಯ ನಿರ್ಧಾರಗಳು ಒಬ್ಬರು ಸ್ವತಂತ್ರ ನಿರ್ದೇಶಕರಿಂದ ಅನುಮೋದನೆ ಆದ ಬಳಿಕವೇ ಅಂತಿಮಗೊಳ್ಳುತ್ತದೆ.

ಪ್ರಸಕ್ತ ಸಾಲಿನಲ್ಲಿ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ನಡೆಸಿದ 134 ನಿರ್ದೇಶಕರುಗಳ ಮಂಡಳಿಯ ಸಭೆಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಕೇವಲ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಎಸ್‌ಸಿಎಲ್ ಮತ್ತು ಕಿಯಾನಿಕ್ಸ್) ಏಳು ದಿನಗಳಿಗೂ ಅಧಿಕ ಪೂರ್ವಭಾವಿ ನೋಟೀಸುಗಳನ್ನು ನೀಡುವ ಮೂಲಕ ತಮ್ಮ ಎಲ್ಲಾ ಆರು (ತಲಾ ಮೂರು) ಸಭೆಗಳನ್ನು ನಡೆಸಿದ್ದವು.
- 24 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ನಡೆಸಲಾದಂತಹ ಉಳಿದ 128 ಸಭೆಗಳ ಪೈಕಿ 77 ನಿರ್ದೇಶಕರುಗಳ ಮಂಡಳಿ ಸಭೆಗಳು ಏಳು ದಿನಗಳಿಗೂ ಕಡಿಮೆ ಅವಧಿಯ ನೋಟೀಸು ನೀಡುವ ಮೂಲಕ ನಡೆಸಲಾದ ಸಭೆಗಳಾಗಿದ್ದವು ಮತ್ತು ಆ 24 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (***ಕಂಡಿಕೆ 3.3.2***ರಲ್ಲಿ ಉಲ್ಲೇಖಿಸಲ್ಪಟ್ಟಿರುವವುಗಳು) ತಮ್ಮ ನಿರ್ದೇಶಕರುಗಳ ಮಂಡಳಿಯಲ್ಲಿ ಅನುವುಗಳ ಪಾಲನೆಗಾಗಿ ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರಲಿಲ್ಲ.

***ನಿರ್ದೇಶಕರುಗಳ ಮಂಡಳಿಯಲ್ಲಿ ಕೋರಂ***

**3.5.3** ಅಧಿನಿಯಮದ ಪರಿಚ್ಛೇದ 174 (1)ರ ಅನುಸಾರ, ಕಂಪನಿಯ ನಿರ್ದೇಶಕರುಗಳ ಮಂಡಳಿಯ ಸಭೆಯೊಂದಕ್ಕೆ ಕೋರಂ ಅದರ ಒಟ್ಟು ಸಾಮರ್ಥ್ಯದ ಮೂರನೇ–ಒಂದು ಅಥವಾ ಇಬ್ಬರು ನಿರ್ದೇಶಕರು, ಯಾವುದು ಹೆಚ್ಚೋ ಅದು, ಇರತಕ್ಕದ್ದು.

ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಆರ್‌ಡಿಸಿಎಲ್) ಜುಲೈ 2022ರಲ್ಲಿ ನಿಗಧಿಯಾಗಿದ್ದ ತನ್ನ 138ನೇ ಮಂಡಳಿಯ ಸಭೆಯನ್ನು ಕೋರಂ ಕೊರತೆಯ ಕಾರಣ ನಡೆಸಲು ಆಗಿರಲಿಲ್ಲ ಎಂಬುದಾಗಿ ತಿಳಿಸಿರುವುದು.

***ನಿರ್ದೇಶಕರುಗಳ ಮಂಡಳಿಯ ಸಭೆಗಳಲ್ಲಿ ಅನುಪಸ್ಥಿತಿಯ ಕಾರಣ ಅಂತಹ ನಿರ್ದೇಶಕರನ್ನು ತೆಗೆದುಹಾಕುವುದು***

**3.5.4** ಅಧಿನಿಯಮದ ಪರಿಚ್ಛೇದ 167 (1) (ಬಿ) ಅನುಸಾರ, ಓರ್ವ ನಿರ್ದೇಶಕರು ಹನ್ನೆರಡು ತಿಂಗಳುಗಳ ಅವಧಿಯಲ್ಲಿ ನಡೆದ ನಿರ್ದೇಶಕರುಗಳ ಮಂಡಳಿಯ ಎಲ್ಲಾ ಸಭೆಗಳಲ್ಲಿ, ಮಂಡಳಿಯಿಂದ ಅನುಪಸ್ಥಿತಿಯ ರಜೆಯನ್ನು ಪಡೆದು ಅಥವಾ ಪಡೆಯದೆ ಗೈರುಹಾಜರಾದಲ್ಲಿ, ಅಂತಹ ನಿರ್ದೇಶಕರ ಕಛೇರಿಯು ತೆರವಾಗತಕ್ಕದ್ದು ((ಅಂತಹ ನಿರ್ದೇಶಕರನ್ನು ತೆಗೆದುಹಾಕುವುದು).

ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಐವರು ನಿರ್ದೇಶಕರುಗಳು, ಕೆಳಗಿನ **ಕೋಷ್ಟಕ 3.3**ಯಲ್ಲಿ ತೋರಿಸಿರುವಂತೆ, 2022-23ರ ಹಣಕಾಸು ಸಾಲಿನಲ್ಲಿ ಜರುಗಿದ ನಿರ್ದೇಶಕರುಗಳ ಮಂಡಳಿಯ ಎಲ್ಲಾ ಸಭೆಗಳಲ್ಲಿ ಗೈರುಹಾಜರಾಗಿದ್ದರು:

**ಕೋಷ್ಟಕ ಸಂಖ್ಯೆ 3.3: ನಿರ್ದೇಶಕರುಗಳ ಮಂಡಳಿಯ ಎಲ್ಲಾ ಸಭೆಗಳಲ್ಲಿ ಗೈರುಹಾಜರಾಗಿದ್ದ ನಿರ್ದೇಶಕರುಗಳ ವಿವರಗಳು**

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ವರ್ಷದ ಅವಧಿಯಲ್ಲಿ ನಡೆಸಲಾದ ನಿರ್ದೇಶಕರುಗಳ ಮಂಡಳಿ ಸಭೆಗಳ ಸಂಖ್ಯೆ | ಎಲ್ಲಾ ಸಭೆಗಳಲ್ಲಿ ಗೈರುಹಾಜರಾಗಿದ್ದ ನಿರ್ದೇಶಕರುಗಳ ಸಂಖ್ಯೆ |
|---|---|---|---|
| 1 | ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ | 5 | 1 |
| 2 | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 4 | 1 |
| 3 | ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ | 5 | 1 |
| 4 | ಕಾವೇರಿ ನೀರಾವರಿ ನಿಗಮ ನಿಯಮಿತ | 5 | 1 |
| 5 | ಬೆಂಗಳೂರು ಸ್ಮಾರ್ಟ್ ಸಿಟಿ ನಿಯಮಿತ | 4 | 1 |

***ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಲಾದ ಮಾಹಿತಿ / ದತ್ತಾಂಶ***

ಲೆಕ್ಕಪರಿಶೋಧನೆಗೆ ಸಲ್ಲಿಸಲಾದ ನಿರ್ದೇಶಕರುಗಳ ಪಟ್ಟಿಯು ಸ್ಥಿತಿಗತಿಯನ್ನು "ಈ ದಿನಾಂಕದವರೆಗೆ" ಎಂದು ಸೂಚಿಸುತ್ತಿರುವ ಕಾರಣ, ಅಂತಹ ನಿರ್ದೇಶಕರುಗಳ (ಡಿಸೆಂಬರ್ 2023)ಮೇಲೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಎಂಬುದಾಗಿ ಅರ್ಥೈಸುತ್ತದೆ. ಪ್ರಸಕ್ತ ಅವಧಿಯಲ್ಲಿ ಜರುಗಿನ ನಿರ್ದೇಶಕರುಗಳ ಮಂಡಳಿಯ ಎಲ್ಲಾ ಸಭೆಗಳಲ್ಲಿ ಗೈರುಹಾಜರಾಗಿದ್ದರಾದರೂ ಅವರು ನಿರ್ದೇಶಕರುಗಳ ಮಂಡಳಿಯಲ್ಲಿ ಮುಂದುವರೆದಿದ್ದಾರೆ ಎಂಬುದನ್ನು ಸೂಚಿಸುತ್ತದೆ.

***ನಿರ್ದೇಶಕರುಗಳ ಮಂಡಳಿಯ ಮುಂದೆ ಮಂಡಿಸಬೇಕಾದ ಮಾಹಿತಿ***

**3.5.5** ನಿಯಂತ್ರಣ 17 (7)ರ ಜೊತೆಯಲ್ಲಿ ಓದಲ್ಪಡುವ ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಪಟ್ಟಿಮಾಡುವಿಕೆಯ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಂತ್ರಣಗಳು, 2015ರ ಷೆಡ್ಯೂಲು IIರ ಭಾಗ ಎ, ಇದು, ಪಟ್ಟಿಯಲ್ಲಿ ಸೇರಿಸಲಾಗಿರುವಂತಹ ಕಂಪನಿಗಳ ನಿರ್ದೇಶಕರುಗಳ ಮಂಡಳಿಯ ಸಭೆಯ ಮುಂದೆ ಮಂಡಿಸಬೇಕಾದ ಕನಿಷ್ಠ ಮಾಹಿತಿಯನ್ನು (15 ವಿಷಯಗಳ ಮೇಲೆ) ನಿರ್ದಿಷ್ಟಪಡಿಸಿರುತ್ತದೆ.

ಸಾಂಸ್ಥಿಕ ಆಡಳಿತ ನಿರ್ವಹಣೆಯ ಮೇಲಿನ ಪರಿಶೀಲನಾ/ಖಚಿತಪಡಿಸಿಕೊಳ್ಳುವಿಕೆ ಪಟ್ಟಿಯನ್ನು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪ್ರತಿಕ್ರಿಯೆಗಳೊಂದಿಗೆ ವಿಶ್ಲೇಷಣೆ ಮಾಡಿದಾಗ, ನಿರ್ದೇಶಕರುಗಳ ಮಂಡಳಿಯ ಮುಂದೆ ವಾರ್ಷಿಕ ಕಾರ್ಯಾಚರಣಾ ಪೂರ್ವಭಾವಿ ಯೋಜನೆಗಳು ಮತ್ತು ಆಯವ್ಯಯಗಳು, ಬಂಡವಾಳ ಆಯವ್ಯಯಗಳು, ನಿರ್ದೇಶಕರುಗಳ ಮಂಡಳಿಯ ಮತ್ತು ಉಪ–ಸಮಿತಿಗಳ ನಡವಳಿಗಳು, ನಿರ್ದೇಶಕರುಗಳ ಮಂಡಳಿಯ ಮಟ್ಟಕ್ಕಿಂತ ಕೆಳಗಿನ ಹಿರಿಯ ಅಧಿಕಾರಿಗಳ ನೇಮಕಾತಿ ಮತ್ತು ಸಂಭಾವನೆ, ಕಂಪನಿಗೆ ಮತ್ತು ಕಂಪನಿಯಿಂದ ಹಣಕಾಸು ಬಾಧ್ಯತೆಗಳಲ್ಲಿ ಆಗಿರುವಂತಹ ಸಾಲ ಮರುಪಾವತಿ ಮಾಡಲು ತಪ್ಪಿರುವ ದೃಷ್ಟಾಂತಗಳು, ಈ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಮಂಡಿಸಲಾಗಿರುತ್ತದೆ.

## 3.6 ನಿರ್ದೇಶಕರುಗಳ ಮಂಡಳಿಯ ಸಮಿತಿಗಳು

(i) ರೂಪಾಯಿಗಳು ಹತ್ತು ಕೋಟಿ ಅಥವಾ ಅದಕ್ಕೂ ಅಧಿಕ ಪಾವತಿಸಲ್ಪಟ್ಟಿರುವ ಷೇರು ಬಂಡವಾಳ ಅಥವಾ (ii) ರೂಪಾಯಿಗಳು ಒಂದು ನೂರು ಕೋಟಿ ಅಥವಾ ಅದಕ್ಕೂ ಅಧಿಕ ವಹಿವಾಟನ್ನು ಮಾಡಿರುವ ಅಥವಾ (iii) ರೂಪಾಯಿಗಳು ಐವತ್ತು ಕೋಟಿ ಮೀರಿದ ಒಟ್ಟಾರೆ ಬಾಕಿ ಉಳಿದಿರುವ ಸಾಲ, ಡಿಬೆಂಚರುಗಳು ಮತ್ತು ಠೇವಣಿಗಳನ್ನು ಹೊಂದಿರುವ ಪ್ರತಿಯೊಂದೂ ಸಾರ್ವಜನಿಕ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಒಂದು ಲೆಕ್ಕಪರಿಶೋಧನಾ ಸಮಿತಿ ಮತ್ತು ಒಂದು ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ಮಂಡಳಿಯಲ್ಲಿ ರಚಿಸಿರತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 177 (1) ಮತ್ತು ಪರಿಚ್ಛೇದ 178 (1) ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ (ನಿರ್ದೇಶಕರುಗಳ ಮಂಡಳಿಯ ಸಭೆಗಳು ಮತ್ತು ಅದರ ಅಧಿಕಾರಗಳು) ನಿಯಮಗಳು, 2014ರ ನಿಯಮ 6 ಅಗತ್ಯತೆಯನ್ನು ಹೊಂದಿರುತ್ತದೆ.

ಮೇಲ್ಕಂಡ ಅನುವುಗಳು ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ಡಿಯುಬಿಸಿಡಿಸಿಎಲ್ ಮತ್ತು ಕೆಆರ್ಐಡಿಎಲ್) ಅನ್ವಯಗೊಳ್ಳುತ್ತಿರಲಿಲ್ಲ, ಏಕೆಂದರೆ ಇವುಗಳು ಖಾಸಗಿ ನಿಯಮಿತ ಕಂಪನಿಗಳಾಗಿ ನೋಂದಾಯಿಸಲ್ಪಟ್ಟಿರುತ್ತವೆ.

***ಲೆಕ್ಕಪರಿಶೋಧನಾ ಸಮಿತಿ***

***ಲೆಕ್ಕಪರಿಶೋಧನಾ ಸಮಿತಿಯ ಸಂಯೋಜನೆ***

**3.6.1** ಲೆಕ್ಕಪರಿಶೋಧನಾ ಸಮಿತಿಯು ಸ್ವತಂತ್ರ ನಿರ್ದೇಶಕರು ಬಹುಮತ ಹೊಂದಿರುವ ರೀತಿ ಕನಿಷ್ಠ ಮೂವರು ನಿರ್ದೇಶಕರುಗಳನ್ನು ಹೊಂದಿರತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 177 (2) ನಿರ್ದಿಷ್ಟಪಡಿಸಿರುತ್ತದೆ. ಮುಂದುವರೆದು, ಸಮಿತಿಯ ಅಧ್ಯಕ್ಷರೂ ಸೇರಿದಂತೆ ಲೆಕ್ಕಪರಿಶೋಧನಾ ಸಮಿತಿಯ ಬಹುಸಂಖ್ಯಾತ ಸದಸ್ಯರುಗಳು ಹಣಕಾಸು ತ:ಖ್ತೆಗಳನ್ನು ಓದಲು ಮತ್ತು ಅರ್ಥಮಾಡಿಕೊಳ್ಳಲು ಸಾಮರ್ಥ್ಯವನ್ನು ಹೊಂದಿರುವವರು ಆಗಿರತಕ್ಕದ್ದು.

ಎಲ್ಲಾ 24 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಲೆಕ್ಕಪರಿಶೋಧನಾ ಸಮಿತಿಗಳನ್ನು ರಚಿಸಿದ್ದವು ಇವುಗಳಲ್ಲಿ ಬಹುತೇಕ ಸದಸ್ಯರುಗಳು ಹಣಕಾಸು ತ:ಖ್ತೆಗಳನ್ನು ಓದುವ ಮತ್ತು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ ವ್ಯಕ್ತಿಗಳಾಗಿದ್ದರು. ಆದಾಗ್ಯೂ, ಲೆಕ್ಕಪರಿಶೋಧನೆಯು ಕೆಳಕಂಡ ಅಂಶಗಳನ್ನು ಗಮನಿಸಿತು:

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯಲ್ಲಿ (ಬಿಎಸ್‌ಸಿಎಲ್–ಬೆಳಗಾವಿ) ಲೆಕ್ಕಪರಿಶೋಧನಾ ಸಮಿತಿಯು ಇಬ್ಬರು ನಿರ್ದೇಶಕರುಗಳನ್ನು ಮಾತ್ರ ಹೊಂದಿದ್ದಿತು.

- ಕಂಡಿಕೆ 3.3.2ರಲ್ಲಿ ಉಲ್ಲೇಖಿಸಲಾಗಿರುವ ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಲೆಕ್ಕಪರಿಶೋಧನಾ ಸಮಿತಿಗಳನ್ನು ರಚಿಸುವ ಸಲುವಾಗಿ ಅವುಗಳ ನಿರ್ದೇಶಕರುಗಳ ಮಂಡಳಿಗಳಲ್ಲಿ ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರಲಿಲ್ಲ.

- ಮುಂದುವರೆದು, ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಮೆಸ್ಕಾಂ, ಕೆಎಸ್‌ಡಿಎಲ್, ಕಾನೀನಿನಿ ಮತ್ತು ಬಿಎಸ್‌ಸಿಎಲ್–ಬೆಂಗಳೂರು) ಲೆಕ್ಕಪರಿಶೋಧನಾ ಸಮಿತಿಗಳಲ್ಲಿ ಸ್ವತಂತ್ರ ನಿರ್ದೇಶಕರು ಬಹುಮತದಲ್ಲಿ ಇರಲಿಲ್ಲ.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಫ್‌ಸಿಎಸ್‌ಸಿಎಲ್) ಅಧಿನಿಯಮದ ಪರಿಚ್ಛೇದ 177 (8)ರ ಅನುಪಾಲನೆಯ ಸಲುವಾಗಿ ಸಿದ್ಧಪಡಿಸಿದ ಮತ್ತು 2022–23ರ ವರ್ಷದಲ್ಲಿ ನಡೆಸಲಾದ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಲಾದ ನಿರ್ದೇಶಕರುಗಳ ಮಂಡಳಿಯ ವರದಿಯಲ್ಲಿ ಲೆಕ್ಕಪರಿಶೋಧನಾ ಸಮಿತಿಯ ಸಂಯೋಜನೆಯನ್ನು ಬಹಿರಂಗಪಡಿಸಿರಲಿಲ್ಲ.

**ಲೆಕ್ಕಪರಿಶೋಧನಾ ಸಮಿತಿಯ ಉಲ್ಲೇಖದ ನಿಯಮಗಳು**

**3.6.2** ಪ್ರತಿಯೊಂದು ಲೆಕ್ಕಪರಿಶೋಧನಾ ಸಮಿತಿಯು ನಿರ್ದೇಶಕರುಗಳ ಮಂಡಳಿಯಿಂದ ಲಿಖಿತರೂಪದಲ್ಲಿ ನಿರ್ದಿಷ್ಟಪಡಿಸಲಾಗಿರುವ ಉಲ್ಲೇಖದ ನಿಯಮಗಳಿಗೆ ಅನುಗುಣವಾಗಿ ಕೆಲಸ ಮಾಡತಕ್ಕದ್ದು, ಇದು ಇತರ ವಿಷಯಗಳ ಜೊತೆಗೆ, ಲೆಕ್ಕಪರಿಶೋಧಕರ ನೇಮಕಾತಿ, ಸಂಭಾವನೆ ಮತ್ತು ನೇಮಕಾತಿಯ ನಿಯಮಗಳ ಶಿಫಾರಸು, ಲೆಕ್ಕಪರಿಶೋಧಕರ ಸ್ವಾತಂತ್ರ್ಯ ಮತ್ತು ಕಾರ್ಯಸಾಧನೆ ಹಾಗೂ ಲೆಕ್ಕಪರಿಶೋಧನೆಯ ಪ್ರಕ್ರಿಯೆಯ ಪರಿಣಾಮಕಾರಿತ್ವವನ್ನು ವಿಮರ್ಶಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು, ಆಂತರಿಕ ಹಣಕಾಸು ನಿಯಂತ್ರಣಗಳು ಮತ್ತು ಸಂಭಾವ್ಯ ಅಪಾಯ ನಿರ್ವಹಣಾ ವ್ಯವಸ್ಥೆಗಳು ಇತ್ಯಾದಿಗಳ ಸಮೀಕ್ಷೆ ಇತ್ಯಾದಿ ವಿಷಯಗಳನ್ನು ಒಳಗೊಂಡಿರುತ್ತದೆ ಎಂಬುದಾಗಿ ಅಧಿನಿಯಮದ ಪರಿಚ್ಛೇದ 177 (4) ತಿಳಿಸಿರುವುದು. ಎಲ್ಲೆಲ್ಲಿ ಲೆಕ್ಕಪರಿಶೋಧನಾ ಸಮಿತಿಯ ಯಾವುದೇ ಶಿಫಾರಸನ್ನು ಮಂಡಳಿಯು ಒಪ್ಪಿಕೊಂಡಿರುವುದಿಲ್ಲವೋ, ಅದನ್ನು ಕಾರಣಗಳೊಂದಿಗೆ ನಿರ್ದೇಶಕರುಗಳ ಮಂಡಳಿಯ ವರದಿಯಲ್ಲಿ ಅಧಿನಿಯಮದ ಪರಿಚ್ಛೇದ 177(8)ರ ಅನುಸಾರ ಬಹಿರಂಗಪಡಿಸತಕ್ಕದ್ದು

ಆರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಡಿಎಲ್, ಕೆಎಸ್‌ಎಂಸಿಎಲ್, ಕೆಎಸ್‌ಐಐಡಿಸಿ, ಕೆಆರ್‌ಡಿಸಿಎಲ್, ಕಿಯಾನಿಕ್ಸ್ ಮತ್ತು ಕೆಎಫ್‌ಸಿಎಸ್‌ಸಿಎಲ್) ಲಿಖಿತರೂಪದಲ್ಲಿ ನಿರ್ದಿಷ್ಟಪಡಿಸಲಾಗಿರುವ ಉಲ್ಲೇಖದ ನಿಯಮಗಳನ್ನು ರೂಪಿಸಿರುವುದಿಲ್ಲ, ಆದರೆ ಅಧಿನಿಯಮದ ಪರಿಚ್ಛೇದ 177 (4)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಅನ್ವಯವಾಗುವ ವಿಷಯಗಳನ್ನು ಪರಿಗಣಿಸಿರುವುದಾಗಿ ಹೇಳಿಕೊಂಡಿರುತ್ತವೆ. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಜೆಸ್ಕಾಂ) ಇಆರ್‌ಪಿ ಕಾರ್ಯಗತಗೊಳಿಸುವುದು ಬಾಕಿ ಇರುವ ಹಿನ್ನೆಲೆಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳು ಮತ್ತು ಅಪಾಯ ನಿರ್ವಹಣಾ ವ್ಯವಸ್ಥೆಗಳ ಮೌಲ್ಯಮಾಪನವನ್ನು ಕೈಗೊಂಡಿರುವುದಿಲ್ಲ ಎಂಬುದಾಗಿ ತಿಳಿಸಿರುವುದು.

ಎಲ್ಲಾ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ನಿರ್ದೇಶಕರುಗಳ ಮಂಡಳಿಯಿಂದ ಲೆಕ್ಕಪರಿಶೋಧನಾ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಂಡಿರದ ಉದಾಹರಣೆಗಳು ಇರುವುದಿಲ್ಲ ಎಂಬುದಾಗಿ ತಿಳಿಸಿರುತ್ತವೆ.

***ವ್ಹಿಜಲ್ ಬ್ಲೋಯರ್ ವ್ಯವಸ್ಥೆ***

**3.6.3** (ಎ) ಕಂಪನಿಗಳ (ಮಂಡಳಿ ಸಭೆಗಳು ಮತ್ತು ಅದರ ಅಧಿಕಾರಗಳು)ನಿಯಮಗಳು, 2014 ರ ನಿಯಮ 7 (1) ನೊಂದಿಗೆ ಕಾಯಿದೆಯ ಪರಿಚ್ಛೇಧ 177 (9) ನೊಂದಿಗೆ ಓದಲಾಗಿ (i) ಎಲ್ಲಾ ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿ ಮಾಡಲಾದ ಕಂಪನಿಗಳು, ಅಥವಾ (ii) ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುವ ಕಂಪನಿಗಳು ಅಥವಾ (iii) ಬ್ಯಾಂಕ್‌ಗಳು ಮತ್ತು ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ₹ 50 ಕೋಟಿಗಿಂತ ಹೆಚ್ಚಿನ ಹಣವನ್ನು ಎರವಲು ಪಡೆದ ಕಂಪನಿಗಳನ್ನು ನಿರ್ದೇಶಕರು ಮತ್ತು ಉದ್ಯೋಗಿಗಳಿಗೆ ನಿಜವಾದ ಕಾಳಜಿ ಅಥವಾ ಕುಂದುಕೊರತೆಗಳನ್ನು ವರದಿ ಮಾಡಲು ವಿಚಕ್ಷಣಾ ವ್ಯವಸ್ಥೆಯೊಂದನ್ನು ಸ್ಥಾಪಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿರುವುದು.

₹ 50 ಕೋಟಿಗಿಂತ ಅಧಿಕ ಸಾಲಗಳನ್ನು ಹೊಂದಿರುವಂತಹ ಹನ್ನೊಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[56] ವ್ಹಿಜಲ್ ಬ್ಲೋಯರ್ ವ್ಯವಸ್ಥೆಯನ್ನು ಸ್ಥಾಪಿಸಬೇಕಾಗಿತ್ತು. ಕೇವಲ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ (ಸಿ ಎನ್ ಎನ್ ಎಲ್) ಈ ಅವಶ್ಯಕತೆಗಳನ್ನು ಅನುಪಾಲನೆ ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

(ಬಿ) ಅಧಿನಿಯಮದ ಪರಿಚ್ಛೇದ 177 (10)ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ (ನಿರ್ದೇಶಕರುಗಳ ಮಂಡಳಿಗಳ ಸಭೆಗಳು ಮತ್ತು ಅದರ ಅಧಿಕಾರಗಳು) ನಿಯಮಗಳು, 2014ರ ನಿಯಮ 7 (4) ಅಂತಹ ವಿಚಕ್ಷಣಾ ವ್ಯವಸ್ಥೆಗಳು, ವಿಚಕ್ಷಣಾ ವ್ಯವಸ್ಥೆಯನ್ನು ಬಳಸುವ ಉದ್ಯೋಗಿಗಳು ಮತ್ತು

[56] ಕೆಪಿಸಿಎಲ್, ಆರ್‌ಪಿಸಿಎಲ್, ಕೆಪಿಟಿಸಿಎಲ್, ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಸೆಸ್ಕ್, ಜೆಸ್ಕಾಂ, ಕೆಬಿಜೆಎನ್‌ಎಲ್, ಕೆಎನ್‌ಎನ್‌ಎಲ್ ಮತ್ತು ಸಿಎನ್‌ಎನ್‌ಎಲ್.

ನಿರ್ದೇಶಕರುಗಳನ್ನು ಬಲಿಪಶುಗಳನ್ನಾಗಿ ಮಾಡುವುದರ ವಿರುದ್ಧ ಸಾಕಷ್ಟು ರಕ್ಷಣಾ ಕ್ರಮಗಳನ್ನು ಒದಗಿಸುವಂತೆ ಹಾಗೂ ವಿಶಿಷ್ಟ ಪ್ರಕರಣಗಳಲ್ಲಿ, ಲೆಕ್ಕಪರಿಶೋಧನಾ ಸಮಿತಿಯ ಅಧ್ಯಕ್ಷರು ಅಥವಾ ಲೆಕ್ಕಪರಿಶೋಧನಾ ಸಮಿತಿಯ ಪಾತ್ರವನ್ನು ನಿರ್ವಹಿಸಲು ನಾಮಕರಣಗೊಂಡಿರುವ ನಿರ್ದೇಶಕರನ್ನು ನೇರವಾಗಿ ಸಂಪರ್ಕಿಸಲು ಅವಕಾಶ ನೀಡಬೇಕೆಂದು ಅನುವು ಮಾಡಿರುತ್ತದೆ.

ಮುಂದುವರೆದು, ಪ್ರತೀ ಕಂಪನಿಯೂ ತನ್ನ ಜಾಲತಾಣದಲ್ಲಿ ಹಾಗೂ ತನ್ನ ನಿರ್ದೇಶಕರುಗಳ ಮಂಡಳಿಯ ವರದಿಯಲ್ಲಿ ವಿಚಕ್ಷಣಾ ವ್ಯವಸ್ಥೆಯ ಸ್ಥಾಪನೆಯ ಬಗ್ಗೆ ವಿವರಗಳನ್ನು ಬಹಿರಂಗಪಡಿಸುವ ಅಗತ್ಯತೆಯಿರುತ್ತದೆ.

ಜಾಲತಾಣವನ್ನು ಹೊಂದಿರದ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯನ್ನು (ಆರ್‌ಪಿಸಿಎಲ್) ಹೊರತುಪಡಿಸಿದಂತೆ ಎಲ್ಲಾ ಇತರ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅವಶ್ಯಕತೆಗಳ ಅನುಪಾಲನೆಯನ್ನು ಮಾಡಿರುತ್ತವೆ.

***ನಾಮನಿರ್ದೇಶನ ಮತ್ತು ಸಂಭಾವನೆಯ ಸಮಿತಿ***

**ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಸಂಯೋಜನೆ (ಎನ್‌ಆರ್‌ಸಿ)**

**3.6.4** ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯು ಮೂರು ಅಥವಾ ಅದಕ್ಕೂ ಹೆಚ್ಚಿನ ಅಧಿಕಾರಿಯೇತರ ನಿರ್ದೇಶಕರುಗಳನ್ನು ಒಳಗೊಂಡಿರತಕ್ಕದ್ದು, ಈ ಪೈಕಿ ಅರ್ಧಕ್ಕಿಂತ ಕಡಿಮೆಯಿಲ್ಲದ ಸಂಖ್ಯೆಯಲ್ಲಿ ಸ್ವತಂತ್ರ ನಿರ್ದೇಶಕರುಗಳು ಇರತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 178 (1) ನಿರ್ದಿಷ್ಟಪಡಿಸಿರುತ್ತದೆ.

ಹತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[57] ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸಿರಲಿಲ್ಲ. ಈ ಪೈಕಿ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಡಿಎಲ್ ಮತ್ತು ಕಾನೀನಿನಿ) ಸರ್ಕಾರಿ ಕಂಪನಿಗಳಿಗೆ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ರಚನೆಯು ಅನ್ವಯಗೊಳ್ಳುವುದಿಲ್ಲ ಎಂಬುದಾಗಿ ತಿಳಿಸಿರುವವು , ಆದರೆ ಇದು ಸರಿಯಲ್ಲ ಏಕೆಂದರೆ ವಿನಾಯಿತಿಯ ಅಧಿಸೂಚನೆಯು ಸರ್ಕಾರಿ ಕಂಪನಿಗಳಿಗೆ ಕೇವಲ ಭಾಗಶ: ವಿನಾಯಿತಿ ನೀಡುತ್ತದೆ – 'ಹಿರಿಯ ಆಡಳಿತವರ್ಗ' ಮತ್ತಿತರ ಉದ್ಯೋಗಿಗಳ ನೇಮಕಾತಿಗೆ ಸಂಬಂಧಿಸಿರುವುದನ್ನು ಹೊರತುಪಡಿಸಿದಂತೆ.

ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯನ್ನು ರಚಿಸಿರುವ ಉಳಿದ 14 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಈ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

- ಸಮಿತಿಯಲ್ಲಿ ಕೇವಲ ಇಬ್ಬರು ಸದಸ್ಯರಿದ್ದಂತಹ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ (ಬಿಎಸ್‌ಸಿಎಲ್–ಬೆಳಗಾವಿ) ಎನ್‌ಆರ್‌ಸಿಯು ಅವಶ್ಯವಿದ್ದ ಮೂವರು ಅಧಿಕಾರಿಯೇತರ ನಿರ್ದೇಶಕರುಗಳ ಕನಿಷ್ಠ ಸಂಖ್ಯೆಯನ್ನು ಹೊಂದಿರಲಿಲ್ಲ. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಹೆಸ್ಕಾಂ) ನಿರ್ದೇಶಕರುಗಳ ಸಮಿತಿಯಲ್ಲಿ ಕೇವಲ ಇಬ್ಬರು ಅಧಿಕಾರಿಯೇತರ ನಿರ್ದೇಶಕರುಗಳನ್ನು ಹೊಂದಿದ್ದಿತು.
- ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಬಿಎಸ್‌ಸಿಎಲ್–ಬೆಳಗಾವಿ ಮತ್ತು ಸಿಬಿಐಸಿ–ತುಮಕೂರು), ತಮ್ಮ ನಿರ್ದೇಶಕರುಗಳ ಮಂಡಳಿಗಳಲ್ಲಿ ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರಲಿಲ್ಲ ಮತ್ತು ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಬಿಎಸ್‌ಸಿಎಲ್–ಬೆಂಗಳೂರು) ತನ್ನ ನಿರ್ದೇಶಕರುಗಳ ಸಮಿತಿಯಲ್ಲಿ ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರಲಿಲ್ಲ. ಹೀಗಾಗಿ, ಈ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅಧಿನಿಯಮದ ಪರಿಚ್ಛೇದ 178(1)ರ ಅನುವುಗಳನ್ನು ಭಾಗಶ:ವಾಗಿ ಪಾಲಿಸಿದ್ದವು.

[57] ಕೆಎಸ್‌ಡಿಎಲ್, ಕೆಎಸ್‌ಎಂಸಿಎಲ್, ಎಚ್‌ಜಿಎಂಎಲ್, ಎಂಎಸ್‌ಐಎಲ್, ಕೆಎಸ್‌ಐಐಡಿಸಿ, ಕೆಆರ್‌ಡಿಸಿಎಲ್, ಸಿಎನ್‌ಎನ್‌ಎಲ್, ಕಿಯಾನಿಕ್ಸ್, ಕೆಎಫ್‌ಸಿಎಸ್‌ಸಿಎಲ್ ಮತ್ತು ಕೆಪಿಟಿಸಿಎಲ್ (ಸೆಪ್ಟೆಂಬರ್ 2023ರಲ್ಲಿ ರಚಿಸಲಾಗಿರುವುದು).

***ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಅಥವಾ ಯಾವುದೇ ಸದಸ್ಯರ ಹಾಜರಾತಿ***

**3.6.5** ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಅಧ್ಯಕ್ಷರು, ಅಥವಾ ಈ ಸಂಬಂಧದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ, ಅವರು ಅಧಿಕಾರ ನೀಡಿರುವ ಸಮಿತಿಯ ಇತರೆ ಯಾವುದೇ ಸದಸ್ಯರು, ಅಧಿನಿಯಮದ ಪರಿಚ್ಛೇದ 178 (7)ರ ಅನುಸಾರ ಕಂಪನಿಯ ಸಾಮಾನ್ಯ ಸಭೆಗಳಲ್ಲಿ ಹಾಜರಾಗುವ ಅಗತ್ಯತೆಯಿರುತ್ತದೆ.

ಎಲ್ಲಾ 14 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ಅಧ್ಯಕ್ಷರುಗಳು ಅಥವಾ ಸದಸ್ಯರು ಆರ್ಥಿಕ ವರ್ಷ 2022-23ರಲ್ಲಿ ಜರುಗಿದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಿದ್ದರು.

***ನಿರ್ದೇಶಕರುಗಳ ಮಂಡಳಿಗೆ ಸಂಭಾವನೆ ಕಾರ್ಯನೀತಿಯ ಶಿಫಾರಸು***

**3.6.6** ಅಧಿನಿಯಮದ ಪರಿಚ್ಛೇದ 178 (3)ರ ಅನುಸಾರ, ಸರ್ಕಾರಿ ಕಂಪನಿಗಳಿಗೆ ಅನ್ವಯವಾಗುವ ಮಟ್ಟಿಗೆ[58], ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ನಿರ್ದೇಶಕರ ಅರ್ಹತೆಗಳು, ಸಕಾರಾತ್ಮಕ ಗುಣಗಳು ಮತ್ತು ಓರ್ವ ನಿರ್ದೇಶಕರವರ ಸ್ವಾತಂತ್ರ್ಯತೆಯನ್ನು ನಿರ್ಣಯಿಸುವುದು ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಮತ್ತಿತರ ಉದ್ಯೋಗಿಗಳಿಗೆ ಸಂಭಾವನೆಗೆ ಸಂಬಂಧಿಸಿದಂತೆ, ಒಂದು ಕಾರ್ಯನೀತಿಯನ್ನು ನಿರ್ದೇಶಕರುಗಳ ಮಂಡಳಿಗೆ ಶಿಫಾರಸು ಮಾಡುವ ಸಲುವಾಗಿ ಮಾನದಂಡವನ್ನು ರೂಪಿಸತಕ್ಕದ್ದು.

ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ಕೆಪಿಸಿಎಲ್, ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಸೆಸ್ಕ್, ಜೆಸ್ಕಾಂ ಮತ್ತು ಸಿಬಿಐಸಿ-ತುಮಕೂರು) ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯು ಅಗತ್ಯತೆಯಂತೆ ಯಾವುದೇ ಮಾನದಂಡವನ್ನು ರೂಪಿಸಲಿಲ್ಲ ಅಥವಾ ಸಂಭಾವನೆಯ ನೀತಿಯನ್ನು ಶಿಫಾರಸು ಮಾಡಲಿಲ್ಲ.

## 3.7 ವಾರ್ಷಿಕ ಸಾಮಾನ್ಯ ಸಭೆ

**(ಎ)** ಪ್ರತೀ ವರ್ಷವೂ ಪ್ರತಿಯೊಂದು ಕಂಪನಿಯೂ, ಒಂದು ಸಾಮಾನ್ಯ ಸಭೆಯನ್ನು ನಡೆಸತಕ್ಕದ್ದು ಹಾಗೂ ಕಂಪನಿಯ ಒಂದು ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕ ಮತ್ತು ನಂತರದ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದ ನಡುವಿನ ಅವಧಿಯು ಹದಿನೈದು ತಿಂಗಳುಗಳನ್ನು ಮೀರಿರಕೂಡದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 96 (1) ನಿರ್ದಿಷ್ಟಪಡಿಸಿರುತ್ತದೆ.

ಎಲ್ಲಾ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022-23 ಹಣಕಾಸು ಸಾಲಿನಲ್ಲಿ ಹಿಂದಿನ ಸಭೆಯ ದಿನಾಂಕದಿಂದ ಹದಿನೈದು ತಿಂಗಳುಗಳ ಅಂತರದೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಿದ್ದವು.

**(ಬಿ)** ಪ್ರತಿಯೊಂದು ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವ್ಯವಹಾರದ ವೇಳೆಗಳಲ್ಲಿ ಕಂಪನಿಯ ನೋಂದಾಯಿತ ಕಛೇರಿಗಳಲ್ಲಿ ಅಥವಾ ಕಂಪನಿಯ ನೋಂದಾಯಿತ ಕಛೇರಿ ಇರುವ ಸ್ಥಳದಲ್ಲಿ ನಡೆಸತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 96 (2) ನಿರ್ದಿಷ್ಟಪಡಿಸಿರುತ್ತದೆ

ಇಪ್ಪತ್ತೆರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ವ್ಯವಹಾರದ ವೇಳೆಗಳಲ್ಲಿ ತಮ್ಮ ನೋಂದಾಯಿತ ಕಛೇರಿಯಲ್ಲಿ ಅಥವಾ ನೋಂದಾಯಿತ ಕಛೇರಿ ಇರುವ ಸ್ಥಳದಲ್ಲಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಿದ್ದವು. ಆದಾಗ್ಯೂ, ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಸೆಸ್ಕ್, ಕೆಬಿಜೆಎನ್ಎಲ್, ಸಿಎನ್ಎನ್ಎಲ್ ಮತ್ತು ಡಿಎಸ್‌ಸಿಎಲ್) ತಮ್ಮ ವಾರ್ಷಿಕ ಸಾಮಾನ್ಯ ಸಭೆಯನ್ನು

[58] ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದ ದಿನಾಂಕ 05.06.2015ರ ಅಧಿಸೂಚನೆಯಲ್ಲಿನ ವಿನಾಯಿತಿಗಳು /ಹೊರತುಪಡಿಸಿರುವಿಕೆಗಳು.

ತಮ್ಮ ನೋಂದಾಯಿತ ಕಛೇರಿ ಇರುವ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ (ಬೆಂಗಳೂರು) ನಡೆಸಿದ್ದವು.

## 3.8 ವ್ಯವಸ್ಥಾಪನೆ ಮತ್ತು ಆಡಳಿತ ನಿರ್ವಹಣೆ

***ಸದಸ್ಯರುಗಳ ರಿಜಿಸ್ಟಾರ್ ನಿರ್ವಹಣೆ***

**3.8.1** ಷೇರುಗಳಿಂದ ನಿಯಮಿತಗೊಂಡಿರುವಂತಹ ಪ್ರತಿಯೊಂದು ಕಂಪನಿಯು ನೋಂದಾವಣೆಯ ದಿನಾಂಕದಿಂದ, ತನ್ನ ಸದಸ್ಯರ ರಿಜಿಸ್ಟರನ್ನು ನಮೂನೆ ಸಂಖ್ಯೆ ಎಂಜಿಟಿ.1ರಲ್ಲಿ ನಿರ್ವಹಿಸತಕ್ಕದ್ದು. ಎಂಬುದಾಗಿ ಅಧಿನಿಯಮದ ಪರಿಚ್ಛೇದ 88(ಎ) ಜೊತೆಯಲ್ಲಿ ಓದಲ್ಪಡುವ ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ ನಿರ್ವಹಣೆ) ನಿಯಮಗಳು, 2014ರ ನಿಯಮ 3 (1) ನಿರ್ದಿಷ್ಟಪಡಿಸಿರುತ್ತದೆ. ಮುಂದುವರೆದು, ರಿಜಿಸ್ಟರುಗಳಲ್ಲಿ ನಮೂದುಗಳನ್ನು ನಿರ್ವಹಿಸಬೇಕು, ಮತ್ತು ಕಂಪನಿ ಕಾರ್ಯದರ್ಶಿಯವರಿಂದ ಅಥವಾ ಈ ಉದ್ದೇಶಕ್ಕಾಗಿ ಆಡಳಿತ ಮಂಡಳಿಯಿಂದ ಅಧಿಕಾರ ಪಡೆದಿರುವ ಯಾವುದೇ ಇತರ ವ್ಯಕ್ತಿಯಿಂದ ಅದರಲ್ಲಿ ಸೇರ್ಪಡೆ ಮಾಡಿರುವ ಸೂಚ್ಯಂಕ (ಇಂಡ್‌ಕ್ಸ್) ಅನ್ನು ಅಧಿಕೃತಗೊಳಿಸತಕ್ಕದ್ದು, ಮತ್ತು ಹಾಗೆ ಅಧಿಕಾರ ನೀಡಿರುವ ಆಡಳಿತ ಮಂಡಳಿಯ ನಿರ್ಣಯದ ದಿನಾಂಕವನ್ನು ಅಲ್ಲಿ ನಮೂದಿಸತಕ್ಕದ್ದು ಎಂಬ ಅಗತ್ಯತೆಯನ್ನು ನಿಯಮ 8(1) ಹೊಂದಿರುವುದು.

ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಯುಬಿಸಿಡಿಸಿಎಲ್, ಕೆಎಸ್‌ಎಮ್‌ಸಿಎಲ್, ಹೆಚ್‌ಜಿಎಮ್‌ಎಲ್, ಕೆಆರ್‌ಡಿಸಿಎಲ್, ಸಿಎನ್‌ಎನ್‌ಎಲ್, ಕಿಯಾನಿಕ್ಸ್, ಮತ್ತು ಸಿಬಿಐಸಿ ತುಮಕೂರು) ಸದಸ್ಯರುಗಳ ರಿಜಿಸ್ಟರನ್ನು ನಿರ್ವಹಣೆ ಮಾಡಿರಲಿಲ್ಲ. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಫ್‌ಸಿಎಸ್‌ಸಿಎಲ್) ರಿಜಿಸ್ಟರ್ ಸಿಕ್ಕುತ್ತಿಲ್ಲ ಎಂಬುದಾಗಿ ತಿಳಿಸಿ ಅದನ್ನು ಲೆಕ್ಕಪರಿಶೋಧನೆಯ ಪರಿಶೀಲನೆಗೆ ಸಲ್ಲಿಸಿರುವುದಿಲ್ಲ.

***ನಿರ್ದೇಶಕರುಗಳು ಮತ್ತು ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳ ರಿಜಿಸ್ಟರು***

**3.8.2** ಪ್ರತಿಯೊಂದು ಕಂಪನಿಯು ತನ್ನ ನೋಂದಾಯಿತ ಕಛೇರಿಯಲ್ಲಿ ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ಅರ್ಹತೆ) ನಿಯಮಗಳು, 2014ರ ನಿಯಮ 17ರಲ್ಲಿ ನಿರ್ದಿಷ್ಟಪಡಿಸಿರುವಂತಹ ವಿವರಗಳನ್ನು ಒಳಗೊಂಡಿರುವ ರಿಜಿಸ್ಟರನ್ನು ಇಟ್ಟಿರಬೇಕು ಇದರಲ್ಲಿ ನಿರ್ದೇಶಕರುಗಳು ಮತ್ತು ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳ ವಿವರಗಳು, ಅವರಲ್ಲಿ ಪ್ರತಿಯೊಬ್ಬರೂ ಕಂಪನಿಯಲ್ಲಿ ಅಥವಾ ಅದರ ಷೇರು ಹಿಡುವಳಿಯಲ್ಲಿ, ಅಂಗಸಂಸ್ಥೆ, ಕಂಪನಿಯ ಹಿಡುವಳಿ ಕಂಪನಿಯ ಅಂಗಸಂಸ್ಥೆಯಲ್ಲಿ ಅಥವಾ ಸಹವರ್ತಿ ಕಂಪನಿಗಳಲ್ಲಿ ಹೊಂದಿರುವ ಭದ್ರತೆಗಳ ವಿವರಗಳನ್ನು ಒಳಗೊಂಡಿರಬೇಕು ಎಂಬುದಾಗಿ ಅಧಿನಿಯಮದ ಪರಿಚ್ಛೇದ 170 (1) ನಿರ್ದಿಷ್ಟಪಡಿಸಿರುತ್ತದೆ.

ಪರಿಚ್ಛೇದ 170ರ ಅನುವುಗಳು ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಕೇಂದ್ರ ಸರ್ಕಾರ ಹಾಗೂ ಒಂದು ಅಥವಾ ಹೆಚ್ಚಿನ ರಾಜ್ಯ ಸರ್ಕಾರಗಳಿಂದ ಸಂಪೂರ್ಣ ಷೇರು ಬಂಡವಾಳವನ್ನು ಹೊಂದಿರುವ ಒಂದು ಸರ್ಕಾರಿ ಕಂಪನಿಗೆ ಅನ್ವಯಗೊಳ್ಳುತ್ತಿರಲಿಲ್ಲ.

ನಿರ್ದೇಶಕರುಗಳು ಮತ್ತು ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳ ರಿಜಿಸ್ಟರಿನ ನಿರ್ವಹಣೆಯು 22 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಕಡ್ಡಾಯವಾಗಿರಲಿಲ್ಲ, ಏಕೆಂದರೆ ಅವುಗಳ ಷೇರು ಬಂಡವಾಳವನ್ನು ರಾಜ್ಯ ಸರ್ಕಾರ ಅಥವಾ ರಾಜ್ಯ / ಕೇಂದ್ರ ಸರ್ಕಾರಗಳಿಂದ ಹೊಂದಲಾಗಿದ್ದಿತು. ಉಳಿದ ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಆರ್‌ಪಿಸಿಎಲ್, ಎಚ್‌ಜಿಎಂಎಲ್, ಎಂಎಸ್‌ಐಎಲ್ ಮತ್ತು ಕೆಆರ್‌ಡಿಸಿಎಲ್) ಪೈಕಿ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅವೆಂದರೆ ಎಚ್‌ಜಿಎಂಎಲ್ ಮತ್ತು ಕೆಆರ್‌ಡಿಸಿಎಲ್, ಇವುಗಳು ನಿರ್ದೇಶಕರುಗಳ ಮತ್ತು ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳ ರಿಜಿಸ್ಟರುಗಳನ್ನು ನಿರ್ವಹಿಸಿರುವುದಿಲ್ಲ.

## 3.9 ವಾರ್ಷಿಕ ಸಲ್ಲಿಕೆಗಳು

***ವಾರ್ಷಿಕ ಸಲ್ಲಿಕೆಗಳನ್ನು ಸಲ್ಲಿಸುವಿಕೆ (ನಮೂನೆ ಎಂಜಿಟಿ–7)***

**3.9.1** ಅಧಿನಿಯಮದ ಪರಿಚ್ಛೇದ 92 (1)ರ ಅನುವುಗಳು / ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ ನಿರ್ವಹಣೆ) ನಿಯಮಗಳು, 2014ರ ನಿಯಮ 11 (1) ಪ್ರತೀ ಕಂಪನಿಯು ಕಂಪನಿಗೆ ಸಂಬಂಧಿಸಿದ ವಿವಿಧ ವಿವರಗಳನ್ನು ಒಳಗೊಂಡಿರುವ, ಹಣಕಾಸು ಸಾಲಿನ ಅಂತ್ಯದಲ್ಲಿ ಅವುಗಳು ಯಾವ ಸ್ಥಿತಿಯಲ್ಲಿ ಇದ್ದವು ಎನ್ನುವ ಕುರಿತು ವಾರ್ಷಿಕ ಸಲ್ಲಿಕೆಗಳನ್ನು ಅಲ್ಲಿ ನಿರ್ದಿಷ್ಟಪಡಿಸಿರುವಂತೆ ನಮೂನೆ ಎಂಜಿಟಿ 7ರಲ್ಲಿ ಸಿದ್ಧಪಡಿಸುವ ಮತ್ತು ಸಲ್ಲಿಸುವ ಅಗತ್ಯತೆಯನ್ನು ಹೊಂದಿರುತ್ತದೆ.

ಎಲ್ಲಾ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಂಬಂಧಿತ ಹಣಕಾಸು ಸಾಲಿಗೆ ನಮೂನೆ ಎಂಜಿಟಿ–7ರಲ್ಲಿ ವಾರ್ಷಿಕ ಸಲ್ಲಿಕೆಗಳನ್ನು ಸಲ್ಲಿಸಿದ್ದವು (ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು 2020–21 ಹಣಕಾಸು ಸಾಲಿಗೆ ಹಾಗೂ ಉಳಿದವು 2021–22), ಅವುಗಳಿಗಾಗಿ 2022–23 ಹಣಕಾಸು ಸಾಲಿನಲ್ಲಿ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಲಾಗಿದ್ದಿತು.

***ವಾರ್ಷಿಕ ಸಲ್ಲಿಕೆಗಳ ದೃಢೀಕರಣ (ನಮೂನೆ ಎಂಜಿಟಿ 8)***

**3.9.2** ಹತ್ತು ಕೋಟಿ ರೂಪಾಯಿಗಳು ಅಥವಾ ಅದಕ್ಕೂ ಅಧಿಕ ಪಾವತಿಸಲ್ಪಟ್ಟಿರುವ ಷೇರು ಬಂಡವಾಳ ಅಥವಾ ಐವತ್ತು ಕೋಟಿ ರೂಪಾಯಿಗಳು ಅಥವಾ ಅದಕ್ಕೂ ಅಧಿಕ ವಹಿವಾಟು ಹೊಂದಿರುವ ಕಂಪನಿಯು ಸಲ್ಲಿಸಿರುವ ವಾರ್ಷಿಕ ಸಲ್ಲಿಕೆಗಳನ್ನು ಕಾರ್ಯಪ್ರವೃತ್ತ ಕಂಪನಿ ಕಾರ್ಯದರ್ಶಿಯವರಿಂದ ದೃಢೀಕರಿಸತಕ್ಕದ್ದು ಮತ್ತು ಅವರ ದೃಢೀಕರಣಪತ್ರವು ನಮೂನೆ ಎಂಜಿಟಿ 8 ರಲ್ಲಿ ಇರತಕ್ಕದ್ದು. {ನಿಯಮ 11 (2)}.

ಎಲ್ಲಾ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅನ್ವಯವಾಗುವುದನ್ನು ಪರಿಗಣಿಸದೆಯೇ, ನಮೂನೆ ಎಂಜಿಟಿ 8ನ್ನು ಸಲ್ಲಿಸಿರುತ್ತವೆ.

***ವಾರ್ಷಿಕ ಸಲ್ಲಿಕೆಗಳ ಸಲ್ಲಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾಲಮಿತಿಗೆ ಬದ್ಧವಾಗಿರುವುದು***

**3.9.3** ಪ್ರತಿಯೊಂದು ಕಂಪನಿಯು ವಾರ್ಷಿಕ ಸಲ್ಲಿಕೆಯ ಪ್ರತಿಯೊಂದನ್ನು, ವಾರ್ಷಿಕ ಸರ್ವಸದಸ್ಯರ ಸಭೆಯು ನಡೆದ ದಿನಾಂಕದಿಂದ ಅರವತ್ತು ದಿನಗಳ ಒಳಗೆ ಕಂಪನಿಗಳ ನೋಂದಣಿ ಅಧಿಕಾರಿಯವರಿಗೆ (ಆರ್ ಒ ಸಿ) ಸಲ್ಲಿಸತಕ್ಕದ್ದು ಎಂಬುದನ್ನು ಪರಿಚ್ಛೇದ 92 (4) ನಿರ್ದಿಷ್ಟಪಡಿಸಿರುತ್ತದೆ.

ಕೆಳಗಿನ **ಕೋಷ್ಟಕ ಸಂಖ್ಯೆ. 3.4** ರಲ್ಲಿ ಸೂಚಿಸಿದಂತೆ 64 ದಿನಗಳಿಂದ 283 ದಿನಗಳವರೆಗಿನ ಅವಧಿಯ ನಂತರ ರಿಟರ್ನ್‌ಗಳನ್ನು ಸಲ್ಲಿಸಿದ ಕಾರಣ ಹತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಲ್ಲಿಕೆಗಳನ್ನು ಸಲ್ಲಿಸುವ ಸಲುವಾಗಿನ ನಿಗದಿತ ಕಾಲಮಿತಿಗೆ ಬದ್ಧತೆಯಿಂದ ಕೂಡಿರಲಿಲ್ಲ.

**ಕೋಷ್ಟಕ ಸಂಖ್ಯೆ 3.4: ವಾರ್ಷಿಕ ಸಾಮಾನ್ಯ ಸಭೆ ನಡೆಸಿದ ನಂತರ ವಾರ್ಷಿಕ ಸಲ್ಲಿಕೆಗಳನ್ನು ಸಲ್ಲಿಸುವಲ್ಲಿನ ವಿಳಂಬ**

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕ | ವಾರ್ಷಿಕ ಸಲ್ಲಿಕೆಯನ್ನು ಸಲ್ಲಿಸಿದ ದಿನಾಂಕ | ತೆಗೆದುಕೊಂಡ ದಿನಗಳು | ವಿಳಂಬ ದಿನಗಳಲ್ಲಿ |
|---|---|---|---|---|---|
| 1 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 22-09-2022 | 02-12-2022 | 71 | 11 |
| 2 | ಡಿ. ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ | 13-09-2022 | 19-12-2022 | 97 | 37 |
| 3 | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ | 27-03-2023 | 02-06-2023 | 67 | 07 |
| 4 | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ | 29-09-2022 | 08-02-2023 | 132 | 72 |
| 5 | ಕರ್ನಾಟಕ ನೀರಾವರಿ ನಿಗಮ ನಿಯಮಿತ | 21-01-2023 | 25-07-2023 | 185 | 125 |
| 6 | ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ | 05-12-2022 | 14-09-2023 | 283 | 223 |
| 7 | ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ | 26-12-2022 | 28-02-2023 | 64 | 04 |
| 8 | ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ | 29-12-2022 | 03-03-2023 | 64 | 04 |

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕ | ವಾರ್ಷಿಕ ಸಲ್ಲಿಕೆಯನ್ನು ಸಲ್ಲಿಸಿದ ದಿನಾಂಕ | ತೆಗೆದುಕೊಂಡ ದಿನಗಳು | ವಿಳಂಬ ದಿನಗಳಲ್ಲಿ |
|---|---|---|---|---|---|
| | ಟೌನ್‌ಶಿಪ್ ನಿಯಮಿತ | | | | |
| 9 | ಕಾವೇರಿ ನೀರಾವರಿ ನಿಗಮ ನಿಯಮಿತ | 30-09-2023 | 08-01-2024 | 100 | 40 |
| 10 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ | 31-12-2022 | 02-09-2023 | 245 | 185 |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಿರುವ ಮಾಹಿತಿ/ದತ್ತಾಂಶ*

***ವಾರ್ಷಿಕ ಸಲ್ಲಿಕೆಯನ್ನು ಸಲ್ಲಿಸುವ ವೇಳೆಯಲ್ಲಿ ಬಹಿರಂಗಪಡಿಸುವಿಕೆ***

**3.9.4** ಅಧಿನಿಯಮದ ಪರಿಚ್ಛೇದ 92 (3)ರ ಜೊತೆಯಲ್ಲಿ ಓದಲ್ಪಡುವ ನಿಯಮ 12 (1) ಪ್ರತೀ ಕಂಪನಿಯೂ ನಮೂನೆ ಸಂಖ್ಯೆ ಎಂಜಿಟಿ 9ರಲ್ಲಿ ನಿರ್ದೇಶಕರುಗಳ ಮಂಡಳಿಯ ವರದಿಯೊಂದಿಗೆ ವಾರ್ಷಿಕ ಸಲ್ಲಿಕೆಯ ಸಂಕ್ಷಿಪ್ತ ಸಾರಾಂಶವನ್ನು ಲಗತ್ತಿಸುವ ಅಗತ್ಯತೆಯನ್ನು ಹೊಂದಿರುತ್ತದೆ. ಒಂದುವೇಳೆ ಕಂಪನಿಯು ನಿರ್ದೇಶಕರುಗಳ ಮಂಡಳಿಯ ವರದಿಯಲ್ಲಿ ಅಂತಹ ವಾರ್ಷಿಕ ಸಲ್ಲಿಕೆಗೆ ಜಾಲತಾಣ ಲಿಂಕ್ ಅನ್ನು ಬಹಿರಂಗಪಡಿಸಿದಲ್ಲಿ ಈ ಅನುವು ಅನ್ವಯವಾಗುವುದಿಲ್ಲ[59].

ಮೇಲ್ಕಂಡ ಬಹಿರಂಗಪಡಿಸುವಿಕೆಯ ಅವಶ್ಯಕತೆಗಳ ಅನುಪಾಲನೆಯ ಸ್ಥಿತಿಯನ್ನು. ಈ ಕೆಳಗಿನ **ಕೋಷ್ಟಕ ಸಂಖ್ಯೆ 3.5**ರಲ್ಲಿ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 3.5: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಲ್ಲಿಸಿರುವ ವಾರ್ಷಿಕ ಸಲ್ಲಿಕೆಗಳಿಗೆ ಸಂಬಂಧಿಸಿದಂತೆ ಬಹಿರಂಗಪಡಿಸುವಿಕೆ**

| ಕ್ರಮ ಸಂಖ್ಯೆ | ಬಹಿರಂಗಪಡಿಸುವಿಕೆಯ ಸ್ವರೂಪ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ಹೆಸರು |
|---|---|---|---|
| 1 | ಎಂಜಿಟಿ 9ರ ಸಂಕ್ಷಿಪ್ತ ಆವೃತ್ತಿಯನ್ನು ನಿರ್ದೇಶಕರುಗಳ ವರದಿಗೆ ಲಗತ್ತಿಸಲಾಗಿದೆ. | 05 | ಕೆಪಿಟಿಸಿಎಲ್, ಹೆಸ್ಕಾಂ, ಕೆಎಸ್ಎಮ್‌ಸಿಎಲ್, ಸಿಎನ್‌ಎನ್‌ಎಲ್, ಬಿಎಸ್‌ಸಿಎಲ್–ಬೆಳಗಾವಿ. |
| 2 | ನಮೂನೆ ಎಂಜಿಟಿ 7ರಲ್ಲಿ ವಾರ್ಷಿಕ ಸಲ್ಲಿಕೆಯನ್ನು ಜಾಲತಾಣಕ್ಕೆ ಅಪ್ಲೋಡ್ ಮಾಡಲಾಗಿದೆ. | 11 | ಬೆಸ್ಕಾಂ, ಜೆಸ್ಕಾಂ, ಕೆಎಸ್‌ಡಿಎಲ್, ಎಚ್‌ಜಿಎಂಎಲ್, ಎಂಎಸ್‌ಐಎಲ್, ಕೆಎಸ್‌ಐಐಡಿಸಿ, ಕೆಆರ್‌ಐಡಿಎಲ್, ಕೆಆರ್‌ಡಿಸಿಎಲ್, ಕೆಬಿಜೆಎನ್‌ಎಲ್, ಕೆಎನ್‌ಎನ್‌ಎಲ್, ವಿಜೆಎನ್‌ಎಲ್. |
| 3 | ನಮೂನೆ ಎಂಜಿಟಿ 9 ಲಗತ್ತಿಸಲಾಗಿದೆ ಮತ್ತು ನಮೂನೆ ಎಂಜಿಟಿ 7 ಅಪ್ಲೋಡ್ ಮಾಡಲಾಗಿದೆ. | 03 | ಕೆಪಿಸಿಎಲ್, ಮೆಸ್ಕಾಂ, ಸೆಸ್ಕ್ |
| 4 | ಬಹಿರಂಗಪಡಿಸುವಿಕೆ/ ಪ್ರವೇಶಿಸುವಿಕೆಯ ಕೊರತೆಯಿಂದ ಅನುಪಾಲನೆಯನ್ನು ಪರಿಶೀಲಿಸಲು ಆಗಲಿಲ್ಲ. | 05 | ಡಿಯುಬಿಸಿಡಿಸಿಎಲ್, ಡಿಎಸ್‌ಸಿಎಲ್, ಬಿಎಸ್‌ಸಿಎಲ್–ಬೆಂಗಳೂರು, ಕಿಯಾನಿಕ್ಸ್, ಕೆಎಫ್‌ಸಿಎಸ್‌ಸಿಎಲ್ |
| 5 | ನಮೂನೆ ಎಂಜಿಟಿ 7ರಲ್ಲಿ ವಾರ್ಷಿಕ ಸಲ್ಲಿಕೆಯನ್ನು ಊಡಿಕೆ ಮಾಡಲು ಜಾಲತಾಣ ಇರುವುದಿಲ್ಲ ಮತ್ತು ಸಂಕ್ಷಿಪ್ತ ಆವೃತ್ತಿಯನ್ನು ಎಂಜಿಟಿ 9ರಲ್ಲಿ ನಿರ್ದೇಶಕರುಗಳ ವರದಿಗೆ ಲಗತ್ತಿಸಿರುವುದಿಲ್ಲ. | 02 | ಆರ್‌ಪಿಸಿಎಲ್, ಸಿಬಿಐಸಿ–ತುಮಕೂರು. |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಲಾಗಿರುವ ಮಾಹಿತಿ/ ದತ್ತಾಂಶ*

ಜಾಲತಾಣಗಳು / ನಿರ್ದೇಶಕರುಗಳ ವರದಿಗಳಲ್ಲಿ ಬಹಿರಂಗಪಡಿಸುವಿಕೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಸಮರ್ಪಕ ಬಹಿರಂಗಪಡಿಸುವಿಕೆಗಳ ದೃಷ್ಟಾಂತಗಳು ಕಂಡುಬಂದವು:

- ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಯುಬಿಸಿಡಿಸಿಎಲ್, ಕಿಯಾನಿಕ್ಸ್, ಕೆಎಫ್‌ಸಿಎಸ್‌ಸಿಎಲ್ ಮತ್ತು ಬಿಎಸ್‌ಸಿಎಲ್–ಬೆಂಗಳೂರು) ಅವುಗಳ ಜಾಲತಾಣದಲ್ಲಿ ವಾರ್ಷಿಕ ವರದಿಗಳು ಅಥವಾ ವಾರ್ಷಿಕ ಸಲ್ಲಿಕೆಗಳನ್ನು ಅಪ್ಲೋಡ್ ಮಾಡಿರುವುದಿಲ್ಲ.

[59] ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದ ದಿನಾಂಕ 28 ಆಗಸ್ಟ್ 2020ರ ಅಧಿಸೂಚನೆ ಮೂಲಕ ತಿದ್ದುಪಡಿ ಮಾಡುವುದರ ಮೂಲಕ ಪರಿಚ್ಛೇದ 92(3)ಕ್ಕೆ ಅನುವನ್ನು ಸೇರಿಸಿರುವುದರಿಂದ.

- ತಮ್ಮ ಜಾಲತಾಣದಲ್ಲಿ ನಮೂನೆ ಎಂಜಿಟಿ 7ನ್ನು ಅಪ್ಲೋಡ್ ಮಾಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ಕೇವಲ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಮೆಸ್ಕಾಂ, ಎಂಎಸ್‌ಐಎಲ್ ಮತು ಕೆಆರ್‌ಐಡಿಎಲ್) ವೀಕ್ಷಣೆಗೆ ಅನುಕೂಲಕರವಾಗಿ ಸೂಕ್ತವಾದಂತಹ ಜಾಲತಾಣ ಲಿಂಕುಗಳನ್ನು ಬಹಿರಂಗಪಡಿಸಿರುತ್ತವೆ. ಉಳಿದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕೇವಲ ತಮ್ಮ ಜಾಲತಾಣ ವಿಳಾಸವನ್ನು ಬಹಿರಂಗಪಡಿಸಿದ್ದು, ಇದು ಬಹಿರಂಗಪಡಿಸುವಿಕೆಯ ಅವಶ್ಯಕತೆಯ ಭಾಗಶ: ಅನುಪಾಲನೆ ಆಗಿರುತ್ತದೆ ಹಾಗೂ ವಾರ್ಷಿಕ ಸಲ್ಲಿಕೆಯನ್ನು ವೀಕ್ಷಿಸಲು ಸುಲಭವಾದ ಸಂಪರ್ಕವನ್ನು ಅನುವುಗೊಳಿಸಿರುವುದಿಲ್ಲ.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ (ಹೆಸ್ಕಾಂ), ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದ ದಿನಾಂಕ 28 ಆಗಸ್ಟ್ 2020ರ ಅಧಿಸೂಚನೆಯ ಅಡಿಯಲ್ಲಿ ವಿನಾಯಿತಿ ಹೊಂದಲಾಗಿದೆಯಾದರೂ ವಾರ್ಷಿಕ ಸಲ್ಲಿಕೆಯ ಸಂಕ್ಷಿಪ್ತ ವರದಿಯನ್ನು ನಮೂನೆ ಎಂಜಿಟಿ–9ರಲ್ಲಿ ಲಗತ್ತಿಸಲಾಗಿರುವುದು ಎಂಬುದಾಗಿ ತಿಳಿಸಲಾಗಿದ್ದಿತು. ನಮೂನೆ–9ರಲ್ಲಿ ಬಹಿರಂಗಪಡಿಸುವಿಕೆಯಿಂದ ವಿನಾಯಿತಿಯು ಕಂಪನಿಯು ಎಂಜಿಟಿ–7ರಲ್ಲಿ ವಾರ್ಷಿಕ ಸಲ್ಲಿಕೆಗಾಗಿ ಜಾಲತಾಣವನ್ನು ಬಹಿರಂಗಪಡಿಸಿದಲ್ಲಿ ಮಾತ್ರ ಅನ್ವಯಗೊಳ್ಳುವುದರಿಂದ ಈ ಬಹಿರಂಗಪಡಿಸುವಿಕೆಯು ಸರಿಯಾಗಿರುವುದಿಲ್ಲ.

- ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಡಿಎಲ್, ಎಚ್‌ಜಿಎಂಎಲ್, ವಿಜಿಎನ್‌ಎಲ್ ಮತ್ತು ಡಿಎಸ್‌ಸಿಎಲ್) ನಿರ್ದೇಶಕರುಗಳ ವರದಿಗಳಲ್ಲಿ, ಬಹಿರಂಗಪಡಿಸಿರುವ ಜಾಲತಾಣ ವಿಳಾಸದಲ್ಲಿ ನಮೂನೆ ಎಂಜಿಟಿ 7ರಲ್ಲಿ ವಾರ್ಷಿಕ ಸಲ್ಲಿಕೆಯನ್ನು ಅಪ್ಲೋಡ್ ಮಾಡಲಾಗಿದೆ ಎಂಬುದಾಗಿ ತಿಳಿಸಲಾಗಿದ್ದಿತು. ಆದಾಗ್ಯೂ, ಲೆಕ್ಕಪರಿಶೋಧನೆಯು ಅವರ ಜಾಲತಾಣಗಳಲ್ಲಿ ವಾರ್ಷಿಕ ಸಲ್ಲಿಕೆಗಳನ್ನು ಕಾಣಲಿಲ್ಲ.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಸ್‌ಐಐಡಿಸಿ) ತನ್ನ ನಿರ್ದೇಶಕರುಗಳ ವರದಿಯಲ್ಲಿ ಜಾಲತಾಣವನ್ನು ಬಹಿರಂಗಪಡಿಸದೆಯೇ ತನ್ನ ಜಾಲತಾಣದಲ್ಲಿ ವಾರ್ಷಿಕ ಸಲ್ಲಿಕೆಯನ್ನು ಊಡಿಕೆ ಮಾಡಿದ್ದಿತು.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕನೀನಿನಿ) ತಾನು ವಾರ್ಷಿಕ ಸಲ್ಲಿಕೆಯನ್ನು ನಮೂನೆ ಎಂಜಿಟಿ 7ನಲ್ಲಿ ಊಡಿಕೆ ಮಾಡಿರುವುದಾಗಿ ಹೇಳಿರುವ ಜಾಲತಾಣವು ಕಾರ್ಯಪ್ರವೃತ್ತವಾಗಿರಲಿಲ್ಲ ಮತ್ತು ವಾರ್ಷಿಕ ಸಲ್ಲಿಕೆಯು ಕಂಪನಿಯ ಹೊಸ ಜಾಲತಾಣದಲ್ಲಿ ಕಂಡುಬರುತ್ತಿರಲಿಲ್ಲ.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಆರ್‌ಪಿಸಿಎಲ್) ತನ್ನ ನಿರ್ದೇಶಕರುಗಳ ವರದಿಯಲ್ಲಿ ಕಂಪನಿಯು ಜಾಲತಾಣ ಹೊಂದಿರದ ಕಾರಣ ಎಂಜಿಟಿ 7 ನಮೂನೆಯಲ್ಲಿ ವಾರ್ಷಿಕ ಸಲ್ಲಿಕೆಯ ಸಲ್ಲಿಕೆಯು ಅನ್ವಯವಾಗುವುದಿಲ್ಲ ಮತ್ತು ಅದು ತನ್ನ ನಿರ್ದೇಶಕರುಗಳ ವರದಿಗೆ ಸಂಕ್ಷಿಪ್ತ ಆವೃತ್ತಿಯನ್ನು ನಮೂನೆ ಎಂಜಿಟಿ 9ರಲ್ಲಿ ಲಗತ್ತಿಸಿರುವುದಿಲ್ಲ ಎಂಬುದಾಗಿ ತಿಳಿಸಿರುವುದು. ಮತ್ತೊಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಸಿಬಿಐಸಿ–ತುಮಕೂರು) ಸಂಬಂಧಿತ ಬಹಿರಂಗಪಡಿಸುವಿಕೆಯನ್ನು ಪ್ರಕಟಿಸಲು ಜಾಲತಾಣ ಅನುಕೂಲತೆಯನ್ನು ಹೊಂದಿರಲಿಲ್ಲ. ಕಂಪನಿಯು ತನ್ನ ನಿರ್ದೇಶಕರುಗಳ ವರದಿಯಲ್ಲೂ ಸಹ ನಮೂನೆ ಎಂಜಿಟಿ 9ರಲ್ಲಿ ಸಂಕ್ಷಿಪ್ತ ಆವೃತ್ತಿಯನ್ನು ಲಗತ್ತಿಸಲಿಲ್ಲ.

## 3.10 ಅನ್ವಯಗೊಳ್ಳುವ ಕಾನೂನುಗಳ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳಲು ಕಾರ್ಯವಿಧಾನ

ಅಧಿನಿಯಮದ ಪರಿಚ್ಛೇದ 134 (5)(ಎಫ್)ರ ಅನುಸಾರ, ಪರಿಚ್ಛೇದ 134 (3)(ಸಿ) ಅಡಿಯಲ್ಲಿ ಉಲ್ಲೇಖಿಸಲಾಗಿರುವ ನಿರ್ದೇಶಕರುಗಳ ಜವಾಬ್ದಾರಿ ಹೇಳಿಕೆಯು ಎಲ್ಲಾ ಅನ್ವಯಗೊಳ್ಳುವಂತಹ ಕಾನೂನುಗಳ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳಲು ನಿರ್ದೇಶಕರುಗಳು ಸೂಕ್ತ ವ್ಯವಸ್ಥೆಗಳನ್ನು

ರೂಪಿಸಿರುತ್ತಾರೆ ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕ ಮತ್ತು ಅವುಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ಒಳಗೊಂಡಿರತಕ್ಕದ್ದು.

ಈ ಅಧಿನಿಯಮದ ಅನುವುಗಳು, ಅವುಗಳ ಅಡಿಯಲ್ಲಿ ರೂಪಿಸಿರುವ ನಿಯಮಗಳು ಮತ್ತು ಕಂಪನಿಗೆ ಅನ್ವಯವಾಗುವಂತಹ ಇತರೆ ನಿಯಂತ್ರಕ ಕಾನೂನುಗಳ ಅನುಪಾಲನೆಯ ಕುರಿತು ನಿರ್ದೇಶಕರುಗಳ ಮಂಡಳಿಗೆ ವರದಿ ಸಲ್ಲಿಕೆಯು ಅಧಿನಿಯಮದ ಪರಿಚ್ಛೇದ 205 (1) (ಎ) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಕಂಪನಿ ಕಾರ್ಯದರ್ಶಿಯವರ ಜವಾಬ್ದಾರಿಯಾಗಿರುತ್ತದೆ.

***ಕಂಪನಿ ಕಾರ್ಯದರ್ಶಿಯವರ ನೇಮಕಾತಿ***

**3.10.1** ಅಧಿನಿಯಮದ ಪರಿಚ್ಛೇದ 203 (1)ರ ಜೊತೆಯಲ್ಲಿ ಓದಲ್ಪಡುವ, ಕಂಪನಿಗಳು (ವ್ಯವಸ್ಥಾಪನಾ ಅಧಿಕಾರಿಗಳ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ 8, ಪ್ರತಿಯೊಂದು ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ಸೇರಿಸಲಾಗಿರುವ ಕಂಪನಿ ಮತ್ತು ಹತ್ತು ಕೋಟಿ ರೂಪಾಯಿಗಳು ಅಥವಾ ಅದಕ್ಕೂ ಅಧಿಕ ಮೊತ್ತದ ಪಾವತಿಸಲ್ಪಟ್ಟಿರುವ ಷೇರು ಬಂಡವಾಳ ಹೊಂದಿರುವ ಪ್ರತಿಯೊಂದು ಇತರೆ ಸಾರ್ವಜನಿಕ ಕಂಪನಿಯು ಪೂರ್ಣಕಾಲದ ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳ ಹೊಂದಿರತಕ್ಕದ್ದು, ಅವುಗಳಲ್ಲಿ ಒಬ್ಬರು ಕಂಪನಿ ಕಾರ್ಯದರ್ಶಿಯವರಾಗಿರತಕ್ಕದ್ದು ಎಂಬುದಾಗಿ ಅನುವು ಮಾಡಿರುವುದು.

ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅಂದರೆ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಆರ್‌ಐಡಿಎಲ್ ಮತ್ತು ಡಿಯುಬಿಸಿಡಿಸಿಎಲ್) ಖಾಸಗಿ ನಿಯಮಿತ ಕಂಪನಿಗಳಾಗಿ ನೋಂದಣಿಗೊಂಡಿದ್ದು ಹಾಗೂ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ಎಂಸಿಎಲ್, ಎಚ್‌ಜಿಎಂಎಲ್ ಮತ್ತು ಕೆಎಫ್‌ಸಿಎಸ್‌ಸಿಎಲ್) ಹತ್ತು ಕೋಟಿ ಮತ್ತು ಅದಕ್ಕೂ ಮೀರಿದ ಪಾವತಿಸಲ್ಪಟ್ಟಿರುವ ಷೇರು ಬಂಡವಾಳವನ್ನು ಹೊಂದಿರದ ಕಾರಣ ಪೂರ್ಣಕಾಲದ ಕಂಪನಿ ಕಾರ್ಯದರ್ಶಿಯವರನ್ನು ಹೊಂದುವ ಅವಶ್ಯಕತೆ ಇರಲಿಲ್ಲ,

ಉಳಿದ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಈ ಕೆಳಗಿನ **ಕೋಷ್ಟಕ ಸಂಖ್ಯೆ 3.6**ರಲ್ಲಿ ತಿಳಿಸಿರುವಂತೆ ಖಾಯಂ ಆಗಿ[60] ನೇಮಕಗೊಂಡಿರುವ ಕಂಪನಿ ಕಾರ್ಯದರ್ಶಿಯವರನ್ನು ಹೊಂದಿರಲಿಲ್ಲ.

**ಕೋಷ್ಟಕ ಸಂಖ್ಯೆ 3.6: ಖಾಯಂ ಆಧಾರದ ಮೇಲೆ ಕಂಪನಿ ಕಾರ್ಯದರ್ಶಿಯವರನ್ನು ಹೊಂದಿರದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ**

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ಪ್ರಸಕ್ತ ಸ್ಥಿತಿ | ಕಂಪನಿಯ ಪ್ರತಿಕ್ರಿಯೆ |
|---|---|---|---|
| 1 | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ | ಇತರರುಗಳು – ಉಳಿಸಿಕೊಳ್ಳುವಿಕೆ ಆಧಾರದ ಮೇಲೆ | ಸರ್ಕಾರದಿಂದ ಕಂಪನಿಯ ವೃಂದ ಮತ್ತು ನೇಮಕಾತಿ ನಿಯಮಗಳ ಅಂಗೀಕಾರ ಬಾಕಿಯಿದ್ದು, ಒಬ್ಬರು ಕಂಪನಿ ಕಾರ್ಯದರ್ಶಿಯವರನ್ನು ಗುತ್ತಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಅಕ್ಟೋಬರ್ 2023ರಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. |
| 2 | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ | | 13.01.2020ರಂದು ಪ್ರಕಟಿಸಲಾದ ನೇಮಕಾತಿಗಾಗಿ ಜಾಹೀರಾತಿಗೆ ಸೂಕ್ತ ಅಭ್ಯರ್ಥಿಗಳು ಲಭ್ಯವಾಗದ ಕಾರಣ, ಕಂಪನಿಯು ಖಾಯಂ ಕಂಪನಿ ಕಾರ್ಯದರ್ಶಿಯವರನ್ನು ನೇಮಕ ಮಾಡುವ ಪ್ರಕ್ರಿಯೆ ನಡೆಸುತ್ತಿದೆ, |
| 3 | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | ಇತರರುಗಳು – ಗುತ್ತಿಗೆ ಆಧಾರದ ಮೇರೆಗೆ | ಕಂಪನಿಯು ಕಂಪನಿ ಕಾರ್ಯದರ್ಶಿಯವರ ನೇಮಕಾತಿಗೆ ನಾಲ್ಕು ಬಾರಿ ಅರ್ಜಿಗಳನ್ನು ಆಹ್ವಾನಿಸಿತ್ತು ಕರೆ ಮಾಡಿತ್ತು, ಆದರೆ ಸೂಕ್ತ ಅಭ್ಯರ್ಥಿಗಳು ಸಿಕ್ಕಿರುವುದಿಲ್ಲ |
| 4 | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | | ಯಾವುದೇ ಕಾರಣಗಳನ್ನು ಕೊಟ್ಟಿರುವುದಿಲ್ಲ |
| 5 | ಕರ್ನಾಟಕ ನೀರಾವರಿ ನಿಗಮ ನಿಯಮಿತ | | ಯಾವುದೇ ಕಾರಣಗಳನ್ನು ಕೊಟ್ಟಿರುವುದಿಲ್ಲ |

[60] ವಿಶ್ಲೇಷಣೆಯ ಉದ್ದೇಶಕ್ಕಾಗಿ, ಪೂರ್ಣ ಕಾಲದ ಅರ್ಥವನ್ನು ಪರಿಚ್ಛೇದ 2 (94)ರ ಅಡಿಯಲ್ಲಿ ಪೂರ್ಣಕಾಲದ ನಿರ್ದೇಶಕರ ವಿವರಣೆಯಲ್ಲಿ ಕಂಪನಿಯೊಂದಿಗೆ ಪೂರ್ಣಕಾಲದ ಉದ್ಯೋಗದಲ್ಲಿರುವ ವ್ಯಕ್ತಿ ಎಂಬುದಾಗಿ ಪರಿಗಣಿಸಲಾಗಿರುವುದು.

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ಪ್ರಸಕ್ತ ಸ್ಥಿತಿ | ಕಂಪನಿಯ ಪ್ರತಿಕ್ರಿಯೆ |
|---|---|---|---|
| 6 | ಕಾವೇರಿ ನೀರಾವರಿ ನಿಗಮ ನಿಯಮಿತ | | ಕಂಪನಿ ಕಾರ್ಯದರ್ಶಿಯವರ ನೇಮಕಾತಿಯ ಗುತ್ತಿಗೆಯು ವಾರ್ಷಿಕವಾಗಿ ನವೀಕರಣಗೊಳ್ಳುತ್ತದೆ. ಇದಕ್ಕೆ ವ್ಯವಸ್ಥಾಪಕ ನಿರ್ದೇಶಕರು ಸಹಿ ಮಾಡುತ್ತಾರೆ. |
| 7 | ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ | | ಯಾವುದೇ ಕಾರಣಗಳನ್ನು ಕೊಟ್ಟಿರುವುದಿಲ್ಲ |

*ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಲಾಗಿರುವ ಮಾಹಿತಿ/ದತ್ತಾಂಶ*

### *ಅನ್ವಯಗೊಳ್ಳುವ ಕಾನೂನುಗಳ ಅನುಪಾಲನೆ ಮಾಡದಿರುವುದು*

**3.10.2** ನಿರ್ದೇಶಕರುಗಳ ವರದಿಯಲ್ಲಿನ ಬಹಿರಂಗಪಡಿಸಿರುವಿಕೆಗಳು ಹಾಗೂ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಸಾಂಸ್ಥಿಕ ಆಡಳಿತ ನಿರ್ವಹಣೆಯ ಮೇಲಿನ ಪರಿಶೀಲನಾ/ಖಚಿತಪಡಿಸಿಕೊಳ್ಳುವಿಕೆ ಪಟ್ಟಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಗೆ ಸಲ್ಲಿಸಿರುವ ಪ್ರತಿಕ್ರಿಯೆಯ ವಿಶ್ಲೇಷಣೆಯು ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಯುಬಿಸಿಡಿಸಿಎಲ್ ಮತ್ತು ಕೆಬಿಜೆಎನ್ಎಲ್) ಅನುಪಾಲನೆಯನ್ನು ಖಚಿತಪಡಿಸಿಕೊಳ್ಳಲು ಕಂಪನಿಗೆ ಅನ್ವಯವಾಗುವ ಅಧಿನಿಯಮ ನಿಯಂತ್ರಣಗಳ ಅನುಪಾಲನಾ ಪಟ್ಟಿಯನ್ನು ಮಾಡಿರುವುದಿಲ್ಲ ಮತ್ತು ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಹೆಸ್ಕಾಂ, ಮೆಸ್ಕಾಂ, ಡಿಯುಬಿಸಿಡಿಸಿಲ್, ಕೆಎಸ್ಎಮ್ಸಿಎಲ್, ಕೆಆರ್ಡಿಸಿಎಲ್, ಸಿಎನ್ಎನ್ಎಲ್ ಮತ್ತು ಕಿಯಾನಿಕ್ಸ್) ಅನ್ವಯಗೊಳ್ಳುವಂತಹ ಅಧಿನಿಯಮ ನಿಯಂತ್ರಣಗಳ ಅನುಪಾಲನೆ ಮಾಡದಿರುವುದನ್ನು ಒಪ್ಪಿಕೊಂಡಿರುತ್ತವೆ.

ಅಧಿನಿಯಮದ ಪರಿಚ್ಛೇದ 205 (1) (ಎ)ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಈ ಅಧಿನಿಯಮದ ಅನುವುಗಳು, ಅವುಗಳ ಅಡಿಯಲ್ಲಿ ರೂಪಿಸಿರುವ ನಿಯಮಗಳು ಮತ್ತು ಕಂಪನಿಗೆ ಅನ್ವಯವಾಗುವ ಇತರೆ ನಿಯಮನಿಬಂಧನೆಗಳ ಅನುಪಾಲನೆ / ಅನುಪಾಲನೆ ಮಾಡದಿರುವ ಕುರಿತು ವರದಿಯನ್ನು ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಟಿಸಿಎಲ್, ಡಿಯುಬಿಸಿಡಿಸಿಎಲ್, ಕೆಎಸ್ಎಮ್ಸಿಎಲ್, ಹೆಚ್‌ಜಿಎಮ್ಎಲ್, ಕೆಆರ್ಡಿಸಿಎಲ್, ಸಿಎನ್ಎನ್ಎಲ್, ವಿಜೆಎನ್ಎಲ್, ಕಿಯಾನಿಕ್ಸ್ ಮತ್ತು ಕೆಎಫ್‌ಸಿಎಸ್‌ಸಿಎಲ್) ಕಂಪನಿ ಕಾರ್ಯದರ್ಶಿಗಳು ಮಾಡಿರುವುದಿಲ್ಲ.

## 3.11 ಆಂತರಿಕ ಲೆಕ್ಕಪರಿಶೋಧನಾ ಕಾರ್ಯಚೌಕಟ್ಟು

### *ಆಂತರಿಕ ಲೆಕ್ಕಪರಿಶೋಧನೆಯ ಪಾತ್ರ*

**3.11.1** ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯು ನೀಡಿರುವ ಆಂತರಿಕ ಲೆಕ್ಕಪರಿಶೋಧನೆಯ ಮಾನದಂಡಗಳು ಆಂತರಿಕ ಲೆಕ್ಕಪರಿಶೋಧನೆಯನ್ನು ಈ ರೀತಿಯಾಗಿ ವ್ಯಾಖ್ಯಾನಿಸುತ್ತದೆ[61] "ಒಂದು ಸ್ವತಂತ್ರ ನಿರ್ವಹಣಾ ಕಾರ್ಯ, ಇದು ಸಂಸ್ಥೆಯ ಕಾರ್ಯತಂತ್ರದ ಅಪಾಯ ನಿರ್ವಹಣೆ ಮತ್ತು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನೂ ಸೇರಿದಂತೆ, ಸುಧಾರಣೆಗಳಿಗಾಗಿ ಸಲಹೆ ನೀಡುವುದು ಮತ್ತು ಮೌಲ್ಯ ಸೇರ್ಪಡೆ ಮಾಡುವುದು ಮತ್ತು ಸಂಸ್ಥೆಯ ಒಟ್ಟಾರೆ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಒಂದು ಸಂಸ್ಥೆಯ ಕಾರ್ಯಾಚರಣೆಯ ನಿರಂತರ ಮತ್ತು ವಿಮರ್ಶಾತ್ಮಕ ಮೌಲ್ಯಾಂಕನವನ್ನು ಒಳಗೊಂಡಿರುವುದು".

ಈ ರೀತಿಯಾಗಿ, ಆಂತರಿಕ ಲೆಕ್ಕಪರಿಶೋಧನೆಯ ಪಾತ್ರವು ಸಂಸ್ಥೆಯ ಸಂಭಾವ್ಯ ಅಪಾಯ ನಿರ್ವಹಣೆ, ಆಡಳಿತ ಮತ್ತು ಆಂತರಿಕ ನಿಯಂತ್ರಣ ಪ್ರಕ್ರಿಯೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ ಎಂಬುದರ ಬಗ್ಗೆ ಸ್ವತಂತ್ರ ಭರವಸೆಯನ್ನು ಒದಗಿಸುವುದಾಗಿರುತ್ತದೆ.

[61] ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಆಂತರಿಕ ಲೆಕ್ಕಪರಿಶೋಧನೆಯ ಮೇಲೆ ನೀಡಿರುವ ಪುಸ್ತಕದಲ್ಲಿನ ಸಂಬಂಧಿತ ಹೇಳಿಕೆಯ ಸಂಕ್ಷಿಪ್ತ ವಿವರಣೆ.

***ಕಾನೂನು ಚೌಕಟ್ಟು ಮತ್ತು ಅನ್ವಯಿಸುವಿಕೆ***

**3.11.2** ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014 ರ ನಿಯಮ 13 (1) (b) ಜೊತೆಯಲ್ಲಿ ಓದಲ್ಪಡುವ ಕಾಯಿದೆ, 2013 ರ ಸೆಕ್ಷನ್ 138(1) ಪ್ರಕಾರ ಪ್ರತಿ ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿ ಮಾಡದ ಸಾರ್ವಜನಿಕ ಕಂಪನಿಯು ಐವತ್ತು ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಷೇರು ಬಂಡವಾಳವನ್ನು ಅಥವಾ ಹಿಂದಿನ ಹಣಕಾಸು ವರ್ಷದಲ್ಲಿ ಇನ್ನೂರು ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ವಹಿವಾಟು ಅಥವಾ ಬ್ಯಾಂಕ್‌ಗಳು ಅಥವಾ ಸಾರ್ವಜನಿಕ ಹಣಕಾಸು ಸಂಸ್ಥೆಗಳಿಂದ ನೂರು ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಬಾಕಿಯಿರುವ ಸಾಲಗಳು ಅಥವಾ ಹಿಂದಿನ ಹಣಕಾಸು ವರ್ಷದಲ್ಲಿ ಯಾವುದೇ ಸಮಯದಲ್ಲಿ ಇಪ್ಪತ್ತೈದು ಕೋಟಿ ರೂಪಾಯಿಗಳ ಅಥವಾ ಅದಕ್ಕಿಂತ ಹೆಚ್ಚಿನ ಬಾಕಿ ಇರುವ ಠೇವಣಿಗಳನ್ನು ಹೊಂದಿದ್ದಲ್ಲಿ ಆಂತರಿಕ ಲೆಕ್ಕಪರಿಶೋಧಕರನ್ನು ನೇಮಿಸುವ ಅಗತ್ಯವಿದೆ, ಅವರು ಚಾರ್ಟರ್ಡ್ ಅಕೌಂಟೆಂಟ್ ಅಥವಾ ವೆಚ್ಚ ಲೆಕ್ಕಪರಿಶೋಧಕ ಅಥವಾ ಕಂಪನಿಯ ಕಾರ್ಯಗಳು ಮತ್ತು ಚಟುವಟಿಕೆಗಳ ಆಂತರಿಕ ಲೆಕ್ಕಪರಿಶೋಧನೆ ನಡೆಸಲು ಮಂಡಳಿಯು ನಿರ್ಧರಿಸಬಹುದಾದಂತಹ ಇತರ ವೃತ್ತಿಪರರಾಗಿರಬೇಕು.

ಎಲ್ಲಾ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು, ಖಾಸಗಿ ನಿಯಮಿತ ಕಂಪನಿಗಳಾಗಿ ನೋಂದಾಯಿಸಿರುವ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಯುಬಿಸಿಡಿಸಿಎಲ್ ಮತ್ತು ಕೆಆರ್‌ಐಡಿಎಲ್) ಸೇರಿದಂತೆ, ಆಂತರಿಕ ಲೆಕ್ಕಪರಿಶೋಧಕರ ನೇಮಕಾತಿಗಾಗಿ ಅನ್ವಯವಾಗುವ ಮಾನದಂಡಗಳಲ್ಲಿ ಕಡೇಪಕ್ಷ ಒಂದನ್ನಾದರೂ ಪೂರೈಸಿರುತ್ತವೆ.

***ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆ***

**3.11.3** ನಿಯಮದ ಅನುವುಗಳ ಅನುಸಾರ, ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 13 (1)ಕ್ಕಾಗಿ, ಒಬ್ಬ ಆಂತರಿಕ ಲೆಕ್ಕಪರಿಶೋಧಕರು ಕಂಪನಿಯ ಉದ್ಯೋಗಿ ಆಗಿರಬಹುದು ಅಥವಾ ಅಗಿರದೆಯೂ ಇರಬಹುದು.

ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಪಿಸಿಎಲ್) ಒಂದು ಆಂತರಿಕವಾಗಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಹೊಂದಿರುವುದು, ಆದರೂ ತನ್ನ ಶಾಖೋತ್ಪನ್ನ ಮತ್ತು ಜಲ ವಿದ್ಯುತ್ ಘಟಕಗಳಿಗಾಗಿ ಬಾಹ್ಯ ಏಜೆನ್ಸಿಗಳನ್ನೂ ಸಹ ತೊಡಗಿಸಿಕೊಂಡಿರುವುದು. ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಟಿಸಿಎಲ್. ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಸೆಸ್ಕ್, ಜೆಸ್ಕಾಂ, ಮತ್ತು ಎಚ್‌ಜಿಎಂಎಲ್) ಆಂತರಿಕವಾಗಿ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಹೊಂದಿರುತ್ತವೆ. ಉಳಿದ 18 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ವಹಿವಾಟುಗಳ ಆಂತರಿಕ ಲೆಕ್ಕಪರಿಶೋಧನೆ ನಡೆಸಲು ಬಾಹ್ಯ ಸಂಸ್ಥೆಗಳನ್ನು ತೊಡಗಿಸಿಕೊಂಡಿರುತ್ತವೆ.

## 3.12 ವ್ಯಾಪ್ತಿ, ಕಾರ್ಯಾಚರಣೆ, ಕಾಲಾವಧಿ ಮತ್ತು ವಿಧಾನ

***ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯ ರೂಪಿಸುವಿಕೆ , ಅದರ ವ್ಯಾಪ್ತಿ ಮತ್ತು ವಿಧಾನ***

**3.12.1** ಅಧಿನಿಯಮ, 2013ರ ಪರಿಚ್ಛೇದ 138 (2) ಕೇಂದ್ರ ಸರ್ಕಾರವು, ನಿಯಮಗಳನ್ನು ರೂಪಿಸುವ ಮೂಲಕ, ಆಂತರಿಕ ಲೆಕ್ಕಪರಿಶೋಧನೆಯು ಯಾವ ರೀತಿಯಲ್ಲಿ ಮತ್ತು ಯಾವ ಅಂತರಗಳಲ್ಲಿ ನಡೆಯತಕ್ಕದ್ದು ಮತ್ತು ನಿರ್ದೇಶಕರುಗಳ ಮಂಡಳಿಗೆ ವರದಿ ಸಲ್ಲಿಸತಕ್ಕದ್ದು ಎನ್ನುವುದನ್ನು ನಿಗದಿಪಡಿಸಬಹುದು ಎಂಬುದರ ಬಗ್ಗೆ ಅನುವನ್ನು ಒದಗಿಸುತ್ತದೆ. ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 13 (2), ಕಂಪನಿಯ ಲೆಕ್ಕಪರಿಶೋಧನಾ ಸಮಿತಿ ಅಥವಾ ಮಂಡಳಿಯು, ಆಂತರಿಕ ಲೆಕ್ಕಪರಿಶೋಧಕರೊಂದಿಗೆ ಸಮಾಲೋಚಿಸಿ, ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸಲು ವ್ಯಾಪ್ತಿ, ಕಾರ್ಯಾಚರಣೆ, ಅವಧಿ ಮತ್ತು ವಿಧಾನವನ್ನು ರೂಪಿಸತಕ್ಕದ್ದು ಎಂಬುದಾಗಿ ತಿಳಿಸಿರುವುದು.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕಿಯಾನಿಕ್ಸ್) ಮೇಲ್ಕಂಡ ಅವಶ್ಯಕತೆಗಳ ಅನುಪಾಲನೆಯನ್ನು ಮಾಡಿರುವುದಿಲ್ಲ.

- ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಸೆಸ್ಕ್ ಮತ್ತು ಜೆಸ್ಕಾಂ) ಇಂಧನ ಇಲಾಖೆಯ ಅಡಿಯಲ್ಲಿ ಬರುವ ವಿದ್ಯುತ್ ವಿತರಣಾ ಕಂಪನಿಗಳು, ಕರ್ನಾಟಕ ವಿದ್ಯುತ್ ಮಂಡಳಿಯ (ಕೆಇಬಿ) ಹಳೆಯ ಮಾರ್ಗಸೂಚಿಗಳನ್ನು ಅನುಸರಿಸುತ್ತಿದ್ದು, ಇವುಗಳನ್ನು ಸೆಪ್ಟೆಂಬರ್ 1997ರಲ್ಲಿ ಅಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಸಮಾಪ್ತಿಗೊಳಿಸಿ ಅವುಗಳನ್ನು ಅಸ್ತಿತ್ವಕ್ಕೆ ತರುವ ಮುಂಚೆ ರೂಪಿಸಲಾಗಿತ್ತು.

***ಲೆಕ್ಕಪರಿಶೋಧನೆಯ ಆವರ್ತನ ಮತ್ತು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ವರದಿ ಮಾಡುವುದು***

**3.12.2** ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014, ಕಾಲಕಾಲಕ್ಕೆ ತಿದ್ದುಪಡಿ ಮಾಡಿರುವಂತೆ, ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸತಕ್ಕ ಮತ್ತು ವರದಿ ಮಾಡತಕ್ಕ ರೀತಿ ಮತ್ತು ಆವರ್ತನಕ್ಕೆ ಯಾವುದೇ ನಿರ್ದಿಷ್ಟ ನಿಯಮಗಳನ್ನು ಇಲ್ಲಿಯವರೆಗೆ ನಿಗದಿಪಡಿಸಿರುವುದಿಲ್ಲ (ಫೆಬ್ರವರಿ 2024), ಎಲ್ಲಾ 26 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಮ್ಮ ಆಂತರಿಕ ಲೆಕ್ಕಪರಿಶೋಧನೆಯನ್ನು ಸಂಬಂಧಿತ ವ್ಯವಸ್ಥಾಪನೆಯಿಂದ ಅಂಗೀಕೃತವಾದಂತೆ ಮಾಸಿಕ, ತ್ರೈಮಾಸಿಕ, ಅರ್ಧ–ವಾರ್ಷಿಕ ಅಥವಾ ವಾರ್ಷಿಕ ಆಧಾರಗಳಲ್ಲಿ ನಡೆಸಿರುತ್ತವೆ.

ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ಬೆಸ್ಕಾಂ, ಡಿಯುಬಿಸಿಡಿಸಿಎಲ್, ಕೆಆರ್ಐಡಿಎಲ್ ಮತ್ತು ಕೆಎಫ್‌ಸಿಎಸ್‌ಸಿಎಲ್) ಲೆಕ್ಕಪರಿಶೋಧನಾ ಸಮಿತಿ ಅಥವಾ ನಿರ್ದೇಶಕರುಗಳ ಮಂಡಳಿಯು ಆಂತರಿಕ ಲೆಕ್ಕಪರಿಶೋಧಕರ ಕಾರ್ಯನಿರ್ವಹಣೆ ಅಥವಾ ಆಂತರಿಕ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಸಮೀಕ್ಷಿಸಿರಲಿಲ್ಲ.

**ಶಿಫಾರಸುಗಳು :**

6. *ಹಿಂದಿನ ಸಾರ್ವಜನಿಕ ಉದ್ಯಮಗಳ ಇಲಾಖೆಯು (ಡಿಪಿಇ) ನಿರ್ವಹಿಸುವ ಎಲ್ಲಾ ವಿಷಯಗಳಲ್ಲಿ ವ್ಯವಹರಿಸುವ ಜವಾಬ್ದಾರಿಯನ್ನು ಹೊಂದಿರುವ ಹಣಕಾಸು ಇಲಾಖೆಯು, ಅಧಿನಿಯಮ, ನಿಯಮಗಳು, ಮತ್ತು ನಿಯಂತ್ರಣಗಳ ಅನ್ವಯವಾಗುವಂತಹ ಅನುವುಗಳನ್ನು ಸೂಕ್ತ ರೀತಿಯಲ್ಲಿ ಪರಿಗಣಿಸುವ ಮೂಲಕ ಸಾಂಸ್ಥಿಕ ವ್ಯವಹಾರಗಳ ಆಡಳಿತಕ್ಕೆ (ಕೇಂದ್ರ ಡಿಪಿಇಯಿಂದ ರೂಪಿಸಲಾಗಿರುವ ಮಾರ್ಗಸೂಚಿಗಳ ರೀತಿಯಲ್ಲಿ) ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು ಮತ್ತು ಜಾರಿಗೊಳಿಸಬೇಕು.*
7. *ಹಣಕಾಸು ಇಲಾಖೆಯು, ಸಂಬಂಧಿತ ಆಡಳಿತಾತ್ಮಕ ಮಂತ್ರಾಲಯಗಳು/ಇಲಾಖೆಗಳ ಸಮನ್ವಯದೊಂದಿಗೆ, ಎಲ್ಲಾ ರಾಜ್ಯ ಸಾರ್ವಜನಿಕ ವಲಯದ ಉದ್ದಿಮೆಗಳ ಸಾಂಸ್ಥಿಕ ವ್ಯವಹಾರಗಳ ಆಡಳಿತದ ಮೇಲಿನ ಅನ್ವಯಗೊಳ್ಳುವ ಅನುವುಗಳು, ನಿಯಮಗಳು ಮತ್ತು ನಿಯಂತ್ರಣಗಳ ಅನುಪಾಲನೆಯ ಮೇಲ್ವಿಚಾರಣೆ ನಡೆಸಬೇಕು.*
8. *ಲೆಕ್ಕರಿಶೋಧನಾ ಸಮಿತಿಗಳು ಕಂಪನಿಗಳಲ್ಲಿ ಇರುವ ಆತಂಕಕಾರಿ ಕ್ಷೇತ್ರಗಳ ಕುರಿತು ಶಾಸನಬದ್ಧ ಲೆಕ್ಕಪರಿಶೋಧಕರ ಜೊತೆಗೆ ಚರ್ಚಿಸುವುದನ್ನು ಮತ್ತು ಮತ್ತಷ್ಟು ತನಿಖೆ ಮತ್ತು ವರದಿ ಮಾಡುವಿಕೆಯ ಅವಶ್ಯಕತೆ ಇರುವ ಹೆಚ್ಚುವರಿ ಕ್ಷೇತ್ರಗಳ ಕುರಿತು ಸಲಹೆ ನೀಡುವುದನ್ನು, ಸರ್ಕಾರವು ಖಚಿತಪಡಿಸಿಕೊಳ್ಳಬೇಕು.*

# ಅಧ್ಯಾಯ – IV

## ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ

# ಅಧ್ಯಾಯ – IV

## ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ

### 4.1 ಪೀಠಿಕೆ

***ವಿವರಣೆ***

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯು (ಸಿಎಸ್ಆರ್) ಒಂದು ಸ್ವಯಂ–ನಿಯಂತ್ರಣದ ಮಾದರಿಯಾಗಿದ್ದು, ಇದು ಕಂಪನಿಯು ಸಾಮಾಜಿಕವಾಗಿ ತನಗೆ ತಾನು, ತನ್ನ ಸಹಭಾಗಿಗಳಿಗೆ ಅಥವಾ ಶ್ರೇಯಾಸಕ್ತರಿಗೆ ಮತ್ತು ಸಾರ್ವಜನಿಕರಿಗೆ ಬಾಧ್ಯವಾಗಿರಲು ನೆರವಾಗುತ್ತದೆ. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಬದ್ಧತೆಯನ್ನು ಭಾರತ ಸರ್ಕಾರದ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದಿಂದ (ಎಂಸಿಎ) ಅಧಿಸೂಚನೆ ಹೊರಡಿಸಲಾಗಿರುವ ಕಂಪನಿಗಳ ಅಧಿನಿಯಮ, 2013 (ಅಧಿನಿಯಮ) ಅಡಿಯಲ್ಲಿ ಸೇರ್ಪಡೆ ಮಾಡಿರುವುದು (ಆಗಸ್ಟ್ 2013), ಬೆಳವಣಿಗೆಯ ಪ್ರಯೋಜನಗಳನ್ನು ಸಮನಾಗಿ ತಲುಪಿಸುವುದು ಮತ್ತು ಸಾಂಸ್ಥಿಕ ಅಥವಾ ಕಾರ್ಪೋರೇಟ್ ಪ್ರಪಂಚವನ್ನು ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸುವ ಸರ್ಕಾರದ ಪ್ರಯತ್ನಗಳಿಗೆ ಪೂರಕವಾಗಿರಿಸಿರುವುದು.

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯು ಒಂದು ಮಂಡಳಿ ಚಾಲಿತ ಪ್ರಕ್ರಿಯೆಯಾಗಿರುತ್ತದೆ ಮತ್ತು ಕಂಪನಿಯ ಆಡಳಿತ ಮಂಡಳಿಯು ತನ್ನ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸಿನ ಆಧಾರದ ಮೇರೆಗೆ ಕಂಪನಿಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಯೋಜಿಸಲು, ಅಂಗೀಕರಿಸಲು, ಕಾರ್ಯಗತಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡುವ ಸಲುವಾಗಿ ಅದನ್ನು ಸಶಕ್ತಗೊಳಿಸಲಾಗಿರುವುದು.

### 4.2 ಕಾನೂನಿನ ಚೌಕಟ್ಟು

***ಕಾನೂನಿನ ಆದೇಶ***

- ಕಂಪನಿಗಳ ಅಧಿನಿಯಮ, 2013 (ಕಾಲಕಾಲಕ್ಕೆ ತಿದ್ದುಪಡಿ ಮಾಡಿರುವಂತೆ), ಅದರಲ್ಲೂ ನಿರ್ದಿಷ್ಟವಾಗಿ ಅಧಿನಿಯಮದ ಪರಿಚ್ಛೇದ 135 ಮತ್ತು ಪರಿಚ್ಛೇದದ ಷೆಡ್ಯೂಲು VII.
- ಕಂಪನಿಗಳ (ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ನಿಯಮಗಳು 2014ರ (ನಿಯಮಗಳು) ಅನುವುಗಳು, ಸೆಪ್ಟೆಂಬರ್ 2022ರವರೆಗೆ[62] ತಿದ್ದುಪಡಿ ಮಾಡಿರುವಂತೆ (ತಿದ್ದುಪಡಿ ಮಾಡಿರುವ ನಿಯಮಗಳು 2021/2022).

***ಅನ್ವಯಗೊಳ್ಳುವಿಕೆ***

**4.2.1** ತಕ್ಷಣದ ಹಿಂದಿನ ಹಣಕಾಸು ಸಾಲಿನ ಅವಧಿಯಲ್ಲಿ ಕೆಳಕಂಡ ಯಾವುದಾದರೂ ಮಾನದಂಡವನ್ನು ಪೂರೈಸುವಂತಹ ಪ್ರತಿಯೊಂದು ಕಂಪನಿಯು (ಪರಿಚ್ಛೇದ 8 ಕಂಪನಿಗಳೂ /ಮೂರು ಹಣಕಾಸು ವರ್ಷಗಳನ್ನು ಪೂರ್ಣಗೊಳಿಸದಿರುವ ಹೊಸದಾಗಿ ರಚನೆಯಾಗಿರುವ ಕಂಪನಿಗಳು ಸೇರಿದಂತೆ) ಅಧಿನಿಯಮದ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳು/ತಿದ್ದುಪಡಿ ನಿಯಮಗಳ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 135 (1)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಗೆ ಸಂಬಂಧಿತ ಅನುವುಗಳನ್ನು ಅನುಪಾಲನೆ ಮಾಡತಕ್ಕದ್ದು.

---

[62] ಕಂಪನಿಗಳು (ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ನೀತಿ) ತಿದ್ದುಪಡಿ ನಿಯಮಗಳು, 2021 ದಿನಾಂಕ 22.01.2021 ಮತ್ತು ಕಂಪನಿಗಳು (ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನೀತಿ) ತಿದ್ದುಪಡಿ ನಿಯಮಗಳು, 2022 ದಿನಾಂಕ 20.09.2022.

i. ₹ ಐನೂರು ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ **ನಿವ್ವಳ ಮೌಲ್ಯ,** ಅಥವಾ

ii. **ವಹಿವಾಟು** ₹ ಒಂದು ಸಾವಿರ ಕೋಟಿ ಅಥವಾ ಅದಕ್ಕೂ ಅಧಿಕ, ಅಥವಾ

iii. **ನಿವ್ವಳ ಲಾಭ** ₹ ಐದು ಕೋಟಿ ಅಥವಾ ಅದಕ್ಕೂ ಅಧಿಕ.

ಅಂತಹ ಪ್ರತಿಯೊಂದು ಕಂಪನಿಯ ನಿರ್ದೇಶಕರುಗಳ ಮಂಡಳಿಯು ಕಂಪನಿಯು, ಪ್ರತೀ ಹಣಕಾಸು ಸಾಲಿನಲ್ಲಿ, ತಕ್ಷಣದ ಹಿಂದಿನ ಮೂರು ಹಣಕಾಸು ಸಾಲುಗಳಲ್ಲಿ ಮಾಡಲಾಗಿರುವ ಸರಾಸರಿ ನಿವ್ವಳ ಲಾಭಗಳ (ಅಧಿನಿಯಮದ ಪರಿಚ್ಛೇದ 198ರ ಅನುವುಗಳಿಗೆ ಅನುಗುಣವಾಗಿ ಲೆಕ್ಕಾಚಾರ ಮಾಡಲಾಗಿರುವ) ಕಡೇಪಕ್ಷ ಶೇಕಡಾ ಎರಡರಷ್ಟನ್ನು ಖರ್ಚು ಮಾಡತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 135(5) ನಿರ್ದಿಷ್ಟಪಡಿಸಿರುವುದು.

ಸರ್ಕಾರವು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಗೆಂಬಂಧಿತ ಅನುವುಗಳ ಅನುಪಾಲನೆಯನ್ನು ಕಂಪನಿಗಳು ಎಂಸಿಎ 21 ಪೋರ್ಟಲ್ ಒಳಗೆ ಮಾಡುತ್ತಿರುವ ಬಹಿರಂಗಪಡಿಸುವಿಕೆಗಳ ಮೂಲಕ ಮೇಲ್ವಿಚಾರಣೆ ಮಾಡುತ್ತಿದೆ. ಯಾವುದೇ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಗೆ ಸಂಬಂಧಿತ ಅನುವುಗಳ ಉಲ್ಲಂಘನೆಗೆ, ಸರ್ಕಾರದಿಂದ ಅಂತಹ ಅನುಪಾಲನೆ ಮಾಡದಿರುವ ಕಂಪನಿಗಳ ವಿರುದ್ಧ ಕಂಪನಿಗಳ ಅಧಿನಿಯಮ, 2013ರ ಅನುವುಗಳ ಅನುಸಾರ ದಾಖಲೆಗಳ ಸೂಕ್ತ ಪರಿಶೀಲನೆ ಮತ್ತು ಕಾನೂನಿನ ಸೂಕ್ತ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಕ್ರಮವನ್ನು ಜರುಗಿಸಬಹುದು. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಗೆ ಸಂಬಂಧಿತ ಅನುವುಗಳ ಅನುಪಾಲನೆ ಮಾಡದಿರುವುದನ್ನು 22.01.2021ರಿಂದ ಜಾರಿಗೆ ಬರುವಂತೆ ನಾಗರೀಕ ತಪ್ಪು ಅಥವಾ ಅಪರಾಧ ಎಂಬುದಾಗಿ ಅಧಿಸೂಚನೆ ಹೊರಡಿಸಲಾಗಿರುವುದು.

## 4.3 ವ್ಯಾಪ್ತಿ ಮತ್ತು ವಿಸ್ತರಣೆ

121 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 32 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[63], (ಶಾಸನಬದ್ಧ ನಿಗಮಗಳನ್ನು ಹೊರತುಪಡಿಸಿ) ಮಾರ್ಚ್ 2023ರ ಅಂತ್ಯದಲ್ಲಿದ್ದಂತೆ ಮೇಲೆ ತಿಳಿಸಿರುವ ಅಧಿನಿಯಮ / ನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಗೆ ಸಂಬಂಧಿತ ಅನುವುಗಳ ಮಾನದಂಡಗಳನ್ನು ಪೂರೈಸಿರುತ್ತವೆ. ಲೆಕ್ಕಪರಿಶೋಧನೆಯು, 2022–23 ಹಣಕಾಸು ಸಾಲಿನಲ್ಲಿ ಲಾಭ ಗಳಿಸುತ್ತಿರುವ 22 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (***ಅನುಬಂಧ –12***) ಕೈಗೆತ್ತಿಕೊಂಡಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಗೆ ಸಂಬಂಧಿತ ಚಟುವಟಿಕೆಗಳನ್ನು ಸಮೀಕ್ಷಿಸಿತು ಹಾಗೂ ಹಿಂದಿನ 2019–20ರಿಂದ 2021–22ರವರೆಗಿನ ಮೂರು ಹಣಕಾಸು ಸಾಲುಗಳಲ್ಲಿ ಒಟ್ಟಾರೆ ನಕಾರಾತ್ಮಕ ಲಾಭ (ನಷ್ಟ) ವರದಿ ಮಾಡಿದ್ದ ಹತ್ತು (10) ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳ ಅಡಿಯಲ್ಲಿ ಯಾವುದೇ ಮೊತ್ತವನ್ನು ಖರ್ಚು ಮಾಡುವ ಅವಶ್ಯಕತೆ ಇರುವುದಿಲ್ಲ.ಆದ್ದರಿಂದ ಇವನ್ನು ಹೊರತುಪಡಿಸಿತು.

**4.3.1** ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಆರ್‌ಜಿಎಚ್‌ಸಿಎಲ್), 2022–23 ಹಣಕಾಸು ಸಾಲಿನಲ್ಲಿ ಅಂದಾಜು ₹ 6.00 ಲಕ್ಷ ಮೊತ್ತವನ್ನು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳಿಗಾಗಿ ಖರ್ಚು ಮಾಡಬೇಕಾಗಿತ್ತು, ಆದರೆ ಅದು 2022–23 ಹಣಕಾಸು ಸಾಲಿನಲ್ಲಿ ಅಧಿನಿಯಮ ಅಥವಾ ನಿಯಮಗಳ ಯಾವುದೇ ಅನುವುಗಳ ಅನುಪಾಲನೆಯನ್ನು ಮಾಡುವಲ್ಲಿ "ಲಾಭವಿಲ್ಲದ ನಷ್ಟವಿಲ್ಲದ ಕಂಪನಿ" ಎಂಬ ಊಹೆ/ಕಲ್ಪನೆಯ ಮೇಲೆ ವಿಫಲಗೊಂಡಿತು.

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ ವಾದವು ಒಪ್ಪುವಂತಿರಲಿಲ್ಲ ಏಕೆಂದರೆ ***ಕಂಡಿಕೆ 4.2.1***ರಲ್ಲಿ ಹೇಳಿರುವಂತೆ ಹಾಗೂ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು ಸಾಂಸ್ಥಿಕ ವ್ಯವಹಾರಗಳ

[63] ಅರ್ಹತೆಗೆ ಆಧಾರವಾಗಿರುವಂತಹ 2021–22 ಹಣಕಾಸು ಸಾಲಿಗೆ ಹಣಕಾಸು ತ:ಖ್ತೆಗಳನ್ನು ಸಮೀಕ್ಷಾ ಅವಧಿ ಸೆಪ್ಟಂಬರ್ 2023ರ ಅಂತ್ಯದಲ್ಲಿ ಪ್ರಮಾಣೀಕರಿಸಲಾಗಿದ್ದಂತಹ ಕಂಪನಿಗಳು.

ಮಂತ್ರಾಲಯದಿಂದ ಸ್ಪಷ್ಟೀಕರಿಸಲಾಗಿರುವಂತೆ[64] (ಆಗಸ್ಟ್ 2021) ಅಧಿನಿಯಮದ[65] ಪರಿಚ್ಛೇದ 8ರ ಅಡಿಯಲ್ಲಿ ನೋಂದಾಯಿಸಿರುವುದಿಲ್ಲ, ಆದ್ದರಿಂದ ಪರಿಚ್ಛೇದ 8 ಕಂಪನಿಗಳೂ ಸೇರಿದಂತೆ ಪ್ರತೀ ಕಂಪನಿಗೆ ಅನ್ವಯವಾಗುವ ಅಧಿನಿಯಮದ ಅನುವುಗಳು ಇಲ್ಲಿಯೂ ಅನ್ವಯವಾಗುತ್ತವೆ.

ಉಳಿದ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗೆ ಸಂಬಂದಿಸಿದಂತೆ ಅನುವುಗಳ ಅನುಪಾಲನೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿರುವುದು.

## 4.4 ಪೂರ್ವಭಾವಿ ಯೋಜನೆ

***ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ರಚನೆ***

4.4.1 ನಿರ್ದಿಷ್ಟಪಡಿಸಿರುವ ಮಾನದಂಡಗಳನ್ನು ಪೂರೈಸುವ ಪ್ರತಿಯೊಂದು ಕಂಪನಿಯು (***ಕಂಡಿಕೆ 4.2.1***ರಲ್ಲಿ ಉಲ್ಲೇಖಿಸಲಾಗಿರುವ) ನಿರ್ದೇಶಕರುಗಳ ಮಂಡಳಿಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ರಚಿಸತಕ್ಕದ್ದು. ಎಂಬುದಾಗಿ ಅಧಿನಿಯಮದ ಪರಿಚ್ಛೇದ 135 (1) ನಿರ್ದಿಷ್ಟಪಡಿಸಿರುತ್ತದೆ ಅಧಿನಿಯಮದ ಪರಿಚ್ಛೇದ 135 (9)ರ ಅನುಸಾರ[66], ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ರಚನೆಗೆ ಸಂಬಂಧಿತ ಅನುವುಗಳು ಪರಿಚ್ಛೇದ 135 (5) ಅಡಿಯಲ್ಲಿ ಕಂಪನಿಯೊಂದು ಖರ್ಚು ಮಾಡಬೇಕಾಗಿರುವ ಮೊತ್ತವು ₹ಐವತ್ತು ಲಕ್ಷಗಳನ್ನು ದಾಟದಿದ್ದಲ್ಲಿ ಅನ್ವಯವಾಗುವುದಿಲ್ಲ ಮತ್ತು ಅಂತಹ ಪ್ರಕರಣಗಳಲ್ಲಿ, ಅಂತಹ ಸಮಿತಿಯ ಕೆಲಸಗಳನ್ನು ಅಂತಹ ಕಂಪನಿಯ ನಿರ್ದೇಶಕರುಗಳ ಮಂಡಳಿಯಿಂದ ಮಾಡಲಾಗುತ್ತದೆ ಅಧಿನಿಯಮದ ಪರಿಚ್ಛೇದ 135 (9)ರ ಅಡಿಯಲ್ಲಿನ ವಿನಾಯಿತಿಯು ಅಧಿನಿಯಮದ ಪರಿಚ್ಛೇದ 135 (6)ರ ಅನುಸಾರ ಖರ್ಚುಮಾಡದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಲೆಕ್ಕದಲ್ಲಿ ಖರ್ಚುಮಾಡಲು ಯಾವುದೇ ಮೊತ್ತವು ಇದ್ದಲ್ಲಿ ಅಂತಹ ಕಂಪನಿಗೆ ಅನ್ವಯವಾಗುವುದಿಲ್ಲ[67].

ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[68] ಹಣಕಾಸು ಸಾಲಿನ ಅವಧಿಯಲ್ಲಿ ಖರ್ಚು ಮಾಡಬೇಕಾದ ಮೊತ್ತವು ₹ಐವತ್ತು ಲಕ್ಷಗಳಿಗಿಂತ ಕಡಿಮೆ ಇದ್ದ ಕಾರಣ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ರಚನೆ ಮಾಡುವುದು ಅಗತ್ಯವಿರಲಿಲ್ಲ. ಆದಾಗ್ಯೂ, ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಏಳು (ಎಂಪಿವಿಎಲ್ ಮತ್ತು ಕೆಎಸ್ಎಸ್‌ಸಿಎಲ್ ಇವೆರಡನ್ನು ಹೊರತುಪಡಿಸಿ) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಗಳ ರಚನೆ ಮಾಡಿದ್ದವು.

ಉಳಿದ ಎಲ್ಲಾ 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ರಚನೆ ಮಾಡುವ ಮೂಲಕ ಅಧಿನಿಯಮದ ಅನುವುಗಳ ಅನುಪಾಲನೆ ಮಾಡಿದ್ದವು.

**ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಸಂಯೋಜನೆ – ಸ್ವತಂತ್ರ ನಿರ್ದೇಶಕರುಗಳ ಅನುಪಸ್ಥಿತಿ**

**4.4.2** ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯು ಮೂರು ಅಥವಾ ಹೆಚ್ಚಿನ ನಿರ್ದೇಶಕರುಗಳನ್ನು ಒಳಗೊಂಡಿರಬೇಕು, ಈ ಪೈಕಿ ಕಡೇಪಕ್ಷ ಒಬ್ಬರು ಸ್ವತಂತ್ರ ನಿರ್ದೇಶಕರು ಇರತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 135 (1) ನಿರ್ದಿಷ್ಟಪಡಿಸಿರುತ್ತದೆ. ಅಧಿನಿಯಮದ ಪರಿಚ್ಛೇದ 149 (4)ರ ಅಡಿಯಲ್ಲಿ ಸ್ವತಂತ್ರ ನಿರ್ದೇಶಕರುಗಳನ್ನು ನೇಮಕ ಮಾಡುವ ಅವಶ್ಯಕತೆ ಇಲ್ಲದ ಕಂಪನಿಯು, ತನ್ನ

[64] 25.08.2021 ರ ಸಾಮಾನ್ಯ ಸುತ್ತೋಲೆ ಸಂಖ್ಯೆ.14 / 2021 ರ ಸ್ಪಷ್ಟೀಕರಣ ಸಂಖ್ಯೆ.1.3.

[65] ದತ್ತಿ, ದಾನಗಳ ಉದ್ದೇಶಗಳು, ಇತ್ಯಾದಿಗಳೊಂದಿಗೆ ರಚಿಸಲಾಗಿರುವ ಕಂಪನಿಗಳು – ಅಧಿನಿಯಮದ ಪರಿಚ್ಛೇದ 8.

[66] ಕಂಪನಿಗಳ (ತಿದ್ದುಪಡಿ) ಅಧಿನಿಯಮ, 2020 ದಿನಾಂಕ 28.09.2020ರ ಮೂಲಕ ಪರಿಚ್ಛೇದ 135ಕ್ಕೆ ತಿದ್ದುಪಡಿಯ ಮೂಲಕ ಸೇರಿಸಿರುವುದು.

[67] ಕಂಪನಿಗಳ (ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ) ತಿದ್ದುಪಡಿ ನಿಯಮಗಳು, 2022 ದಿನಾಂಕ 20.09.2022.

[68] ಮೆಸ್ಕಾಂ, ಎಮ್ಇಐ, ಎಮ್‌ಪಿವಿಎಲ್, ಎಮ್‌ಸಿಎ, ಕೆಎಸ್ಎಸ್‌ಸಿಎಲ್, ಕೆಎಸ್‌ಪಿಎಚ್‌ಐಡಿಸಿಎಲ್, ಕೆಎಸ್ಎಸ್ಐಡಿಸಿ, ಕಿಯಾನಿಕ್ಸ್ ಮತ್ತು ಸಿಬಿಐಸಿ–ತುಮಕೂರು.

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯಲ್ಲಿ ಇಬ್ಬರು ಅಥವಾ ಹೆಚ್ಚಿನ ನಿರ್ದೇಶಕರುಗಳನ್ನು ಹೊಂದಿರಬಹುದು.

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ರಚನೆ ಮಾಡಿದ್ದಂತ 19 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಆರ್‌ಐಡಿಎಲ್ ಮತ್ತು ಕೆಎಸ್‌ಪಿಎಚ್‌ಐಡಿಸಿಎಲ್) ಖಾಸಗಿ ನಿಯಮಿತ ಕಂಪನಿಗಳಾಗಿ ನೋಂದಾಯಿಸಿರುವ ಕಾರಣ ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರುವ ಅವಶ್ಯಕತೆ ಇರಲಿಲ್ಲ. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಗಳ ರಚನೆ ಮಾಡಿದ್ದಂತಹ ಉಳಿದ 17 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[69] ಸ್ವತಂತ್ರ ನಿರ್ದೇಶಕರುಗಳನ್ನು ಹೊಂದಿರಲಿಲ್ಲ.

***ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ ರೂಪಿಸುವಿಕೆ***

**4.4.3** ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯು ಕಂಪನಿಯು ಕೈಗೆತ್ತಿಕೊಳ್ಳಬೇಕಾದಂತಹ ಚಟುವಟಿಕೆಗಳನ್ನು ಸೂಚಿಸುವ ಮೂಲಕ ಒಂದು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಾರ್ಯನೀತಿಯನ್ನು ನಿರೂಪಿಸುವ ಮತ್ತು ನಿರ್ದೇಶಕರುಗಳ ಮಂಡಳಿಗೆ ಶಿಫಾರಸು ಮಾಡುವ ಹಾಗೂ ನಿರ್ದೇಶಕರುಗಳ ಮಂಡಳಿಯು, ಪರಿಚ್ಛೇದ 135 (4)ರ ಅನುಸಾರ ಸಮಿತಿಯ ಶಿಫಾರಸುಗಳನ್ನು ಪರಿಗಣಿಸಿದನಂತರ ಅದನ್ನು ಅಂಗೀಕರಿಸುವ ಅಗತ್ಯತೆಯನ್ನು ಅಧಿನಿಯಮದ ಪರಿಚ್ಛೇದ 135 (3) ಹೊಂದಿರುತ್ತದೆ.

ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯನ್ನು ಹೊರತುಪಡಿಸಿ (ಕೆಎಸ್‌ಪಿಎಚ್‌ಐಡಿಸಿಎಲ್) ಉಳಿದ ಎಲ್ಲಾ 20 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅನುವುಗಳ ಅನುಪಾಲನೆಯಾಗಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯನ್ನು ರೂಪಿಸಿದ್ದವು. ಕೆಎಸ್‌ಪಿಎಚ್‌ಐಡಿಸಿಎಲ್‌ನ ನಿರ್ದೇಶಕರುಗಳ ಮಂಡಳಿಯು ಒಂದು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯನ್ನು ರೂಪಿಸದೆಯೇ ಕೇವಲ ಹೇಳಿಕೆಯನ್ನು ಮಾತ್ರ ಅಂಗೀಕರಿಸಿದ್ದಿತ್ತು (ಡಿಸೆಂಬರ್ 2011).

***ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯ ನವೀಕರಣ***

4.4.4 ಲೆಕ್ಕಪರಿಶೋಧನೆಗೆ ಒದಗಿಸಲಾದ ಕಾರ್ಯನೀತಿಯನ್ನು ರೂಪಿಸಲಾದ ದಿನಾಂಕವನ್ನು ವಿಶ್ಲೇಷಿಸಲಾಗಿ ಕೇವಲ ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಸಿಎಲ್, ಎಂಇಐ, ಎಂಸಿಎ, ಕೆಎಸ್‌ಎಸ್‌ಸಿಎಲ್ ಮತ್ತು ಸಿಬಿಐಸಿ – ತುಮಕೂರು) ನಿಯಮಗಳಿಗೆ ಮಾಡಿರುವ ತಿದ್ದುಪಡಿಗಳಿಗೆ (ಜನವರಿ 2021) ಅನುಗುಣವಾಗಿ ತಮ್ಮ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾಯನೀತಿಯನ್ನು ಪರಿಷ್ಕರಣೆ ಮಾಡಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಆರ್‌ಐಡಿಎಲ್) ತನ್ನ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾಯನೀತಿಯನ್ನು ರೂಪಿಸಿದ ದಿನಾಂಕವನ್ನು ಒದಗಿಸಲಿಲ್ಲ.

***ವಾರ್ಷಿಕ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಪೂರ್ವಭಾವಿ ಯೋಜನೆ ಮತ್ತು ಆಯವ್ಯಯ ತಯಾರಿಕೆ***

**4.4.5** ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯು ಹಣಕಾಸು ಸಾಲಿನಲ್ಲಿ ಕೈಗೆತ್ತಿಕೊಳ್ಳಬೇಕಾದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳು ಮತ್ತು ಭರಿಸಬೇಕಾದ ಮೊತ್ತವನ್ನು ನಿರ್ದೇಶಕರುಗಳ ಮಂಡಳಿಗೆ ಶಿಫಾರಸು ಮಾಡಬೇಕು. ಇದು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಆಯವ್ಯಯ ಮತ್ತು ಪೂರ್ವಭಾವಿಯಾಗಿ ಯೋಜಿಸುವಿಕೆ ಮತ್ತು ಅವುಗಳಿಗೆ ಅಂಗೀಕಾರವನ್ನು ಒಳಗೊಂಡಿರುತ್ತದೆ.

ಒಂದು ಅತ್ಯುತ್ತಮ ಅಭ್ಯಾಸವಾಗಿ, ಪ್ರಸ್ತಾಪಿತ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಚಟುವಟಿಕೆಗಳು ಮತ್ತು ಹಣದ ಅವಶ್ಯಕತೆಯನ್ನು ಸೂಕ್ತವಾಗಿ ಹಿಂದಿನ ಹಣಕಾಸು ವರ್ಷದ

[69] ಮೆಸ್ಕಾಂ, ಕೆಆರ್‌ಇಡಿಎಲ್, ಕೆಎಸ್‌ಎಮ್‌ಸಿಎಲ್, ಹೆಚ್‌ಜಿಎಮ್‌ಎಲ್, ಎಂಸಿಎ, ಕೆಎಸ್‌ಐಐಡಿಸಿ, ಕೆಎಸ್‌ಎಸ್‌ಐಡಿಸಿ, ಕಿಯಾನಿಕ್ಸ್, ಕೆಎಸ್‌ಬಿಸಿಎಲ್, ಕೆಎಫ್‌ಸಿಎಸ್‌ಸಿಎಲ್ ಮತ್ತು ಸಿಬಿಐಸಿ–ತುಮಕೂರು.

ಮಾರ್ಚ್31ರ ಹೊತ್ತಿಗೆ ಅಥವಾ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಅಂದಾಜು ಮಾಡಬೇಕು ಮತ್ತು ಮಂಡಳಿಗೆ ಪ್ರಸ್ತುತಪಡಿಸಬೇಕು. ಇದರಿಂದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವುದು / ಹಣಕಾಸು ಖರ್ಚುಮಾಡುವುದನ್ನು ನಾಲ್ಕು ತ್ರೈಮಾಸಿಕಗಳಲ್ಲಿ ಹರಡಲು ಮತ್ತು ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆ ಗಳಿಗೆ ಸಂಬಂಧಿತ ಹಣಕಾಸನ್ನು ಆತುರಾತುರವಾಗಿ ಖಾಲಿಮಾಡುವುದನ್ನು ತಡೆಗಟ್ಟುವುದನ್ನು ಖಚಿತಪಡಿಸುತ್ತದೆ.

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ /ನಿರ್ದೇಶಕರುಗಳ ಮಂಡಳಿಯ ನಡಾವಳಿಗಳ ಲೆಕ್ಕಪರಿಶೋಧನಾ ವಿಶ್ಲೇಷಣೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗೆ ಸಂಬಂಧಿಸಿದ ಶಿಫಾರಸುಗಳು ಕೇವಲ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಅಂದರೆ ಕೆಆರ್ಐಡಿಎಲ್ (3), ಕೆಎಸ್ಎಂಸಿಎಲ್ (3), ಮತ್ತು ಎಂಎಸ್ಐಎಲ್ (2) ಕಂಪನಿಗಳಲ್ಲಿ ಬಹು ತ್ರೈಮಾಸಿಕಗಳಲ್ಲಿ ಹರಡಿದ್ದವು. ಇವುಗಳ ಪೈಕಿ, ಕೇವಲ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯ (ಎಂಎಸ್ಐಎಲ್) ಸಮಿತಿಯು ಮಾರ್ಚ್ 2022ರಲ್ಲಿ, ಹಣಕಾಸು ವರ್ಷದ ಪ್ರಾರಂಭದ ಮುಂಚೆ ಕೆಲವು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಶಿಫಾರಸು ಮಾಡಿದ್ದಿತ್ತು. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯಲ್ಲಿ (ಕೆಎಫ್ಸಿಎಸ್ಸಿಎಲ್) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯು ಸಭೆ ಸೇರಲಿಲ್ಲ ಮತ್ತು ತನ್ನ ನಿರ್ದೇಶಕರುಗಳ ಮಂಡಳಿಯಿಂದ ನೀಡಿದ್ದ ಸಲಹೆಯಂತೆ (ನವೆಂಬರ್ 2022), ಕಂಪನಿಯು ವರ್ಷದ ಅವಧಿಯಲ್ಲಿ ಕೈಗೆತ್ತಿಕೊಳ್ಳಬೇಕಾದ ಚಟುವಟಿಕೆಗಳ ಶಿಫಾರಸುಗಳನ್ನು ಮಾಡಿರಲಿಲ್ಲ.
- ಕೇವಲ ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಆರ್ಐಡಿಎಲ್ ಮತ್ತು ಕೆಎಸ್ಎಂಸಿಎಲ್) ವರ್ಷದ ಅವಧಿಯಲ್ಲಿ ತಮ್ಮ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಗಳಿಗೆ ಸಂಬಂಧಿತ ಪೂರ್ವಭಾವಿ ಯೋಜನೆಗಳು /ಆಯವ್ಯಯಗಳಿಗೆ ನಿರ್ದೇಶಕರುಗಳ ಮಂಡಳಿಯಿಂದ ಕಾಲಕಾಲಕ್ಕೆ ಅಂಗೀಕಾರವನ್ನು ಪಡೆದಿದ್ದವು ಮತ್ತು ಉಳಿದ 19 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಗಳಿಗೆ ಸಂಬಂಧಿತ ಪೂರ್ವಭಾವಿ ಯೋಜನೆಗಳು /ಆಯವ್ಯಯಗಳಿಗೆ ಸಂಬಂಧಿತ ನಿರ್ದೇಶಕರುಗಳ ಮಂಡಳಿಯಿಂದ ಎರಡನೇ (02 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು), ಮೂರನೇ (09 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು), ಮತ್ತು ನಾಲ್ಕನೇ (08 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು) ತ್ರೈಮಾಸಿಕಗಳಲ್ಲಿ ಅಂಗೀಕಾರ ನೀಡಲಾಗಿದ್ದಿತು.

## 4.5 ಹಣಕಾಸಿನ ಘಟಕ

***ಹಣಕಾಸಿನ ಹಂಚಿಕೆ***

**4.5.1** ಅಧಿನಿಯಮದ ಪರಿಚ್ಛೇದ 135 (5)ರ ಅನುಸಾರ, ನಿರ್ದೇಶಕರುಗಳ ಮಂಡಳಿಯು ತನ್ನ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯನ್ನು ಅನುಷ್ಠಾನಗೊಳಿಸಲು ತಕ್ಷಣದ ಹಿಂದಿನ ಮೂರು ಹಣಕಾಸು ವರ್ಷಗಳ ಸರಾಸರಿ ನಿವ್ವಳ ಲಾಭದ ಶೇಕಡಾ ಎರಡರಷ್ಟನ್ನು ವಾರ್ಷಿಕವಾಗಿ ಕಂಪನಿಯು ಖರ್ಚು ಮಾಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಈ ಕೆಳಗಿನ **ಕೋಷ್ಟಕ ಸಂಖ್ಯೆ 4.1**ರಲ್ಲಿ ತೋರಿಸಿರುವಂತೆ, 2022–23 ಸಾಲಿಗೆ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಮೇಲೆ ಭರಿಸಬೇಕಿದ್ದಂತಹ ₹ 68.55 ಕೋಟಿ ಮೊತ್ತಕ್ಕೆ ಪ್ರತಿಯಾಗಿ, ₹ 66.91 ಕೋಟಿ ಖರ್ಚನ್ನು ಅಂಗೀಕರಿಸಲಾಗಿದ್ದಿತು ಹಾಗೂ ₹ 70.22 ಕೋಟಿ ಮೊತ್ತದ ಹಂಚಿಕೆಯನ್ನು ಮಾಡಲಾಗಿದ್ದಿತು.

**ಕೋಷ್ಟಕ ಸಂಖ್ಯೆ 4.1: ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ಭರಿಸಲು ಅಗತ್ಯತೆಯಿದ್ದಂತಹ, ಅಂಗೀಕರಿಸಿರುವ ಮತ್ತು ಹಂಚಿಕೆ ಮಾಡಲಾಗಿರುವ ಹಣಕಾಸಿನ ವಿವರಗಳನ್ನು ತೋರಿಸುವ ತ;ಖ್ತೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ನಿವ್ವಳ ಲಾಭದ ಶೇಕಡಾ ಎರಡು | ಅಂಗೀಕರಿಸಿರುವ ಖರ್ಚು | ವಾಸ್ತವಿಕ ಹಂಚಿಕೆ | ಅಧಿಕ / (ಕೊರತೆ) |
|---|---|---|---|---|---|---|
| 01 | ಪರಿಚ್ಛೇದ 198ರ ಲೆಕ್ಕಾಚಾರದ ಪ್ರಕಾರ ಹಂಚಿಕೆ | 13 | 44.81 | 41.50 | 44.81 | 0.00 |
| 02 | ಅವಶ್ಯಕತೆಗಿಂತ ಹೆಚ್ಚಿನ ಹಂಚಿಕೆ | 04 | 11.60 | 13.83 | 13.83 | 2.23 |
| 03 | ಅವಶ್ಯಕತೆಗಿಂತ ಕಡಿಮೆ ಹಂಚಿಕೆ | 04 | 12.14 | 11.58 | 11.58 | (0.56) |
| | **ಒಟ್ಟು** | **21** | **68.55** | **66.91** | **70.22** | **1.67** |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಿರುವ ಮಾಹಿತಿ/ದತ್ತಾಂಶ*

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ವಿವರಗಳು ***ಅನುಬಂಧ – 13***ರ ಅನುಸಾರ.

ಹಂಚಿಕೆಯಲ್ಲಿನ ಕೊರತೆಯನ್ನು ಗಮನಿಸಿದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿಯನ್ನು ಕೊರತೆಗೆ ಕಾರಣಗಳೊಂದಿಗೆ ಕೆಳಗೆ ನೀಡಲಾದ ಕೋಷ್ಟಕ ಸಂಖ್ಯೆ 4.2 ರಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 4.2: ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಡೆಗೆ ಭರಿಸುವ ಸಲುವಾಗಿ ಹಂಚಿಕೆಯಲ್ಲಿನ ಕೊರತೆ ಮತ್ತು ಕೊರತೆಗೆ ಕಾರಣಗಳನ್ನು ತೋರಿಸುವ ತ:ಖ್ತೆ**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ಖರ್ಚು ಮಾಡಬೇಕಾಗಿರುವ ಹಣ | ಅಂಗೀಕರಿಸುವ ಖರ್ಚು ಮತ್ತು ಮಾಡಲಾಗಿರುವ ಹಂಚಿಕೆ | ಹಂಚಿಕೆಯಲ್ಲಿ ಕೊರತೆ | ಟಿಪ್ಪಣಿಗಳು |
|---|---|---|---|---|---|
| 01 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | 9.77 | 9.68 | (0.09) | ಹಣಕಾಸು ವರ್ಷ 2021-22ರ ಲಾಭದ ಪರಿಷ್ಕರಣೆಯ ಕಾರಣ, ಹಣಕಾಸು ವರ್ಷ 2022–23ರ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯ ನಂತರ. |
| 02 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 0.16 | 0.11 | (0.05) | ಹಣಕಾಸು ವರ್ಷ 2021–22ಕ್ಕೆ ₹ 0.09 ಕೋಟಿಯ ಹೆಚ್ಚುವರಿ ವೆಚ್ಚವನ್ನು ಕಡಿಮೆಗೊಳಿಸಿದ ನಂತರ ವಾಸ್ತವಿಕ ಅಗತ್ಯವು ಕೇವಲ ₹ 0.07 ಕೋಟಿಯಷ್ಟಿತ್ತು, ಅದರ ವಿರುದ್ಧ ₹ 0.11 ಕೋಟಿಯ ಹಂಚಿಕೆ ಮಾಡಲಾಯಿತು |
| 03 | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ | 0.92 | 0.88 | (0.04) | ಕಾರಣಗಳನ್ನು ನೀಡಲಾಗಿರುವುದಿಲ್ಲ, ಆದರೆ ₹ 0.88 ಕೋಟಿ ಅಂದಾಜನ್ನು ಹೊಂದಿರುವ ಕೇವಲ ಒಂದು ಯೋಜನೆಯನ್ನು ಅಂಗೀಕರಿಸಲಾಯಿತು. |
| 04 | ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮತ | 1.29 | 0.91 | (0.38) | ಹಣಕಾಸು ವರ್ಷ 2021–22ಕ್ಕೆ ₹ 0.49 ಕೋಟಿಯ ಹೆಚ್ಚುವರಿ ವೆಚ್ಚವನ್ನು ಕಡಿಮೆಗೊಳಿಸಿದ ನಂತರ ವಾಸ್ತವಿಕ ಅಗತ್ಯವು ಕೇವಲ ₹ 0.80 ಕೋಟಿಯಷ್ಟಿತ್ತು, ಅದರ ವಿರುದ್ಧ ₹ 0.91 ಕೋಟಿಯ ಹಂಚಿಕೆ ಮಾಡಲಾಯಿತು |
| | **ಒಟ್ಟು** | **12.14** | **11.58** | **-0.56** | |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಿರುವ ಮಾಹಿತಿ/ದತ್ತಾಂಶ*

***ಹಣಕಾಸಿನ ಬಳಕೆ***

**4.5.2** ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗಾಗಿ ಮಾಡಲಾದ ₹ 70.22 ಕೋಟಿ ಹಂಚಿಕೆಗೆ ಹೋಲಿಸಿದಲ್ಲಿ, 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022–23 ಹಣಕಾಸು ಸಾಲಿನಲ್ಲಿ ₹ 55.66 ಕೋಟಿ ಖರ್ಚು ಮಾಡಿರುವುದಾಗಿ ಹೇಳಿಕೊಂಡಿವೆ. ಆದಾಗ್ಯೂ, ವಾಸ್ತವಿಕ ವೆಚ್ಚವು ವರ್ಷದ ಅವಧಿಯಲ್ಲಿ ಕೇವಲ ₹ 50.42 ಕೋಟಿ ಆಗಿದ್ದಿತು (***ಅನುಬಂಧ –14***ರಲ್ಲಿ ವಿವರಗಳು) ಎಂಬುದನ್ನು ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ತೋರಿಸಿಕೊಟ್ಟಿತು. ₹ 5.24 ಕೋಟಿ (ನಿವ್ವಳ) ರಾಜ್ಯ ಸಾರ್ವಜನಿಕ ವಲಯ ಉದ್ದಿಮೆವಾರು ವ್ಯತ್ಯಾಸಗಳನ್ನು ಈ ಕೆಳಕಂಡ **ಕೋಷ್ಟಕ ಸಂಖ್ಯೆ 4. 3**ರಲ್ಲಿ ಲೆಕ್ಕಹಾಕಲಾಗಿರುವುದು:

**ಕೋಷ್ಟಕ ಸಂಖ್ಯೆ 4.3: ವರದಿಯಾದ ವೆಚ್ಚ ಮತ್ತು ವಾಸ್ತವಿಕ ವೆಚ್ಚದಲ್ಲಿನ ವ್ಯತ್ಯಾಸದ ತ:ಖ್ತೆ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ವೆಚ್ಚ (ವರದಿ ಮಾಡಿರುವಂತೆ) | ವಾಸ್ತವಿಕ ವೆಚ್ಚ | ವ್ಯತ್ಯಾಸ |
|---|---|---|---|---|
| 1 | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | 3.95 | 3.24 | (0.71) |
| 2 | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ | 1.23 | 0.88 | (0.35) |
| 3 | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ | 8.33 | 4.13 | (4.20) |
| 4 | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ | 1.15 | 1.17 | 0.02 |
| | **ಒಟ್ಟು** | **14.66** | **9.42** | **(5.24)** |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಿರುವ ಮಾಹಿತಿ / ದತ್ತಾಂಶ*

***ಹಣಕಾಸಿನ ಹಂಚಿಕೆಗಿಂತ ಅಧಿಕವಾಗಿ ವೆಚ್ಚಗಳನ್ನು ಭರಿಸಿರುವುದು***

**4.5.3** ತಿದ್ದುಪಡಿ ಮಾಡಲಾಗಿರುವ ನಿಯಮಗಳ ನಿಯಮ 7(3)ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 135 (5)ರ ಅನುವುಗಳು, ತಕ್ಷಣದ ಮುಂದಿನ ಮೂರು ಹಣಕಾಸು ವರ್ಷಗಳಲ್ಲಿ ಖರ್ಚು ಮಾಡಲು ಬೇಕಾಗಿರುವ ಮೊತ್ತದ ಪ್ರತಿಯಾಗಿ ಮಾತ್ರವೇ ಅಂತಹ ಹೆಚ್ಚುವರಿ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲು ಕಂಪನಿಯೊಂದಕ್ಕೆ ಅವಕಾಶ ನೀಡುತ್ತದೆ.

ಈ ಕೆಳಗಿನ **ಕೋಷ್ಟಕ 4.4**ರಲ್ಲಿ ತಿಳಿಸಿರುವಂತೆ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022–23 ಹಣಕಾಸು ಸಾಲಿಗೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ಅನುಮೋದಿಸಲಾಗಿದ್ದ ಮತ್ತು ಹಂಚಿಕೆ ಮಾಡಲಾಗಿದ್ದ ಹಣಕಾಸನ್ನು ಮೀರಿದಂತೆ ₹ 0.06 ಕೋಟಿ ಮೊತ್ತದಷ್ಟು ಪ್ರಮಾಣದಲ್ಲಿ ಭರಿಸಿದ್ದವು.

**ಕೋಷ್ಟಕ ಸಂಖ್ಯೆ 4.4: ಹಂಚಿಕೆಗಿಂತ ಹೆಚ್ಚು ಖರ್ಚು ಮಾಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ತ:ಖ್ತೆ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ಹಂಚಿಕೆ ಯಾಗಿರುವ ವೆಚ್ಚ | ವಾಸ್ತವಿಕ ಖರ್ಚು | ಹಂಚಿಕೆಗಿಂತ ಹೆಚ್ಚಿನ ಖರ್ಚು |
|---|---|---|---|---|
| 1 | ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿಯಮತ | 0.12 | 0.15 | 0.03 |
| ೨ | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ | 1.15 | 1.17 | 0.02 |
| ೩ | ಮಾರ್ಕೆಟಿಂಗ್ ಕಮ್ಯುನಿಕೇಷನ್ ಮತ್ತು ಅಡ್ವರ್ಟೈಸಿಂಗ್ ನಿಯಮಿತ | 0.37 | 0.38 | 0.01 |
| | **ಒಟ್ಟು** | **1.64** | **1.70** | **0.06** |

*ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ದತ್ತಾಂಶ*

***ಹಂಚಿಕೆಯ ಮೇಲಿನ ಖರ್ಚಿನಲ್ಲಿ ಕೊರತೆ ಮತ್ತು ಬಳಸದಿರುವ ಮೊತ್ತದ ಲೆಕ್ಕಹಾಕುವಿಕೆ***

**4.5.4** ಪರಿಚ್ಛೇದ 135 (6)ರ ಅನುಸಾರ, ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದ ಯಾವುದೇ ಬಳಸದೆಯೇ ಉಳಿದಿರುವ ಮೊತ್ತವನ್ನು 'ಬಳಸದಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗೆ ಸಂಬಂಧಿತ ಖಾತೆ' ಎಂಬುದಾಗಿ ಕರೆಯಲ್ಪಡುವ ಪ್ರತ್ಯೇಕ ಬ್ಯಾಂಕು ಖಾತೆಗೆ

ವರ್ಗಾಯಿಸತಕ್ಕದ್ದು, ಇದನ್ನು ಯಾವುದಾದರೂ ಒಂದು ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಹಣಕಾಸು ವರ್ಷದ ಅಂತ್ಯದಿಂದ 30 ದಿನಗಳೊಳಗೆ ತೆರೆಯತಕ್ಕದ್ದು ಮತ್ತು ಅಂತಹ ಹಣಕಾಸನ್ನು ಅಂತಹ ವರ್ಗಾವಣೆಯ ದಿನಾಂಕದಿಂದ ಮೂರು ವರ್ಷಗಳ ಒಳಗೆ ತನ್ನ ಬಾಧ್ಯತೆಗಳನ್ನು ಪೂರೈಸಲು ಖರ್ಚು ಮಾಡತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಷೆಡ್ಯೂಲ್ VIIರಲ್ಲಿ ನಿರ್ದಿಷ್ಟಪಡಿಸಿರುವ ನಿಧಿಗೆ, ಮೂರನೇ ಹಣಕಾಸು ವರ್ಷ ಪೂರ್ಣಗೊಳಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ವರ್ಗಾಯಿಸತಕ್ಕದ್ದು.

ಯಾವುದೇ ಬಳಸದೆಯೇ ಉಳಿದಿರುವ ಮೊತ್ತವನ್ನು (ಪ್ರಸಕ್ತ ಪ್ರಗತಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದ್ದಲ್ಲದ) ಅಧಿನಿಯಮದ ಷೆಡ್ಯೂಲ್ VIIರಲ್ಲಿ ಸೇರ್ಪಡೆಗೊಂಡಿರುವ ಯಾವುದೇ ನಿಧಿಯಲ್ಲಿ, ಪರಿಚ್ಛೇದ 135 (5)ರ ಅನುವುಗಳ ಅನುಸಾರ ಹಣಕಾಸು ಸಾಲು ಮುಕ್ತಾಯಗೊಂಡ ಆರು ತಿಂಗಳುಗಳ ಒಳಗೆ ವರ್ಗಾಯಿಸತಕ್ಕದ್ದು.

ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಈ ಕೆಳಗೆ **ಕೋಷ್ಟಕ ಸಂಖ್ಯೆ 4.5**ರಲ್ಲಿ ತಿಳಿಸಿರುವಂತೆ 2022–23 ಹಣಕಾಸು ಸಾಲಿನಲ್ಲಿ ಹಂಚಿಕೆಯಾದ ಮೊತ್ತಕ್ಕಿಂತ ₹ 19.86 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದರಿ ಹಣಕಾಸನ್ನು ಭರಿಸಿದ್ದವು.

**ಕೋಷ್ಟಕ ಸಂಖ್ಯೆ 4.5: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಪ್ರಸಕ್ತ ಸಾಲಿನಲ್ಲಿ ಹಂಚಿಕೆಯಾಗಿರುವುದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಖರ್ಚು ಮಾಡಿರುವುದನ್ನು ತೋರಿಸುವ ತ:ಖ್ತೆ.**

(**₹ ಕೋಟಿಗಳಲ್ಲಿ**)

| ಕ್ರಮ ಸಂಖ್ಯೆ | ಕಂಪನಿಯ ಹೆಸರು | ಹಂಚಿಕೆಯಾದ ವೆಚ್ಚ | ವಾಸ್ತವಿಕ ಖರ್ಚು | ಹಂಚಿಕೆಗಿಂತ ಕಡಿಮೆ ಖರ್ಚು |
|---|---|---|---|---|
| 1 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | 9.68 | 2.49 | (7.19) |
| 2 | ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ | 1.16 | 0.90 | (0.26) |
| 3 | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | 3.95 | 3.24 | (0.71) |
| 4 | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ | 12.99 | 4.13 | (8.86) |
| 5 | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ | 4.20 | 2.27 | (1.93) |
| 6 | ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ | 0.27 | 0.12 | (0.15) |
| 7 | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ | 0.48 | 0.43 | (0.05) |
| 8 | ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ | 1.58 | 0.99 | (0.59) |
| 9 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ | 0.89 | 0.77 | (0.12) |
| | **ಒಟ್ಟು** | **35.20** | **15.34** | **(19.86)** |

***ಮೂಲ: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಒದಗಿಸಿರುವ ಮಾಹಿತಿ/ದತ್ತಾಂಶ***

- ಕೇವಲ ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಸಿಎಲ್, ಕೆಆರ್‌ಇಡಿಎಲ್, ಕಿಯೋನಿಕ್ಸ್, ಮತ್ತು ಕೆಎಸ್‌ಬಿಸಿಎಲ್) ಬಳಕೆಯಾಗದೇ ಉಳಿದ ಹಣವನ್ನು ನಿರ್ದಿಷ್ಟಪಡಿಸಿರುವ ಖಾತೆಗೆ ವರ್ಗಾಯಿಸಿದ್ದವು.

- ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಹೆಚ್‌ಜಿಎಮ್‌ಎಲ್ ಮತ್ತು ಕೆಎಫ್‌ಸಿಎಸ್‌ಸಿಎಲ್) ಅವಶ್ಯಕತೆಯ ಅನುಪಾಲನೆ ಮಾಡುವ ಸಲುವಾಗಿ ಷೆಡ್ಯೂಲ್ ಬ್ಯಾಂಕು ಒಂದರಲ್ಲಿ ನಿರ್ದಿಷ್ಟಪಡಿಸಿರುವ ಬಳಕೆಯಾಗದೇ ಉಳಿದಿರುವ ಹಣಕಾಸಿಗಾಗಿ ಒಂದು ನಿರ್ದಿಷ್ಟ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಖಾತೆಯನ್ನು ತೆರೆಯಲಿಲ್ಲ.

- ಹಣಕಾಸು ತ:ಖ್ತೆಗಳನ್ನು ಪ್ರಮಾಣೀಕರಿಸುವುದು ಇನ್ನೂ ಬಾಕಿ ಇರುವಂತೆ (ಜನವರಿ 2024), ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಸ್ಎಮ್ಸಿಎಲ್) 2022–23 ಹಣಕಾಸು ಸಾಲಿಗಾಗಿ ಖರ್ಚು ಮಾಡಬೇಕಿದ್ದಂತಹ ₹ 12.99 ಕೋಟಿ ರೂಪಾಯಿಗಳಿಗೆ ಪ್ರತಿಯಾಗಿ ₹ 5.03 ಕೋಟಿ ಬಿಡುಗಡೆ ಮಾಡಿರುವುದಾಗಿ, ₹ 7.96 ಕೋಟಿ ರೂ.ಗಳ ಕೊರತೆಯನ್ನು ಸೂಚಿಸುತ್ತಿದ್ದಿತು. ಹಣ ಬಿಡುಗಡೆ ಮಾಡಿರುವ ಮಾಹಿತಿಯನ್ನು ಪರಿಶೀಲಿಸಲಾಗಿ, ₹ 5.03 ಕೋಟಿ ಮೊತ್ತದ ಪೈಕಿ, ಕೇವಲ ₹ 4.13 ಕೋಟಿಯನ್ನು ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲಾಗಿತ್ತು ಮತ್ತು ಬಾಕಿ ಮೊತ್ತವಾದ ₹ 0.90 ಕೋಟಿಯನ್ನು ನವೆಂಬರ್/ ಡಿಸೆಂಬರ್ 2023ರಲ್ಲಿ ಬಿಡುಗಡೆ ಮಾಡಲಾಗಿದ್ದಿತು, ಇದು 2022–23ರ ಅವಧಿಯಲ್ಲಿ ವಾಸ್ತವವಾಗಿ ₹ 8.86 ಕೋಟಿ ಕೊರತೆ ಉಂಟುಮಾಡಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯಲ್ಲಿ (ಕೆಎಸ್ಡಿಎಲ್), ಪ್ರಸಕ್ತ ಸಾಲಿಗೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ವೆಚ್ಚವಾಗಿ ಟ್ರಸ್ಟ್‌ನಿಂದ ಖರ್ಚು ಮಾಡಿದ ₹ 3.24 ಕೋಟಿಯ ಬದಲಿಗೆ ವರ್ಷದ ವೆಚ್ಚವಾಗಿ ಅದರ ಟ್ರಸ್ಟ್‌ಗೆ ವರ್ಗಾಯಿಸಲಾದ ₹ 3.95 ಕೋಟಿಯ ಸಂಪೂರ್ಣ ಮೊತ್ತದ ತಪ್ಪಾದ ಲೆಕ್ಕಪತ್ರದಿಂದ ಕೊರತೆ ಉಂಟಾಗಿದೆ. ಖರ್ಚಾಗದೇ ಉಳಿದಿದ್ದ ಹಣಕಾಸನ್ನು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು ನಿರ್ದಿಷ್ಟ ಬ್ಯಾಂಕು ಖಾತೆಗೆ ವರ್ಗಾಯಿಸಿರಲಿಲ್ಲ.

ಮೇಲೆ ಚರ್ಚಿಸಲಾಗಿರುವ ಕೊರತೆಗಳು ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗೆ (ಕೆಎಸ್ಐಸಿ) ಸಂಬಂಧಿಸಿದ ₹ 0.04 ಕೋಟಿ ಬಳಸದೆ ಉಳಿದಿರುವ ಹಣಕಾಸನ್ನು ಒಳಗೊಂಡಿರುವುದಿಲ್ಲ, 2022–23 ಹಣಕಾಸು ಸಾಲಿಗೆ (***ಕಂಡಿಕೆ 4.5***ನ್ನು ಗಮನಿಸುವುದು) ಖರ್ಚು ಮಾಡಬೇಕಾದ ವಾಸ್ತವಿಕ ಮೊತ್ತ (₹ 0.92 ಕೋಟಿಗೆ) ಪ್ರತಿಯಾಗಿ ಹಂಚಿಕೆಯಲ್ಲಿನ ಕೊರತೆಯಿಂದಾಗಿ (₹ 0.88 ಕೋಟಿ) ಮತ್ತು ಅದನ್ನು ನಿರ್ದಿಷ್ಟಪಡಿಸಿರುವ ಬ್ಯಾಂಕ್ ಖಾತೆಗೆ ವರ್ಗಾಯಿಸಿರಲಿಲ್ಲ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಸ್ಐಸಿ) ಪ್ರಸಕ್ತ ಸಾಲಿಗಾಗಿ ಹಂಚಿಕೆ ಮಾಡಲಾಗಿದ್ದ ₹ 0.88 ಕೋಟಿ ಮೊತ್ತವನ್ನು ಮೀರಿದಂತೆ ₹ 0.35 ಕೋಟಿ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ಖರ್ಚು ಮಾಡುವ ಮೂಲಕ ಒಟ್ಟಾರೆ ₹ 1.23 ಕೋಟಿ (**ಕೋಷ್ಟಕ 4.3**ನ್ನು ಉಲ್ಲೇಖಿಸಿ) ಖರ್ಚು ಮಾಡಿರುವುದಾಗಿ ಹೇಳಿಕೊಂಡಿರುವುದು. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು ಸಲ್ಲಿಸಿರುವ ಮಾಹಿತಿಯ ಅನುಸಾರ ₹ 0.35 ಕೋಟಿ ಮೊತ್ತವು 2017–18ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ಮೂರು ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದ್ದ ಹಣಕಾಸು ಆಗಿರುತ್ತದೆ. ಆದ್ದರಿಂದ, ಅದು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗೆ ಸಂಬಂಧಿತ ವೆಚ್ಚಕ್ಕೆ ಅರ್ಹತೆಯನ್ನು ಹೊಂದಿರುವುದಿಲ್ಲ, ಏಕೆಂದರೆ ತಿದ್ದುಪಡಿ ಮಾಡಿರುವ ನಿಯಮಗಳ ಅನುವುಗಳು ಮೂರು ಸತತ ವರ್ಷಗಳಿಂದಾಚೆ ಅಂತಹ ಮೊತ್ತವನ್ನು ಹೊಂದಾಣಿಕೆ ಮಾಡಲು ಅವಕಾಶ ನೀಡಿರುವುದಿಲ್ಲ.

***ಸಾಂಸ್ಥಿಕ ಸಾಮಾಜಿಕ ವ್ಯವಹಾರ ವೆಚ್ಚದ ಸ್ಥರಗಳು***

**4.5.5** ಈ ಕೆಳಗಿನ **ನಕಾಶೆ 4.1**ರಲ್ಲಿ ತೋರಿಸಿರುವಂತೆ, 2022–23 ಹಣಕಾಸು ಸಾಲಿನಲ್ಲಿ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಭರಿಸಿರುವಂತಹ ₹ 50.42 ಕೋಟಿ ಮೊತ್ತದ ಪೈಕಿ, ಕೇವಲ ಎಂಟು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ರೂಪಾಯಿಗಳು ಒಂದು ಕೋಟಿ ಮತ್ತು ಅದಕ್ಕೂ ಮೇಲ್ಪಟ್ಟು ಹಣಕಾಸನ್ನು ವ್ಯಕ್ತಿಗತವಾಗಿ ಖರ್ಚು ಮಾಡಿದ್ದವು:

**ನಕಾಶೆ ಸಂಖ್ಯೆ 4.1: 2022–23 ಹಣಕಾಸು ಸಾಲಿಗೆ ಸಾಂಸ್ಥಿಕ ಸಾಮಾಜಿಕ ವೆಚ್ಚದ ಸ್ಥರ ಅಥವಾ ಶ್ರೇಣಿವಾರು ವಿಭಜನೆ**

**(₹ ಕೋಟಿಗಳಲ್ಲಿ)**




***ಅಧಿಕ ಮಟ್ಟದಲ್ಲಿ ಖರ್ಚುಗಳನ್ನು ಮಾಡಿದವರು***

**4.5.6** 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 2022–23 ಹಣಕಾಸು ಸಾಲಿನಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ಭರಿಸಲಾಗಿದ್ದ ಒಟ್ಟು ₹ 50.42 ಕೋಟಿ ಮೊತ್ತಕ್ಕೆ ಪ್ರತಿಯಾಗಿ ಐದು ಅತ್ಯಂತ ಅಧಿಕ ಮಟ್ಟದಲ್ಲಿ ಖರ್ಚು ಮಾಡಿರುವ ಕಂಪನಿಗಳು **ನಕಾಶೆ 4.2**ರಲ್ಲಿ ತೋರಿಸಲಾಗಿದೆ, ₹ 38.59 ಕೋಟಿ ಮೊತ್ತವನ್ನು ಅಂದರೆ ಶೇಕಡ 77ರಷ್ಟನ್ನು ಭರಿಸಿದ್ದವು.

**ನಕಾಶೆ ಸಂಖ್ಯೆ 4.2: 2022–23 ಹಣಕಾಸು ಸಾಲಿಗೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ಅತ್ಯದಿಕ ಮಟ್ಟದಲ್ಲಿ ವೆಚ್ಚ ಮಾಡಿದವರು**

**(₹ ಕೋಟಿಗಳಲ್ಲಿ)**




***ಕ್ಷೇತ್ರವಾರು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ಭರಿಸಲಾಗಿರುವ ವೆಚ್ಚಗಳು***

**4.5.7** 2022–23 ಹಣಕಾಸು ಸಾಲಿನಲ್ಲಿ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ಭರಿಸಿರುವ ಕ್ಷೇತ್ರವಾರು ವೆಚ್ಚಗಳ ವಿವರಗಳನ್ನು ಈ ಕೆಳಗಿನ **ನಕಾಶೆ ಸಂಖ್ಯೆ 4.3**ರಲ್ಲಿ ನೀಡಲಾಗಿರುವುದು. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳ ಕಡೆಗೆ ತಾವು ಭರಿಸಿರುವ ಒಟ್ಟು ವೆಚ್ಚಗಳ ಪೈಕಿ ವಿದ್ಯುತ್ ಕ್ಷೇತ್ರದ ನಾಲ್ಕು ರಾಜ್ಯ ಸಾರ್ವಜನಿಕ ವಲಯ

ಉದ್ದಿಮೆಗಳು ಬಹುತೇಕ ಅರ್ಧದಷ್ಟು ಭಾಗ ಕೊಡುಗೆಯನ್ನು ನೀಡಿರುವವು, ಇವುಗಳ ನಂತರ ಉತ್ಪಾದನಾ ಕ್ಷೇತ್ರದ 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಶೇಕಡಾ 31) ಮತ್ತು ಮೂಲಸೌಕರ್ಯ ಕ್ಷೇತ್ರದ (ಶೇಕಡಾ 15) ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಗಮನಾರ್ಹವಾದಂತಹ ಕೊಡುಗೆಗಳನ್ನು ನೀಡಿರುವವು.

**ನಕಾಶೆ ಸಂಖ್ಯೆ 4.3: ಕ್ಷೇತ್ರವಾರು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ವೆಚ್ಚಗಳು (₹ ಕೋಟಿಗಳಲ್ಲಿ)**




### *ತ್ರೈಮಾಸಿಕವಾರು ಭರಿಸಲಾಗಿರುವ ವೆಚ್ಚಗಳು*

**4.5.8** ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ/ ನಿರ್ದೇಶಕರುಗಳ ಮಂಡಳಿಯಿಂದ ಅಂಗೀಕಾರವಾದಂತಹ ಹಣ ಹಂಚಿಕೆಯ ಪ್ರತಿಯಾಗಿ ವೆಚ್ಚದಲ್ಲಿ ಕೊರತೆ ಉಂಟಾಗಿರಲು ಒಂದು ಸಂಭಾವ್ಯ ಕಾರಣವೆಂದರೆ ***ಕಂಡಿಕೆ 4.4.5 ಮತ್ತು 4.5.4***ರಲ್ಲಿ ಚರ್ಚಿಸಿರುವಂತೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪೂರ್ವಭಾವಿಯಾಗಿ ಯೋಜನೆಗಳನ್ನು ರೂಪಿಸುವಲ್ಲಿನ ಅಥವಾ ಹಣ ಬಿಡುಗಡೆ ಮಾಡುವಲ್ಲಿನ ವಿಳಂಬ. 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗೆ ತ್ರೈಮಾಸಿಕವಾರು ಭರಿಸಿರುವ ವೆಚ್ಚಗಳನ್ನು **ನಕಾಶೆ ಸಂಖ್ಯೆ 4.4**ರಲ್ಲಿ ತೋರಿಸಲಾಗಿದೆ.

**ನಕಾಶೆ ಸಂಖ್ಯೆ 4.4: ತ್ರೈಮಾಸಿಕವಾರು ಭರಿಸಲಾಗಿರುವ ವೆಚ್ಚಗಳು (₹ ಕೋಟಿಗಳಲ್ಲಿ)**



ಮೇಲಿನ ನಕಾಶೆಯಲ್ಲಿ ನೋಡಬಹುದಾದಂತೆ, ಶೇಕಡಾ 71ರಷ್ಟು ಹಣಕಾಸನ್ನು ಹಣಕಾಸು ಸಾಲಿನ ಕೊನೆಯ ತ್ರೈಮಾಸಿಕದಲ್ಲಿ ಭರಿಸಲಾಗಿದ್ದಿತು.

## 4.6 ಆಡಳಿತಾತ್ಮಕ ಮೇಲುವೆಚ್ಚಗಳು

ಆಡಳಿತಾತ್ಮಕ ಮೇಲುವೆಚ್ಚಗಳ (ಓವರ್‌ಹೆಡ್ಸ್) ಕಡೆಗಿನ ವೆಚ್ಚಗಳನ್ನು, ತಿದ್ದುಪಡಿ ಮಾಡಲಾಗಿರುವಂತಹ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಯಮಗಳು, 2021ರ ನಿಯಮ 2(ಬಿ)ಯಲ್ಲಿ ವಿವರಿಸಿರುವಂತೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗಿನ ವೆಚ್ಚ ಎಂಬುದಾಗಿ ಒಪ್ಪಿಕೊಳ್ಳಬಹುದು. ತಿದ್ದುಪಡಿ ಮಾಡಲಾಗಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಯಮಗಳು, 2021ರ ನಿಯಮ 7 (1)ರ ಅನುಸಾರ, ಹಣಕಾಸು ಸಾಲಿಗಾಗಿ ಕಂಪನಿಯ ಒಟ್ಟು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗಿನ ವೆಚ್ಚದಲ್ಲಿ ಆಡಳಿತಾತ್ಮಕ ಮೇಲುವೆಚ್ಚಗಳು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಕಡೆಗಿನ ಒಟ್ಟಾರೆ ವೆಚ್ಚಗಳ ಶೇಕಡ ಐದಕ್ಕಿಂತ ಅಧಿಕವಾಗಿ ಆಗಿರುವುದಿಲ್ಲ ಎಂಬುದನ್ನು ನಿರ್ದೇಶಕರುಗಳ ಮಂಡಳಿಯು ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿದೆ.

21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಯಾವುದೇ ಕಂಪನಿಯು 2022–23 ಹಣಕಾಸು ಸಾಲಿನಲ್ಲಿ ಆಡಳಿತಾತ್ಮಕ ಮೇಲುವೆಚ್ಚಗಳ ಕಡೆಗೆ ಯಾವುದೇ ವೆಚ್ಚಗಳನ್ನು ಭರಿಸಿರಲಿಲ್ಲ.

## 4.7 ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಗಳಿಂದ ಮಿಗುತಾಯಗಳು, ಯಾವುದಾದರೂ ಇದ್ದಲ್ಲಿ

ತಿದ್ದುಪಡಿ ಮಾಡಲಾಗಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಯಮಗಳು, 2021ರ ನಿಯಮ 7 (2)ರ ಅನುಸಾರ, ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಂದ ಉದ್ಭವಿಸುವ ಯಾವುದೇ ಹಣಕಾಸಿನ ಮಿಗುತಾಯವು ಕಂಪನಿಯೊಂದರ ವ್ಯವಹಾರ ಲಾಭದ ಒಂದು ಭಾಗ ಆಗತಕ್ಕದ್ದಲ್ಲ ಮತ್ತು ಅದನ್ನು ಅದೇ ಯೋಜನೆಗಾಗಿ ಬಳಸತಕ್ಕದ್ದು ಅಥವಾ ಖರ್ಚು ಮಾಡಿರದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಖಾತೆಗೆ ವರ್ಗಾಯಿಸತಕ್ಕದ್ದು ಮತ್ತು ಕಂಪನಿಯ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿ ಮತ್ತು ವಾರ್ಷಿಕ ಕ್ರಿಯಾ ಯೋಜನೆಯ ಅನುಷ್ಠಾನದಲ್ಲಿ ಖರ್ಚು ಮಾಡತಕ್ಕದ್ದು ಅಥವಾ ಅಂತಹ ಮಿಗುತಾಯದ ಮೊತ್ತವನ್ನು ಷೆಡ್ಯೂಲ್ VIIರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ನಿಧಿಯೊಂದಕ್ಕೆ, ಹಣಕಾಸು ಸಾಲು ಮುಕ್ತಾಯಗೊಂಡ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ವರ್ಗಾಯಿಸತಕ್ಕದ್ದು.

2022–23 ಹಣಕಾಸು ಸಾಲಿನಲ್ಲಿ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಂದ ಯಾವುದೇ ಹಣಕಾಸಿನ ಮಿಗುತಾಯಗಳು ಉದ್ಭವಿಸಿರುವ ದೃಷ್ಟಾಂತಗಳು ಗಮನಕ್ಕೆ ಬರಲಿಲ್ಲ.

## 4.8 ಯೋಜನೆಯನ್ನು ಕಾರ್ಯಗತಗೊಳಿಸುವಿಕೆ

***ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಕಾರ್ಯಚಟುವಟಿಕೆಗಳನ್ನು ಆಯ್ಕೆ ಮಾಡುವಿಕೆ***

**4.8.1** ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆ / ಚಟುವಟಿಕೆಗಳನ್ನು ಗುರುತಿಸುವ ಸಲುವಾಗಿ ತಳಹದಿಯ ಸಮೀಕ್ಷೆ ಅಥವಾ ಅವಶ್ಯಕತೆಯ ವಿಶ್ಲೇಷಣಾ ಅಧ್ಯಯನಗಳನ್ನು ನಡೆಸಲು ಯಾವುದೇ ಸ್ಥಾಪಿತ ವ್ಯವಸ್ಥೆಗಳು ಇರಲಿಲ್ಲ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ ಸಭೆಗಳಲ್ಲಿ ಮಾಡಲಾದ ಶಿಫಾರಸುಗಳನ್ನು ಸ್ವೀಕರಿಸಿದ ಪ್ರಸ್ತಾಪಗಳು ಮತ್ತು ಅವುಗಳ ಅರ್ಹತೆಯ ವಿಮರ್ಶೆಯ ಆಧಾರದ ಮೇರೆಗೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳಿಗೆ ಹಣಕಾಸಿನ ಹಂಚಿಕೆಯನ್ನು ಸೂಚಿಸುತ್ತಿದ್ದವು.

***ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸುವ ರೀತಿ ಅಥವಾ ವಿಧಿವಿಧಾನ***

**4.8.2** ನಿರ್ದೇಶಕರ ಮಂಡಳಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಕಂಪನಿಯಿಂದ ಸ್ವತ: ತಾನೇ ಅಥವಾ ತಿದ್ದುಪಡಿ ಮಾಡಿರುವ ನಿಯಮಗಳು, 2022ರ ನಿಯಮ 4

(1)ರಲ್ಲಿ ನಿರ್ದಿಷ್ಟಪಡಿಸಿರುವ[70] ಸಂಸ್ಥೆಗಳ ಮೂಲಕ ಕೈಗೆತ್ತಿಕೊಳ್ಳಬೇಕು. ಉಪ–ನಿಯಮ (1)ರ ಅಡಿಯಲ್ಲಿ ಒಳಗೊಂಡಿರುವ ಅಂತಹ ಸಂಸ್ಥೆಗಳು ಅಥವಾ ಏಜೆನ್ಸಿಗಳು 1 ಏಪ್ರಿಲ್ 2021ರಂದು ಜಾರಿಗೆ ಬಂದಿರುವಂತೆ, ನೋಂದಣಿ ಅಧಿಕಾರಿಯವರಲ್ಲಿ ವಿದ್ಯುನ್ಮಾನ ರೂಪದಲ್ಲಿ ಸಿಎಸ್ಆರ್–1 ನಮೂನೆಯನ್ನು ಸಲ್ಲಿಸುವ ಮೂಲಕ ಕೇಂದ್ರ ಸರ್ಕಾರದೊಂದಿಗೆ ತಮ್ಮನ್ನು ತಾವು ನೋಂದಾಯಿಸಿಕೊಂಡಿರಬೇಕು.

ಪ್ರಸಕ್ತ ಸಾಲಿನಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು 315 ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ವೆಚ್ಚದ ಕಡೆಗೆ ₹ 50.42 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿದ್ದವು. ಈ ಪೈಕಿ, 181 ಚಟುವಟಿಕೆಗಳನ್ನು (ಖರ್ಚು ಮಾಡಿದ ಮೊತ್ತ: ₹ 19.95 ಕೋಟಿ) ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಫಲಾನುಭವಿಗಳಿಗೆ ನೇರವಾಗಿ ಅಥವಾ ಜಿಲ್ಲಾಧಿಕಾರಿಗಳ (ಡಿಸಿಗಳು) ಮೂಲಕ ಬಿಡುಗಡೆ ಮಾಡುವ ಮೂಲಕ ತಾವೇ ಅನುಷ್ಠಾನಗೊಳಿಸಿದವು. ಉಳಿದ 134 ಚಟುವಟಿಕೆಗಳನ್ನು[71] (ಖರ್ಚು ಮಾಡಿದ ಮೊತ್ತ: ₹ 30.47 ಕೋಟಿ) ಹನ್ನೊಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[72] ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದೊಂದಿಗೆ ನೋಂದಣಿ ಮಾಡುವ ಅಗತ್ಯತೆಯನ್ನು ಹೊಂದಿದ್ದಂತಹ ಟ್ರಸ್ಟುಗಳು/ಇತರ ಫಲಾನುಭವಿಗಳ ಮೂಲಕ ಕೈಗೊಂಡಿದ್ದವು.

ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದೊಂದಿಗೆ ನೋಂದಣಿಗೆ ಸಂಬಂಧಿತ ವಿವರಗಳು ಕೇವಲ 68 ಚಟುವಟಿಕೆಗಳಿಗೆ[73] (ಮೊತ್ತ ₹ 4.34 ಕೋಟಿ) ಮಾತ್ರ, ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ (ಕೆಎಸ್‌ಡಿಎಲ್–64 / ಎಚ್‌ಜಿಎಂಎಲ್–4) ಸಂಬಂಧಿಸಿದಂತೆ ಲಭ್ಯವಿದ್ದವು. ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಕೆಎಸ್‌ಡಿಎಲ್ ಮತ್ತು ಎಚ್‌ಜಿಎಂಎಲ್ ಹೊರತುಪಡಿಸಿದಂತೆ) ಉಳಿದ 66 ಚಟುವಟಿಕೆಗಳಿಗೆ (ಖರ್ಚು ಮಾಡಿದ ಮೊತ್ತ: ₹ 26.13 ಕೋಟಿ) ಸಂಬಂಧಿಸಿದಂತೆ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯದೊಂದಿಗೆ ನೋಂದಣಿಗೆ ಸಂಬಂಧಿತ ವಿವರಗಳನ್ನು ಪಡೆದಿರಲಿಲ್ಲ / ಲಭ್ಯವಿರಲಿಲ್ಲ ಎಂಬುದನ್ನು ಮಾಹಿತಿಯ ವಿಶ್ಲೇಷಣೆಯು ಬಹಿರಂಗಪಡಿಸಿತು.

***ಕೇಂದ್ರೀಕೃತ ಕ್ಷೇತ್ರ***

**4.8.3** ಅಧಿನಿಯಮದ ಪರಿಚ್ಛೇದ 135 (3) (ಎ) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿಯೊಂದು ಕಂಪನಿಯು ಅಧಿನಿಯಮದ ಷೆಡ್ಯೂಲ್ VIIರಲ್ಲಿ ನಿರ್ದಿಷ್ಟಪಡಿಸಿರುವ ಕ್ಷೇತ್ರಗಳು ಅಥವಾ ವಿಷಯಗಳಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬೇಕು ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡುವಂತಹ ಷೆಡ್ಯೂಲ್ VII, 12 ಕ್ಷೇತ್ರಗಳನ್ನು/ ವಿಷಯಗಳನ್ನು ನಿರ್ದಿಷ್ಟಪಡಿಸಿರುವುದು. 2022–23 ಸಾಲಿನಲ್ಲಿ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಷೆಡ್ಯೂಲ್ VIIರಲ್ಲಿ ನಿರ್ದಿಷ್ಟಪಡಿಸಿರುವ 12 ಕ್ಷೇತ್ರಗಳ ಪೈಕಿ ಒಂಬತ್ತರಲ್ಲಿ ಸಾಂಸ್ಥಿಕ ಸಾಮಾಜಿಕ

[70] (ಎ) ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು ಸ್ವತ: ತಾನೇ ಅಥವಾ ಇತರೆ ಯಾವುದೇ ಕಂಪನಿಯೊಂದಿಗೆ ಸ್ಥಾಪಿಸಿರುವಂತಹ ಒಂದು ಪರಿಚ್ಛೇದ 8 ಕಂಪನಿ ಅಥವಾ ಒಂದು ನೋಂದಾಯಿತ ಸಾರ್ವಜನಿಕ ಟ್ರಸ್ಟು/ಸಂಘ (ಅಧಿನಿಯಮದ ಪರಿಚ್ಛೇದ 10ರ ಉಪ–ಷರತ್ತುಗಳ ಅಡಿಯಲ್ಲಿ ವಿನಾಯಿತಿ ಹೊಂದಿರುವ) ಅಥವಾ (ಬಿ) ಒಂದು ಪರಿಚ್ಛೇದ 8 ಕಂಪನಿ ಕೇಂದ್ರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ, ಒಂದು ನೋಂದಾಯಿತ ಸಾರ್ವಜನಿಕ ಟ್ರಸ್ಟು, ಸಂಘ ಅಥವಾ (ಸಿ) ಸಂಸತ್ತು ಅಥವಾ ರಾಜ್ಯ ಶಾಸಕಾಂಗದ ಒಂದು ವಿದೇಯಕದ ಮೂಲಕ ಸ್ಥಾಪಿಸಲಾಗಿರುವ ಯಾವುದೇ ಸಂಸ್ಥೆ; ಅಥವಾ (ಡಿ) ಅಂತಹುದೇ ಕಾರ್ಯಚಟುವಟಿಕೆಗಳಲ್ಲಿ ಒಂದು ಸ್ಥಾಪಿತ ಅತ್ಯುತ್ತಮ ಹೆಸರನ್ನು ಗಳಿಸಿರುವಂತಹ ಒಂದು ಸ್ವತಂತ್ರ ಪರಿಚ್ಛೇದ 8 ಕಂಪನಿ ಅಥವಾ ಒಂದು ನೋಂದಾಯಿತ ಸಾರ್ವಜನಿಕ ಟ್ರಸ್ಟು/ಸಂಘ (ಅಧಿನಿಯಮದ ಪರಿಚ್ಛೇದ 10ರ ಉಪ–ಷರತ್ತುಗಳ ಅಡಿಯಲ್ಲಿ ವಿನಾಯಿತಿ ಹೊಂದಿರುವ).

[71] ನೋಂದಾಯಿತ ಟ್ರಸ್ಟು, ಖಾಸಗಿ ಟ್ರಸ್ಟುಗಳು ಮತ್ತು ಸಾರ್ವಜನಿಕ ಶಾಲೆಗಳನ್ನು ಹೊರತುಪಡಿಸಿದಂತೆ ಫಲಾನುಭವಿಗಳಿಗೆ ಬಿಡುಗಡೆಗೊಳಿಸಿದ ಹಣವನ್ನು ಪರಿಗಣಿಸಲಾಗಿರುವುದು.

[72] ಕೆಪಿಟಿಸಿಎಲ್, ಕೆಆರ್‌ಇಡಿಎಲ್, ಕೆಎಸ್‌ಡಿಎಲ್, ಕೆಎಸ್‌ಎಂಸಿಎಲ್, ಹೆಚ್‌ಜಿಎಮ್‌ಎಲ್, ಎಮ್‌ಪಿವಿಎಲ್, ಮೆಸ್ಕಾಂ, ಎಮ್‌ಎಸ್‌ಐಎಲ್, ಕೆಆರ್‌ಐಡಿಎಲ್, ಕಿಯಾನಿಕ್ಸ್ ಮತ್ತು ಕೆಎಸ್‌ಬಿಸಿಎಲ್.

[73] ಕೆಎಸ್‌ಡಿಎಲ್ ಸ್ಥಾಪಿಸಿರುವ ನೋಂದಾಯಿತ ಟ್ರಸ್ಟಿನಿಂದ ಕಾರ್ಯಗತಗೊಳಿಸಲಾಗಿರುವ 64 ಕಾಮಗಾರಿಗಳನ್ನು ಒಳಗೊಂಡಿರುತ್ತದೆ (ಭರಿಸಲಾಗಿರುವ ಮೊತ್ತ ₹ 3.24 ಕೋಟಿ).

ಜವಾಬ್ದಾರಿ ಚಟುವಟಿಕೆಗಳನ್ನು ಕೈಗೊಂಡವು. ಪ್ರತಿಯೊಂದು ಕೇಂದ್ರೀಕೃತ ಕ್ಷೇತ್ರಕ್ಕೆ ನೀಡಲಾಗಿರುವ ಕೊಡುಗೆಯ ವಿವರಗಳನ್ನು ಈ ಕೆಳಗಿನ **ನಕಾಶೆ ಸಂಖ್ಯೆ 4.5**ರಲ್ಲಿ ತಿಳಿಸಲಾಗಿರುವುದು.

**ನಕಾಶೆ ಸಂಖ್ಯೆ 4.5: ಕೇಂದ್ರೀಕೃತ ಕ್ಷೇತ್ರವಾರು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಮೇಲಿನ ವೆಚ್ಚಗಳು (₹ ಕೋಟಿಗಳಲ್ಲಿ)**




ಮೇಲ್ಕಂಡ ನಕಾಶೆಯು ಒಟ್ಟು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ವೆಚ್ಚದ ಶೇಕಡಾ 90 ಮೂರು ಕ್ಷೇತ್ರಗಳಿಗೆ ಆಗಿದ್ದು ಆರೋಗ್ಯ ಆರೈಕೆಯು ಅತ್ಯಂತ ಹೆಚ್ಚಿನ (ಶೇಕಡಾ 50), ನಂತರ ಶಿಕ್ಷಣವು (ಶೇಕಡಾ 23) ಮತ್ತು ಗ್ರಾಮೀಣ ಅಭಿವೃದ್ಧಿಗೆ (ಶೇಕಡಾ 18) ಕೊಡುಗೆ ನೀಡಿರುವುದು. ಮೂರು ಕೇಂದ್ರೀಕೃತ ಕ್ಷೇತ್ರಗಳಲ್ಲಿ (ಕ್ರೀಡೆ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸಂಶೋಧನೆ ಮತ್ತು ಕೊಳೆಗೇರಿ ಅಭಿವೃದ್ಧಿ) ಯಾವುದೇ ಖರ್ಚುಗಳನ್ನು ಮಾಡಿರುವುದಿಲ್ಲ .

ಮೇಲೆ-ನಮೂದಿಸಿರುವ ನಿರ್ದಿಷ್ಟ ಕೇಂದ್ರೀಕೃತ ಕ್ಷೇತ್ರಗಳಲ್ಲಿ ಪ್ರಮುಖ ಕೊಡುಗೆಗಳನ್ನು ನೀಡಿದ ಅತ್ಯುನ್ನತ ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು:

- ಕೆಪಿಟಿಸಿಎಲ್ (₹ 18.45 ಕೋಟಿ), ಹೆಚ್‌ಜಿಎಮ್‌ಎಲ್ (₹ 1.25 ಕೋಟಿ) ಮತ್ತು ಕೆಎಸ್‌ಎಸ್‌ಐಡಿಸಿ (₹ 1.08 ಕೋಟಿ), ಆರೋಗ್ಯ ಆರೈಕೆಗಾಗಿ.
- ಕೆಎಸ್‌ಎಂಸಿಎಲ್ (₹ 1.66 ಕೋಟಿ), ಕೆಎಸ್‌ಡಿಎಲ್ (₹ 1.66 ಕೋಟಿ) ಮತ್ತು ಕೆಪಿಸಿಎಲ್ (₹ 1.56 ಕೋಟಿ) ಶಿಕ್ಷಣಕ್ಕಾಗಿ.
- ಕೆಆರ್‌ಐಡಿಎಲ್ (₹ 6.21 ಕೋಟಿ), ಕೆಎಸ್‌ಎಂಸಿಎಲ್ (₹ 1.02 ಕೋಟಿ) ಮತ್ತು ಕೆಪಿಸಿಎಲ್ (₹ 0.82 ಕೋಟಿ) ಗ್ರಾಮೀಣ ಅಭಿವೃದ್ಧಿಗಾಗಿ.

***ಸ್ಥಳೀಯ ಪ್ರದೇಶಗಳಲ್ಲಿ ಭರಿಸಿರುವ ಖರ್ಚು***

**4.8.4** ಕಂಪನಿಯು ತಾನು ಕೆಲಸ ಮಾಡುವ ಸ್ಥಳೀಯ ಪ್ರದೇಶ ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆಗಳಿಗಾಗಿ ಮೀಸಲಿಟ್ಟಿರುವ ಮೊತ್ತವನ್ನು ಖರ್ಚು ಮಾಡಲು ಆದ್ಯತೆ ನೀಡತಕ್ಕದ್ದು ಎಂಬುದಾಗಿ ಅಧಿನಿಯಮದ ಪರಿಚ್ಛೇದ 135 (5)ರ ಮೊದಲ

ಅನುವು ನಿರ್ದಿಷ್ಟಪಡಿಸಿರುತ್ತದೆ. ಅಧಿನಿಯಮದ ಉದ್ದೇಶವು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಉದ್ದೇಶವು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಉಪಕ್ರಮಗಳನ್ನು ರಾಷ್ಟ್ರೀಯ ಆದ್ಯತೆಗಳ ಜೊತೆಗೆ ಹೊಂದಿಸುವುದು ಮತ್ತು ಸಮರ್ಥನೀಯ ಅಭಿವೃದ್ಧಿ ಗುರಿಗಳನ್ನು ಸಾಧಿಸುವತ್ತ ಸಾಂಸ್ಥಿಕ ಅಥವಾ ಕಾರ್ಪೋರೇಟ್ ಕ್ಷೇತ್ರವನ್ನು ತೊಡಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವುದಾಗಿರುತ್ತದೆ. ಈ ಅನುವು ಕೇವಲ ಸ್ವಭಾವತ: ನಿರ್ದೇಶನವಾಗಿರುತ್ತದೆಯೇ ಹೊರತು ಕಡ್ಡಾಯವಾಗಿರುವುದಿಲ್ಲ ಮತ್ತು ಕಂಪನಿಗಳು ಸ್ಥಳೀಯ ಪ್ರದೇಶ ಆದ್ಯತೆಯನ್ನು ರಾಷ್ಟ್ರೀಯ ಆದ್ಯತೆಗಳೊಂದಿಗೆ ಸಮತೋಲನಗೊಳಿಸಬೇಕು ಎಂಬುದಾಗಿ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಸ್ಪಷ್ಟೀಕರಿಸಿರುವುದು (ಆಗಸ್ಟ್ 2021).

ಸಂಪೂರ್ಣ ಮೊತ್ತ ₹ 50.42 ಕೋಟಿಯನ್ನು ಕರ್ನಾಟಕ ರಾಜ್ಯದೊಳಗಿನ[74] ಸಾಂಸ್ಥಿಕ ಸಾಮಾಜಿಕ ವ್ಯವಹಾರ ಚಟುವಟಿಕೆಗಳಿಗಾಗಿ ಹಂಚಿಕೆ ಮಾಡಲಾಗಿರುವುದು.

## 4.9 ವರದಿ ಮಾಡುವಿಕೆಯನ್ನು ಬಹಿರಂಗಪಡಿಸುವುದು

***ಮಂಡಳಿಯ ವರದಿಯಲ್ಲಿ ಬಹಿರಂಗಪಡಿಸುವಿಕೆಗಳು***

**4.9.1** ತಿದ್ದುಪಡಿ ಮಾಡಿರುವ ನಿಯಮಗಳು, 2022ರ ನಿಯಮ 8 (1)ರಲ್ಲಿ ನಿಗದಿಪಡಿಸಿರುವಂತೆ, ನಿಯಮಗಳ (ಸೆಪ್ಟೆಂಬರ್ 2022ರಲ್ಲಿ ಅಧಿಸೂಚಿಸಲಾಗಿರುವ) ಅನುಬಂಧ IIರಲ್ಲಿ ನಿರ್ದಿಷ್ಟಪಡಿಸಿರುವ ವಿವರಗಳನ್ನು ಒಳಗೊಂಡಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಮೇಲಿನ ವಾರ್ಷಿಕ ವರದಿಯನ್ನು ಹಣಕಾಸು ವರ್ಷ 2022–23ರ ಕಂಪನಿಯ ಮಂಡಳಿಯ ವರದಿಯಲ್ಲಿ ಸೇರ್ಪಡೆ ಮಾಡಬೇಕು.

ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಕೆಎಸ್ಐಸಿ, ಕೆಎಸ್ಎಂಸಿಎಲ್, ಕೆಆರ್ಐಡಿಎಲ್ ಮತ್ತು ಕೆಎಫ್ಸಿಎಸ್ಸಿಎಲ್) ಹಣಕಾಸು ತ:ಖ್ತೆಗಳನ್ನು ಇನ್ನೂ ಪ್ರಮಾಣೀಕರಿಸಬೇಕಿರುವುದು ಹಾಗೂ ಬಹಿರಂಗಪಡಿಸುವಿಕೆಯ ಅವಶ್ಯಕತೆಗಳ ಅನುಪಾಲನೆಯನ್ನು ಪರಿಶೀಲನೆಮಾಡಲು ಅನುವುಗೊಳಿಸಲು ನಿರ್ದೇಶಕರುಗಳ ಮಂಡಳಿಯ ವರದಿಯು ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗೆ (ಕೆಎಸ್ಐಐಡಿಸಿ) 2022–23 ಹಣಕಾಸು ಸಾಲಿಗೆ ವಾರ್ಷಿಕ ಸಾಮಾನ್ಯ ಸಭೆಯು (ಎಜಿಎಂ) ಇನ್ನೂ (ಜನವರಿ 2024) ನಡೆಯಬೇಕಾಗಿರುವ ಕಾರಣ ಬಾಕಿ ಉಳಿದಿರುವುದು.

ನಿರ್ದೇಶಕರುಗಳ ಮಂಡಳಿಯ ವರದಿಯನ್ನು ಅಂಗೀಕರಿಸಲಾಗಿರುವ ಮತ್ತು ಪ್ರಕಟಿಸಲಾಗಿರುವ ಅಥವಾ ಇನ್ನೂ ಪ್ರಕಟಿಸಬೇಕಾಗಿರುವ ಉಳಿದ 16 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಎಮ್ಪಿವಿಎಲ್) ತನ್ನ ವಾರ್ಷಿಕ ವರದಿಯನ್ನು ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿರಲಿಲ್ಲ ಮತ್ತು ನಿರ್ದೇಶಕರುಗಳ ವರದಿಗೆ ಅದನ್ನು ಸೇರಿಸಿರಲಿಲ್ಲ, ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಎಚ್ಜಿಎಂಎಲ್) ಹಳೆಯ 2014ರ ನಿಯಮಗಳ ಅನುಸಾರ ಅನುಬಂಧವನ್ನು ಅಳವಡಿಸಿಕೊಂಡಿದ್ದಿತು ಮತ್ತು ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್ಡಿಎಲ್, ಕೆಎಸ್ಪಿಎಚ್ಐಡಿಸಿಎಲ್, ಕೆಎಸ್ಎಸ್ಐಡಿಸಿ, ಕೆಎಸ್ಬಿಸಿಎಲ್ ಮತ್ತು ಸಿಬಿಐಸಿ–ತುಮಕೂರು) ತಿದ್ದುಪಡಿ ಮಾಡಲಾಗಿರುವ 2021ರ ನಿಯಮಗಳ ಅನುಸಾರ ಅನುಬಂಧವನ್ನು ಅಳವಡಿಸಿಕೊಂಡಿದ್ದವು, ಇದು ಅಸಮರ್ಪಕ ಅನುಪಾಲನೆಗೆ ಸಮನಾಗಿರುತ್ತದೆ.

***ಕಂಪನಿಯ ಜಾಲತಾಣದಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳನ್ನು ಪ್ರಕಟಿಸುವುದು***

**4.9.2** ಕಂಪನಿಯ ನಿರ್ದೇಶಕರುಗಳ ಮಂಡಳಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಸಂಯೋಜನೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನೀತಿ ಮತ್ತು ನಿರ್ದೇಶಕರುಗಳ ಮಂಡಳಿಯು ಅಂಗೀಕರಿಸಿರುವ ಯೋಜನೆಗಳನ್ನು ತಮ್ಮ ಜಾಲತಾಣದಲ್ಲಿ, ಯಾವುದಾದರೂ ಇದ್ದಲ್ಲಿ,

[74] ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಎಂಇಐ) ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಗೆ ₹ 9,898/–ಮೊತ್ತದ ಒಂದು ಗಮನಾರ್ಹವಲ್ಲದ ಕಾಣಿಕೆಯನ್ನು ನೀಡಿರುವುದನ್ನು ಹೊರತುಪಡಿಸಿದಂತೆ.

ಸಾರ್ವಜನಿಕರ ಅವಲೋಕರ್ನೆಗಾಗಿ ಕಡ್ಡಾಯವಾಗಿ ಪ್ರಕಟಪಡಿಸತಕ್ಕದ್ದು ಎಂಬುದಾಗಿ ತಿದ್ದುಪಡಿ ಮಾಡಲಾಗಿರುವ ನಿಯಮಗಳು, 2021ರ ನಿಯಮ 9 ನಿರ್ದಿಷ್ಟಪಡಿಸಿರುತ್ತದೆ.

21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಪರಿಶೀಲನೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು:

- ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಸಿಬಿಐಸಿ ತುಮಕೂರು) ಅನುವುಗಳ ಅನುಪಾಲನೆ ಮಾಡಲು ಜಾಲತಾಣ ಅನುಕೂಲತೆಯನ್ನು ಹೊಂದಿರಲಿಲ್ಲ ಮತ್ತು ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಎಮ್‌ಪಿವಿಎಲ್ ಮತ್ತು ಕೆಎಫ್‌ಸಿಎಸ್‌ಸಿಎಲ್) ತಮ್ಮ ಜಾಲತಾಣದಲ್ಲಿ ಈ ಮೂರು ಅಂಶಗಳನ್ನು ಅಪ್‌ಲೋಡ್ ಮಾಡಿರಲಿಲ್ಲ.

- 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[75] ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಗಳ ಸಂಯೋಜನೆಯನ್ನು ಬಹಿರಂಗಪಡಿಸಿರಲಿಲ್ಲ.

    - ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಟಿಸಿಎಲ್ ಮತ್ತು ಕಿಯೋನಿಕ್ಸ್) 2022–23 ಹಣಕಾಸು ಸಾಲಿಗಾಗಿ ಸಮಿತಿಯ ಸಂಯೋಜನೆಯನ್ನು ಬಹಿರಂಗಪಡಿಸಿರಲಿಲ್ಲ ಮತ್ತು ಆದ್ದರಿಂದ ಭಾಗಶ:ವಾಗಿ ಅನುಪಾಲನೆ ಮಾಡಿರುತ್ತವೆ.

- ಹನ್ನೊಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[76] ತಮ್ಮ ಜಾಲಾತಾಣದಲ್ಲಿ ನಿರ್ದೇಶಕರುಗಳ ಮಂಡಳಿಯಿಂದ ಅಂಗೀಕಾರವಾಗಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯಚಟುವಟಿಕೆಗಳ ಯೋಜನೆಗಳ ವಿವರಗಳನ್ನು ಬಹಿರಂಗಪಡಿಸುವಲ್ಲಿ ವಿಫಲಗೊಂಡಿದ್ದವು.

- ನಾಲ್ಕು ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಸಿಎಲ್, ಕೆಪಿಟಿಸಿಎಲ್, ಎಮ್‌ಎಸ್‌ಐಎಲ್ ಮತ್ತು ಕಿಯೋನಿಕ್ಸ್) 2022–23 ಹಣಕಾಸು ಸಾಲಿಗೆ ಮುಂಚೆ ಅಂಗೀಕರಿಸಲಾಗಿರುವ ಯೋಜನೆಗಳನ್ನು ಬಹಿರಂಗಪಡಿಸಿದ್ದವು ಮತ್ತು ಆದ್ದರಿಂದ ಇವುಗಳು ಭಾಗಶ:ವಾಗಿ ಅನುಪಾಲನೆ ಮಾಡಿದ್ದವು.

## 4.10 ಮೇಲ್ವಿಚಾರಣಾ ಕಾರ್ಯಚೌಕಟ್ಟು

***ಸಾಂಸ್ಥಿಕ ವ್ಯವಸ್ಥೆ***

**4.10.1** ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಗೆ ಅನುಗುಣವಾಗಿ ಯೋಜನೆಗಳು ಅಥವಾ ಕಾರ್ಯಕ್ರಮಗಳಿಗಾಗಿ ಮೇಲ್ವಿಚಾರಣೆ ಮತ್ತು ವರದಿ ಮಾಡುವ ವ್ಯವಸ್ಥೆಯನ್ನು ಒಳಗೊಂಡಿರತಕ್ಕಂತಹ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸತಕ್ಕದ್ದು ಮತ್ತು ನಿರ್ದೇಶಕರುಗಳ ಮಂಡಳಿಗೆ ಶಿಫಾರಸು ಮಾಡತಕ್ಕದ್ದು ಎಂಬುದಾಗಿ ತಿದ್ದುಪಡಿ ಮಾಡಲಾಗಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಯಮಗಳು, 2021ರ ನಿಯಮ 5 (2) (ಡಿ) ನಿರ್ದಿಷ್ಟಪಡಿಸಿರುತ್ತದೆ. ಅಲ್ಲದೆಯೇ, ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯು ನಿರ್ದೇಶಕರುಗಳ ಮಂಡಳಿ ಮುನ್ನಡೆಸುವಂತಹ ಪ್ರಕ್ರಿಯೆಯಾಗಿರುತ್ತದೆ ಹಾಗೂ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಶಿಫಾರಸುಗಳ ಆಧಾರದ ಮೇರೆಗೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಮೇಲ್ವಿಚಾರಣೆ ಮಾಡಲು ನಿರ್ದೇಶಕರುಗಳ ಮಂಡಳಿಯು ಸಶಕ್ತವಾಗಿರತಕ್ಕದ್ದು ಎಂಬುದಾಗಿಯೂ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಸ್ಪಷ್ಟನೆಗಳನ್ನು[77] ನೀಡಿರುವುದು (ಆಗಸ್ಟ್ 2021). ಕಡ್ಡಾಯವಾಗಿ

---

[75] ಕೆಪಿಸಿಎಲ್, ಮೆಸ್ಕಾಂ, ಕೆಎಸ್‌ಡಿಎಲ್, ಎಮ್‌ಇಐ, ಕೆಎಸ್‌ಐಸಿ ಹೆಚ್‌ಜಿಎಮ್‌ಎಲ್, ಎಮ್‌ಎಸ್‌ಐಎಲ್, ಎಮ್‌ಸಿಎ, ಕೆಎಸ್‌ಎಸ್ ಸಿಎಲ್, ಕೆಎಸ್‌ಪಿಹೆಚ್‌ಐಡಿಸಿಎಲ್, ಕೆಎಸ್‌ಎಸ್‌ಐಡಿಸಿ ಮತ್ತು ಕೆಎಸ್‌ಬಿಸಿಎಲ್.

[76] ಮೆಸ್ಕಾಂ, ಕೆಎಸ್‌ಡಿಎಲ್, ಎಮ್‌ಇಐ, ಕೆಎಸ್‌ಐಸಿ, ಹೆಚ್‌ಜಿಎಮ್‌ಎಲ್, ಎಮ್‌ಸಿಎ, ಕೆಎಸ್‌ಎಸ್‌ಸಿಎಲ್, ಕೆಆರ್‌ಐಡಿಎಲ್, ಕೆಎಸ್‌ಪಿಹೆಚ್‌ಐಡಿಸಿಎಲ್, ಕೆಎಸ್‌ಎಸ್‌ಐಡಿಸಿ ಮತ್ತು ಕೆಎಸ್‌ಬಿಸಿಎಲ್.

[77] ಸಾಮಾನ್ಯ ಸುತ್ತೋಲೆ ಸಂಖ್ಯೆ 14/2021 ದಿನಾಂಕ 25.08.2021, ಇದರ ಸ್ಪಷ್ಟೀಕರಣ ಸಂಖ್ಯೆ 2.5.

ಬಹಿರಂಗಪಡಿಸುವಿಕೆಗಳು, ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ ಮತ್ತು ನಿರ್ದೇಶಕರುಗಳ ಮಂಡಳಿಯ ಹೊಣೆಗಾರಿಕೆ ಮತ್ತು ಕಂಪನಿಯ ಲೆಕ್ಕಪತ್ರಗಳ ಪರಿಶೋಧನೆಗೆ ಪ್ರಸ್ತುತ ಇರುವಂತಹ ಅನುವುಗಳು ಮೇಲ್ವಿಚಾರಣೆಗಾಗಿ ಸಮರ್ಪಕ ವ್ಯವಸ್ಥೆಗಳನ್ನು ಒದಗಿಸುತ್ತದೆ.

ಲೆಕ್ಕಪರಿಶೋಧನೆಯಲ್ಲಿ ಆಯ್ದುಕೊಳ್ಳಲಾದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಗಳ ಒಂದು ಸಾಮಾನ್ಯ ಸಮೀಕ್ಷೆಯು (***ಕಂಡಿಕೆ 4.4.3***ರಲ್ಲಿ ಉಲ್ಲೇಖಿಸಲಾಗಿದೆ) ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಕೆಪಿಸಿಎಲ್, ಎಂಇಐ, ಎಂಎಸ್ಐಎಲ್, ಕಿಯಾನಿಕ್ಸ್ ಮತ್ತು ಕೆಎಸ್‌ಪಿಹೆಚ್ಐಡಿಸಿಎಲ್) ಕಾರ್ಯನೀತಿಗಳು ಯಾವುದೇ ನಿರ್ದಿಷ್ಟ ಮೇಲ್ವಿಚಾರಣಾ ವ್ಯವಸ್ಥೆಯ ಬಗ್ಗೆ ತಿಳಿಸಿರುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ಅಲ್ಲದೆಯೇ, ಹೊಸ/ ಮಾರ್ಪಾಟು ಮಾಡಿರುವ ಅವಶ್ಯಕತೆಗಳನ್ನು ಅಳವಡಿಸಿಕೊಳ್ಳಲು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಗಳನ್ನು ಪರಿಷ್ಕರಣೆ ಮಾಡದಿರುವಿಕೆ, ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಆಯವ್ಯಯಗಳ ಅಂಗೀಕಾರ ಹಣಕಾಸು ಸಾಲಿನ ವರ್ಷದ ದ್ವಿತೀಯಾರ್ಧದಲ್ಲಿ ಆಗಿರುವುದು, ನಿರ್ದಿಷ್ಟಪಡಿಸಿರುವ ಖಾತೆಯನ್ನು ತೆರೆಯದಿರುವುದು / ಬಳಸದೆಯೇ ಉಳಿದಿರುವ ಶಿಲ್ಕುಗಳನ್ನು ನಿರ್ದಿಷ್ಟಪಡಿಸಿರುವ ಖಾತೆಗಳಿಗೆ ವರ್ಗಾವಣೆ ಮಾಡದಿರುವುದು, ವರದಿಗಳಲ್ಲಿನ ಅಸಮರ್ಪಕ ಬಹಿರಂಗಪಡಿಸುವಿಕೆಗಳು, ಇತ್ಯಾದಿಯಂತಹ ಈ ಮುಂಚಿನ ಕಂಡಿಕೆಗಳಲ್ಲಿ ಚರ್ಚಿಸಿರುವಂತಹ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗೆ ಸಂಬಂಧಿತ ಷರತ್ತುಗಳನ್ನು ಅನುಪಾಲನೆ ಮಾಡದಿರುವುದು / ಅಸಮರ್ಪಕವಾಗಿ ಅನುಪಾಲನೆ ಮಾಡಿರುವುದು, ಇತ್ಯಾದಿಗಳು ಆಯ್ದ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಅಸಮರ್ಪಕ ಮೇಲ್ವಿಚಾರಣಾ ವ್ಯವಸ್ಥೆಯ ಸೂಚಕಗಳಾಗಿದ್ದವು ಎಂಬುದನ್ನು. ಬಹಿರಂಗಪಡಿಸಿರುವುದು.

ಪ್ರಸಕ್ತ ಸಾಲಿನಲ್ಲಿ 21 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಕೈಗೆತ್ತಿಕೊಂಡಿದ್ದಂತಹ 315 ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಪೈಕಿ, 15 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ[78] ಖರ್ಚು ಮಾಡಿದ್ದಂತಹ ₹ 45.70 ಕೋಟಿ ಮೌಲ್ಯದ 252 ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಣ ಬಳಕೆಯ ಪ್ರಮಾಣಪತ್ರಗಳನ್ನು (ಯುಸಿಗಳು) ಪಡೆದುಕೊಳ್ಳಬೇಕಿದ್ದಿತು. ಇದಕ್ಕೆ ಹೋಲಿಸಿದಂತೆ, 12 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ 85 ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾತ್ರ (ಖರ್ಚು ಮಾಡಿರುವ ಮೊತ್ತ: ₹ 8.37 ಕೋಟಿ) ಹಣ ಬಳಕೆ ಪ್ರಮಾಣಪತ್ರಗಳನ್ನು ಪಡೆದುಕೊಳ್ಳಲಾಗಿದ್ದಿತು ಮತ್ತು 13 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ 167 ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ (ಖರ್ಚು ಮಾಡಿರುವ ಮೊತ್ತ: ₹ 37.33 ಕೋಟಿ) ಹಣಬಳಕೆ ಪ್ರಮಾಣಪತ್ರಗಳನ್ನು (ಯುಸಿ) ಇನ್ನೂ ಪಡೆದುಕೊಳ್ಳಬೇಕಿದ್ದಿತು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿರುವುದು.

**ಶಿಫಾರಸುಗಳು:**

***9. ಹಿಂದಿನ ಸಾರ್ವಜನಿಕ ಉದ್ದಿಮೆಗಳ ಇಲಾಖೆಯು (ಡಿಪಿಇ) ನಿರ್ವಹಿಸುತ್ತಿದ್ದಂತಹ ಈ ಎಲ್ಲಾ ವಿಷಯಗಳನ್ನು ಈಗ ನೋಡಿಕೊಳ್ಳುತ್ತಿರುವ ಹಣಕಾಸು ಇಲಾಖೆಯು, ಅಧಿನಿಯಮ ಮತ್ತು ನಿಯಮಗಳ ಅನ್ವಯವಾಗುವ ಅನುವುಗಳನ್ನು ಸೂಕ್ತವಾಗಿ ಪರಿಗಣಿಸಿ ಸಾಂಸಿಕ ಸಾಮಾಜಿಕ ಜವಾಬ್ದಾರಿಯ ಮೇಲೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು ಮತ್ತು ಜಾರಿಗೊಳಿಸಬೇಕು.***

***10. ಹಣಕಾಸು ಇಲಾಖೆಯು, ಸಂಬಂಧಿತ ಆಡಳಿತಾತ್ಮಕ ಮಂತ್ರಾಲಯಗಳು/ಇಲಾಖೆಗಳ ಸಮನ್ವಯದೊಂದಿಗೆ, ಎಲ್ಲಾ ರಾಜ್ಯದ ಸಾರ್ವಜನಿಕ ವಲಯದ ಉದ್ದಿಮೆಗಳಿಂದ (ಎಸ್‌ಪಿಎಸ್ಇಗಳು) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಮೇಲಿನ ಅನ್ವಯಗೊಳ್ಳುವಂತಹ ಅನುವುಗಳು, ನಿಯಮಗಳು ಮತ್ತು ನಿಬಂಧನೆಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳಬೇಕು.***

[78] ಹೆಚ್‌ಜಿಎಮ್‌ಎಲ್, ಕಿಯೋನಿಕ್ಸ್, ಕೆಪಿಟಿಸಿಎಲ್, ಕೆಆರ್‌ಇಡಿಎಲ್, ಕೆಆರ್‌ಐಡಿಎಲ್, ಕೆಎಸ್‌ಬಿಸಿಎಲ್, ಕೆಎಸ್‌ಡಿಎಲ್, ಕೆಎಸ್‌ಐಸಿ, ಕೆಎಸ್‌ಐಐಡಿಸಿ, ಎಮ್‌ಸಿಎ, ಮೆಸ್ಕಾಂ, ಎಮ್‌ಪಿಎಂಎಲ್, ಎಮ್‌ಎಸ್‌ಐಎಲ್, ಕೆಎಸ್‌ಎಮ್‌ಸಿಎಲ್ ಮತ್ತು ಕೆಎಸ್‌ಎಸ್‌ಐಡಿಸಿ.

***11.*** *ಎಲ್ಲಾ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ನಿರ್ದಿಷ್ಟವಾಗಿ ಇವುಗಳಿಗೆ ಸಂಬಂಧಿಸಿದಂತೆ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳಬೇಕು:*

- *ಸಮಿತಿ /ನಿರ್ದೇಶಕರುಗಳ ಮಂಡಳಿಯಿಂದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ಸಂಯೋಜನೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಗಳನ್ನು ಕಾಲಕಾಲಕ್ಕೆ ಪರಿಷ್ಕರಣೆ ಮಾಡುವುದು,*
- *ಅವಶ್ಯಕತೆಯನ್ನು ಮುಂಚಿತವಾಗಿ ನಿರ್ಧಾರಣೆ ಮಾಡುವುದು ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಗಳು / ಆಯವ್ಯಯಗಳನ್ನು ಸಕಾಲದಲ್ಲಿ ಅಂಗೀಕರಿಸುವುದು,*
- *ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನಿಧಿಗಳ ಸೂಕ್ತ ಹಂಚಿಕೆ ಮತ್ತು ಪರಿಣಾಮಕಾರಿತ್ವದಿಂದ ಕೂಡಿದ ಬಳಕೆ ಹಾಗು ಬಳಸದೆ ಉಳಿದಿರುವ ಹಣವನ್ನು ನಿರ್ದಿಷ್ಟಪಡಿಸಿರುವ ನಿಧಿಗಳಿಗೆ ವರ್ಗಾಯಿಸುವುದನ್ನು ಖಚಿತಪಡಿಸಿಕೊಳ್ಳಬೇಕು,*
- *ಪರಿಣಾಮಕಾರಿತ್ವದಿಂದ ಕೂಡಿದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ಕಾರ್ಯಚಟುವಟಿಕೆಗಳು ಪೂರ್ಣಗೊಂಡ ಕೂಡಲೇ ಹಣ ಬಳಕೆಯ ಪ್ರಮಾಣಪತ್ರಗಳನ್ನು ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು.*
- *ನಿರ್ದೇಶಕರುಗಳ ವರದಿ ಹಾಗೂ ಅಧಿಕೃತ ಜಾಲತಾಣದಲ್ಲಿ ವರದಿಯ ಬಹಿರಂಗಪಡಿಸುವಿಕೆಗಳನ್ನು ಸೂಕ್ತ ರೀತಿಯಲ್ಲಿ ಅನುಪಾಲನೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು.*

# ಅಧ್ಯಾಯ – V

## ಸರ್ಕಾರಿ ಕಂಪನಿಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆ

# ಅಧ್ಯಾಯ - V

## ಸರ್ಕಾರಿ ಕಂಪನಿಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆ

### 5.1 ಪೀಠಿಕೆ

ಭಾರತ ಸರ್ಕಾರದ (GoI) ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು (ಎಂಸಿಎ) ಭಾರತೀಯ ಆರ್ಥಿಕ ಮತ್ತು ಕಾನೂನಾತ್ಮಕ ವಾತಾವರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಅಂತರರಾಷ್ಟ್ರೀಯ ಹಣಕಾಸು ವರದಿ ಪ್ರಮಾಣಕಗಳನ್ನು (ಐಎಫ್‌ಆರ್‌ಎಸ್) ಉಲ್ಲೇಖಿಸುವ ಮೂಲಕ, ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ ಮೂಲಕ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 133ರ ಅಡಿಯಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಧಿಸೂಚಿಸಿತು (ಫೆಬ್ರವರಿ 2015) ಹೊರಡಿಸಿತು. ಭಾರತೀಯ ಲೆಕ್ಕಪತ್ರ ಮಾನದಂಡವನ್ನು ಅಂತರರಾಷ್ಟ್ರೀಯ ಹಣಕಾಸು ವರದಿ ಪ್ರಮಾಣಕಗಳ (ಐಎಫ್‌ಆರ್‌ಎಸ್) ಅನುಸಾರ ರೂಪಿಸಿತು, ಇದು ಭಾರತದ ಸಾಮಾನ್ಯವಾಗಿ ಸ್ವೀಕರಿಸಿದ ಲೆಕ್ಕಪತ್ರ ತತ್ವಗಳ (ಐಜಿಎಎಪಿ) ಕಾರ್ಯಚೌಕಟ್ಟಿನಿಂದ ಮೂರು ವಿಷಯಗಳಲ್ಲಿ ಅಂದರೆ ನ್ಯಾಯಸಮ್ಮತ ಮೌಲ್ಯಮಾಪನ, ಕಾನೂನು ಸ್ವರೂಪದ ಮೇಲಿನ ಸತ್ವ ಮತ್ತು ಆಸ್ತಿ–ಜವಾಬ್ದಾರಿ ತ:ಖ್ತೆಗೆ ಒತ್ತು ನೀಡುವುದು, ಇವುಗಳಿಗೆ ಸಂಬಂಧಿಸಿದಂತೆ ವಿಭಿನ್ನವಾಗಿದ್ದಿತು.

ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಕಾಲಾನುಕಾಲಕ್ಕೆ ಅಂತರರಾಷ್ಟ್ರೀಯ ಹಣಕಾಸು ವರದಿ ಪ್ರಮಾಣಕಗಳ (ಐಎಫ್‌ಆರ್‌ಎಸ್) ಜೊತೆಗೆ ಹೊಂದಿಕೊಂಡಿರುವ ಸಲುವಾಗಿ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರಲ್ಲಿ ತಿದ್ದುಪಡಿಯ ಮೂಲಕ ಭಾರತೀಯ ಲೆಕ್ಕಪತ್ರ ಮಾನದಂಡಗಳಲ್ಲಿನ ಬದಲಾವಣೆಗಳ ಅಧಿಸೂಚನೆಯನ್ನು ಹೊರಡಿಸುತ್ತದೆ[79]. ಭಾರತೀಯ ಲೆಕ್ಕಪತ್ರ ಮಾನದಂಡ ನಿಯಮಗಳ ಅಡಿಯಲ್ಲಿ ಭಾರತ ಸರ್ಕಾರದ ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ಅಧಿಸೂಚನೆ ಹೊರಡಿಸಿರುವಂತಹ ಹಾಗೂ 31 ಮಾರ್ಚ್ 2023ರಲ್ಲಿದ್ದಂತೆ ಅನ್ವಯಗೊಳ್ಳುವಂತಹ 39 ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ***ಅನುಬಂಧ – 15***ರಲ್ಲಿ ನೀಡಲಾಗಿರುವುದು.

### 5.2 ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆ

31 ಮಾರ್ಚ್ 2023ರವರೆವಿಗೂ ತಿದ್ದುಪಡಿ ಮಾಡಿರುವಂತಹ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015, ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಹಂತಾನುಹಂತವಾಗಿ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ನಿಗದಿಪಡಿಸಿರುವುದು. ಈ ನಿಯಮಗಳ ನಿಯಮ 4ರ ಅನುಸಾರ, ಕಂಪನಿಗಳು ಮತ್ತು ಅವುಗಳ ಲೆಕ್ಕಪರಿಶೋಧಕರುಗಳು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅನುಕ್ರಮವಾಗಿ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಮತ್ತು ಅವುಗಳ ಲೆಕ್ಕಪರಿಶೋಧನೆಯಲ್ಲಿ ಅನುಪಾಲನೆ ಮಾಡುತ್ತವೆ. ನಿಯಮ 4 (9)ರ ಅನುಸಾರ, ಒಂದು ಕಂಪನಿಯು ಒಂದು ಬಾರಿ ಭಾರತೀಯ ಲೆಕ್ಕಪತ್ರ ಮಾನದಂಡದ ಅನುಸಾರ ಸ್ವಯಂಪ್ರೇರಣೆಯಿಂದ ಅಥವಾ ಕಡ್ಡಾಯವಾಗಿ ವರದಿ ಮಾಡಲು ಪ್ರಾರಂಭಿಸಿದ ಮೇಲೆ, ಅದು ಐಜಿಎಎಪಿಗೆ ಹಿಂದಿರುಗಲು ಸಾಧ್ಯವಿರುವುದಿಲ್ಲ.

ಭಾರತೀಯ ಲೆಕ್ಕಪತ್ರ ಮಾನದಂಡದ ಅನುಷ್ಠಾನಕ್ಕೆ ವಿಭಿನ್ನ ಪ್ರಕಾರಗಳು/ಹಂತಗಳು ಈ ಕೆಳಕಂಡಂತಿರುತ್ತವೆ:

***ಸ್ವಯಂಪ್ರೇರಣೆಯಿಂದ ಅಳವಡಿಸಿಕೊಳ್ಳುವಿಕೆ***

**5.2.1** ಭಾರತೀಯ ಲೆಕ್ಕಪತ್ರ ಮಾನದಂಡಗಳ ನಿಯಮಗಳ ನಿಯಮ 4 (i)ರ ಅನುಸಾರ, ಯಾವುದೇ

[79] 16.02.2015ರಂದು ಮೂಲತ: ಅಧಿಸೂಚನೆ ಹೊರಡಿಸಲಾದಂತಹ ಭಾರತೀಯ ಲೆಕ್ಕವನ್ನಿಡುವಿಕೆ ನಿಯಮಗಳನ್ನು 30.03.2016 ಮತ್ತು 31.03.2023ರ ನಡುವೆ ಕಾಲಾನುಕಾಲಕ್ಕೆ ತಿದ್ದುಪಡಿ ಮಾಡಲಾಗಿರುವುದು.

ಕಂಪನಿಯು 1 ಏಪ್ರಿಲ್ 2015ರಂದು ಅಥವಾ ನಂತರ ಪ್ರಾರಂಭವಾಗುವ ಹಣಕಾಸು ತ:ಖ್ತೆಗಳಿಗೆ, 31 ಮಾರ್ಚ್ 2015, ಅಥವಾ ಅದರ ನಂತರ ಮುಕ್ತಾಯಗೊಳ್ಳುವ ಅವಧಿಗಳಿಗೆ ತುಲನೆ ಮಾಡುವುದರ ಜೊತೆಗೆ, ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಪಾಲನೆ ಮಾಡಬಹುದು.

***ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಹಂತವಾರು ಅಳವಡಿಸಿಕೊಳ್ಳುವಿಕೆ***

**5.2.2** ಈ ಕೆಳಕಂಡ ಕಂಪನಿಗಳು **ನಕಾಶೆ ಸಂಖ್ಯೆ 5.1**ರಲ್ಲಿ ವಿವರಿಸಿರುವಂತೆ ಅನುಕ್ರಮವಾಗಿ 1 ಏಪ್ರಿಲ್ 2016ರಂದು ಅಥವಾ ನಂತರದಲ್ಲಿ ಪ್ರಾರಂಭವಾಗುವ (ಹಂತ–I) ಮತ್ತು 1 ಏಪ್ರಿಲ್ 2017ರಂದು ಅಥವಾ ನಂತರದಲ್ಲಿ ಪ್ರಾರಂಭವಾಗುವ (ಹಂತ–II) ಹಣಕಾಸು ತ:ಖ್ತೆಗಳಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಪಾಲನೆ ಮಾಡತಕ್ಕದ್ದು ಎಂಬುದಾಗಿ ಭಾರತೀಯ ಲೆಕ್ಕಪತ್ರ ಮಾನದಂಡಗಳ ನಿಯಮ 4 (ii) ನಿರ್ದಿಷ್ಟಪಡಿಸಿರುತ್ತದೆ.

**ನಕಾಶೆ ಸಂಖ್ಯೆ 5.1: ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಪಾಲನೆಗಾಗಿ ನಿಯಮದ ಸ್ಥಿತಿಗತಿ**

| | |
|---|---|
| **ಹಂತ I** | • (ಎ) ಭಾರತದಲ್ಲಿ ಅಥವಾ ಭಾರತದ ಹೊರಗೆ ಈಕ್ವಿಟಿಗಳು ಅಥವಾ ಸಾಲ–ಋಣ ಭದ್ರತೆಗಳನ್ನು ಯಾವುದೇ ಷೇರು ವಿನಿಮಯ ಕೇಂದ್ರಲ್ಲಿ ಪಟ್ಟಿ ಮಾಡಲಾಗಿರುವುದೋ ಅಥವಾ ಪಟ್ಟಿ ಮಾಡುವ ಪ್ರಕ್ರಿಯೆಯಲ್ಲಿ ಇರುವುದೋ ಹಾಗೂ ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ನಡುವಿನ ವ್ಯತ್ಯಾಸದ ಸಕಾರಾತ್ಮಕ ಮೌಲ್ಯವನ್ನು (ನೆಟ್‌ವರ್ತ್) ಐನೂರು ಕೋಟಿ ರೂಪಾಯಿಗಳು ಅಥವಾ ಅದಕ್ಕೂ ಅಧಿಕ ನಿವ್ವಳ ಮೌಲ್ಯ ಹೊಂದಿರುವ ಕಂಪನಿಗಳು,<br>• (ಬಿ) ಮೇಲ್ಕಂಡ ವರ್ಗದಲ್ಲಿ ಒಳಗೊಂಡಿರದ ಮತ್ತು ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ನಡುವಿನ ವ್ಯತ್ಯಾಸದ ಸಕಾರಾತ್ಮಕ ಮೌಲ್ಯವನ್ನು (ನೆಟ್‌ವರ್ತ್) ಐನೂರು ಕೋಟಿ ರೂಪಾಯಿಗಳು ಅಥವಾ ಅದಕ್ಕೂ ಅಧಿಕ ನಿವ್ವಳ ಮೌಲ್ಯ ಹೊಂದಿರುವ ಕಂಪನಿಗಳು,<br>• (ಸಿ) ಮೇಲ್ಕಂಡ ಕಂಪನಿಗಳ ಹಿಡುವಳಿಎ, ಅಂಗಸಂಸ್ಥೆ, ಜಂಟಿ–ಉದ್ದಿಮೆ ಅಥವಾ ಸಹವರ್ತಿ ಕಂಪನಿಗಳು. |
| **ಹಂತ II** | • (ಎ) ಭಾರತದಲ್ಲಿ ಅಥವಾ ಭಾರತದ ಹೊರಗೆ ಈಕ್ವಿಟಿಗಳು ಅಥವಾ ಸಾಲ–ಋಣ ಭದ್ರತೆಗಳನ್ನು ಯಾವುದೇ ಷೇರು ವಿನಿಮಯ ಕೇಂದ್ರದಲ್ಲಿ ಪಟ್ಟಿ ಮಾಡಲಾಗಿರುವುದೋ ಅಥವಾ ಪಟ್ಟಿ ಮಾಡುವ ಪ್ರಕ್ರಿಯೆಯಲ್ಲಿರುವುದೋ ಮತ್ತು ಐನೂರು ಕೋಟಿ ರೂಪಾಯಿಗಳು ಅಥವಾ ಕಡಿಮೆ ನಿವ್ವಳ ಮೌಲ್ಯ ಹೊಂದಿರುವ ಕಂಪನಿಗಳು,<br>• (ಬಿ) ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ನಡುವಿನ ವ್ಯತ್ಯಾಸದ ಸಕಾರಾತ್ಮಕ ಮೌಲ್ಯವನ್ನು (ನೆಟ್‌ವರ್ತ್) ಇನ್ನೂರು ಕೋಟಿ ರೂಪಾಯಿಗಳು ಮತ್ತು ಐನೂರು ಕೋಟಿ ರೂಪಾಯಿಗಳಿಗಿಂತ ನಡುವಿನ ನಿವ್ವಳ ಮೌಲ್ಯ ಹೊಂದಿರುವ ಷೇರು ವಿನಿಮಯ ಕೇಂದ್ರದ ಪಟ್ಟಿಯಲ್ಲಿ ಸೇರಿರದ ಕಂಪನಿಗಳು.,<br>• (ಸಿ) ಮೇಲ್ಕಂಡ ಕಂಪನಿಗಳ ಹಿಡುವಳಿ, ಅಂಗಸಂಸ್ಥೆ, ಜಂಟಿ ಉದ್ದಿಮೆ ಅಥವಾ ಸಹವರ್ತಿ ಕಂಪನಿಗಳು. |

## 5.3 ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಸ್ತಾರ

***ಲೆಕ್ಕಪರಿಶೋಧನೆಯ ಉದ್ದೇಶಗಳು***

**5.3.1** ಲೆಕ್ಕಪರಿಶೋಧನೆಯ ಉದ್ದೇಶಗಳನ್ನು ಈ ಕೆಳಗಿನ ಅಂಶಗಳನ್ನು ನಿರ್ಧಾರಣೆ ಮಾಡುವ ಸಲುವಾಗಿ ರೂಪಿಸಲಾಗಿರುವುದು:

- ಸಂಬಂಧಿತ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಳ್ಳುವ ಸಮಯದಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಷ್ಠಾನಕ್ಕೆ ಸಂಬಂಧಿಸಿದ ಅನುವುಗಳ ಅನುಪಾಲನೆ ಮತ್ತು

- ಅಂತಹ ಕಂಪನಿಗಳ ಹಣಕಾಸು ತ:ಖ್ತೆಗಳಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸ್ಠಾನದ ಪ್ರಭಾವ.

***ಲೆಕ್ಕಪರಿಶೋಧನೆಯ ವ್ಯಾಪ್ತಿ***

**5.3.2** 31 ಮಾರ್ಚ್ 2023ರಲ್ಲಿದ್ದಂತೆ, 121 ಸರ್ಕಾರಿ / ಸರ್ಕಾರದಿಂದ ನಿಯಂತ್ರಿತ ಕಂಪನಿಗಳು

ಇದ್ದವು. ಈ ಪೈಕಿ, 33 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[80] 31 ಮಾರ್ಚ್ 2023ರಲ್ಲಿದ್ದಂತೆ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುತ್ತವೆ (ವಿವರಗಳು ***ಅನುಬಂಧ – 16***ರಲ್ಲಿ).

ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಹಂತವಾರು ಅಳವಡಿಸಿಕೊಂಡಿರುವಿಕೆಯ ವಿವರಗಳನ್ನು ಈ ಕೆಳಗೆ **ಕೋಷ್ಟಕ 5.1**ರಲ್ಲಿ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 5.1: 33 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವ ವಿವರಗಳು**

| ಕ್ರಮ ಸಂಖ್ಯೆ | ವಿವರಗಳು | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ |
|---|---|---|
| 1 | 2016–17 ಹಣಕಾಸು ಸಾಲಿನಲ್ಲಿ ಹಂತ Iರ ಅಡಿಯಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ (ಪರಿವರ್ತನಾ ದಿನಾಂಕ 01.04.2015 – 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಮೊದಲ ಲೆಕ್ಕಪತ್ರಗಳು – ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು) | **14** |
| 2 | 2017–18 ಹಣಕಾಸು ಸಾಲಿನಲ್ಲಿ ಹಂತ IIರ ಅಡಿಯಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ (ಪರಿವರ್ತನಾ ದಿನಾಂಕ 01.04.2016 – ಒಂಬತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಮೊದಲ ಲೆಕ್ಕಪತ್ರಗಳು – ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ) | **10** |
| 3 | ನಂತರದ ವರ್ಷಗಳಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ (ಪರಿವರ್ತನಾ ದಿನಾಂಕ 01.04.2017 - 2018–19 ಹಣಕಾಸು ಸಾಲಿನಲ್ಲಿ ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮತ್ತು ಇತರ ಮಾನದಂಡಗಳನ್ನು ಪೂರೈಸಿದ ಸಾಲುಗಳಲ್ಲಿ – ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು) | **09** |

***ಮೂಲ: ಲೆಕ್ಕಪರಿಶೋಧನೆಯಲ್ಲಿ ಸಂಗ್ರಹಿಸಿದ ಮಾಹಿತಿ / ದತ್ತಾಂಶ***

***ಲೆಕ್ಕಪರಿಶೋಧನೆಯ ವಿಧಾನ***

**5.3.3** ಐಜಿಎಎಪಿಯಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳ ಕಾರ್ಯಚೌಕಟ್ಟಿಗೆ ಪರಿವರ್ತನೆ ಹೊಂದಿರುವ, 29 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸ್ವತಂತ್ರ ಹಣಕಾಸು ತ:ಖ್ತೆಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾಯಿತು. ಭಾರತೀಯ ಲೆಕ್ಕಪತ್ರ ಮಾನದಂಡಗಳ ವಿವಿಧ ಅನುವುಗಳ ಅನುಪಾಲನೆ ಮತ್ತು ಭಾರತೀಯ ಲೆಕ್ಕಪತ್ರ ಮಾನದಂಡಗಳ (ಭಾರತೀಯ ಲೆಕ್ಕಪತ್ರ ಮಾನದಂಡವನ್ನು ಅಳವಡಿಸಿಕೊಂಡ ಕಾರಣ ಉಂಟಾಗಿರುವ ಬದಲಾವಣೆಗಳ ಉಲ್ಲೇಖದೊಂದಿಗೆ) ಅನುಷ್ಠಾನವು ಸರ್ಕಾರಿ ಕಂಪನಿಗಳ ಆದಾಯಗಳು, ತೆರಿಗೆ ನಂತರದ ಲಾಭ (ಪಿಎಟಿ), ಒಟ್ಟಾರೆ ಆಸ್ತಿಗಳ ಮೌಲ್ಯ ಮತ್ತು ಒಟ್ಟಾರೆ ಜವಾಬ್ದಾರಿಗಳ ಮೌಲ್ಯ, ಇವೆರಡರ ವ್ಯತ್ಯಾಸದ ನಿವ್ವಳ ಮೌಲ್ಯ ಮತ್ತು ಒಟ್ಟು ಆಸ್ತಿಗಳ ಮೇಲಿನ ಪ್ರಭಾವದ ಮೇಲೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸು ತ:ಖ್ತೆಗಳಲ್ಲಿ ಮಾಡಲಾಗಿರುವ ಬಹಿರಂಗಪಡಿಸುವಿಕೆಗಳನ್ನು ಸಹ ವಿಶ್ಲೇಷಣೆ ಮಾಡಲಾಯಿತು.

## 5.4 ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಮೊದಲ ಬಾರಿಗೆ ಅಳವಡಿಸಿಕೊಂಡಿರುವುದರ ಸಮೀಕ್ಷೆ

***ಹಿಂದಿನ ದಿನಾಂಕಗಳಿಂದ ಅನ್ವಯವಾಗುವುದಕ್ಕೆ ವಿನಾಯಿತಿಗಳು***

**5.4.1** ಭಾರತೀಯ ಲೆಕ್ಕಪತ್ರ ಮಾನದಂಡ 101ರ ಮೂಲ ತತ್ವವೇನೆಂದರೆ, ಮೊದಲ–ಬಾರಿಗೆ ಅಳವಡಿಸಿಕೊಳ್ಳುತ್ತಿರುವವರು ಹಣಕಾಸು ತ:ಖ್ತೆಗಳನ್ನು ತಾವು ಯಾವಾಗಲೂ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಡಿಯಲ್ಲಿನ ಅಗತ್ಯತೆಯ ಅನುವುಗಳ ಅನುಸಾರ ಸಿದ್ಧಪಡಿಸತಕ್ಕದ್ದು

[80] ಭಾರತೀಯ ಲೆಕ್ಕಪತ್ರ ಮಾನದಂಡ ನಿಯಮಗಳು, 2015ರ ಅಧಿಸೂಚನೆಯ ನಂತರ ಸಂಯೋಜನಗೊಂಡ ಹಾಗೂ ತಮ್ಮ ಮೊದಲ ಲೆಕ್ಕಪತ್ರಗಳಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡ ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಎಸ್‌ಸಿಎಲ್, ವಿಜಿಎನ್‌ಎಲ್, ಬಿಎಸ್‌ಸಿಎಲ್–ಬೆಳಗಾವಿ ಮತ್ತು ಟಿಎಸ್‌ಸಿಎಲ್).

ಎಂಬುದಾಗಿರುತ್ತದೆ. ಆದಾಗ್ಯೂ, ಮಾನದಂಡವು ಭಾರತೀಯ ಲೆಕ್ಕಪತ್ರ ಮಾನದಂಡಗಳು ಹಿಂದಿನ ದಿನಾಂಕಗಳಿಂದಲೇ ಸಂಪೂರ್ಣವಾಗಿ ಅನ್ವಯಗೊಳ್ಳುವ ತತ್ವಕ್ಕೆ ಎರಡು ವಿಧಗಳ ವಿನಾಯಿತಿಗಳನ್ನು ಅನುಮತಿಸಿರುವುದು. ಈ ವಿನಾಯಿತಿಗಳನ್ನು ಕಡ್ಡಾಯ ವಿನಾಯಿತಿಗಳು ಮತ್ತು ಸ್ವಯಂಪ್ರೇರಣೆಯ ವಿನಾಯಿತಿಗಳು ಎಂಬುದಾಗಿ ವರ್ಗೀಕರಿಸಲಾಗಿದೆ.

**ಕಡ್ಡಾಯ ವಿನಾಯಿತಿಗಳು:** ಭಾರತೀಯ ಲೆಕ್ಕಪತ್ರ ಮಾನದಂಡ 101ರ ಕಂಡಿಕೆ 13, ಕಂಡಿಕೆಗಳು 14–17 ಮತ್ತು ಅನುಬಂಧ ಬಿಯಲ್ಲಿ ರೂಪಿಸಿರುವಂತೆ ಇತರ ಭಾರತೀಯ ಲೆಕ್ಕಪತ್ರ ಮಾನದಂಡಗಳ ಕೆಲವು ನಿರ್ದಿಷ್ಟ ಅಂಶಗಳನ್ನು ಹಿಂದಿನಿಂದ ಅನ್ವಯವಾಗುವುದರಿಂದ ನಿಷೇಧಿಸುತ್ತವೆ, ಅಂದರೆ ಭಾರತೀಯ ಲೆಕ್ಕಪತ್ರ ಮಾನದಂಡ 10 (ವರದಿ ಮಾಡುವ ಅವಧಿಯ ನಂತರದ ಘಟನೆಗಳು), ಭಾರತೀಯ ಲೆಕ್ಕಪತ್ರ ಮಾನದಂಡ 109 (ಹಣಕಾಸು ಸಾಧನಗಳು) ಮತ್ತು ಭಾರತೀಯ ಲೆಕ್ಕಪತ್ರ ಮಾನದಂಡ 110 (ಕ್ರೋಢೀಕರಿಸಿದ ಹಣಕಾಸು ತ:ಖ್ತೆಗಳು), ಇತ್ಯಾದಿ.

**ಐಚ್ಛಿಕ ವಿನಾಯಿತಿಗಳು:** ಭಾರತೀಯ ಲೆಕ್ಕಪತ್ರ ಮಾನದಂಡ 101ರ ಅನುವುಗಳು ಇತರ ಭಾರತೀಯ ಲೆಕ್ಕಪತ್ರ ಮಾನದಂಡಗಳ ನಿರ್ದಿಷ್ಟ ಅವಶ್ಯಕತೆಗಳಿಂದ ಹೊರತುಪಡಿಸುವಿಕೆಗಳು/ವಿನಾಯಿತಿಗಳನ್ನು ನೀಡುತ್ತವೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಬಂಧ ಬಿ ಇತರ ಭಾರತೀಯ ಲೆಕ್ಕಪತ್ರ ಮಾನದಂಡಗಳು ಹಿಂದಿನ ದಿನಾಂಕಗಳಿಂದ ಅನ್ವಯವಾಗುವುದಕ್ಕೆ ಲಭ್ಯವಿರುವ ಹೊರತುಪಡಿಸುವಿಕೆಗಳನ್ನು ನಿರ್ದಿಷ್ಟಪಡಿಸುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡ 101ರ ಕಂಡಿಕೆ 18ರ ಅನುಸಾರ, ಒಂದು ಸಂಸ್ಥೆಯು ಭಾರತೀಯ ಲೆಕ್ಕಪತ್ರ ಮಾನದಂಡ 101ರ ಅನುಬಂಧ ಸಿ (ವ್ಯವಹಾರ ಸಂಯೋಜನೆಗಳಿಗೆ ವಿನಾಯಿತಿಗಳು) ಮತ್ತು ಅನುಬಂಧ ಡಿಯಲ್ಲಿ (ಇತರ ಭಾರತೀಯ ಲೆಕ್ಕಪತ್ರ ಮಾನದಂಡಗಳಿಂದ ವಿನಾಯಿತಿಗಳು) ಒಳಗೊಂಡಿರುವ ವಿನಾಯಿತಿಗಳಲ್ಲಿ ಒಂದು ಅಥವಾ ಹೆಚ್ಚಿನದನ್ನು ಆಯ್ಕೆ ಮಾಡಿಕೊಳ್ಳಬಹುದು.

29 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಮಾಡಲಾದ ಬಹಿರಂಗಪಡಿಸುವಿಕೆಗಳನ್ನು ಲೆಕ್ಕಪರಿಶೋಧನೆಯು ವಿಶ್ಲೇಷಣೆ ಮಾಡಲಾಗಿ, ಹತ್ತು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಸಿಎನ್‌ಎನ್‌ಎಲ್, ಹೆಚ್‌ಜಿಎಮ್‌ಎಲ್, ಎಮ್‌ಸಿಎ, ಎಮ್‌ಎಸ್‌ಐಎಲ್, ಪಿಸಿಕೆಎಲ್, ಸಿಬಿಐಸಿ–ತುಮಕೂರು, ಎಫ್‌ಕೆಎಲ್, ಕೆಬಿಜೆಎನ್‌ಎಲ್, ಕೆಎಫ್‌ಸಿಎಸ್‌ಸಿಎಲ್ ಮತ್ತು ಆರ್‌ಪಿಸಿಎಲ್) ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡ ಮೇಲೆ ಬಳಸಿಕೊಂಡ ಐಚ್ಛಿಕ ವಿನಾಯಿತಿಗಳನ್ನು ಪ್ರತ್ಯೇಕವಾಗಿ ಬಹಿರಂಗಪಡಿಸಿರಲಿಲ್ಲ ಮತ್ತು ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಟಿಸಿಪಿಎಲ್) ತಾನು ಯಾವುದೇ ಐಚ್ಛಿಕ ವಿನಾಯಿತಿಗಳನ್ನು ಬಳಸಿಕೊಂಡಿರುವುದಿಲ್ಲ ಎಂಬುದಾಗಿ ಬಹಿರಂಗಪಡಿಸಿದ್ದಿತು ಎಂಬುದನ್ನು ತೋರಿಸಿಕೊಟ್ಟಿತು. ಉಳಿದ 18 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಳ್ಳುವ ಸಮಯದಲ್ಲಿ ತಮ್ಮ ಹಣಕಾಸು ತ:ಖ್ತೆಗಳನ್ನು ಸಿದ್ಧಪಡಿಸುವಾಗ ಒಂದು ಅಥವಾ ಹೆಚ್ಚಿನ ಐಚ್ಛಿಕ ವಿನಾಯಿತಿಗಳನ್ನು ಬಳಸಿಕೊಂಡಿದ್ದವು. ಬಳಸಿಕೊಂಡಿರುವ ಐಚ್ಛಿಕ ವಿನಾಯಿತಿಗಳಿಗೆ ಸಂಬಂಧಿಸಿದಂತೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆವಾರು ವಿವರಗಳನ್ನು ***ಅನುಬಂಧ – 17***ರಲ್ಲಿ ಕೊಡಲಾಗಿದೆ ಮತ್ತು ಅದರ ಸಂಕ್ಷಿಪ್ತ ಸಾರಾಂಶವನ್ನು ಈ ಕೆಳಗೆ **ಕೋಷ್ಟಕ 5.2**ರಲ್ಲಿ ಟೇಬಲ್ಲಿನ ರೂಪದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 5.2: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಬಳಸಿಕೊಂಡಿರುವ ಐಚ್ಛಿಕ ವಿನಾಯಿತಿಗಳ ತ:ಖ್ತೆ**

| ಕ್ರಮ ಸಂಖ್ಯೆ | ಐಚ್ಛಿಕ ವಿನಾಯಿತಿ ಉಲ್ಲೇಖ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ |
|---|---|---|
| **01** | **ಭಾರತೀಯ ಲೆಕ್ಕಪತ್ರ ಮಾನದಂಡ 16– ಆಸ್ತಿ, ಸ್ಥಾವರ ಮತ್ತು ಉಪಕರಣ (ಪಿಪಿಇ), ಭಾರತೀಯ ಲೆಕ್ಕಪತ್ರ ಮಾನದಂಡ 38– ಅಮೂರ್ತ ಸ್ವತ್ತುಗಳು ಮತ್ತು ಭಾರತೀಯ ಲೆಕ್ಕಪತ್ರ ಮಾನದಂಡ 40–ಹೂಡಿಕೆ ಆಸ್ತಿ:**<br>ಭಾರತೀಯ ಲೆಕ್ಕಪತ್ರ ಮಾನದಂಡ ಮಾನದಂಡ 101ಕ್ಕೆ 'ಅನುಬಂಧ ಡಿ' ಯ ಕಂಡಿಕೆಗಳು ಡಿ5 / ಡಿ6 ಮೊದಲ–ಬಾರಿಯ ಅಳವಡಿಕೆದಾರರುಗಳಿಗೆ ತಮ್ಮ ಸ್ವತ್ತುಗಳನ್ನು ಅಳೆಯಲು ಆಯ್ಕೆ ಮಾಡಲು ಅನುಮತಿಸುತ್ತದೆ ಅಂದರೆ ಪಿಪಿಇ, ಅಮೂರ್ತ ಸ್ವತ್ತುಗಳು, ಮತ್ತು ಹೂಡಿಕೆ ಆಸ್ತಿಯನ್ನು, ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆಯ ದಿನಾಂಕದಂದು ಅದರ ನ್ಯಾಯಸಮ್ಮತ ಮೌಲ್ಯದ ಪ್ರಕಾರ ನಿರ್ಧಾರಣೆ ಮಾಡುವುದನ್ನು ಮತ್ತು ಆ ನ್ಯಾಯಸಮ್ಮತ ಮೌಲ್ಯವನ್ನು ಆ ದಿನಾಂಕದಂದು ಅದರ ಭಾವಿಸಲ್ಪಟ್ಟಿರುವ ವೆಚ್ಚವೆಂಬ ರೀತಿ ಬಳಸಲು ಅಥವಾ ಕಾರ್ಯಾಚರಣೆಯಿಂದ ಹಿಂತೆಗೆದುಕೊಳ್ಳುವ ಬಾಧ್ಯತೆಗಳಿಗೆ ಅಗತ್ಯವಾದ | **18 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** |

| ಕ್ರಮ ಸಂಖ್ಯೆ | ಐಚ್ಛಿಕ ವಿನಾಯಿತಿ ಉಲ್ಲೇಖ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ |
|---|---|---|
| | ಹೊಂದಾಣಿಕೆಗಳನ್ನು ಮಾಡಿದ ನಂತರ ಅವರ ಐಜಿಎಎಪಿ ಸಾಗಿಸುವ ಮೌಲ್ಯದಲ್ಲಿ ಅಳೆಯುವುದನ್ನು ಮುಂದುವರಿಸಬಹುದು<br>ಕಂಡಿಕೆ ಡಿ7ರ ಅನುಸಾರ, ಕಂಡಿಕೆಗಳು ಡಿ5 / ಡಿ6ಗಳ ನಿಬಂಧನೆಗಳು ಭಾರತೀಯ ಲೆಕ್ಕಪತ್ರ ಮಾನದಂಡ 40, ಹೂಡಿಕೆಯ ಆಸ್ತಿಗೆ ಅನುಗುಣವಾಗಿ ಲೆಕ್ಕ ಮಾಡಲಾಗಿರುವ ಹೂಡಿಕೆಯ ಆಸ್ತಿ; ಮತ್ತು ಭಾರತೀಯ ಲೆಕ್ಕಪತ್ರ ಮಾನದಂಡ ಸಹ 38ರಲ್ಲಿ ಮಾನ್ಯತೆ / ಮರುಮೌಲ್ಯಾಮಾಪನ ಮಾನದಂಡಗಳನ್ನು ಪೂರೈಸುವ ಅಮೂರ್ತ ಸ್ವತ್ತುಗಳಿಗೂ ಲಭ್ಯವಿರುತ್ತದೆ. | |
| **02** | **ಭಾರತೀಯ ಲೆಕ್ಕಪತ್ರ ಮಾನದಂಡ 17 - ಭೋಗ್ಯ**[81]<br>ಭಾರತೀಯ ಲೆಕ್ಕಪತ್ರ ಮಾನದಂಡ 101ರ ಅನುಬಂಧ ಡಿ ಯ ಕಂಡಿಕೆ ಡಿ9 ಮೊದಲ-ಬಾರಿಯ ಅಳವಡಿಕೆದಾರರಿಗೆ ಪರಿಣಾಮವು ಭೌತಿಕವಾಗಿರುವ ನಿರೀಕ್ಷೆ ಇರದ ಕಡೆಯನ್ನು ಹೊರತುಪಡಿಸಿ, ಪರಿವರ್ತನೆಯ ದಿನಾಂಕದಂದು ಇರುವ ಸತ್ಯಾಂಶಗಳು ಮತ್ತು ಸಂದರ್ಭಗಳ ಆಧಾರದ ಮೇರೆ ಪರಿವರ್ತನೆಯ ದಿನಾಂಕದಂದು ಇರುವ ವ್ಯವಸ್ಥೆಯು ಭೋಗ್ಯವನ್ನು ಒಳಗೊಂಡಿದೆಯೆ ಎಂಬುದನ್ನು ಮೌಲ್ಯಮಾಪನ ಮಾಡಲು ಅನುಮತಿ ನೀಡುತ್ತದೆ. | **04 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** |
| **03** | **ಭಾರತಿಯ ಲೆಕ್ಕಪತ್ರ ಮಾನದಂಡ 20 ಸರ್ಕಾರಿ ಅನುದಾನಗಳು ಮತ್ತು ಸರ್ಕಾರಿ ನೆರವನ್ನು ಬಹಿರಂಗಪಡಿಸುವಿಕೆ**<br>ಭಾರತೀಯ ಲೆಕ್ಕಪತ್ರ ಮಾನದಂಡಗಳ 101ರ ಅನುಬಂಧ ಬಿ ಯ ಕಂಡಿಕೆ ಬಿ 10 ಮೊದಲ-ಬಾರಿಯ ಅಳವಡಿಕೆದಾರರಿಗೆ ಮಾರುಕಟ್ಟೆಗಿಂತ-ಕಡಿಮೆ ಬಡ್ಡಿ ದರದಲ್ಲಿ ಸರ್ಕಾರಿ ಸಾಲದ ಪ್ರಯೋಜನವನ್ನು ಸರ್ಕಾರಿ ಅನುದಾನವಾಗಿ ತತ್ಕ್ಷಣದಿಂದ ವರ್ಗೀಕರಿಸಲು ಅನುಮತಿ ನೀಡುತ್ತದೆ. | **02 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** |
| **04** | **ಭಾರತಿಯ ಲೆಕ್ಕಪತ್ರ ಮಾನದಂಡ 21 – ಧೀರ್ಘಕಾಲೀನ ವಿದೇಶೀ ಕರೆನ್ಸಿ ಹಣಕಾಸು ವಸ್ತುಗಳು**<br>ಭಾರತೀಯ ಲೆಕ್ಕಪತ್ರ 101ರ ಕಂಡಿಕೆಗಳು ಡಿ 13 ಎಎ ಅನುಸಾರ, ಮೊದಲ-ಬಾರಿಯ ಅಳವಡಿಕೆದಾರರು ಮೊದಲನೇ ಭಾರತೀಯ ಲೆಕ್ಕಪತ್ರ ಹಣಕಾಸು ವರದಿ ಮಾಡುವ ಅವಧಿ ಪ್ರಾರಂಭವಾಗುವ ತಕ್ಷಣದ ಮುಂಚೆ ಅಂತ್ಯಗೊಂಡಿರುವ ಅವಧಿಗೆ ಹಣಕಾಸು ತ:ಖ್ತೆಗಳಲ್ಲಿ ಮಾನ್ಯತೆ ಮಾಡಿರುವ ಧೀರ್ಘಕಾಲೀನ ವಿದೇಶೀ ಕರೆನ್ಸಿ ಹಣಕಾಸು ವಸ್ತುಗಳ ಪ್ರತಿಫಲನದಿಂದ ಉದ್ಭವಿಸುವ ವಿದೇಶೀ ವಿನಿಮಯ ವ್ಯತ್ಯಾಸಗಳಿಗೆ ಅಳವಡಿಸಿಕೊಂಡಿರುವ ನೀತಿಯನ್ನು ಹಿಂದಿನ ಜಿಎಎಪಿ ತತ್ವಗಳ ಅನುಸಾರ ಮುಂದುವರೆಸಬಹುದು. | **01 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ** |
| **05** | **ಭಾರತೀಯ ಲೆಕ್ಕಪತ್ರ ಮಾನದಂಡ 27 - ಪ್ರತ್ಯೇಕ ಹಣಕಾಸು ತ:ಖ್ತೆ**<br>ಭಾರತೀಯ ಲೆಕ್ಕಪತ್ರ ಮಾನದಂಡ 101ರ ಕಂಡಿಕೆಗಳು ಡಿ 14 / ಡಿ 15 ಅನುಸಾರ, ಪ್ರತ್ಯೇಕ ಹಣಕಾಸು ತ:ಖ್ತೆಗಳ ಸಂದರ್ಭದಲ್ಲಿ, ಭಾರತೀಯ ಲೆಕ್ಕಪತ್ರ ಮಾನದಂಡ 27 ಒಂದು ಅಸ್ತಿತ್ವವು ತನ್ನ ಅಂಗಸಂಸ್ಥೆಗಳು, ಜಂಟಿಯಾಗಿ ನಿಯಂತ್ರಿಸಲಾಗುವ ಅಸ್ತಿತ್ವಗಳು ಮತ್ತು ಸಹವರ್ತಿಗಳಲ್ಲಿ ಮಾಡಿರುವ ತನ್ನ ಹೂಡಿಕೆಗಳನ್ನು ವೆಚ್ಚದ ಆಧಾರದಲ್ಲಿ ಅಥವಾ ಭಾರತೀಯ ಲೆಕ್ಕಪತ್ರ ಮಾನದಂಡ 109 (ಹಣಕಾಸು ತ:ಖ್ತೆಗಳು)ಗೆ ಅನುಗುಣವಾಗಿ ಲೆಕ್ಕ ನಿರ್ವಹಣೆ ಮಾಡಬೇಕು ಎಂದು ಅಪೇಕ್ಷಿಸುತ್ತದೆ. ಒಂದುವೇಳೆ ಮೊದಲ-ಬಾರಿಯ ಅಳವಡಿಕೆದಾರರು ಭಾರತೀಯ ಲೆಕ್ಕಪತ್ರ ಮಾನದಂಡ 27ಕ್ಕೆ ಅನುಗುಣವಾಗಿ ವೆಚ್ಚದ ಪ್ರಕಾರ ಅಂತಹ ಹೂಡಿಕೆಗಳನ್ನು ಮಾಪನ ಮಾಡಿದರೆ, ಆಗ ತನ್ನ ಪ್ರತ್ಯೇಕವಾದ ಭಾರತೀಯ ಲೆಕ್ಕಪತ್ರ ಮಾನದಂಡ ಆಸ್ತಿ-ಜವಾಬ್ದಾರಿ ತ:ಖ್ತೆಯ ಒಳಗೆ ವೆಚ್ಚದ ಪ್ರಕಾರ ಅಥವಾ ಭಾವಿಸಿರುವ ವೆಚ್ಚದ ಪ್ರಕಾರ ನಿರ್ಧಾರಣೆ ಮಾಡತಕ್ಕದ್ದು. | **05 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** |
| **06** | **ಭಾರತೀಯ ಲೆಕ್ಕಪತ್ರ ಮಾನದಂಡ 103 – ವ್ಯವಹಾರ ಸಂಯೋಜನೆಗಳು**<br>ಭಾರತೀಯ ಲೆಕ್ಕಪತ್ರ ಮಾನದಂಡ 101ನ ಅನುಬಂಧ ಸಿ ಇದರ ಅಡಿಯಲ್ಲಿನ ಕಂಡಿಕೆ ಸಿ 1 ಮೊದಲ-ಬಾರಿಯ ಅಳವಡಿಕೆದಾರರು ಹಿಂದಿನ ವ್ಯವಹಾರ ಸಂಯೋಜನೆಗಳಿಗೆ (ಭಾರತೀಯ ಲೆಕ್ಕಪತ್ರ ಮಾನದಂಡ ಪರಿವರ್ತನೆ ದಿನಾಂಕದ ಮುಂಚೆ ಸಂಭವಿಸಿದ ವ್ಯವಹಾರ ಸಂಯೋಜನೆಗಳು) ಭಾರತೀಯ ಲೆಕ್ಕಪತ್ರ ಮಾನದಂಡ 103ಯಲ್ಲಿ ಹಿಂದಿನಿಂದ ಅನ್ವಯ ಮಾಡದಿರುವ ಆಯ್ಕೆಯನ್ನು ಮಾಡಿಕೊಳ್ಳಬಹುದು ಎಂದು ಅನುಮತಿ ನೀಡುತ್ತದೆ. | **02 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** |
| **07** | **ಭಾರತೀಯ ಲೆಕ್ಕಪತ್ರ ಮಾನದಂಡ 109 - ಹಣಕಾಸು ಸಾಧನಗಳು (ನಿಯೋಜಿತ ಹಣಕಾಸು ಆಸ್ತಿ / ಹೂಡಿಕೆ)**<br>ಭಾರತೀಯ ಲೆಕ್ಕಪತ್ರ ಮಾನದಂಡ 101 ಒಂದು ಅಸ್ತಿತ್ವವು ಲಾಭ ಅಥವಾ ನಷ್ಟದ (ಡಿ19ಎ) ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಹಣಕಾಸು ಆಸ್ತಿಯನ್ನು ಮತ್ತು ಈಕ್ವಿಟಿ ಸಾಧನದಲ್ಲಿ ಹೂಡಿಕೆಯನ್ನು ಇತರ ಸಮಗ್ರ ಆದಾಯ (ಡಿ19ಬಿ) ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆಯಾದ ದಿನಾಂಕದಂದು ಅಸ್ತಿತ್ವದಲ್ಲಿರುವ ವಾಸ್ತವಾಂಶಗಳು ಮತ್ತು ಸಂದರ್ಭಗಳ ಆಧಾರದ ಮೇರೆಗೆ ಭಾರತೀಯ ಲೆಕ್ಕಪತ್ರ ಮಾನದಂಡ 109ರ | **04 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** |

[81] ಭಾರತೀಯ ಲೆಕ್ಕಪತ್ರ ಮಾನದಂಡ 17 – ಭೋಗ್ಯ ಅನ್ನು ಮಾರ್ಚ್ 2019ರಲ್ಲಿ ಭಾರತೀಯ ಲೆಕ್ಕಪತ್ರ ಮಾನದಂಡ 116 – ಭೋಗ್ಯ ರಿಂದ ರದ್ದುಗೊಳಿಸಲಾಗಿದೆ.

| ಕ್ರಮ ಸಂಖ್ಯೆ | ಐಚ್ಛಿಕ ವಿನಾಯಿತಿ ಉಲ್ಲೇಖ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ |
|---|---|---|
| | ಅನುವುಗಳಿಗೆ ಅನುಗುಣವಾಗಿ ನಿಯೋಜಿಸಲು ಅನುಮತಿ ನೀಡುತ್ತದೆ. | |
| | **ಭಾರತೀಯ ಲೆಕ್ಕಪತ್ರ ಮಾನದಂಡ 109 - ಹಣಕಾಸು ಸಾಧನಗಳು (ಹಣಕಾಸು ಆಸ್ತಿಗಳ ದುರ್ಬಲಗೊಳ್ಳುವಿಕೆ)** ಭಾರತೀಯ ಲೆಕ್ಕಪತ್ರ ಮಾನದಂಡ 109ರ ದುರ್ಬಲಗೊಳಿಸುವಿಕೆಯ ಅವಶ್ಯಕತೆಗಳನ್ನು ಹಿಂದಿನಿಂದ ಅನ್ವಯಗೊಳಿಸುವುದನ್ನು ನಿರ್ವಹಿಸುವ ಭಾರತೀಯ ಲೆಕ್ಕಪತ್ರ ಮಾನದಂಡ 101 (ಬಿ 8ಡಿ/ಬಿ 8ಇ) ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನಾ ದಿನಾಂಕದಂದು ಸಾಲ – ಋಣ ಅಪಾಯದೊಂದಿಗೆ ತುಲನೆ ಮಾಡಲು ಪ್ರಾರಂಭಿಕವಾಗಿ ಮಾನ್ಯತೆ ಮಾಡಿರುವ ಹಣಕಾಸು ಸಾಧನಗಳ ದಿನಾಂಕದಂದು ಸಾಲ–ಋಣ ಅಪಾಯವನ್ನು ನಿರ್ಣಯಿಸಲು ಸೂಕ್ತವಲ್ಲದ ವೆಚ್ಚ ಅಥವಾ ಶ್ರಮದ ರಹಿತ ಲಭ್ಯವಿರುವ ಸಮಂಜಸ ಮತ್ತು ಬೆಂಬಲಿಸಬಹುದಾದ ಮಾಹಿತಿಯನ್ನು ಬಳಸಲು ಅನುಮತಿ ನೀಡುತ್ತದೆ. ಘಟಕವು ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆ ಆದ ದಿನಾಂಕದಂದು, ಪ್ರಾರಂಭಿಕ ಮಾನ್ಯತೆಯ ದಿನಾಂಕದಿಂದ ಸಾಲ–ಋಣ ಅಪಾಯದಲ್ಲಿ ಗಮನಾರ್ಹ ಹೆಚ್ಚಳಗಳು ಇರುವುವೇ ಎಂಬ ಕುರಿತು ನಿರ್ಣಯಿಸುವಾಗ ಮಾಹಿತಿಗಾಗಿ ಸಮಗ್ರ ಪರಿಶೀಲನೆಯನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಇರುವುದಿಲ್ಲ | **02 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು** |

*ಮೂಲ: ಲೆಕ್ಕಪರಿಶೋಧನೆಯಲ್ಲಿ ಸಂಗ್ರಹಿಸಿರುವ ಮಾಹಿತಿ /ದತ್ತಾಂಶ*

### *ಮೊದಲ ಬಾರಿ ಅಳವಡಿಸಿಕೊಳ್ಳುವುದರ ಮೇಲೆ ಸಮನ್ವಯಗೊಳಿಸುವ ತ:ಖ್ತೆಗಳನ್ನು ಬಹಿರಂಗಪಡಿಸುವಿಕೆ*

**5.4.2** ಭಾರತೀಯ ಲೆಕ್ಕಪತ್ರ ಮಾನದಂಡ 101ರ ಕಂಡಿಕೆ 23 ಹಿಂದಿನ ಜಿಎಎಪಿ ತತ್ವಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡವನ್ನು ಅಳವಡಿಸಿಕೊಂಡ ಪರಿವರ್ತನೆಯು ತಾನು ವರದಿ ಮಾಡಿರುವ ಆಸ್ತಿ–ಜವಾಬ್ದಾರಿ ತ:ಖ್ತೆ, ಹಣಕಾಸು ಕಾರ್ಯನಿರ್ವಹಣೆ ಮತ್ತು ನಗದು ಹರಿವುಗಳ ಮೇಲೆ ಹೇಗೆ ಪ್ರಭಾವ ಬೀರಿತು ಎಂಬುದರ ಬಗ್ಗೆ ವಿವರಣೆಯನ್ನು ಕಂಪನಿಯಿಂದ ಬಯಸುತ್ತದೆ. ಈ ಅವಶ್ಯಕತೆಯ ಅನುಪಾಲನೆ ಮಾಡಲು, ಭಾರತೀಯ ಲೆಕ್ಕಪತ್ರ ಮಾನದಂಡ 101ರ ಕಂಡಿಕೆ 24 ನಿರ್ದಿಷ್ಟಪಡಿಸಿರುತ್ತದೆ. ಕಂಪನಿಯ ಮೊದಲ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸಾರ ತಯಾರಿಸಲಾಗಿರುವ ಹಣಕಾಸು ತ:ಖ್ತೆಯಲ್ಲಿ (i) ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆ ಹೊಂದಿದ ದಿನಾಂಕ ಮತ್ತು (ii) ಹಿಂದಿನ ಜಿಎಎಪಿ ತತ್ವಗಳಿಗೆ ಅನುಗುಣವಾಗಿ ಕಂಪನಿಯ ಅತ್ಯಂತ ಇತ್ತೀಚಿನ ವಾರ್ಷಿಕ ಹಣಕಾಸು ತ:ಖ್ತೆಗಳಲ್ಲಿ ಪ್ರಸ್ತುತಪಡಿಸಿದ ಇತ್ತೀಚಿನ ಅವಧಿಯ ಸಮಾಪ್ತಿ ಎರಡಕ್ಕೂ ತನ್ನ ಈಕ್ವಿಟಿಯ ಸಮನ್ವಯತೆಯ ತ:ಖ್ತೆಯನ್ನು ಸೇರ್ಪಡೆ ಮಾಡುವುದನ್ನು ನಿಗದಿಪಡಿಸುತ್ತದೆ. ಅಲ್ಲದೆಯೇ, ಕಂಪನಿಯು ಅತ್ಯಂತ ಇತ್ತೀಚಿನ ವಾರ್ಷಿಕ ಹಣಕಾಸು ತ:ಖ್ತೆಗಳಲ್ಲಿ ಇತ್ತೀಚಿನ ಅವಧಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ತನ್ನ ಸಮಗ್ರ ಆದಾಯಕ್ಕೆ ಸಮನ್ವಯಗೊಳಿಸುವಿಕೆ ತ:ಖ್ತೆಯನ್ನು ಸೇರ್ಪಡೆ ಮಾಡಬೇಕು. ಒಂದು ವೇಳೆ ಕಂಪನಿಯು ತನ್ನ ಹಿಂದಿನ ಜಿಎಎಪಿ ತತ್ವಗಳ ಅಡಿಯಲ್ಲಿ ನಗದು ಹರಿವುಗಳ ತ:ಖ್ತೆಯನ್ನು ಪ್ರಸ್ತುತಪಡಿಸಿದ್ದಲ್ಲಿ, ಅದು ನಗದು ಹರಿವುಗಳ ತ:ಖ್ತೆಗೆ ಭೌತಿಕ ಹೊಂದಾಣಿಕೆಗಳನ್ನೂ ಸಹ ವಿವರಿಸತಕ್ಕದ್ದು ಎಂಬುದಾಗಿ ಭಾರತೀಯ ಲೆಕ್ಕಪತ್ರ ಮಾನದಂಡ 101ರ ಕಂಡಿಕೆ 25 ನಿರ್ದಿಷ್ಟಪಡಿಸಿರುತ್ತದೆ.

29 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಬಹಿರಂಗಪಡಿಸುವಿಕೆಗಳನ್ನು ಲೆಕ್ಕಪರಿಶೋಧನೆಯು ಮಾಡಿದ ವಿಶ್ಲೇಷಣೆಯು ಕಂಡುಹಿಡಿದಿರುವುದು ಏನೆಂದರೆ (i) ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಪಿಟಿಸಿಎಲ್, ಕೆಆರ್ಇಡಿಎಲ್ ಮತ್ತು ಆರ್‌ಪಿಸಿಎಲ್) ತಮ್ಮಿಂದ ಮಾಡಲಾದ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆಯು ಹಣಕಾಸು ಸ್ಥಿತಿಯ ಮೇಲೆ ಪ್ರಭಾವ ಬೀರದ ಕಾರಣ ಸಮನ್ವಯ ತ:ಖ್ತೆಗಳನ್ನು ಸಿದ್ಧಪಡಿಸುವ ಅವಶ್ಯಕತೆ ಇರಲಿಲ್ಲ, (ii) ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಸಿಎನ್‌ಎನ್‌ಎಲ್, ಹೆಚ್‌ಜಿಎಮ್‌ಎಲ್, ಎಮ್‌ಸಿಎ, ಎಮ್‌ಎಸ್‌ಐಎಲ್ ಮತ್ತು ಪಿಸಿಕೆಎಲ್) ಮೊದಲ ಭಾರತೀಯ ಲೆಕ್ಕಪತ್ರ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾದ ಹಣಕಾಸು ತ:ಖ್ತೆಗಳು ಎಲ್ಲಾ ಮೂರು ಸಮನ್ವಯ ತ:ಖ್ತೆಗಳನ್ನು ಒಳಗೊಂಡಿರಲಿಲ್ಲ ಮತ್ತು (iii) 11 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ[82] ನಗದು

[82] ಬೆಸ್ಕಾಂ, ಬಿಆರ್‌ಎಡಿಸಿಎಲ್, ಸಿಬಿಐಸಿ–ತುಮಕೂರು, ಕೆಬಿಜೆಎನ್‌ಎಲ್, ಕೆಪಿಸಿಜಿಪಿಸಿಎಲ್, ಕೆಪಿಸಿಎಲ್, ಕೆಎಸ್‌ಬಿಸಿಎಲ್, ಕೆಎಸ್‌ಡಿಎಲ್, ಕೆಎಸ್‌ಐಐಡಿಸಿ, ಕೆಎಸ್‌ಎಮ್‌ಸಿಎಲ್ ಮತ್ತು ಮೆಸ್ಕಾಂ.

ಹರಿವುಗಳ ಮೇಲೆ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯ ಪ್ರಭಾವದ ಮೇಲಿನ ತ:ಖ್ತೆಯನ್ನು ಸೇರ್ಪಡೆ ಮಾಡಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು.

ಲಾಭ ಮತ್ತು ನಷ್ಟದ ತ:ಖ್ತೆಗೆ ತುಲನಾತ್ಮಕ ಅಂಕಿಗಳು, ಅದರ ಸ್ಥಾಪನೆಯ ನಂತರ ಮೊದಲ ಬಾರಿ ಸಿದ್ಧಪಡಿಸಿದ ಕಾರಣ ಲಭ್ಯವಿರುವುದಿಲ್ಲ ಎಂಬುದಾಗಿ. ಕೇವಲ ಸಿಎನ್ಎನ್ಎಲ್ ಬಹಿರಂಗಪಡಿಸಿದ್ದಿತು.

## 5.5 ಆಯ್ದ ಪ್ರಮುಖ ಕ್ಷೇತ್ರಗಳ ಮೇಲೆ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸುವಿಕೆಯ ಪ್ರಭಾವ

ಭಾರತೀಯ ಲೆಕ್ಕಪತ್ರ ಮಾನದಂಡಗಳ ವಿವಿಧ ಅನುವುಗಳ ಅನುಷ್ಠಾನವು ತೆರಿಗೆ ನಂತರದ ಲಾಭ (ಪಿಎಟಿ), ಆದಾಯಗಳು, ಒಟ್ಟು ಆಸ್ತಿಗಳು ಮತ್ತು ನಿವ್ವಳ ಮೌಲ್ಯಗಳ ಮೌಲ್ಯಮಾಪನದ ಮೇಲೆ ಪ್ರಭಾವ ಉಂಟುಮಾಡಬಹುದು. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯ ಸಮಯದಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಬಳಸಿದ ಆಯ್ಕೆಗಳ ಆಧಾರದ ಮೇರೆಗೆ ಮೌಲ್ಯಗಳು ಹೆಚ್ಚಬಹುದು ಅಥವಾ ಕಡಿಮೆ ಆಗಬಹುದು.

***ಕಂಡಿಕೆ 5.4.2***ರಲ್ಲಿ ಸೂಚಿಸಿರುವಂತೆ, ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆಗೊಂಡ ಕಾರಣ ತಮ್ಮ ಹಣಕಾಸು ಸ್ಥಿತಿಯ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲ ಎಂಬುದಾಗಿ ತಿಳಿಸಿರುತ್ತವೆ ಮತ್ತು ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಬಹಿರಂಗಪಡಿಸುವಿಕೆಯ ಅಗತ್ಯತೆಯನ್ನು ಅನುಪಾಲನೆ ಮಾಡುವಲ್ಲಿ ವಿಫಲಗೊಂಡಿದ್ದವು. ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯಲ್ಲಿ (ಟಿಪಿಎಲ್) ಭಾರತೀಯ ಲೆಕ್ಕಪತ್ರ ಮಾನದಂಡಕ್ಕೆ ಮಾಡಲಾದ ಪರಿವರ್ತನೆಯ ನಿವ್ವಳ ಪ್ರಭಾವವು ಈಕ್ವಿಟಿ ಹಾಗೂ ಒಟ್ಟು ಸಮಗ್ರ ಆದಾಯ ಎರಡರ ಮೇಲೂ "ಯಾವುದೂ ಇರುವುದಿಲ್ಲ" ಎಂಬುದಾಗಿ ತಿಳಿಸಿರುತ್ತದೆ

ಉಳಿದ 20 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮಾಡಿರುವ ಬಹಿರಂಗಪಡಿಸುವಿಕೆಗಳ ಲೆಕ್ಕಪರಿಶೋಧನೆಯ ವಿಶ್ಲೇಷಣೆಯು, ಏಳು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು[83] ಕಂಪನಿಯ ಹಣಕಾಸು ತ:ಖ್ತೆಗಳ ಮೇಲೆ ಭಾರತೀಯ ಲೆಕ್ಕವನ್ನಿಡುವಿಕೆಯ ಮಾನದಂಡಗಳಿಗೆ ಮಾಡಲಾದ ಪರಿವರ್ತನೆಯ ಪ್ರಭಾವದ ಬಗ್ಗೆ ಪ್ರತ್ಯೇಕವಾಗಿ ಬಹಿರಂಗಪಡಿಸುವಿಕೆಯನ್ನು ಮಾಡಿರುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿತು.

***ತೆರಿಗೆ ನಂತರದ ಲಾಭದ (ಪಿಎಟಿ) ಮೇಲಿನ ಪ್ರಭಾವ***

**5.5.1** ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡ ಕಾರಣ ತೆರಿಗೆ ನಂತರದ ಲಾಭದ (ಪಿಎಟಿ) ಮೇಲಿನ ಪ್ರಭಾವವು ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯಲ್ಲಿ (ಕೆಎಂಸಿಪಿಎಲ್: ₹ 0.03 ಲಕ್ಷ) ನಗಣ್ಯವಾಗಿತ್ತು ಮತ್ತು ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ಕೆಟಿಸಿಪಿಎಲ್ ಮತ್ತು ಮೆಸ್ಕಾಂ) ಯಾವುದೂ ಇರಲಿಲ್ಲ. ಉಳಿದ 17 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ **ಕೋಷ್ಟಕ ಸಂಖ್ಯೆ 5.3**ರಲ್ಲಿ ಕೊಟ್ಟಿರುವಂತೆ ₹ 9,614.05 ಕೋಟಿ ಮೊತ್ತದಷ್ಟು ತೆರಿಗೆ ನಂತರದ ಲಾಭದ (ಪಿಎಟಿ) ಇಳಿಮುಖದ ನಿವ್ವಳ ಪ್ರಭಾವವನ್ನು ವರದಿ ಮಾಡಿದ್ದವು.

[83] ಬೆಸ್ಕಾಂ, ಬಿಆರ್ಎಡಿಸಿಎಲ್, ಸಿಬಿಐಸಿ–ತುಮಕೂರು, ಎಫ್‌ಕೆಎಲ್, ಕೆಎಫ್‌ಸಿಎಸ್‌ಸಿಎಲ್, ಕೆಎಸ್‌ಐಐಡಿಸಿ ಮತ್ತು ಕೆಎಸ್‌ಎಮ್‌ಸಿಎಲ್.

**ಕೋಷ್ಟಕ ಸಂಖ್ಯೆ 5.3: ತೆರಿಗೆ ನಂತರದ ಲಾಭದ (ಪಿಎಟಿ) ಮೇಲೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆವಾರು ಪ್ರಭಾವವನ್ನು ತೋರಿಸುವ ತ:ಖ್ತೆ.**

| ಕ್ರಮ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ಹೆಸರು | ಪ್ರಭಾವ | ಮೊತ್ತ (₹ ಕೋಟಿಯಲ್ಲಿ) |
|---|---|---|---|
| 1 | ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ (ಬಿಆರ್‌ಎಡಿಸಿಎಲ್) | ತೆರಿಗೆ ನಂತರದ ಲಾಭದಲ್ಲಿ ಇಳಿಮುಖ | (19.57) |
| 2 | ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ನಿಯಮಿತ (ಸಿಬಿಐಸಿ ತುಮಕೂರು) | ತೆರಿಗೆ ನಂತರದ ಲಾಭದಲ್ಲಿ ಇಳಿಮುಖ | (0.02) |
| 3 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) | ತೆರಿಗೆ ನಂತರದ ಲಾಭದಲ್ಲಿ ಇಳಿಮುಖ | (2.17) |
| 4 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ (ಕೆಎಫ್‌ಸಿಎಸ್‌ಸಿಎಲ್ [84]) | ತೆರಿಗೆ ನಂತರದ ಲಾಭದಲ್ಲಿ ಇಳಿಮುಖ | (20.62) |
| 5 | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ (ಕೆಎಸ್‌ಎಮ್‌ಸಿಎಲ್) | ತೆರಿಗೆ ನಂತರದ ಲಾಭದಲ್ಲಿ ಇಳಿಮುಖ | (9,531.94) |
| 6 | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ) | ತೆರಿಗೆ ನಂತರದ ಲಾಭದಲ್ಲಿ ಇಳಿಮುಖ | (335.10) |
| 7 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) | ನಷ್ಟದಲ್ಲಿ ಹೆಚ್ಚಳ | 19.44 |
| 8 | ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್‌ಎಲ್) | ನಷ್ಟದಲ್ಲಿ ಹೆಚ್ಚಳ | 32.95 |
| 9 | ಕೆಪಿಸಿ ಅನಿಲ ಇಂಧನ ನಿಗಮ ನಿಯಮಿತ (ಕೆಪಿಸಿಜಿಪಿಸಿಎಲ್) | ನಷ್ಟದಲ್ಲಿ ಹೆಚ್ಚಳ | 0.01 |
| **ತೆರಿಗೆ ನಂತರದ ಲಾಭದಲ್ಲಿ ನಿವ್ವಳ ಇಳಿಕೆ** | | | **(9,961.82)** |
| 10 | ಕರ್ನಾಟಕ ಆಹಾರ ನಿಯಮಿತ (ಎಫ್‌ಕೆಎಲ್) | ತೆರಿಗೆ ನಂತರದ ಲಾಭದಲ್ಲಿ ಹೆಚ್ಚಳ | 0.08 |
| 11 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಫ್‌ಡಿಸಿಎಲ್) | ತೆರಿಗೆ ನಂತರದ ಲಾಭದಲ್ಲಿ ಹೆಚ್ಚಳ | 11.42 |
| 12 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) | ತೆರಿಗೆ ನಂತರದ ಲಾಭದಲ್ಲಿ ಹೆಚ್ಚಳ | 226.88 |
| 13 | ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) | ತೆರಿಗೆ ನಂತರದ ಲಾಭದಲ್ಲಿ ಹೆಚ್ಚಳ | 12.62 |
| 14 | ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ (ಕೆಎಸ್‌ಬಿಸಿಎಲ್) | ತೆರಿಗೆ ನಂತರದ ಲಾಭದಲ್ಲಿ ಹೆಚ್ಚಳ | 0.08 |
| 15 | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) | ತೆರಿಗೆ ನಂತರದ ಲಾಭದಲ್ಲಿ ಹೆಚ್ಚಳ | 14.93 |
| 16 | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) | ನಷ್ಟದಲ್ಲಿ ಇಳಿಮುಖ | (45.78) |
| 17 | ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕೆಎನ್‌ಎನ್‌ಎಲ್) | ನಷ್ಟದಲ್ಲಿ ಇಳಿಮುಖ | (35.98) |
| **ತೆರಿಗೆ ನಂತರದ ಲಾಭದಲ್ಲಿ ನಿವ್ವಳ ಹೆಚ್ಚಳ** | | | **347.77** |
| **ನಿವ್ವಳ ಪ್ರಭಾವ (ತೆರಿಗೆ ನಂತರದ ಲಾಭದಲ್ಲಿ ಇಳಿಮುಖ)** | | | **(9,614.05)** |

***ಮೂಲ: ಲೆಕ್ಕಪರಿಶೋಧನೆಯಲ್ಲಿ ಸಂಗ್ರಹಿಸಲಾಗಿರುವ ಮಾಹಿತಿ /ದತ್ತಾಂಶ***

ಐಜಿಎಎಪಿ ತತ್ವಗಳಿಂದ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಆದ ಪರಿವರ್ತನೆಯ ಗಮನಾರ್ಹ ಪ್ರಭಾವವನ್ನು ಕೆಎಸ್‌ಎಂಸಿಎಲ್ (₹ 9,531.94 ಕೋಟಿ ತೆರಿಗೆ ನಂತರದ ಲಾಭದಲ್ಲಿ ಇಳಿಮುಖ) ಮತ್ತು ಕೆಪಿಸಿಎಲ್ (₹ 226.88 ಕೋಟಿ ತೆರಿಗೆ ನಂತರದ ಲಾಭದಲ್ಲಿ ಹೆಚ್ಚಳ)ನಲ್ಲಿ ಕಾಣಲಾಯಿತು.

***ಲಾಭ ಅಥವಾ ನಷ್ಟದಲ್ಲಿ ಹೆಚ್ಚಳ / ಇಳಿಮುಖಕ್ಕೆ ಕೊಡುಗೆ ನೀಡುತ್ತಿರುವ ಅಂಶಗಳು***

**5.5.2** ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವ ಕಾರಣ ಉಂಟಾಗಿರುವ ಆದಾಯ, ಖರ್ಚು, ಆಸ್ತಿಗಳು ಮತ್ತು ಬಾಧ್ಯತೆಗಳ ವಿಭಿನ್ನ ಐಟಂಗಳ ಮೌಲ್ಯಮಾಪನದಲ್ಲಿನ ಬದಲಾವಣೆಗಳು ಕಂಪನಿಯೊಂದರ ತೆರಿಗೆ ನಂತರದ ಲಾಭದ ಮೇಲೆ ಭೌತಿಕವಾಗಿ ಪ್ರಭಾವ

[84] ಕೆಎಫ್‌ಸಿಎಸ್‌ಸಿಎಲ್ ನಿಂದ ಬಹಿರಂಗಪಡಿಸುವಿಕೆಯು ಅಸಮರ್ಪಕವಾಗಿದೆ ಮತ್ತು ಭಾರತೀಯ ಲೆಕ್ಕಪತ್ರ ಮಾನದಂಡ 101 ನಿಬಂಧನೆಗಳ ಅಸಮರ್ಪಕ ಅನುಸರಣೆಯಾಗಿದೆ ಎಂದು ಶಾಸನಬದ್ಧ ಲೆಕ್ಕಪರಿಶೋಧಕರು ಪ್ರತಿಕೂಲ ಅಭಿಪ್ರಾಯದಲ್ಲಿ ತಿಳಿಸಿರುತ್ತಾರೆ.

ಉಂಟುಮಾಡಬಹುದು. ಈ ಕೆಳಕಂಡ ಅಂಶಗಳು, ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸಾರ ತಯಾರಿಸಲಾದ ಹಣಕಾಸು ತ:ಖ್ತೆಗಳಲ್ಲಿ ನಿರ್ದಿಷ್ಟವಾಗಿ ಬಹಿರಂಗಪಡಿಸಿರುವುದರ ಮಟ್ಟಿಗೆ ಅಥವಾ, ತೆರಿಗೆನಂತರದ ಲಾಭದಲ್ಲಿ ಹೆಚ್ಚಳ/ಇಳಿಮುಖಕ್ಕೆ ಕೊಡುಗೆ ನೀಡಿದವು.

***ಪೂರ್ವಾವಧಿ ತಪ್ಪುಗಳು ಅಥವಾ ಲೋಪದೋಷಗಳು***

**5.5.3** ಭಾರತೀಯ ಲೆಕ್ಕಪತ್ರ ಮಾನದಂಡ 8ರ ಅಡಿಯಲ್ಲಿ ಅವಶ್ಯಕತೆ ಇರುವಂತೆ, ಹಿಂದಿನ ಅವಧಿಗಳಿಗೆ ಸಂಬಂಧಿಸಿದ ತಪ್ಪುಗಳು ಅಥವಾ ಲೋಪದೋಷಗಳು ಭೌತಿಕವಾಗಿದ್ದರೆ, ಅವುಗಳನ್ನು ಆಸ್ತಿಗಳು, ಬಾಧ್ಯತೆಗಳು ಮತ್ತು ಈಕ್ವಿಟಿಯ ಪ್ರಾರಂಭಿಕ ಶಿಲ್ಕುಗಳನ್ನು ಪ್ರಸ್ತುತಪಡಿಸಿರುವ ಅತ್ಯಂತ ಇತ್ತೀಚಿನ ಪೂರ್ವಾವಧಿಗಳಿಗೆ ಮರುಹೇಳಿಕೆ ಮಾಡುವ ಮೂಲಕ ಹೊಂದಾಣಿಕೆ ಮಾಡತಕ್ಕದ್ದು.

ಪೂರ್ವಾವಧಿಯ ತಪ್ಪುಗಳು ಮತ್ತು ಲೋಪದೋಷಗಳನ್ನು ಪರಿಗಣಿಸಿದ ಕಾರಣ ಈ ಕೆಳಕಂಡ ಬದಲಾವಣೆಗಳು ಸಂಭವಿಸಿದ್ದವು:

- ಕೆಎನ್ಎನ್ಎಲ್ ತನ್ನ ನಷ್ಟದಲ್ಲಿ ₹ 37.51 ಕೋಟಿ ಇಳಿಮುಖ ದಾಖಲಿಸಿತು.
- ಕೆಪಿಸಿಜಿಪಿಸಿಎಲ್ ನಷ್ಟದಲ್ಲಿ ₹ 0.01 ಕೋಟಿ ಹೆಚ್ಚಳ ದಾಖಲಿಸಿತು
- ಕೆಪಿಸಿಎಲ್ ಲಾಭದಲ್ಲಿ ₹ 3.83 ಕೋಟಿ ಹೆಚ್ಚಳ ದಾಖಲಿಸಿತು.
- ಕೆಆರ್ಐಡಿಎಲ್ ಲಾಭದಲ್ಲಿ ₹ 13.46 ಕೋಟಿ ನಿವ್ವಳ ಹೆಚ್ಚಳ ದಾಖಲಿಸಿತು.
- ಜೆಸ್ಕಾಂ ನಷ್ಟದಲ್ಲಿ ₹ 45.78 ಕೋಟಿ ಇಳಿಮುಖ ಸಾಧಿಸಿತು.
- ಸೆಸ್ಕ್ ತನ್ನ ಲಾಭದಲ್ಲಿ ₹ 0.96 ಕೋಟಿ ನಿವ್ವಳ ಇಳಿಮುಖ ಸಾಧಿಸಿತು.
- ಕೆಎಸ್‌ಬಿಸಿಎಲ್ ಲಾಭದಲ್ಲಿ ₹ 0.23 ಕೋಟಿ ಹೆಚ್ಚಳ ದಾಖಲಿಸಿತು.

***ಮುಂದೂಡಲಾದ ತೆರಿಗೆಗಳ ಪರಿಗಣನೆಯ ಕಾರಣ ಹೆಚ್ಚಳ/ಇಳಿಮುಖ***

**5.5.4** ಭಾರತೀಯ ಲೆಕ್ಕಪತ್ರ ಮಾನದಂಡ 12 (ಆದಾಯ ತೆರಿಗೆಗಳು) – ಇದು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಆಸ್ತಿ ಅಥವಾ ಜವಾಬ್ದಾರಿಯು ಹೊಂದಿರುವಂತಹ ಮೊತ್ತ ಮತ್ತು ಅದರ ತೆರಿಗೆ ಮೂಲದ ನಡುವಿನ ತಾತ್ಕಾಲಿಕ ವ್ಯತ್ಯಾಸದ ಲೆಕ್ಕವಿಡುವಿಕೆಯ ಕಡೆಗೆ ಗಮನ ಹರಿಸುತ್ತದೆ, ಅದೇ ಐಜಿಎಎಪಿ ತತ್ವಗಳ ಅಡಿಯಲ್ಲಿ ಮುಂದೂಡಲ್ಪಟ್ಟಿರುವ ತೆರಿಗೆಯ ಲೆಕ್ಕಾಚಾರವು ಅವಧಿಗೆ ತೆರಿಗೆ ವಿಧಿಸಬಹುದಾದ ಲಾಭ ಮತ್ತು ಲೆಕ್ಕಪತ್ರದ ಲಾಭದ ನಡುವಿನ ವ್ಯತ್ಯಾಸದ ಮೇಲೆ ಗಮನ ಹರಿಸುತ್ತದೆ.

ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸಾರ ಮುಂದೂಡಲ್ಪಟ್ಟಿರುವ ತೆರಿಗೆಯ ಪರಿಗಣನೆಯ ಕಾರಣ, ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು, ಅವೆಂದರೆ ಕೆಪಿಸಿಎಲ್ ಮತ್ತು ಕೆಆರ್ಐಡಿಎಲ್ ತಮ್ಮ ಲಾಭದಲ್ಲಿ ಕ್ರಮವಾಗಿ ₹ 3.41 ಕೋಟಿ ಮತ್ತು ₹ 1.24 ಕೋಟಿ ಹೆಚ್ಚಳವನ್ನು ದಾಖಲಿಸಿದವು.

***ಉದ್ಯೋಗದ ನಂತರದ ಪ್ರಯೋಜನಗಳ ಕಡೆಗೆ ಮೌಲ್ಯಮಾಪನದಲ್ಲಿ ಬದಲಾವಣೆ***

**5.5.5** ಐಜಿಎಎಪಿ ತತ್ವಗಳ ಅಡಿಯಲ್ಲಿ, ವಾಸ್ತವಿಕ ಲಾಭ/ನಷ್ಟವೂ ಸೇರಿದಂತೆ ಸಂಪೂರ್ಣ ವೆಚ್ಚವು ವರ್ಷದ ಲಾಭ ಅಥವಾ ನಷ್ಟದ ಭಾಗವಾಗಿ ರೂಪುಗೊಳ್ಳುತ್ತದೆ, ಅದೇ ಭಾರತೀಯ ಲೆಕ್ಕಪತ್ರ ಮಾನದಂಡ 19ರ ಅಡಿಯಲ್ಲಿ, ಅಂತಹ ನಿರ್ಧಾರಣೆಗಳನ್ನು ಇತರ ಸಮಗ್ರ ಆದಾಯದ ಅಡಿಯಲ್ಲಿ ಪರಿಗಣಿಸಲಾಗುವುದು. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಡಿಯಲ್ಲಿ ಉದ್ಯೋಗದ ನಂತರದ ಪ್ರಯೋಜನಗಳ ಕಡೆಗೆ ಜವಾಬ್ದಾರಿಗಳ ಮೌಲ್ಯಮಾಪನದಲ್ಲಿ ಉಂಟಾಗಿರುವ ಬದಲಾವಣೆಗಳ ಕಾರಣ

ಈ ಕೆಳಕಂಡ ಬದಲಾವಣೆಗಳು ಸಂಭವಿಸಿದ್ದವು:

- ಕೆಪಿಸಿಎಲ್ ವಾಸ್ತವಿಕ ನಷ್ಟದ ಪುನರ್–ನಿರ್ಧಾರಣೆ ಹಾಗೂ ಹಿಂದಿನ ಸೇವಾ ವೆಚ್ಚಗಳನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ಹೊಂದಾಣಿಕೆ ಮಾಡಲಾದ (ರಿವರ್ಸಲ್) ಕಾರಣ ತನ್ನ ಲಾಭವನ್ನು ₹ 228.72 ಕೋಟಿಯಿಂದ ಹೆಚ್ಚಿಸಿಕೊಂಡಿತು.

- ಕೆಆರ್ಐಡಿಎಲ್ ತನ್ನ ಲಾಭದಲ್ಲಿ ₹ 2.08 ಕೋಟಿ ನಿವ್ವಳ ಇಳಿಮುಖ ದಾಖಲಿಸಿತು.

- ಸೆಸ್ಕ್ ತನ್ನ ಲಾಭದಲ್ಲಿ ₹ 1.21 ಕೋಟಿ ಮೊತ್ತದಷ್ಟು ಇಳಿಮುಖ ದಾಖಲಿಸಿತು.

***ಇತರ ಅಂಶಗಳ ಕಾರಣ ಹೆಚ್ಚಳ/ ಇಳಿಮುಖ***

**5.5.6** ಮೇಲ್ಕಂಡವುಗಳ ಜೊತೆಗೆ, ಮೂರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಲಾಭದ ಹೆಚ್ಚಳ/ಇಳಿಮುಖಕ್ಕೆ ಕೊಡುಗೆ ನೀಡಿರುವ ಇತರ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ;

- ಕೆಪಿಸಿಎಲ್ ಸವಕಳಿಯ ಪ್ರಮಾಣಾನುಗುಣವಾದ ಹೊಂದಾಣಿಕೆಯ ಕಾರಣ ತನ್ನ ಲಾಭದಲ್ಲಿ ₹ 5.04 ಕೋಟಿ ಹೆಚ್ಚಳ ಮತ್ತು ಆಡಳಿತಾತ್ಮಕ ಮೇಲುವೆಚ್ಚಗಳನ್ನು ಬಂಡವಾಳ ವೆಚ್ಚಗಳಿಂದ ತೆಗೆದುಹಾಕಿದ ಕಾರಣದಿಂದಾಗಿ ತನ್ನ ಲಾಭದಲ್ಲಿ ₹ 14.34 ಕೋಟಿ ಮೊತ್ತದಷ್ಟು ಇಳಿಮುಖ ದಾಖಲಿಸಿತು.

- ಕೆಎಸ್ಡಿಎಲ್ ಲಾಭ ಮತ್ತು ನಷ್ಟದ ಖಾತೆಯ ಮೂಲಕ ಲೆಕ್ಕಕ್ಕೆ ತೆಗೆದುಕೊಂಡಿರದ ಆಸ್ತಿಗಳಲ್ಲಿ ಮೌಲ್ಯಮಾಪನ ಗಳಿಕೆಯ ಮೇಲಿನ ಪ್ರಭಾವದಿಂದಾಗಿ ತನ್ನ ಲಾಭದಲ್ಲಿ ₹ 14.93 ಕೋಟಿ ಮೊತ್ತದಷ್ಟು ಹೆಚ್ಚಳ ಸಾಧಿಸಿತು.

- ಕೆಬಿಜೆಎನ್ಎಲ್ ಸರ್ಕಾರಕ್ಕೆ ವರ್ಗಾವಣೆಗಾಗಿ ಹೊಂದಿರುವ ಆಸ್ತಿಗಳ ಮೇಲೆ ವೆಚ್ಚಗಳ ಪರಿಗಣನೆಯನ್ನು ಹಿಂಪಡೆದುಕೊಂಡಿದ್ದರಿಂದ ಕಾರಣ ಇತರ ವೆಚ್ಚಗಳಲ್ಲಿ ಹೆಚ್ಚಳ ಉಂಟಾದ ಕಾರಣ ಮತ್ತು ನಿಗದಿತ ಆಸ್ತಿಗಳಿಗೆ ಅನುದಾನಗಳ ಪರಿಗಣನೆಯನ್ನು ಹಿಂಪಡೆದುಕೊಂಡಿದ್ದ ಕಾರಣ ಸವಕಳಿ ವೆಚ್ಚದಲ್ಲಿ ಹೆಚ್ಚಳ ಉಂಟಾಗಿ ತನ್ನ ನಷ್ಟದಲ್ಲಿ ₹ 32.95 ಕೋಟಿ ಮೊತ್ತದಷ್ಟು ಹೆಚ್ಚಳ ದಾಖಲಿಸಿತು.

***ವರಮಾನದ ಮೇಲೆ ಪ್ರಭಾವ***

**5.5.7** ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಪ್ರಥಮ ಬಾರಿಗೆ ಅಳವಡಿಸಿಕೊಂಡಾಗ ಅನ್ವಯವಾಗುತ್ತಿದ್ದ ಅಂದಿನ[85] ಭಾರತೀಯ ಲೆಕ್ಕಪತ್ರ ಮಾನದಂಡ 18 (ಆದಾಯ)ದ ಅಡಿಯಲ್ಲಿ 'ಆದಾಯ'ವು ಕಂಪನಿಯ ಸಾಮಾನ್ಯ ಸಂದರ್ಭದಲ್ಲಿ ನಡೆಸುವ ಚಟುವಟಿಕೆಗಳಲ್ಲಿ ಉದ್ಭವವಾಗುವ ಆರ್ಥಿಕ ಪ್ರಯೋಜನಗಳ ಒಟ್ಟು ಒಳಹರಿವು, ಆಗಿರುತ್ತದೆ ಈಕ್ವಿಟಿಯನ್ನು ಕೊಳ್ಳುವವರ ಕೊಡುಗೆಗಳಿಗೆ ಸಂಬಂಧಿಸಿದ ಹೆಚ್ಚಳಗಳನ್ನು ಹೊರತುಪಡಿಸಿ ಇದು ಈಕ್ವಿಟಿಯ ಹೆಚ್ಚಳವನ್ನು ಉಂಟುಮಾಡುತ್ತದೆ. ಐಜಿಎಎಪಿ ತತ್ವಗಳ ಅನುಸಾರ (ಎಎಸ್ 9 – ಆದಾಯದ ಪರಿಗಣನೆ), ಆದಾಯವು ಕಂಪನಿಯ ಸಾಮಾನ್ಯ ಸಂದರ್ಭದಲ್ಲಿ ನಡೆಸುವ ಚಟುವಟಿಕೆಗಳಲ್ಲಿ ಉತ್ಪನ್ನಗಳ ಮಾರಾಟದಿಂದ, ಸೇವೆಗಳನ್ನು ಒದಗಿಸುವುದರಿಂದ ಮತ್ತು ಬಡ್ಡಿ, ರಾಜಧನಗಳು ಮತ್ತು ಲಾಭಾಂಶಗಳನ್ನು ನೀಡುವ ಕಂಪನಿಯ ಇತರ ಸಂಪನ್ಮೂಲಗಳ ಬಳಕೆಯಿಂದ ಉದ್ಭವಿಸುವ ಒಟ್ಟು ನಗದು ಒಳಹರಿವುಗಳು, ಸ್ವೀಕರಿಸಬೇಕಾಗಿರುವವುಗಳು ಅಥವಾ ಇತರ ಪರಿಗಣನೆಗಳು ಆಗಿರುತ್ತವೆ.

---

[85] ಭಾರತೀಯ ಲೆಕ್ಕಪತ್ರ ಮಾನದಂಡ 18 – ವರಮಾನವನ್ನು ಭಾರತೀಯ ಲೆಕ್ಕವನ್ನಿಡುವಿಕೆಯ ಮಾನದಂಡ 115– ವರಮಾನ ಮತ್ತು ಆದಾಯ ಪದಗಳನ್ನು ಪ್ರತ್ಯೇಕವಾಗಿ ವಿವರಿಸಲಾಗಿರುವ ಕಡೆಗಳಲ್ಲಿ ಗ್ರಾಹಕರುಗಳಿಂದ ಗುತ್ತಿಗೆಯಿಂದ ವರಮಾನದಿಂದ ಮಾರ್ಪಾಡು ಮಾಡಲಾಗಿರುವುದು.

ಬಹಿರಂಗಪಡಿಸುವಿಕೆಗಳನ್ನು ಲೆಕ್ಕಪರಿಶೋಧನೆಯು ವಿಶ್ಲೇಷಣೆ ಮಾಡಲಾಗಿ, ಕೇವಲ ಐದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಭಾರತೀಯ ಲೆಕ್ಕವನ್ನಿಡುವಿಕೆ ಮಾನದಂಡಗಳನ್ನು ಅಳವಡಿಸಿಕೊಳ್ಳುವ ಸಮಯದಲ್ಲಿ ಆದಾಯಗಳಿಗೆ ಹೊಂದಾಣಿಕೆಗಳನ್ನು ಮಾಡಿದ್ದವು, ಇವುಗಳ ಪೈಕಿ ಕೇವಲ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಪಿಸಿಎಲ್) ತನ್ನ ಆದಾಯದಲ್ಲಿ ಗಮನಾರ್ಹ ಇಳಿಮುಖವನ್ನು (₹ 134.60 ಕೋಟಿ) ವರದಿ ಮಾಡಿದ್ದಿತು, ಉಳಿದ ನಾಲ್ಕು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಈ ಕೆಳಗಿನ **ಕೋಷ್ಟಕ ಸಂಖ್ಯೆ 5.4**ರಲ್ಲಿ ಸೂಚಿಸಿರುವಂತೆ ₹ 59.46 ಕೋಟಿ ಮೊತ್ತದಷ್ಟು ಆದಾಯದ ಹೆಚ್ಚಳವನ್ನು ವರದಿ ಮಾಡಿದ್ದವು ಎಂಬುದನ್ನು ತೋರಿಸಿಕೊಟ್ಟಿತು.

**ಕೋಷ್ಟಕ ಸಂಖ್ಯೆ 5.4: ರಾಜ್ಯ ಸಾರ್ವಜನಿಕ ವಲಯ ಉದ್ದಿಮೆವಾರು ಆದಾಯದ ಮೇಲಿನ ಪ್ರಭಾವವನ್ನು ತೋರಿಸುವ ತಃಖ್ತೆ**

| ಕ್ರಮ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ಹೆಸರು | ಪರಿಣಾಮ | ಮೊತ್ತ (ಕೋಟಿಗಳಲ್ಲಿ) |
|---|---|---|---|
| 1 | ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ನಿಯಮಿತ (ಸಿಬಿಐಸಿ ತುಮಕೂರು) | ಆದಾಯದಲ್ಲಿ ಹೆಚ್ಚಳ | 0.01 |
| 2 | ಕರ್ನಾಟಕ ಆಹಾರ ನಿಯಮಿತ (ಎಫ್‌ಕೆಎಲ್) | | 0.24 |
| 3 | ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕೆಎನ್‌ಎನ್‌ಎಲ್) | | 0.13 |
| 4 | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ) | | 59.08 |
| | | | **59.46** |
| 5 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) | ಆದಾಯದಲ್ಲಿ ಇಳಿಮುಖ | (134.60) |
| | **ಆದಾಯದಲ್ಲಿ ನಿವ್ವಳ ಇಳಿಮುಖ** | | **(75.14)** |

*ಮೂಲ: ಲೆಕ್ಕಪರಿಶೋಧನೆಯಲ್ಲಿ ಸಂಗ್ರಹಿಸಿರುವ ಮಾಹಿತಿ/ ದತ್ತಾಂಶ*

### *ಆದಾಯದಲ್ಲಿ ಹೆಚ್ಚಳ/ಇಳಿಮುಖಕ್ಕೆ ಕೊಡುಗೆ ನೀಡಿರುವ ಅಂಶಗಳು*

**5.5.8** ಯಾವುದೇ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಭಾರತೀಯ ಲೆಕ್ಕಪತ್ರ ಮಾನದಂಡ 101ರ ಅಡಿಯಲ್ಲಿ ಅಗತ್ಯತೆಯಿರುವಂತೆ, ಭಾರತೀಯ ಲೆಕ್ಕಪತ್ರ ಮಾನದಂಡಕ್ಕೆ ಪರಿವರ್ತನೆ ಹೊಂದಿರುವುದರಿಂದ ವರಮಾನದ ಮೇಲೆ ಪ್ರಭಾವವನ್ನು ವಿವರಿಸಿ ಬಹಿರಂಗಪಡಿಸಿರಲಿಲ್ಲ.

### *ಒಟ್ಟು ಆಸ್ತಿಗಳ ಮೌಲ್ಯದ ಮೇಲೆ ಪ್ರಭಾವ*

**5.5.9** ಭಾರತೀಯ ಲೆಕ್ಕಪತ್ರ ಮಾನದಂಡ 101ರ ಅನುಬಂಧ ಡಿ, ಇದರ ಕಂಡಿಕೆ ಡಿ5/ಡಿ6 ಭಾರತೀಯ ಲೆಕ್ಕಪತ್ರ ಮಾನದಂಡ 16 – ಆಸ್ತಿ, ಸ್ಥಾವರ ಮತ್ತು ಉಪಕರಣ (ಪಿಪಿಇ) ಭಾರತೀಯ ಲೆಕ್ಕಪತ್ರ ಮಾನದಂಡ 38 – ಅಮೂರ್ತ ಸ್ವತ್ತುಗಳು, ಭಾರತೀಯ ಲೆಕ್ಕಪತ್ರ ಮಾನದಂಡ 32 – ಹಣಕಾಸು ಸಾಧನಗಳು: ಮಂಡನೆ, ಭಾರತೀಯ ಲೆಕ್ಕಪತ್ರ ಮಾನದಂಡ 109 – ಹಣಕಾಸು ಸಾಧನಗಳು ಮತ್ತು ಭಾರತೀಯ ಲೆಕ್ಕಪತ್ರ ಮಾನದಂಡ 40 – ಹೂಡಿಕೆ ಆಸ್ತಿಗಳು, ಇವುಗಳ ಮೌಲ್ಯಕರಿಸುವುದಕ್ಕೆ ಆಯ್ಕೆಯ ವಿನಾಯಿತಿಯನ್ನು ನೀಡುತ್ತವೆ. ಐಜಿಎಎಪಿ ತತ್ವಗಳಿಗೆ ಹೋಲಿಸಿದಂತೆ ನಿರ್ದಿಷ್ಟಪಡಿಸಲಾಗಿರುವ ಲೆಕ್ಕವನ್ನಿಡುವಿಕೆಯ ವಿಧಾನಗಳಲ್ಲಿನ ವಿಭಿನ್ನತೆಯ ಕಾರಣ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಾರ್ಯಗತಗೊಳಿಸಿದಂದು ಆಸ್ತಿಗಳ ಒಟ್ಟು ಮೌಲ್ಯದ ಮೇಲೆ ಪ್ರಭಾವ ಉಂಟಾಗಿರುವುದು.

ಲೆಕ್ಕಪರಿಶೋಧನೆಯ ವಿಶ್ಲೇಷಣೆಯು ಕಂಡುಹಿಡಿದಿರುವುದು ಏನೆಂದರೆ 14 ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು, ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆಯ ನಂತರ ಬಾಧ್ಯತೆಗಳಲ್ಲಿನ ಅನುರೂಪದ ಹೆಚ್ಚಳ/ಇಳಿಮುಖದೊಂದಿಗೆ ಆಸ್ತಿಗಳ ಒಟ್ಟು ಮೌಲ್ಯದಲ್ಲಿ ಹೆಚ್ಚಳ/ಇಳಿಮುಖ ದಾಖಲಿಸಿರುವುದು ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ (ಕೆಎಮ್‌ಸಿಪಿಎಲ್ – ₹ 0.02 ಲಕ್ಷ ಇಳಿಮುಖ ಮತ್ತು ಕೆಎಸ್‌ಬಿಸಿಎಲ್ – ₹ 0.11 ಲಕ್ಷ ಹೆಚ್ಚಳ) ಪ್ರಭಾವವು ನಗಣ್ಯವೆಂದು ಕಂಡುಬಂದಿತು ಮತ್ತು ಆರು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು

ಈ ಕೆಳಗಿನ **ಕೋಷ್ಟಕ ಸಂಖ್ಯೆ 5.5**ರಲ್ಲಿ ತಿಳಿಸಿರುವಂತೆ ಆಸ್ತಿಗಳ ಮೌಲ್ಯದಲ್ಲಿ ಅನುಕ್ರಮವಾಗಿ ಹೆಚ್ಚಳ (₹ 2,728.23 ಕೋಟಿ) ಮತ್ತು ಇಳಿಮುಖ (₹ 921.07 ಕೋಟಿ) ದಾಖಲಿಸಿವೆ:

**ಕೋಷ್ಟಕ ಸಂಖ್ಯೆ 5.5: ಆಸ್ತಿಗಳು ಮತ್ತು ಬಾಧ್ಯತೆಗಳ ಒಟ್ಟು ಮೌಲ್ಯದ ಮೇಲೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆವಾರು ಪ್ರಭಾವವನ್ನು ತೋರಿಸುವ ತ:ಖ್ತೆ**

| ಕ್ರಮ ಸಂಖ್ಯೆ | ರಾಜ್ಯ ಸಾರ್ವಜನಿಕ ವಲಯ ಉದ್ದಿಮೆ ಹೆಸರು | ಪ್ರಭಾವ | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| 1 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ (ಕೆಎಫ್‌ಸಿಎಸ್‌ಸಿಎಲ್[86]) | ಆಸ್ತಿಗಳ ಮೌಲ್ಯದಲ್ಲಿ ಇಳಿಮುಖ | (472.42) |
| 2 | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ (ಕೆಎಸ್‌ಎಮ್‌ಸಿಎಲ್) | | (423.29) |
| 3 | ಕರ್ನಾಟಕ ಆಹಾರ ನಿಯಮಿತ (ಎಫ್‌ಕೆಎಲ್) | | (16.33) |
| 4 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) | | (7.09) |
| 5 | ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) | | (1.92) |
| 6 | ಕರ್ನಾಟಕ ಟ್ರಸ್ಟೀ ಕಂಪನಿ ಪ್ರೈವೇಟ್ ಲಿಮಿಟೆಡ್ (ಕೆಟಿಸಿಪಿಎಲ್) | | (0.02) |
| **ನಿವ್ವಳ ಇಳಿಮುಖ (ಎ)** | | | **(921.07)** |
| 7 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಫ್‌ಡಿಸಿಎಲ್) | ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳ | 14.73 |
| 8 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ) | | 46.70 |
| 9 | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ) | | 285.92 |
| 10 | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) | | 314.85 |
| 11 | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) | | 905.38 |
| 12 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) | | 1160.65 |
| **ನಿವ್ವಳ ಹೆಚ್ಚಳ (ಬಿ)** | | | **2,728.23** |
| **ನಿವ್ವಳ ಪ್ರಭಾವ (ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳ) (ಬಿ–ಎ)** | | | **1,807.16** |

*ಮೂಲ: ಲೆಕ್ಕಪರಿಶೋಧನೆಯಲಿ ಸಂಗ್ರಹಿಸಿರುವ ಮಾಹಿತಿ / ದತ್ತಾಂಶ*

ಆಸ್ತಿಗಳು ಮತ್ತು ಜವಾಬ್ದಾರಿಗಳ ಮೌಲ್ಯದಲ್ಲಿ ಗರಿಷ್ಠ ಹೆಚ್ಚಳವನ್ನು ಕೆಪಿಸಿಎಲ್‌ನಲ್ಲಿ ₹ 1,160.65 ಕೋಟಿ ಮತ್ತು ಆಸ್ತಿಗಳು ಮತ್ತು ಜವಾಬ್ದಾರಿಗಳ ಮೌಲ್ಯದಲ್ಲಿ ಗಮನಾರ್ಹ ಇಳಿಮುಖವನ್ನು ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಅವೆಂದರೆ ಕೆಎಫ್‌ಸಿಎಸ್‌ಸಿಎಲ್ (₹ 472.42 ಕೋಟಿ) ಮತ್ತು ಕೆಎಸ್‌ಎಂಸಿಎಲ್ (₹ 423.29 ಕೋಟಿ)ಗಳಲ್ಲಿ ಗಮನಿಸಲಾಯಿತು.

## 5.6 ಒಟ್ಟು ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳ/ಇಳಿಮುಖಕ್ಕೆ ಕೊಡುಗೆ ನೀಡುತ್ತಿರುವ ಅಂಶಗಳು

ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ಮಾಡಿರುವ ಬಹಿರಂಗಪಡಿಸುವಿಕೆಗಳ ಲೆಕ್ಕಪರಿಶೋಧನಾ ಪರಿಶೀಲನೆಯು, ಸರ್ಕಾರಿ ಅನುದಾನಗಳ ಪರಿಗಣನೆ ಮುಂದೂಡಲ್ಪಟ್ಟಿರುವ ತೆರಿಗೆಗಳು, ಪಿಪಿಇ, ನ್ಯಾಯಸಮ್ಮತ ಮೌಲ್ಯದಲ್ಲಿ ಹೂಡಿಕೆಗಳಿಗೆ ಸಂಬಂಧಿತ ಕಾರ್ಯನೀತಿಯಲ್ಲಿನ ಬದಲಾವಣೆಗೆ ಸಂಬಂಧಿಸಿದ ಅಂಶಗಳು ಮತ್ತು ವಿವಿಧ ಇತರ ಕಾರಣಗಳು ಕೆಳಗೆ ಚರ್ಚಿಸಿರುವಂತೆ ಒಟ್ಟು ಆಸ್ತಿಗಳ ಮೌಲ್ಯದ ಹೆಚ್ಚಳ/ಇಳಿಮುಖಗಳಿಗೆ ಕಾಣಿಕೆಯನ್ನು ನೀಡಿರುತ್ತವೆ ಎಂಬುದನ್ನು ತೋರಿಸಿಕೊಟ್ಟಿತು:

***ಸರ್ಕಾರಿ ಅನುದಾನಗಳ ಪರಿಗಣನೆ ಕಾರ್ಯನೀತಿಯಲ್ಲಿ ಬದಲಾವಣೆ***

**5.6.1** ಭಾರತೀಯ ಲೆಕ್ಕಪತ್ರ ಮಾನದಂಡ 20ರ ಅನುಸಾರ, ಸರ್ಕಾರಿ ಅನುದಾನದ ಒಟ್ಟು

[86] ಕೆಎಫ್‌ಸಿಎಸ್‌ಸಿಎಲ್ ನಿಂದ ಬಹಿರಂಗಪಡಿಸುವಿಕೆಯು ಅಸಮರ್ಪಕವಾಗಿದೆ ಮತ್ತು ಭಾರತೀಯ ಲೆಕ್ಕಪತ್ರ ಮಾನದಂಡ 101 ನಿಬಂಧನೆಗಳ ಅಸಮರ್ಪಕ ಅನುಸರಣೆಯಾಗಿದೆ ಎಂದು ಶಾಸನಬದ್ಧ ಲೆಕ್ಕಪರಿಶೋಧಕರು ಪ್ರತಿಕೂಲ ಅಭಿಪ್ರಾಯದಲ್ಲಿ ತಿಳಿಸಿರುತ್ತಾರೆ.

ಲೆಕ್ಕವನ್ನಿಡುವಿಕೆಯನ್ನು ಅನುಸರಿಸತಕ್ಕದ್ದು ಮತ್ತು ನಿವ್ವಳ ಲೆಕ್ಕವನ್ನಿಡುವಿಕೆಯನ್ನು ನಿಷೇಧಿಸತಕ್ಕದ್ದು. ಭಾರತೀಯ ಲೆಕ್ಕಪತ್ರ ಮಾನದಂಡವನ್ನು ಅಳವಡಿಸಿಕೊಂಡಿದ್ದರ ಕಾರಣ ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಪಿಸಿಎಲ್) ಆಸ್ತಿ, ಸ್ಥಾವರ, ಮತ್ತು ಉಪಕರಣದ (ಪ್ರಗತಿಯಲ್ಲಿರುವ ಬಂಡವಾಳದ ಕೆಲಸದ ಮೌಲ್ಯವನ್ನು ಒಳಗೊಂಡಂತೆ) ಮೌಲ್ಯವನ್ನು ₹ 1,159.59 ಕೋಟಿ ಮೊತ್ತದಷ್ಟು ಹೊಂದಾಣಿಕೆ ಮಾಡಿರುವುದು, ಈ ಪೈಕಿ ₹ 7.65 ಕೋಟಿಯನ್ನು ಪರಿವರ್ತನಾ ದಿನಾಂಕದಂದು ಸರ್ಕಾರಿ ಅನುದಾನದ ಕಡೆಗೆ ಹೊಂದಾಣಿಕೆ ಮಾಡಿರುವುದು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿರುವುದು.

***ಮುಂದೂಡಲ್ಪಟ್ಟಿರುವ ತೆರಿಗೆ ಕಾರ್ಯನೀತಿಯಲ್ಲಿನ ಬದಲಾವಣೆ***

**5.6.2** ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಡಿಯಲ್ಲಿ, ಕಂಪನಿಯೊಂದು ಮುಂದೂಡಲ್ಪಟ್ಟಿರುವ ತೆರಿಗೆಯ ಪರಿಗಣನೆಗಾಗಿ ಆಸ್ತಿ-ಜವಾಬ್ದಾರಿ ತ:ಖ್ತೆ ವಿಧಾನವನ್ನು ಅನುಸರಿಸತಕ್ಕದ್ದು, ಅದೇ ಐಜಿಎಎಪಿ ತತ್ವಗಳು ಮುಂದೂಡಲ್ಪಟ್ಟಿರುವ ತೆರಿಗೆಗಳ ಪರಿಗಣನೆಗಾಗಿ ಆದಾಯ ತ:ಖ್ತೆಯ ವಿಧಾನವನ್ನು ಕಡ್ಡಾಯಗೊಳಿಸಿರುತ್ತದೆ. ತೆರಿಗೆ ಆಧಾರ ಮತ್ತು ಲೆಕ್ಕಪತ್ರ ಪುಸ್ತಕಗಳ ಆಧಾರದ ನಡುವಿನ ವ್ಯತ್ಯಾಸಗಳನ್ನು ಆಸ್ತಿ, ಸ್ಥಾವರ, ಮತ್ತು ಉಪಕರಣ ಮತ್ತು ಉದ್ಯೋಗಿಗಳ ಪ್ರಯೋಜನಗಳನ್ನು ಖರೀದಿಸಲಾಗಿರುವ ಆಸ್ತಿಗಳ ಪ್ರಮಾಣಾನುಗುಣವಾದಂತಹ ಸವಕಳಿಯ ಕಾರಣ ಪರಿಗಣಿಸಲಾಗಿರುವುದು. ಇದರ ಕಾರಣದಿಂದ:

- ಜೆಸ್ಕಾಂ ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳಲ್ಲಿ (ನಿವ್ವಳ) ₹ 8.99 ಕೋಟಿ ಇಳಿಮುಖವನ್ನು ದಾಖಲಿಸಿದ್ದಿತು.
- ಕೆಆರ್‌ಐಡಿಎಲ್ ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳಲ್ಲಿ (ನಿವ್ವಳ) ₹ 1.92 ಕೋಟಿ ಇಳಿಮುಖವನ್ನು ದಾಖಲಿಸಿದ್ದಿತು.

***ಆಸ್ತಿ, ಸ್ಥಾವರ, ಮತ್ತು ಉಪಕರಣ ಪರಿಗಣನೆಯ ಕಾರ್ಯನೀತಿಯಲ್ಲಿ ಬದಲಾವಣೆ***

**5.6.3** ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಕೆಪಿಸಿಎಲ್‌ನಲ್ಲಿ, ಪರಿವರ್ತನೆ ಆದ ಮೇಲೆ, ಭೂಮಿಯ ಭಾವಿಸಲ್ಪಟ್ಟಿರುವ ವೆಚ್ಚವನ್ನು ನಿರುಪಾದಿತ ಭೂಮಿಯನ್ನು ನ್ಯಾಯಸಮ್ಮತ ಮೌಲ್ಯದಲ್ಲಿ ಮೌಲ್ಯಮಾಪನ ಮಾಡಿದ್ದ ಕಾರಣ ₹ 1,193.88 ಕೋಟಿ ಎಂಬುದಾಗಿ ಪುನರ್-ತಿಳಿಸಲಾಗಿದ್ದಿತು.
- ಜೆಸ್ಕಾಂ ಭೂಮಿಯ ಸಂಪೂರ್ಣ ವರ್ಗವನ್ನು ಮರು-ಮೌಲ್ಯಮಾಪನ ಮಾಡಿತ್ತು ಮತ್ತು ಸ್ಥಳೀಯ ಮಾರುಕಟ್ಟೆ ಸಮೀಕ್ಷೆಗಳು ಮತ್ತು ಸ್ವತಂತ್ರ ಮೌಲ್ಯಮಾಪಕರ ಮೂಲಕ ರಾಜ್ಯ ಸರ್ಕಾರ, ಪೌರಸಂಸ್ಥೆ ಮಿತಿಗಳಿಂದ, ಸಂಬಂಧಿತ ಭೂಮಿಗಳು ಇರುವ ಪೌರಸಂಸ್ಥೆ ಮಿತಿಗಳಿಂದ, ಪಟ್ಟಣಗಳು/ನಗರಗಳಿಗೆ ಇರುವ ಹತ್ತಿರ/ಸಂಪರ್ಕ ಸೌಲಭ್ಯ ಮತ್ತು ಸಕ್ರಿಯ ಮಾರುಕಟ್ಟೆಗಳಲ್ಲಿ ಸೂಕ್ತವಾಗಿ ಪರಿಶೀಲಿಸಿರುವಂತೆ ಅಂತಹುದೇ ರೀತಿಯ ಆಸ್ತಿಗಳ ಲಭ್ಯತೆಯನ್ನು ಆಧಾರಿಸಿ ನಿಗದಿಪಡಿಸಿರುವ ದರಗಳನ್ನು ಪರಿಗಣಿಸುವ ಮೂಲಕ ಮಾರುಕಟ್ಟೆ ವಿಚಾರಣೆಗಳು/ಮೌಲ್ಯಮಾಪನ ಆಧಾರಿಸಿದ ನ್ಯಾಯಸಮ್ಮತ ಮೌಲ್ಯವನ್ನು ಅಳವಡಿಸಿಕೊಳ್ಳುವ ಮೂಲಕ ₹ 914.37 ಕೋಟಿ ಮೊತ್ತದಷ್ಟು ಮರುಮೌಲ್ಯಮಾಪನ ಮೀಸಲನ್ನು ಜಮೆ ಮಾಡಿರುವುದು.
- ಕೆಎಫ್‌ಡಿಸಿಎಲ್ – (ಅರಣ್ಯ ಅಭಿವೃದ್ಧಿ) ಆಸ್ತಿ, ಸ್ಥಾವರ, ಮತ್ತು ಉಪಕರಣ (ಪಿಪಿಇ) ಮೌಲ್ಯದಲ್ಲಿ ₹ 3.33 ಕೋಟಿ ಇಳಿಮುಖಗೊಂಡಿರುದನ್ನು ವರದಿ ಮಾಡಿದ್ದಿತು.
- ಮೆಸ್ಕಾಂ ಆಸ್ತಿ, ಸ್ಥಾವರ, ಮತ್ತು ಉಪಕರಣ (ಪಿಪಿಇ) ಮೌಲ್ಯದಲ್ಲಿ ₹ 46.70 ಕೋಟಿ ಹೆಚ್ಚಳವನ್ನು ವರದಿ ಮಾಡಿತು.

***ನ್ಯಾಯಸಮ್ಮತ ಮೌಲ್ಯದಲ್ಲಿ ಹೂಡಿಕೆಯ ಪರಿಗಣನೆ***

**5.6.4** ಐಜಿಎಎಪಿ ತತ್ವಗಳ ಅಡಿಯಲ್ಲಿ ಹೂಡಿಕೆಯನ್ನು ಮೂಲ ಬೆಲೆಯಲ್ಲಿ ಪರಿಗಣಿಸಲಾಗುವುದಾದಲ್ಲಿ ಅದನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸಾರ ನ್ಯಾಯಸಮ್ಮತ ಮೌಲ್ಯದಲ್ಲಿ ಪರಿಗಣಿಸಲಾಗುವುದು. ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡ ಕಾರಣ, ಒಂದು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಯು (ಕೆಎಫ್‌ಡಿಸಿಎಲ್ – ಅರಣ್ಯ ಅಭಿವೃದ್ಧಿ) ಹೂಡಿಕೆಯ ಆಸ್ತಿಯಲ್ಲಿ ₹ 0.66 ಕೋಟಿ ಮೊತ್ತದಷ್ಟು ಹೆಚ್ಚಳ ದಾಖಲಿಸಿತು.

***ಇತರ ಅಂಶಗಳ ಕಾರಣ ಹೆಚ್ಚಳ/ಇಳಿಮುಖ***

**5.6.5** ಒಟ್ಟು ಆಸ್ತಿಗಳ ಮೌಲ್ಯದಲ್ಲಿನ ಬದಲಾವಣೆಯ ಇತರ ಕಾರಣಗಳು ಈ ಕೆಳಗಿನಂತೆ ಇದ್ದವು:

- ಮರುವರ್ಗೀಕರಣದ ಕಾರಣದಿಂದ ಕೆಎಫ್‌ಡಿಸಿಎಲ್ – (ಅರಣ್ಯ ಅಭಿವೃದ್ಧಿ) ಜೈವಿಕ ಆಸ್ತಿಗಳಲ್ಲಿ ₹ 16.30 ಕೋಟಿ ಹೆಚ್ಚಳ ದಾಖಲಿಸಿದ್ದಿತು. ಅಲ್ಲದೆಯೇ, ಅದು ಮಾರಾಟಕ್ಕಾಗಿ ಹೊಂದಿದ್ದ ಚಾಲ್ತಿಯೇತರ ಆಸ್ತಿಗಳಲ್ಲಿ ನ್ಯಾಯಸಮ್ಮತ ಮೌಲ್ಯಮಾಪನ ಮಾಡಿದ ಕಾರಣ ₹ 1.35 ಕೋಟಿ ಮೊತ್ತದಷ್ಟು ಹೆಚ್ಚಳ ದಾಖಲಿಸಿದ್ದಿತು. ಅದು ತನ್ನ ಹೂಡಿಕೆಗಳಲ್ಲಿ ₹ 0.26 ಕೋಟಿ ಇಳಿಮುಖವನ್ನೂ ಸಹ ದಾಖಲಿಸಿದ್ದಿತು.

- ಕೆಆರ್‌ಐಡಿಎಲ್ ತನ್ನ ಹೂಡಿಕೆ ಆಸ್ತಿಯಲ್ಲಿ ₹ 10.73 ಕೋಟಿ ಹೆಚ್ಚಳ ಮತ್ತು ಮರುವರ್ಗೀಕರಣದ ಕಾರಣದಿಂದಾಗಿ ಆಸ್ತಿ, ಸ್ಥಾವರ ಮತ್ತು ಉಪಕರಣಗಳಲ್ಲಿ ಪ್ರಮಾಣಾನುಗುಣವಾದಂತಹ ಇಳಿಮುಖವನ್ನು ದಾಖಲಿಸಿತು.

- ಕೆಎಸ್‌ಡಿಎಲ್ ಮೌಲ್ಯಮಾಪನ ಲಾಭ, ಮರುಪಾವತಿಸಲಾಗದ ಬಡ್ಡಿರಹಿತ ಸಾಲವನ್ನು ಇತರ ಮೀಸಲುಗಳಿಗೆ ತೆಗೆದುಕೊಂಡಿದ್ದರಿಂದ ಮತ್ತು ಮುಂದೂಡಲ್ಪಟ್ಟ ತೆರಿಗೆಗಳ ಕಾರಣದಿಂದ ಹಿಂದಿನ ಅವಧಿಯ ಮರುಸ್ಥಾಪನೆಯ ಕಾರಣ ಉಂಟಾದ ಪ್ರಭಾವದಿಂದಾಗಿ ₹ 299.92 ಕೋಟಿ ಮೊತ್ತದಷ್ಟು ಹೆಚ್ಚಳ ದಾಖಲಿಸಿತು. ಅದು ಲಾಭ ಮತ್ತು ನಷ್ಟ ತ:ಖ್ತೆಯ ಮೂಲಕ ಸಾಗಿರದ ಆಸ್ತಿಗಳು ಮತ್ತು ಜವಾಬ್ದಾರಿಗಳಲ್ಲಿ ಮೌಲ್ಯದ ಗಳಿಕೆಯ ಮೇಲಿನ ಪ್ರಭಾವದಿಂದ ₹ 14.93 ಕೋಟಿ ಮೊತ್ತದ ಹೆಚ್ಚಳವನ್ನೂ ಸಹ ದಾಖಲಿಸಿತು

- ಕೆಟಿಸಿಪಿಎಲ್ ಇತರ ಚಾಲ್ತಿ ಆಸ್ತಿಗಳಲ್ಲಿ ₹ 0.02 ಕೋಟಿ ಮೊತ್ತದಷ್ಟು ಇಳಿಮುಖ ದಾಖಲಿಸಿದ್ದಿತು.

## 5.7 ನಿವ್ವಳ ಮೌಲ್ಯದ ಮೇಲಿನ ಪ್ರಭಾವ

ನಿವ್ವಳ ಮೌಲ್ಯವು ಕಂಪನಿಯೊಂದರ ಒಟ್ಟಾರೆ ಆಸ್ತಿಗಳು ಮತ್ತು ಒಟ್ಟಾರೆ ಜವಾಬ್ದಾರಿಗಳ ಮೌಲ್ಯಗಳ ನಡುವಿನ ವ್ಯತ್ಯಾಸದ ಮೊತ್ತವಾಗಿರುತ್ತದೆ. ಪಾವತಿಸಲ್ಪಟ್ಟಿರುವ ಷೇರು ಬಂಡವಾಳದ ಒಟ್ಟು ಮೌಲ್ಯ ನಿರುಪಾದಿತ ಮೀಸಲಿರಿಸಿರುವಿಕೆಗಳು ಮತ್ತು ಭದ್ರತೆಗಳ ಪ್ರೀಮಿಯಂ ಮೊತ್ತಗಳ ಒಟ್ಟು ಮೊತ್ತದಿಂದ ಕ್ರೋಡೀಕೃತ ನಷ್ಟಗಳ ಒಟ್ಟು ಮೌಲ್ಯ, ಮುಂದೂಡಲ್ಪಟ್ಟಿರುವ ವೆಚ್ಚಗಳು ಮತ್ತು ಲೆಕ್ಕಪತ್ರ ಪುಸ್ತಕಗಳಿಂದ ತೆಗೆದುಹಾಕಿರದ ಇತರೆ ವೆಚ್ಚಗಳನ್ನು ಕಳೆದನಂತರ ಲೆಕ್ಕಹಾಕಲಾಗುವುದು. ನಿರುಪಾದಿತ ಮೀಸಲಿರಿಸಿರುವಿಕೆಗಳು ಆಸ್ತಿಗಳ ಮರುಮೌಲ್ಯಮಾಪನದಿಂದ ಸೃಷ್ಟಿಸಲಾದ ಮೀಸಲಿರಿಸಿರುವಿಕೆಗಳು ಸವಕಳಿ ಹಿಂಪಡೆದುಕೊಂಡಿರುವಿಕೆಗಳನ್ನು ಮತ್ತು ವಿಲೀನಗಳನ್ನು ಒಳಗೊಂಡಿರುವುದಿಲ್ಲ.

ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯು, ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆಯಾದ ದಿನಾಂಕದಂದು ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸಾರ ಪ್ರಾರಂಭಿಕ ಭಾರತೀಯ ಲೆಕ್ಕಪತ್ರ ಮಾನದಂಡಗಳ ಆಸ್ತಿ–ಜವಾಬ್ದಾರಿ ತ:ಖ್ತೆಯ ಸಿದ್ಧಪಡಿಸುವಿಕೆಯನ್ನು ಕಡ್ಡಾಯಗೊಳಿಸುತ್ತದೆ. ಒಂದು ಕಂಪನಿಯು ತನ್ನ ಪ್ರಾರಂಭಿಕ ಆಸ್ತಿ–ಜವಾಬ್ದಾರಿ ತ:ಖ್ತೆಯ

ತಯಾರಿಕೆಯಲ್ಲಿ ಬಳಸುವ ಲೆಕ್ಕವನ್ನಿಡುವಿಕೆಯ ಕಾರ್ಯನೀತಿಗಳು ಐಜಿಎಎಪಿ ತತ್ವಗಳನ್ನು ಬಳಸಿ ಅದೇ ದಿನಾಂಕಕ್ಕಾಗಿ ಉಪಯೋಗಿಸಿದ ಕಾರ್ಯನೀತಿಗಳಿಗಿಂತ ವಿಭಿನ್ನವಾಗಿರಬಹುದು.

ಯಾವುದೇ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು, ತಾವು ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಪರಿವರ್ತನೆ ಹೊಂದಿದ ಕಾರಣ ನಿವ್ವಳ ಮೌಲ್ಯದ ಮೇಲೆ ಉಂಟಾದ ಪ್ರಭಾವ ಮತ್ತು ತಮ್ಮ ಮೊದಲ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸಾರ ತಯಾರಿಸಲಾದ ಹಣಕಾಸು ತ:ಖ್ತೆಗಳಲ್ಲಿ ಅಂತಹ ಪ್ರಭಾವಕ್ಕೆ ಜವಾಬ್ದಾರಿಯುತವಾಗಿರುವ ಅಂಶಗಳನ್ನು ವಿಶ್ಲೇಷಿಸಿರಲಿಲ್ಲ ಮತ್ತು ಬಹಿರಂಗಪಡಿಸಿರಲಿಲ್ಲ. ಆದಕಾರಣ, ಸಂಬಂಧಿತ ಲೆಕ್ಕಪತ್ರದ ಅವಧಿಗಳಿಗೆ ನಿವ್ವಳ ಮೌಲ್ಯದ ಮೇಲೆ ಪರಿವರ್ತನೆಯ ಪ್ರಭಾವದ ಬಗ್ಗೆ ಟೀಕೆಟಿಪ್ಪಣಿಗಳನ್ನು ಮಾಡಲಾಗಲಿಲ್ಲ.

## 5.8 ಹೊಸ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಬಹಿರಂಗಪಡಿಸುವಿಕೆ ಅಗತ್ಯತೆಗಳನ್ನು ಅನುಪಾಲನೆ ಮಾಡದಿರುವಿಕೆ

ಭಾರತೀಯ ಲೆಕ್ಕಪತ್ರ ಮಾನದಂಡ 101ರ ಕಂಡಿಕೆ 28 ರಂತೆ, ಮೊದಲ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡವನ್ನು ಅಳವಡಿಸಿಕೊಂಡಾಗ, ಕಂಪನಿಯೊಂದು ತನ್ನ ಮೊದಲ ಭಾರತೀಯ ಲೆಕ್ಕಪತ್ರ ಮಾನದಂಡದ ಅನುಸಾರ ತಯಾರಿಸಿದ ಹಣಕಾಸು ತ:ಖ್ತೆಗಳಲ್ಲಿ ಹಿಂದಿನ ವರ್ಷಗಳಿಗೆ ಅದು ಹಣಕಾಸು ತ:ಖ್ತೆಗಳನ್ನು ಪ್ರಸ್ತುತಪಡಿಸದಿದ್ದಲ್ಲಿ, ವಾಸ್ತವಿಕ ಸ್ಥಿತಿಯನ್ನು ಬಹಿರಂಗಪಡಿಸಬೇಕೆಂಬುದಾಗಿ ಅಗತ್ಯತೆಯನ್ನು ಹೊಂದಿರುತ್ತದೆ.

ಮೇ 2016 ಮತ್ತು ಫೆಬ್ರವರಿ 2017ರ ನಡುವೆ ಅಸ್ತಿತ್ವಕ್ಕೆ ಬಂದಂತಹ (ಭಾರತೀಯ ಲೆಕ್ಕಪತ್ರ ಮಾನದಂಡಗಳ ನಿಯಮಗಳು, 2015ರ ಅಧಿಸೂಚನೆಯ ನಂತರ) ನಾಲ್ಕು ಹೊಸ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಡಿಎಸ್‌ಸಿಎಲ್, ವಿಜೆಎನ್‌ಎಲ್, ಬಿಎಸ್‌ಸಿಎಲ್-ಬೆಳಗಾವಿ ಮತ್ತು ಟಿಎಸ್‌ಸಿಎಲ್) ಪೈಕಿ, ಎರಡು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಡಿಎಸ್‌ಸಿಎಲ್ ಮತ್ತು ಬಿಎಸ್‌ಸಿಎಲ್-ಬೆಳಗಾವಿ) ತುಲನಾತ್ಮಕ ಅಂಕಿಅಂಶಗಳನ್ನು ಪ್ರಸ್ತುತಪಡಿಸದಿರುವುದಕ್ಕೆ ಸಂಬಂಧಿಸಿದಂತೆ ವಾಸ್ತವಿಕ ಸ್ಥಿತಿಯನ್ನು ಬಹಿರಂಗಪಡಿಸಿರಲಿಲ್ಲ. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅನುಸಾರ ಇದೇ ಮೊದಲ ಬಾರಿಗೆ ಮೊದಲ ಹಣಕಾಸು ತ:ಖ್ತೆಗಳನ್ನು ಸಿದ್ಧಪಡಿಸಲಾಗಿದೆ ಎಂಬ ಸತ್ಯಾಂಶದ ಕಾರಣದಿಂದಾಗಿ ಈ ರೀತಿ ಮಾಡಲಾಗಲಿಲ್ಲ ಎಂಬುದಾಗಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು ತಿಳಿಸಿದವು.

# ಅಧ್ಯಾಯ – VI

## ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

# ಅಧ್ಯಾಯ - VI

## ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

ಈ ಅಧ್ಯಾಯವು ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳೊಂದಿಗೆ ವ್ಯವಹರಿಸುತ್ತದೆ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯಾಚರಣೆಗಳಲ್ಲಿ ಪೂರ್ವಭಾವಿಯಾಗಿ ಯೋಜಿಸುವಿಕೆ, ಗುತ್ತಿಗೆ ನಿರ್ವಹಣೆ ಮತ್ತು ಇತರ ಚಟುವಟಿಕೆಗಳಲ್ಲಿನ ಕೊರತೆಗಳನ್ನು ಎತ್ತಿತೋರಿಸುವ ಲೆಕ್ಕಪರಿಶೋಧನೆಯ ಪ್ರಮುಖ ಅಂಶಗಳನ್ನು ಈ ಅಧ್ಯಾಯದಲ್ಲಿ ಸೇರ್ಪಡೆ ಮಾಡಲಾಗಿದೆ.

## ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ

## 6.1 ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್)ದಲ್ಲಿನ ಖರೀದಿ ಚಟುವಟಿಕೆಗಳು

### 6.1.1 ಪರಿಚಯ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ಕರ್ನಾಟಕದಲ್ಲಿ ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳನ್ನು ಉತ್ತೇಜಿಸುವ ಏಕೈಕ ಉದ್ದೇಶದಿಂದ 1976 ರಲ್ಲಿ ಸ್ಥಾಪಿಸಲಾಯಿತು. IT ಕೈಗಾರಿಕೆಗಳಿಗೆ ಮೂಲಸೌಕರ್ಯ, ಜನಸಾಮಾನ್ಯರಿಗೆ IT ಶಿಕ್ಷಣ ಮತ್ತು ಇ–ಆಡಳಿತಕ್ಕಾಗಿ ಅತ್ಯಾಧುನಿಕ ಉತ್ಪನ್ನಗಳು ಮತ್ತು ಸೇವೆಯನ್ನು ಒದಗಿಸಲು ನಿಗಮವು ಕಡ್ಡಾಯವಾಗಿದೆ. ಕಿಯೋನಿಕ್ಸ್‌ನ IT ಪರಿಹಾರಗಳು ERP ಪರಿಹಾರಗಳು, ವೆಬ್ ಪೋರ್ಟಲ್‌ಗಳು, ಸಾಫ್ಟ್‌ವೇರ್ ಅಭಿವೃದ್ಧಿ, IT ಸಲಹಾ, IT ತರಬೇತಿ ಮತ್ತು ನೆಟ್‌ವರ್ಕಿಂಗ್ ಕ್ಷೇತ್ರಗಳನ್ನು ವ್ಯಾಪಿಸಿದೆ. ಕಿಯೋನಿಕ್ಸ್ ಬದಲಾಗುತ್ತಿರುವ ತಂತ್ರಜ್ಞಾನದೊಂದಿಗೆ ವೇಗವನ್ನು ಉಳಿಸಿಕೊಳ್ಳಲು ಗ್ರಾಹಕರಿಗೆ ಅತ್ಯಾಧುನಿಕ ತಂತ್ರಜ್ಞಾನದ ಪರಿಹಾರಗಳನ್ನು ಒದಗಿಸಲು ಪ್ರಯತ್ನಿಸುತ್ತದೆ. ಖರೀದಿಸುವ ಸಂಸ್ಥೆಗಳ (PEಗಳು) ಅಗತ್ಯತೆಗಳನ್ನು ಪೂರೈಸಲು ಕಿಯೋನಿಕ್ಸ್ ತನ್ನ ಪಟ್ಟಿಯಲ್ಲಿರುವ ವ್ಯಾಪಾರ ಸಹವರ್ತಿಗಳ (BA) ಮೂಲಕ ಉಪಕರಣಗಳನ್ನು ಸಂಗ್ರಹಿಸುವ ಪ್ರಕ್ರಿಯೆ, PEಗಳಿಗೆ ಅಗತ್ಯವಿರುವಂತೆ ವಿತರಣಾ ಸ್ಥಳಗಳಲ್ಲಿ ಪೂರೈಕೆ/ಸ್ಥಾಪನೆಯನ್ನು ಖಾತ್ರಿಪಡಿಸುವುದು ಮತ್ತು ಬಿಲ್‌ಗಳ ಪರಿಶೀಲನೆ ಮತ್ತು BAಗಳಿಗೆ ಪಾವತಿಗಳನ್ನು ಬಿಡುಗಡೆ ಮಾಡಿರುವುದನ್ನು ಕೆಳಗಿನ ರೇಖಾಚಿತ್ರ ಸಂಖ್ಯೆ.6.1.1 ರಲ್ಲಿ ತೋರಿಸಲಾಗಿದೆ.

**ರೇಖಾಚಿತ್ರ ಸಂಖ್ಯೆ. 6.1.1: ಕಿಯೋನಿಕ್ಸ್‌ನಲ್ಲಿ ಖರೀದಿ ಪ್ರಕ್ರಿಯೆಯನ್ನು ತೋರಿಸುವ ಫ್ಲೋಚಾರ್ಟ್**



### 6.1.2 ಸಾಂಸ್ಥಿಕ ರಚನೆ

ಕಿಯೋನಿಕ್ಸ್ ನ ಸಾಂಸ್ಥಿಕ ರಚನೆಯನ್ನು ಈ ಕೆಳಗೆ ನೀಡಲಾಗಿದೆ:

**ರೇಖಾಚಿತ್ರ ಸಂಖ್ಯೆ 6.1.2: ಕಿಯೋನಿಕ್ಸ್ ನ ಸಾಂಸ್ಥಿಕ ರಚನೆ**




### 6.1.3 ಲೆಕ್ಕಪರಿಶೋಧನೆಯ ಉದ್ದೇಶ

ಸರ್ಕಾರಿ ಇಲಾಖೆಗಳು ಮತ್ತು ಏಜೆನ್ಸಿಗಳ (ಖರೀದಿವುವ ಸಂಸ್ಥೆಗಳು ಅಥವಾ ಕಇಗಳು) ಕಿಯೋನಿಕ್ಸ್ ಮೂಲಕ ಉಪಕರಣಗಳ ಖರೀದಿಯು ಪಾರದರ್ಶಕವಾಗಿದೆಯೇ ಮತ್ತು ನಿಗದಿತ ಕಾರ್ಯವಿಧಾನಗಳಿಗೆ ಅನುಸಾರವಾಗಿದೆಯೇ ಎಂಬುದನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಯನ್ನು ತೆಗೆದುಕೊಳ್ಳಲಾಗಿದೆ.

### 6.1.4 ಲೆಕ್ಕಪರಿಶೋಧನೆಯ ಮಾನದಂಡಗಳ ಮೂಲಗಳು

ಈ ಲೆಕ್ಕಪರಿಶೋಧನೆಯ ಮಾನದಂಡಗಳು ಸಾರ್ವಜನಿಕ ಸಂಗ್ರಹಣೆಯಲ್ಲಿ ಕರ್ನಾಟಕ ಪಾರದರ್ಶಕತೆ ಕಾಯಿದೆ[87] (KTPP ಕಾಯಿದೆ) ಮತ್ತು ನಿಯಮಗಳು, ಕರ್ನಾಟಕ ಹಣಕಾಸು ಸಂಹಿತೆ (KFC), ಕಾಲಕಾಲಕ್ಕೆ ಹೊರಡಿಸಲಾದ ಕರ್ನಾಟಕ ಸರ್ಕಾರದ ಆದೇಶಗಳು/ ಸುತ್ತೋಲೆಗಳು ಮತ್ತು ಮಾರ್ಗಸೂಚಿಗಳನ್ನು ಒಳಗೊಂಡಿರುತ್ತದೆ.

### 6.1.5 ಲೆಕ್ಕಪರಿಶೋಧನೆಯ ವ್ಯಾಪ್ತಿ

ಈ ಲೆಕ್ಕಪರಿಶೋಧನೆಯನ್ನು ಮಾರ್ಚ್ ಮತ್ತು ಡಿಸೆಂಬರ್ 2023 ರ ನಡುವೆ ನಡೆಸಲಾಯಿತು ಮತ್ತು 2018–19 ರಿಂದ 2022–23 ರವರೆಗಿನ ಅವಧಿಯ ದಾಖಲೆಗಳ ಪರಿಶೀಲನೆಯನ್ನು ಕೈಗೊಳ್ಳಲಾಯಿತು. ಲೆಕ್ಕಪರಿಶೋನೆಯ ವ್ಯಾಪ್ತಿಯನ್ನು ಕಿಯೋನಿಕ್ಸ್ ನಿಂದ ಸಲಕರಣೆಗಳ ಪೂರೈಕೆಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಇಲಾಖೆಗಳು/ಸಂಸ್ಥೆಗಳಿಗೆ ಕಿಯೋನಿಕ್ಸ್ ನಿಂದ ಮಾನವಶಕ್ತಿಯ ಪೂರೈಕೆಯು ಲೆಕ್ಕಪರಿಶೋಧನೆಯ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು. ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯ ಪ್ರಕಾರ, 2018–19 ರಿಂದ 2022–23 ರ ಅವಧಿಯಲ್ಲಿ ವಿವಿಧ ಸರ್ಕಾರಿ ಇಲಾಖೆಗಳು

[87] KTPP ಕಾಯಿದೆಯ ಸೆಕ್ಷನ್ 2(ಡಿ) ಅಡಿಯಲ್ಲಿ, ಖರೀದಿಸುವ ಸಂಸ್ಥೆ' ಎಂದರೆ ಯಾವುದೇ ಸರ್ಕಾರಿ ಇಲಾಖೆ, ರಾಜ್ಯ ಸರ್ಕಾರದ ಉದ್ದಿಮೆ, ಸ್ಥಳೀಯ ಪ್ರಾಧಿಕಾರ ಅಥವಾ ಬೋರ್ಡ್, ಯಾವುದೇ ಕಾನೂನಿನಿಂದ ಅಥವಾ ಅಡಿಯಲ್ಲಿ ಸ್ಥಾಪಿಸಲಾದ ಮತ್ತು ಸರ್ಕಾರದ ಮಾಲೀಕತ್ವ ಅಥವಾ ನಿಯಂತ್ರಣಕ್ಕೊಳಪಡುವ ಸಂಸ್ಥೆ ಅಥವಾ ನಿಗಮ ಮತ್ತು ಸರ್ಕಾರದಿಂದ ನಿರ್ದಿಷ್ಟಪಡಿಸಲ್ಪಟ್ಟಂತೆ ಅದರ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಇತರ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರ.

ಮತ್ತು ಇತರ ಸಂಸ್ಥೆಗಳಿಗೆ ₹ 1,544.50 ಕೋಟಿ ಮೌಲ್ಯದ ಉಪಕರಣಗಳ ಪೂರೈಕೆಯನ್ನು ಕಿಯೋನಿಕ್ಸ್ ಅನುವುಗೊಳಿಸಿದೆ. ಇವುಗಳಲ್ಲಿ, ವಿವರವಾದ ಪರಿಶೀಲನೆಗಾಗಿ ಶ್ರೇಣೀಕೃತ ಯಾದೃಚ್ಛಿಕ[88] ಮಾದರಿ ಆಧಾರದ ಮೇಲೆ ಈ ಕೆಳಗಿನ ಆರು ಇಲಾಖೆಗಳು/ಸಂಸ್ಥೆಗಳಿಗೆ ಕಿಯೋನಿಕ್ಸ್ ನಿಂದ ಕಾರ್ಯಗತಗೊಳಿಸಿದ ಆಯ್ದ ವಹಿವಾಟುಗಳನ್ನು ಪರಿಶೋಧನೆ ಮಾಡಲಾಯಿತು:

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ);
2. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ಎಂ.ಡಬ್ಲ್ಯೂ.ಡಿ);
3. ಬುಡಕಟ್ಟು ಕಲ್ಯಾಣ ಇಲಾಖೆ (ಟಿ.ಡಬ್ಲ್ಯೂ.ಡಿ);
4. ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ (ಕೆಟಿಡಿಸಿಎಲ್ );
5. ತಾಂತ್ರಿಕ ಶಿಕ್ಷಣ ಇಲಾಖೆ (ಡಿ.ಟಿ.ಇ); ಮತ್ತು
6. ಅರಣ್ಯ ಇಲಾಖೆ.

ಕಿಯೋನಿಕ್ಸ್ 2018–2019ರ ಖರೀದಿ ಆದೇಶಗಳಿಗೆ (PO ಗಳು) ಸಂಬಂಧಿಸಿದ ದತ್ತಾಂಶವನ್ನು ಒದಗಿಸದ ಕಾರಣ, ಲೆಕ್ಕಪರಿಶೋಧನೆಯನ್ನು ಪರೀಕ್ಷೆಗಾಗಿ ಆಯ್ಕೆಮಾಡಿದ ಇಲಾಖೆಗಳ 2019–2023ಕ್ಕೆ ಸಂಬಂಧಿಸಿದ 347 ಖರೀದಿ ಆರ್ಡರ್‌ಗಳನ್ನು (POs) 14 ರೀತಿಯ ಉಪಕರಣಗಳಿಗೆ[89] (ಮೇಲಿನ ₹ 240.98 ಕೋಟಿಗಳಿಗೆ) ನಡೆಸಲಾಯಿತು. ವಿವರಗಳನ್ನು ***ಅನುಬಂಧ – 18***ರಲ್ಲಿ ನೀಡಲಾಗಿದೆ:

### 6.1.6 ಲೆಕ್ಕಪರಿಶೋಧನೆಯ ವಿಧಾನ

ಆಯ್ದ PEಗಳಿಗೆ ಮಾದರಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದಂತೆ ಕಿಯೋನಿಕ್ಸ್ ಒದಗಿಸಿದ ದಾಖಲೆಗಳನ್ನು ಲೆಕ್ಕಪರಿಶೋನೆಯಲ್ಲಿ ಪರಿಶೀಲಿಸಲಾಯಿತು. ಟೆಂಡರ್ ಸೂತ್ರೀಕರಣಕ್ಕೆ ಸಂಬಂಧಿಸಿದ ದಾಖಲೆಗಳು, ವಿವಿಧ ಸಲಕರಣೆಗಳಿಗೆ ಪೂರೈಕೆದಾರರ (ವ್ಯಾಪಾರ ಸಹವರ್ತಿಗಳು (BAs)/ಕಿಯೋನಿಕ್ಸನ ಮಾರಾಟಗಾರರು) ಗುರುತಿಸುವಿಕೆಗೆ ಸಂಬಂಧಿಸಿದ ದಾಖಲೆಗಳನ್ನು ಸಹ ಪರಿಶೀಲಿಸಲಾಗಿದೆ. PEಗಳಿಗೆ ಸಲಕರಣೆಗಳ ಪೂರೈಕೆ ಬೆಲೆಯನ್ನು OEMಗಳು ಮತ್ತು ಇತರ ಸರ್ಕಾರಿ/ಖಾಸಗಿ ಪೂರೈಕೆದಾರರೊಂದಿಗೆ ಅಡ್ಡಪರಿಶೀಲನೆ ಮಾಡಲಾಗಿದೆ. ಮಾದರಿ ಪ್ರಕರಣಗಳಲ್ಲಿ ಸಲಕರಣೆಗಳ ವಿತರಣೆ ಮತ್ತು ಸ್ಥಾಪನೆಯನ್ನು ಲೆಕ್ಕಪರಿಶೋಧನೆಯಿಂದ ಭೌತಿಕವಾಗಿ ಪರಿಶೀಲಿಸಲಾಗಿದೆ ಮತ್ತು BAಗಳು ಮತ್ತು ಮೂರನೇ ವ್ಯಕ್ತಿಯಿಂದ ಒದಗಿಸಲಾದ ಮಾರಾಟದ ನಂತರದ ಸೇವೆಗಳ ಮಾಹಿತಿಯನ್ನು ಸಹ ಪರಿಶೀಲಿಸಲಾಗಿದೆ. ಇದಲ್ಲದೆ, PEಗಳಿಂದ ಪಡೆದ ಪಾವತಿಗಳು ಮತ್ತು BAಗಳಿಗೆ ಮಾಡಿದ ಪಾವತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಯಿತು.

---

[88] ಸಂಗ್ರಹಿಸುವ ಇಲಾಖೆಗಳು/ಸಂಸ್ಥೆಗಳನ್ನು ಎರಡು ವರ್ಗಗಳಾಗಿ ವರ್ಗೀಕರಿಸಲಾಗಿದೆ ಅಂದರೆ, ಒಟ್ಟು ಸಂಗ್ರಹಣೆ ಮೌಲ್ಯ ₹20 ಕೋಟಿಗಿಂತ ಹೆಚ್ಚು ಮತ್ತು ಅದಕ್ಕಿಂತ ಕಡಿಮೆ. ₹ 20 ಕೋಟಿ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತಕ್ಕೆ ಸಂಗ್ರಹಿಸಿದ 13 ಇಲಾಖೆ/ಸಂಸ್ಥೆಗಳ ಪೈಕಿ ನಾಲ್ಕನ್ನು ಆಯ್ಕೆ ಮಾಡಲಾಯಿತು. ಉಳಿದಗುಂಪಿನಿಂದ ಇಬ್ಬರು PEಗಳನ್ನು ಆಯ್ಕೆ ಮಾಡಲಾಯಿತು.

[89] 1. ಆಡಿಯೋ ಸಿಸ್ಟಂಗಳು, 2. ಸಿಸಿಟಿವಿ, 3. ಕಂಪ್ಯೂಟರ್ ಮತ್ತು ಪರಿಕರಗಳು, 4. ಕಂಪ್ಯೂಟರ್ ಲ್ಯಾಬ್ ಸೆಟಪ್, 5. ಡ್ರೋನ್ ಕ್ಯಾಮೆರಾ, 6. ಹೈ ಮಾಸ್ಟ್ ಲೈಟ್, 7. ಲ್ಯಾಪ್‌ಟಾಪ್‌ಗಳು, 8. ಕಲಿಕೆ ಟಿವಿ, 9. ಪ್ರಿಂಟರ್ ಮತ್ತು ಪರಿಕರಗಳು, 10. ಆರ್‌ಒ ವಾಟರ್ ಪ್ಯೂರಿಫೈಯರ್‌ಗಳು, 11. ಸ್ಮಾರ್ಟ್ ಕ್ಲಾಸ್ ಯೋಜನೆ/ಪರಿಹಾರ, 12. ಬೀದಿ ದೀಪಗಳು, 13. ಟ್ಯಾಬ್‌ಗಳು ಮತ್ತು 14. ಒಟ್ಟು ನಿಲ್ದಾಣಗಳು.

ಮೇಲಿನ ಪರೀಕ್ಷೆಯ ಆಧಾರದ ಮೇಲೆ, ಲೆಕ್ಕಪರಿಶೋಧನೆಯು ಕಿಯೋನಿಕ್ಸನ ಕಾರ್ಯನಿರ್ವಹಣೆಯಲ್ಲಿ ನಿರ್ದಿಷ್ಟವಾಗಿ BA ನಿಯುಕ್ತಿಪಟ್ಟಿ, ಸರಕುಗಳ ಪೂರೈಕೆ ಮತ್ತು ವಿತರಣೆ, ಮೂರನೇ ವ್ಯಕ್ತಿಯ ಪರಿಶೀಲನೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ *ಕಂಡಿಕೆ 6.1.7.1 ರಿಂದ 6.1.7.6*ರಲ್ಲಿ ಚರ್ಚಿಸಲಾಗಿದೆ.

30 ಮೇ 2023 ರಂದು ಪ್ರವೇಶ ಸಮ್ಮೇಳನವನ್ನು ನಡೆಸಲಾಯಿತು. ಕರಡು ಲೆಕ್ಕಪರಿಶೋಧನಾ ವರದಿಯನ್ನು 14 ಫೆಬ್ರವರಿ 2024 ರಂದು ಸರ್ಕಾರಕ್ಕೆ ನೀಡಲಾಯಿತು. 18 ಏಪ್ರಿಲ್ 2024 ರಂದು ನಿರ್ಗಮನ ಸಮ್ಮೇಳನವನ್ನು ನಡೆಸಲಾಯಿತು ಮತ್ತು ಕಿಯೋನಿಕ್ಸ್ ಒದಗಿಸಿದ ಕರಡು ವರದಿಗೆ ಉತ್ತರಗಳನ್ನು ರಾಜ್ಯ ಸರ್ಕಾರವು 7 ಮೇ 2024 ರಂದು ಅನುಮೋದಿಸಿತು. ಸರ್ಕಾರವು ಒದಗಿಸಿದ ಉತ್ತರಗಳನ್ನು ಸೂಕ್ತವಾಗಿ ಸಂಯೋಜಿಸಲಾಗಿದೆ.

### 6.1.7 ಲೆಕ್ಕಪರಿಶೋಧನೆಯ ಆವಿಷ್ಕಾರಗಳು

***ಕಿಯೋನಿಕ್ಸ್ ಮತ್ತು PEಗಳಿಂದ KTPP ಕಾಯಿದೆಯಡಿಯಲ್ಲಿ ನೀಡಲಾದ ವಿನಾಯಿತಿಯ ದುರ್ಬಳಕೆ***

**6.1.7.1 KTPP ಕಾಯಿದೆ, 1999 ರ ಪರಿಚ್ಛೇದ 5 ರ ಪ್ರಕಾರ ಯಾವುದೇ PE ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸದ ಹೊರತು ಸರಕು ಅಥವಾ ಸೇವೆಗಳನ್ನು ಸಂಗ್ರಹಿಸಬಾರದು. KTPP ಕಾಯಿದೆಯ ವಿಭಾಗ 4(ರ) ಅಂತಹ ಟೆಂಡರ್ ಪ್ರಕ್ರಿಯೆಗಳಿಂದ ನಿರ್ದಿಷ್ಟ ಸಂಗ್ರಹಣೆಯನ್ನು ವಿನಾಯಿತಿ ನೀಡಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. KTPP ಕಾಯಿದೆಯ ಸೆಕ್ಷನ್ 4(g) ಅಡಿಯಲ್ಲಿ GoK ಪ್ರತಿ ವರ್ಷ ಅಧಿಸೂಚನೆಯನ್ನು ಹೊರಡಿಸುತ್ತಿತ್ತು, ಕಿಯೋನಿಕ್ಸ್ ಮೂಲಕ ಮಾಡಿದ IT ಉಪಕರಣಗಳು, ಸೇವೆಗಳು ಮತ್ತು IT ಸಂಬಂಧಿತ ಮಾನವ ಸಂಪನ್ಮೂಲಗಳ ಸಂಗ್ರಹಣೆಗಳಿಗೆ ವಿನಾಯಿತಿ ನೀಡುತ್ತದೆ. ಅಂತಹ ಸಂಗ್ರಹಣೆಯು ಈ ಕೆಳಗಿನ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ:**

**(i) ಪ್ರತಿ ಪ್ರಕರಣದಲ್ಲಿ ಖರೀದಿಯ ಮೌಲ್ಯವು ₹ 1.00 ಕೋಟಿ ಮೀರಬಾರದು ಎಂಬ ಷರತ್ತಿಗೆ ಒಳಪಟ್ಟು ಕಿಯೋನಿಕ್ಸ್‌ನಿಂದ ಖರೀದಿಯನ್ನು ಮಾಡಬೇಕಾರಿರುತ್ತದೆ.**

**(ii) ಒದಗಿಸಿದ ಸೇವೆಗಳು ಕಿಯೋನಿಕ್ಸ ಸ್ವಂತ ಅಥವಾ ಆಂತರಿಕ ಸಂಪನ್ಮೂಲಗಳಿಂದಲ್ಲದಿದ್ದು ಆದರೆ ಬಾಹ್ಯ ಮೂಲಗಳಿಂದ ಪಡೆದಿದ್ದರೆ, ಕಿಯೋನಿಕ್ಸ್ ಈ ಕೆಳಗಿನ ವಿಧಾನಗಳನ್ನು ಅನುಸರಿಸಬೇಕು:**

**a. ಕಿಯೋನಿಕ್ಸ್ KTPP ಕಾಯಿದೆ ಮತ್ತು ನಿಯಮಗಳ ನಿಬಂಧನೆಗಳಿಗೆ ಅನುಗುಣವಾಗಿ ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸಬೇಕು;**

**b. ಮೌಲ್ಯಮಾಪನ ಮಾಡಬೇಕಾದ ಬಿಡ್ಡುದಾರರ ತಾಂತ್ರಿಕ ಅರ್ಹತೆಗಳು ಮತ್ತು ಅರ್ಹ ಬಿಡ್ಡುದಾರರು ಉಲ್ಲೇಖಿಸಿದ ದರಗಳನ್ನು ಪರಿಶೀಲಿಸಬೇಕು ಮತ್ತು ನಿಯಮಗಳ ಪ್ರಕಾರ ದರಗಳ ಸಂಧಾನ ನಡೆಸಬೇಕು. ಈ ಪ್ರಕ್ರಿಯೆಯ ಆಧಾರದ ಮೇಲೆ, ಸರಕು ಮತ್ತು ಸೇವೆಗಳಿಗಾಗಿ ಯಶಸ್ವಿ ಬಿಡ್ದಾರರನ್ನು ನಿಯುಕ್ತಿಪಟ್ಟಿಗೆ ಸೇರಿಸಬೇಕು ಮತ್ತು ಸೇವಾವಾರು ದರದ ಒಪ್ಪಂದಗಳನ್ನು ಮಾಡಿಕೊಳ್ಳಬೇಕು. ಅಂತೆಯೇ, ನಿಗದಿತ ಗರಿಷ್ಠ ಸಂಗ್ರಹಣೆ ಮೌಲ್ಯಕ್ಕೆ ಒಳಪಟ್ಟು PEಗಳ ಖರೀದಿಯ ಅಗತ್ಯತೆಗಳನ್ನು ಪೂರೈಸಬೇಕು.**

**2018–19 ರಿಂದ 2022–23ರವರೆಗಿನ ಐದು ವರ್ಷಗಳ ಅವಧಿಯಲ್ಲಿ ₹ 1,544.50 ಕೋಟಿಗೆ ಕಿಯೋನಿಕ್ಸ್‌ನಿಂದ ಮಾಡಿದ ಉಪಕರಣಗಳ ಸಂಪೂರ್ಣ ಸಂಗ್ರಹಣೆಯನ್ನು 4(g) ವಿನಾಯತಿ ಅಡಿಯಲ್ಲಿ PEಗಳಿಂದ ವಹಿಸಲ್ಪಟ್ಟಿದೆ ಎಂದು ಲೆಕ್ಕಪರಿಶೋಧನೆ ಗಮನಿಸಲಾಯಿತು.**

**6.1.7.2 ಕಿಯೋನಿಕ್ಸ್ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಸಕ್ತಿಯ ಅಭಿವ್ಯಕ್ತಿಗೆ (EOI) ಕರೆ ಮಾಡುವ ಮೂಲಕ BAಗಳನ್ನು ಆಯ್ಕೆ ಮಾಡಿದೆ. ಆದಾಗ್ಯೂ, 2018–23ರ ಅವಧಿಯಲ್ಲಿ ಕಿಯೋನಿಕ್ಸ್ ನಿಂದ ಯಾವುದೇ ಉಪಕರಣ/ಸೇವೆಗೆ ಆಯ್ಕೆ ಮಾಡಲಾದ ಯಾವುದೇ**

BAಗಳೊಂದಿಗೆ ಯಾವುದೇ ದರ ಒಪ್ಪಂದದ ಒಪ್ಪಂದವನ್ನು ಮಾಡಿಕೊಳ್ಳಲಾಗಿರಲಿಲ್ಲ. ಎಲ್ಲಾ ಸಂಗ್ರಹಣೆ ವಹಿವಾಟುಗಳಲ್ಲಿ, ಕಿಯೋನಿಕ್ಸ್ KTPP ಕಾಯಿದೆಯ ಸೆಕ್ಷನ್ 4(g) ಅಡಿಯಲ್ಲಿ ಕರ್ನಾಟಕ ಸರ್ಕಾರ ನೀಡಿದ ವಿನಾಯಿತಿಯ ಆಧಾರದ ಮೇಲೆ PEಗಳಿಂದ ಸಂಗ್ರಹಣೆ ಆದೇಶಗಳನ್ನು ನೇರವಾಗಿ ವಹಿಸಿಕೊಡಲು ಕೋರಿದೆ ಎಂದು ದಾಖಲೆಗಳ ಪರಿಶೀಲನೆಯು ಬಹಿರಂಗಪಡಿಸಿತು. ಖರೀದಿಸಲು ಉದ್ದೇಶಿಸಲಾದ ಉಪಕರಣಗಳಿಗೆ ಕಿಯೋನಿಕ್ಸ್ BAಗಳೊಂದಿಗೆ ದರ ಒಪ್ಪಂದದ ಒಪ್ಪಂದಗಳನ್ನು ಮಾಡಿಕೊಂಡಿದೆಯೇ ಎಂಬುದನ್ನು PEಗಳು ಖಚಿತಪಡಿಸಿಕೊಳ್ಳಲಿಲ್ಲ. ಹೀಗಾಗಿ, PEಗಳಿಂದ ಸರಬರಾಜು ಆದೇಶಗಳನ್ನು ನೀಡುವುದು ಮತ್ತು ಕಿಯೋನಿಕ್ಸ್ ಮೂಲಕ ಸ್ವೀಕರಿಸುವುದು ಎರಡೂ KTPP ಕಾಯಿದೆಯ ನಿಬಂಧನೆಗಳಿಗೆ ವಿರುದ್ಧವಾಗಿದ್ದವು.

*PEಗಳಿಂದ ಖರೀದಿ ಆದೇಶಗಳನ್ನು ವಿಭಜಿಸಲ್ಪಟ್ಟಿರುವುದು*

6.1.7.3 ₹ 240.25 ಕೋಟಿ ಮೊತ್ತದ 347 POಗಳ ಆಯ್ದ ಮಾದರಿಯ ಆಡಿಟ್ ಪರಿಶೀಲನೆಯು (ಆಯ್ಕೆ ಮಾಡಿದ ಆರು PEಗಳಲ್ಲಿ) ₹ 154.44 ಕೋಟಿ ಮೌಲ್ಯದ ನಾಲ್ಕು PEಗಳ 18 ಆರ್ಡರ್‌ಗಳನ್ನು (ವಿವರವಾದ ಪರಿಶೀಲನೆಗಾಗಿ ಆಯ್ಕೆ ಮಾಡಿದ ಮಾದರಿಯ ಶೇಕಡಾ 64.28) 4(g) ವಿನಾಯಿತಿ ಪಡೆಯಲು ಮತ್ತು ನೇರವಾಗಿ ಕಿಯೋನಿಕ್ಸ್‌ಗೆ ಸರಬರಾಜು ಆದೇಶಗಳನ್ನು ವಹಿಸಿಕೊಡಲು ₹ 1 ಕೋಟಿಗಿಂತ ಕಡಿಮೆ ಬೆಲೆಯ 195 ಖರೀದಿ ಆದೇಶಗಳಾಗಿ ವಿಂಗಡಿಸಲಾಗಿದೆ ಎಂದು ಬಹಿರಂಗಪಡಿಸಿದೆ. ವಿವರಗಳನ್ನು *ಅನುಬಂಧ – 19*ರಲ್ಲಿ ನೀಡಲಾಗಿದೆ.

*4(g) ವಿನಾಯಿತಿಯನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ IT ಅಲ್ಲದ ಉತ್ಪನ್ನಗಳು/ ಉಪಕರಣಗಳನ್ನು ಸಂಗ್ರಹಿಸಲಾಗಿದ್ದುದು*

6.1.7.4 ಆರು ಇಲಾಖೆಗಳಿಂದ ಆಯ್ದ 20 ಸಲಕರಣೆಗಳ ಮಾದರಿಯಲ್ಲಿ, ಕಿಯೋನಿಕ್ಸ್ 4(g) ವಿನಾಯಿತಿ ಬಳಸಿ ₹ 255.17 ಕೋಟಿಗೆ (3,117 POಗಳ ಪೈಕಿ 405 ರಲ್ಲಿ) ಆರ್.ಒ ಶುದ್ಧೀಕರಣಯಂತ್ರಗಳು, ಹೈ ಮಾಸ್ಟ್ ಲೈಟ್‌ಗಳು, ಚಪಾತಿ ಮಾಡುವ ಯಂತ್ರಗಳು, ಇತ್ಯಾದಿ ITಯೇತರ ಉಪಕರಣಗಳನ್ನು ಖರೀದಿಸಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಇದು KTPP ಕಾಯ್ದೆಯ ಉಲ್ಲಂಘನೆಯಾಗಿದೆ. ₹ 255.17 ಕೋಟಿಗಳ ಒಟ್ಟು ಸಂಗ್ರಹಣೆ ಮೌಲ್ಯದಲ್ಲಿ ITಯೇತರ ಉತ್ಪನ್ನಗಳ ಉಪಕರಣಾವಾರು ಪಾಲನ್ನು ಕೆಳಗಿನ ರೇಖಾಚಿತ್ರ ಸಂಖ್ಯೆ. 6.1.3ರಲ್ಲಿ ತೋರಿಸಲಾಗಿದೆ ಮತ್ತು ವಿವರಗಳನ್ನು *ಅನುಬಂಧ – 20*ರಲ್ಲಿ ನೀಡಲಾಗಿದೆ.




ರೇಖಾಚಿತ್ರ ಸಂಖ್ಯೆ. 6.1.3: 4(g) ವಿನಾಯಿತಿಯನ್ನು ಬಳಸಿಕೊಂಡು ITಅಲ್ಲದ ಖರೀದಿಗಳು

ಕಿಯೋನಿಕ್ಸ್ ನಿಂದ IT ಅಲ್ಲದ ಸರಕುಗಳು ಮತ್ತು ಸೇವೆಗಳ ಸಂಗ್ರಹಣೆಯನ್ನು ನಿಲ್ಲಿಸುವ ಮೂಲಕ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರವು (ಮೇ 2024) ಉತ್ತರಿಸಿದೆ. ಆದಾಗ್ಯೂ, PE ಗಳಿಂದ ಖರೀದಿ ಆದೇಶವನ್ನು ವಿಭಜಿಸಲಾಗಿರುವ ಬಗ್ಗೆ ನಿರ್ದಿಷ್ಟ ಉತ್ತರವನ್ನು ಒದಗಿಸಲಾಗಿಲ್ಲ.

**ಕಿಯೋನಿಕ್ಸ್ PE ಗಳಿಗೆ ಗುಣಮಟ್ಟದ ಉತ್ಪನ್ನಗಳು, ಕಡಿಮೆ ಬೆಲೆ, ಸಮಯೋಚಿತ ವಿತರಣೆ, ತ್ವರಿತ ಮಾರಾಟದ ನಂತರದ ಸೇವೆಗಳು ಇತ್ಯಾದಿಗಳನ್ನು ಖಚಿತಪಡಿಸುತ್ತದೆಯೇ ಎಂದು ಖಚಿತಪಡಿಸಿಕೊಳ್ಳಲು, BA ಗಳ ನಿಯುಕ್ತಿಪಟ್ಟಿಗೆ ಸಂಬಂಧಿಸಿದ ದಾಖಲೆಗಳು, ಆಯ್ದ PE ಗಳ ಆಯ್ದ ಸಲಕರಣೆಗಳ PO ಗಳನ್ನು ಪರಿಶೀಲಿಸಲಾಗಿದೆ ಮತ್ತು ಅವಲೋಕನಗಳನ್ನು ಈ ಕೆಳಗಿನ ಪ್ಯಾರಾಗಳಲ್ಲಿ ಚರ್ಚಿಸಲಾಗಿದೆ.**

***BA ಗಳ ದಾಖಲಾತಿಗೆ ಸಂಬಂಧಿಸಿದಂತೆ ಪಾರದರ್ಶಕ ಮತ್ತು ದಾಖಲಿತ ನೀತಿಯ ಅನುಪಸ್ಥಿತಿ.***

**6.1.7.5 ಲೆಕ್ಕಪರಿಶೋಧನೆ (ಮಾರ್ಚ್ 2023) ಕಿಯೋನಿಕ್ಸ್ ನಿಂದ ಮ್ಯಾನೇಜ್‌ಮೆಂಟ್/ಸರ್ಕಾರದಿಂದ BA ಗಳ ಆಯ್ಕೆಯ ಮಾನದಂಡಗಳನ್ನು ಕುರಿತಾದ ಅನುಮೋದಿಸಲಾದ ಮತ್ತು/ಅಥವಾ ಯಾವುದೇ ಅನುಮೋದಿತ ನೀತಿ ಅಥವಾ ಕಾರ್ಯವಿಧಾನದ ಕೋರಲಾಗಿತ್ತು. ಕಿಯೋನಿಕ್ಸ್, ತಮ್ಮ ಉತ್ತರದಲ್ಲಿ (ಏಪ್ರಿಲ್ 2024) ವ್ಯಾಪಾರ ಸಹವರ್ತಿಗಳ ನಿಯುಕ್ತಿಪಟ್ಟಿಯ ಅವಧಿಯ ನಿಗದಿಗೆ/ನವೀಕರಣಕ್ಕೆ ಯಾವುದೇ ಅನುಮೋದಿತ ಮಾನದಂಡಗಳು/ ಮಾರ್ಗಸೂಚಿಗಳು/ ಕೈಪಿಡಿ/ ಕಾರ್ಯವಿಧಾನಗಳು ಇರುವುದಿಲ್ಲ ಎಂದು ತಿಳಿಸಿದರು. ಈ ಸನ್ನಿವೇಶದಲ್ಲಿ, ಲೆಕ್ಕಪರಿಶೋಧನೆಯು ಕಿಯೋನಿಕ್ಸ್ ನಿಂದ ಆಸಕ್ತಿಯ ಆಹ್ವಾನವನ್ನು (EoI) ಮತ್ತು ಸ್ವೀಕರಿಸಿದ EoI ಗಳ ನಂತರದ ಮೌಲ್ಯಮಾಪನವನ್ನು ವಿಶ್ಲೇಷಣೆ ಮಾಡಲಾಯಿತು. ವಿಧಾನಶಾಸ್ತ್ರವು ಈ ಕೆಳಗಿನ ನ್ಯೂನತೆಗಳಿಂದ ಬಳಲುತ್ತಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ:**

**a) BAಗಳ ನಿಯುಕ್ತಿಪಟ್ಟಿಗಾಗಿ ನೀಡಲಾದ EoI (ಪ್ಯಾರಾ 2.0 ಅರ್ಹತಾ ಮಾನದಂಡ) ಪ್ರಕಾರ, ಆಯ್ಕೆಗೆ ಒಂದು ಪೂರ್ವ-ಅರ್ಹತೆಯ ಮಾನದಂಡವೆಂದರೆ ಆರ್ಥಿಕ ಸಾಮರ್ಥ್ಯದ ಸಮರ್ಪಕತೆ[90]. ಈ ಉದ್ದೇಶಕ್ಕಾಗಿ, ಅರ್ಜಿದಾರರು ವಹಿವಾಟು ವಿವರಗಳು ಮತ್ತು ಸಂಬಂಧಿತ ಪೋಷಕ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿದೆ. ಆದಾಗ್ಯೂ, ಈ ವಿವರಗಳನ್ನು ಸಲ್ಲಿಸುವುದರಿಂದ ಸ್ಟಾರ್ಟ್ ಅಪ್‌ಗಳಿಗೆ ವಿನಾಯಿತಿ ನೀಡಲಾಗಿದೆ. ಎಲ್ಲಾ ಸ್ಟಾರ್ಟ್‌ಅಪ್‌ಗಳನ್ನು 2018-19, 2019-20, 2020-21 ಮತ್ತು 2021-22ರ ವರ್ಷಗಳಲ್ಲಿ ವರ್ಷಕ್ಕೆ ₹ 30 ಲಕ್ಷದವರೆಗಿನ ಅಂದಾಜು ಮೌಲ್ಯದೊಂದಿಗೆ ಮತ್ತು 2022-23ರಲ್ಲಿ ₹ 1 ಕೋಟಿಯವರೆಗಿನ ಅಂದಾಜು ಮೌಲ್ಯದೊಂದಿಗೆ ಖರೀದಿ ಆದೇಶಗಳನ್ನು ಕಾರ್ಯಗತಗೊಳಿಸಲು 'A' ವರ್ಗ ಅರ್ಹವಾಗಿರುತ್ತವೆ ಎಂದು ಪರಿಗಣಿಸಲಾಗಿದೆ.**

**22 ಆಯ್ದ BAಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿದಾಗ, ಐದು BAಗಳಿಗೆ ಸಂಬಂಧಿಸಿದಂತೆ ವಹಿವಾಟಿನ ವಿವರಗಳ ಪೂರಕ ದಾಖಲೆಗಳು ಅಂದರೆ ಬ್ಯಾಲೆನ್ಸ್ ಶೀಟ್ ಮತ್ತು ಲಾಭ ಮತ್ತು ನಷ್ಟ ಖಾತೆಯು ದಾಖಲೆಯಲ್ಲಿರಲಿಲ್ಲ ಎಂಬುದನ್ನು ಗಮನಿಸಿದೆ. ಈ ಅರ್ಜಿದಾರರನ್ನು ವರ್ಗ A ಅಡಿಯಲ್ಲಿ ವರ್ಗೀಕರಿಸುವ ಬದಲು, ಅವರನ್ನು A / B ವರ್ಗ ಎಂದು ವರ್ಗೀಕರಿಸಲಾಯಿತು ಅಥವಾ B ಅಥವಾ C ವರ್ಗವೆಂದು ನವೀಕರಣದ ಸಮಯದಲ್ಲಿ ಮೇಲ್ದರ್ಜೆಗೇರಿಸಲಾಗಿತ್ತು ಮತ್ತು ಅಂತಹ ಸ್ಟಾರ್ಟ್-ಅಪ್‌ಗಳಲ್ಲಿ ಅರ್ಹ ಮೊತ್ತಕ್ಕಿಂತ ಹೆಚ್ಚಿನ ಖರೀದಿ ಆದೇಶಗಳನ್ನು ನೀಡಲಾಯಿತು. ಐದು ಸ್ಟಾರ್ಟ್-ಅಪ್ BAಗಳಿಗೆ[91] ₹ 70.73 ಕೋಟಿಯ ವ್ಯವಹಾರವನ್ನು ವಹಿಸಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ, ಅದು ಅವರ ಅರ್ಹತೆಗಿಂತ ₹ 61.63 ಕೋಟಿಯಷ್ಟು ಹೆಚಿನದ್ದಾಗಿತ್ತು (ಅನುಬಂಧ-21 ರಲ್ಲಿ ವಿವರಗಳನ್ನು ನೀಡಲಾಗಿದೆ).**

**b) EOI ಗಾಗಿ ಸೂಚಿಸಲಾದ ಪೂರ್ವಾರ್ಹತೆಯ ಮಾನದಂಡವೆಂದರೆ "ಬಿಡ್ದಾರರು ಮೂಲ ಸಲಕರಣೆ ತಯಾರಕರು (OEM) ಅಥವಾ ನೀಡಲಾದ ಉತ್ಪನ್ನಕ್ಕಾಗಿ OEMನ ಅಧಿಕೃತ ವಿತರಕರಾಗಿರಬೇಕು". ಆದಾಗ್ಯೂ, BAಗಳ ಪಟ್ಟಿಯು ಯಾವುದೇ OEMಗಳನ್ನು ಒಳಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಆಯ್ದ ಪ್ರಕರಣಗಳಲ್ಲಿ ಕಿಯೋನಿಕ್ಸ್ ನೀಡಿದ ಆದೇಶಗಳ**

[90] BAಗಳು ತಮ್ಮ ಹಿಂದಿನ ವಾರ್ಷಿಕ ವಹಿವಾಟಿಗೆ ಸೀಮಿತವಾದ ಮೌಲ್ಯದ ಖರೀದಿ ಆದೇಶವನ್ನು ಕಾರ್ಯಗತಗೊಳಿಸಲು ಅನುಮತಿಸಲಾಗುವುದು. A ವರ್ಗದ BAಗಳು ₹ 30 ಲಕ್ಷದವರೆಗಿನ ಆದೇಶದ ಮೌಲ್ಯವನ್ನು ಕಾರ್ಯಗತಗೊಳಿಸಲು ಅನುಮತಿಸಲಾಗುವುದು. ಅದೇ ರೀತಿ, B ವರ್ಗದ BAಗಳು 5 ಕೋಟಿ ಮತ್ತು C ವರ್ಗದ BAಗಳು ₹ 5 ಕೋಟಿಗಿಂತ ಹೆಚ್ಚಿನ ಆದೇಶಗಳನ್ನು ಕಾರ್ಯಗತಗೊಳಿಸಲು ಅವಕಾಶ ನೀಡಲಾಗಿತ್ತು.

[91] 1) ಆಲ್ವೆಕ್ ಇನ್ನೋವೇಶನ್ಸ್ ಪ್ರೈ. ಲಿಮಿಟೆಡ್, 2) ANP ಅಭ್ಯಾಸ್ ಪ್ರೈ. ಲಿಮಿಟೆಡ್, 3) ಹೇಮಾ ಅಪ್ಲೈಡ್ ಸೈನ್ಸಸ್ & ಟೆಕ್ನಾಲಜಿ, 4) ಮಿಥಿನಿಟ್ ಟೆಕ್ನಾಲಜಿ ಪ್ರೈ. ಲಿಮಿಟೆಡ್ ಮತ್ತು 5) ನ್ಯೂಜೀನ್ ಸೆಕ್ಯುರಿಟಿ ಸೊಲ್ಯೂಷನ್ಸ್ LLP.

ಪರಿಶೀಲನೆಯು 22 BA ಗಳಲ್ಲಿ ನಾಲ್ಕು ಮಾತ್ರ OEM ಗಳ ಅಧಿಕೃತ ವಿತರಕರಾಗಿದ್ದರು ಎಂದು ತೋರಿಸಿತು. ಆದಾಗ್ಯೂ ಯಾವುದೇ ಸಂದರ್ಭದಲ್ಲಿ, ಈ ಬಿಎಗಳು ಮಾಡಿದ ಸರಬರಾಜುಗಳು ಉಪಕರಣಗಳಿಗೆ ಅವರು ಅಧಿಕೃತ[92] ವಿತರಕರಾಗಿರಲಿಲ್ಲ. ಲೆಕ್ಕಪರಿಶೋಧನೆಯಲ್ಲಿ ಕಿಯೋನಿಕ್ಸ್ BA ಗಳಿಗೆ ಅವರ ವ್ಯಾಪಾರದ ಸಾಲಿನಲ್ಲಿ (LOB)[93] ಇಲ್ಲದ ಸಲಕರಣೆಗಳ ಪೂರೈಕೆಗಾಗಿ ಆದೇಶಗಳನ್ನು ನೀಡಿತು ಮತ್ತು ಕಾರ್ಯಗತಗೊಳಿಸಿತು (ವಿವರಗಳನ್ನು *ಅನುಬಂಧ 22*ರಲ್ಲಿ ನೀಡಲಾಗಿದೆ) ಎಂಬುದನ್ನು ಸಹ ಗಮನಿಸಲಾಯಿತು. ಕಿಯೋನಿಕ್ಸ್ ಸಹ (ಆಗಸ್ಟ್ 2023) ನಿಯುಕ್ತಿ ಮಾಡಲಾದ ಯಾವುದೇ BAಗಳು OEMಗಳಲ್ಲ ಎಂದು ಒಪ್ಪಿಕೊಂಡಿತು. ಹೀಗಾಗಿ, PEಗಳು , ಉಪಕರಣಗಳನ್ನು OEMಗಳು/ಅಧಿಕೃತ ವಿತರಕರಿಂದ ನೇರವಾಗಿ ಪಡೆದಿದ್ದರೆ ಒದಗಬಹುದಾಗಿದ್ದ ಸ್ಪರ್ಧಾತ್ಮಕ ದರಗಳು ಮತ್ತು ಮಾರಾಟದ ನಂತರದ ಸೇವೆಗಳಿಂದ ವಂಚಿತವಾಗಿವೆ.

c) ಕಿಯೋನಿಕ್ಸ್ 'ವ್ಯಾಪಾರ ಸಹವರ್ತಿಗಳ ನಿಯುಕ್ತಿಗೊಳಿಸುವಿಕೆ'ಗಾಗಿ ಹೊರಡಿಸಿದ EoI ಅನ್ನು ಆಹ್ವಾನಿಸುವ ಸೂಚನೆಯ ನಿಯಮಗಳು ಮತ್ತು ಷರತ್ತುಗಳ (ಉಪ–ಕಲಂ 4, 5 ಮತ್ತು 6) ಷರತ್ತು 5, ಸರತಿಯ ಮೇಲೆ ಸಾಧ್ಯವಾದಷ್ಟು ನಿಯುಕ್ತ ಸಹವರ್ತಿಗಳಿಗೆ ಕೆಲಸವನ್ನು ಹಂಚಲು ಪ್ರಯತ್ನಿಸಲಾಗುವುದು ಎಂದು ಹೇಳುತ್ತದೆ. ಖರೀದಿ ಆದೇಶಗಳನ್ನು ಪಡೆಯಲು ಕಿಯೋನಿಕ್ಸ್‌ನಿಂದ ಅನುಮತಿಯನ್ನು ಪಡೆದ ನಂತರ ಬಳಕೆದಾರರ ಇಲಾಖೆಯನ್ನು ನೇರವಾಗಿ ಸಂಪರ್ಕಿಸಲು ಪೂರ್ವಾರ್ಹತೆ ಹೊಂದಿರುವ BAಗಳಿಗೆ ಇದು ಅವಕಾಶ ಕಲ್ಪಿಸುತ್ತದೆ. ಇದಲ್ಲದೆ, ನಿರ್ದಿಷ್ಟ BAಯ ಪ್ರಯತ್ನಗಳ ಬಲದ ಮೇಲೆ ಕಿಯೋನಿಕ್ಸ್‌ನಿಂದ ಯಾವುದೇ ಆದೇಶ/ಕೆಲಸ/ಉದ್ಯೋಗವನ್ನು ಪಡೆದರೆ, ಅಂತಹ ಕೆಲಸವನ್ನು ಅವರ ರುಜುವಾತುಗಳ ಪರಿಶೀಲನೆಗೆ ಒಳಪಟ್ಟು ಅದೇ BAಗೆ ಹಂಚಲಾಗುವುದೆಂದು ತಿಳಿಸುತ್ತದೆ. ಈ ಷರತ್ತುಗಳ ಸೇರ್ಪಡೆಯು ಸ್ಪರ್ಧೆಯನ್ನು ಸೀಮಿತಗೊಳಿಸುವ ಮೂಲಕ ಮತ್ತು ಆ ಮೂಲಕ ಖರೀದಿ ಪ್ರಕ್ರಿಯೆಯ ಸಮಗ್ರತೆಯನ್ನು ಹಾಳುಮಾಡುವುದಲ್ಲದೇ ಆದೇಶಗಳನ್ನು ಪಡೆಯುವ BAಗಳಿಗೆ ಅನಗತ್ಯ ಪ್ರಯೋಜನವನ್ನು ಒದಗಿಸುತ್ತದೆ.

ಅಸ್ತಿತ್ವದಲ್ಲಿರುವ ನಿಯುಕ್ತ BAಗಳನ್ನು ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರವು (ಮೇ 2024) ಉತ್ತರಿಸಿದೆ ಮತ್ತು ನಿರ್ಗಮನ ಸಮ್ಮೇಳನದಲ್ಲಿ ವ್ಯವಸ್ಥಾಪಕ ನಿರ್ದೇಶಕ (MD), ಕಿಯೋನಿಕ್ಸ್ ಅವರು ಸಂಗ್ರಹಣೆ ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್‌ಗಳನ್ನು (SOPs) ಸ್ಥಾಪಿಸಲಾಗುತ್ತಿದೆ ಎಂದು ಹೇಳಿದ್ದಾರೆ. SOP ಗಳು ಮಾಹಿತಿ ತಂತ್ರಜ್ಞಾನ (IT) ಉಪಕರಣಗಳು, ಸಂಗ್ರಹಣೆಯ ವಿಧಾನ, ಮೂರನೇ ವ್ಯಕ್ತಿಯ ಪರಿಶೀಲನೆ (TPV) ಪ್ರಕ್ರಿಯೆ, ತರಬೇತಿ, ಮಾನವ ಸಂಪನ್ಮೂಲ ಸೇವೆಗಳು, ಸ್ವತ್ತುಗಳು ಮತ್ತು ಆಸ್ತಿ ನಿರ್ವಹಣೆ ಇತ್ಯಾದಿಗಳ ಮೇಲಿನ ವಿಶೇಷಣಗಳನ್ನು ವಿವರಿಸುತ್ತದೆ. MD, ಕಿಯೋನಿಕ್ಸ್ ಸಹ ಭವಿಷ್ಯದಲ್ಲಿ IT ಸರಕುಗಳ ಸಂಗ್ರಹಣೆಯು OEMಗಳು ಅಥವಾ ಅವರ ಅಧಿಕೃತ ವಾಹಕ ಪಾಲುದಾರರ ಮೂಲಕ ನಡೆಯಲಿದೆ ಎಂದು ಹೇಳಿದ್ದಾರೆ. ಇದಲ್ಲದೆ, SOPಗಳ ಅನುಮೋದನೆಯ ನಂತರ IT ಉಪಕರಣಗಳು ಮತ್ತು ಸೇವೆಗಳನ್ನು ಸಂಗ್ರಹಿಸಲು BAಗಳ ಹೊಸ ನಿಯುಕ್ತಿಪಟ್ಟಿ ಮಾಡಲಾಗುವುದು ಎಂದು MD ತಿಳಿಸಿದರು.

***ಕಿಯೋನಿಕ್ಸ್ ನಿಂದ ಅಂದಾಜು ಬೆಲೆಗಳನ್ನು ಹೆಚ್ಚಿಸುವ ಮೂಲಕ BAಗಳಿಗೆ ಅನಗತ್ಯ ಲಾಭಮಾಡಿಕೊಟ್ಟಿರುವುದು***

**6.1.7.6** KFCಯ ಕಂಡಿಕೆ 15 (1) "ಪ್ರತಿಯೊಬ್ಬ ಸರ್ಕಾರಿ ನೌಕರನು ಸರ್ಕಾರಿ ಆದಾಯದಿಂದ ಮಾಡಿದ ವೆಚ್ಚದ ಬಗ್ಗೆ ಸಾಮಾನ್ಯ ವಿವೇಕದ ವ್ಯಕ್ತಿ ತನ್ನ ಸ್ವಂತ ಹಣದ ಖರ್ಚಿಗೆ ಸಂಬಂಧಿಸಿದಂತೆ ಯಾವ ರೀತಿ ಜಾಗರೂಕತೆಯನ್ನು ವಹಿಸುತ್ತಾರೋ ಅದೇ ಜಾಗರೂಕತೆಯನ್ನು ನಿರ್ವಹಿಸಬೇಕು" ಎಂದು ವಿಧಿಸುತ್ತದೆ. ಇದಲ್ಲದೆ, KFCಯ ಕಂಡಿಕೆ 16 ರ ಪ್ರಕಾರ ಪ್ರತಿಯೊಬ್ಬ ಸರ್ಕಾರಿ ನೌಕರರು ಹಣಕಾಸಿನ ವಿಷಯಗಳಲ್ಲಿ

---

[92] BA –ಆಲ್ಟೆಕ್ ಇನ್ನೋವೇಶನ್ಸ್ ಪ್ರೈ.ಲಿ. LED ಲೈಟ್ನಿಂಗ್ ಉತ್ಪನ್ನಗಳು ಮತ್ತು ಸ್ಪೆಕ್ಟ್ರಮ್ ಟೆಕ್ ವಿಷನ್ ಪ್ರೈವೇಟ್ ಲಿಮಿಟೆಡ್‌ನ ಇತರ ಎಲೆಕ್ಟ್ರಿಕಲ್ ಉತ್ಪನ್ನಗಳಿಗೆ ಅಧಿಕೃತ ಡೀಲರ್ ಆಗಿರುವ ಲಿಮಿಟೆಡ್ ಕಿಯೋನಿಕ್ಸ್‌ಗೆ ಕಂಪ್ಯೂಟರ್ ಮತ್ತು ಪರಿಕರಗಳು ಮತ್ತು CCTV ಸಿಸ್ಟಮ್‌ಗಳನ್ನು ಪೂರೈಸಿದೆ.

[93] ಲೈನ್ ಆಫ್ ಬಿಸಿನೆಸ್ (LOB) ಎನ್ನುವುದು ವ್ಯಾಪಾರ ಅಥವಾ ತಯಾರಕರು ನೀಡುವ ಸಂಬಂಧಿತ ಉತ್ಪನ್ನ ಅಥವಾ ಸೇವೆಗಳನ್ನು ವಿವರಿಸುವ ಸಾಮಾನ್ಯ ಪದವಾಗಿದೆ.

ಸಂಪೂರ್ಣ ಸಮಗ್ರತೆಯನ್ನು ಗಮನಿಸುವುದು ಮಾತ್ರವಲ್ಲ, ಅವರು ಅಥವಾ ಅವರ ನಿಯಂತ್ರಣದಲ್ಲಿರುವ ಎಲ್ಲಾ ಸಾರ್ವಜನಿಕ ನಿಧಿಗಳಿಗೆ ಸಾಧ್ಯವಾದಷ್ಟು ಉತ್ತಮವಾದ ಮೌಲ್ಯವನ್ನು ಪಡೆಯುವುದನ್ನು ನೋಡಲು ಮತ್ತು ಸಾರ್ವಜನಿಕ ನಿಧಿಯಿಂದ ಪ್ರತಿಯೊಂದು ರೀತಿಯ ವ್ಯರ್ಥ ವೆಚ್ಚಗಳ ವಿರುದ್ಧ ನಿಷ್ಠುರವಾಗಿ ರಕ್ಷಿಸಲು ನಿರಂತರವಾಗಿ ಜಾಗರೂಕರಾಗಿರಬೇಕು. ಅಲ್ಲದೆ, ಕಾನೂನು ಮಾಪನಶಾಸ್ತ್ರ (ಪ್ಯಾಕೇಜ್ ಸರಕುಗಳು) ನಿಯಮಗಳು, 2011 ರ ನಿಬಂಧನೆ 18 (2) ನಿಬಂಧಿಸುವಂತೆ ಯಾವುದೇ ಚಿಲ್ಲರೆ ವ್ಯಾಪಾರಿ ಅಥವಾ ತಯಾರಕ, ಪ್ಯಾಕರ್, ಆಮದುದಾರ ಮತ್ತು ಸಗಟು ವಿತರಕರು ಸೇರಿದಂತೆ ಇತರ ವ್ಯಕ್ತಿಗಳು ಪ್ಯಾಕ್ ಮಾಡಿದ ರೂಪದಲ್ಲಿ ಯಾವುದೇ ಸರಕುಗಳನ್ನು ಪ್ಯಾಕ್ ಮಾಡಿದ ರೂಪದಲ್ಲಿ ಅದರ ಚಿಲ್ಲರೆ ಮಾರಾಟ ಬೆಲೆ ಮೀರಿದ ಬೆಲೆಗೆ ಮಾರಾಟ ಮಾಡಬಾರದು.

ರೇಖಾಚಿತ್ರ ಸಂಖ್ಯೆ. 6.1.3ರಲ್ಲಿ ತೋರಿಸಿರುವಂತೆ, PE ಗಳಿಂದ ಪಡೆದ ವಿನಂತಿಗಳ ಮೇಲೆ, ಕಿಯೋನಿಕ್ಸ್ PE ಗಳಿಗೆ ಅನುಮೋದನೆಗಾಗಿ ಅಂದಾಜು ದರಗಳನ್ನು ತಿಳಿಸುತ್ತದೆ. ಅಂದಾಜು ದರಗಳನ್ನು PEಗಳು ಅನುಮೋದಿಸಿದ ನಂತರ, NITಗಳನ್ನು ನಿಯುಕ್ತಿ ಮಾಡಲಾದ BAಗಳಿಗೆ ನೀಡಲಾಗುತ್ತದೆ. ಆದಾಗ್ಯೂ, ವಸ್ತುಗಳ ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳನ್ನು ಗುರುತಿಸಲು ಕಿಯೋನಿಕ್ಸ್ ಯಾವುದೇ ಮಾರುಕಟ್ಟೆ ಸಮೀಕ್ಷೆಯನ್ನು ನಡೆಸಲಿಲ್ಲ ಮತ್ತು ಲೆಕ್ಕಪರಿಶೋಧನೆಗೆ ದರ ಅಂದಾಜಿನ ಆಧಾರವನ್ನು ವಿವರಿಸಲು ಸಾಧ್ಯವಾಗಲಿಲ್ಲ.

ಮೂರು PEಗಳಿಗೆ[94] ಒಟ್ಟು ₹ 75.81 ಕೋಟಿಗೆ ಸರಬರಾಜು ಮಾಡಿದ ಒಂಬತ್ತು ಸಲಕರಣೆಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳಿಗಿಂತ ಹೆಚ್ಚಿನ ದರಗಳನ್ನು ಕಿಯೋನಿಕ್ಸ್ ಅಳವಡಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಉಪಕರಣಗಳ ನಿಜವಾದ ಮಾರುಕಟ್ಟೆ ಮೌಲ್ಯವನ್ನು ₹ 27.84 ರಷ್ಟಿರುವುದೆಂದು ಲೆಕ್ಕ ಪರಿಶೋಧನೆಯ ಲೆಕ್ಕಹಾಕಲಾಯಿತು. ಇದು ಸಾರ್ವಜನಿಕ ಬೊಕ್ಕಸಕ್ಕೆ ₹ 47.97 ಕೋಟಿ ಹೆಚ್ಚುವರಿ ಆರ್ಥಿಕ ಹೊರೆಯನ್ನು ಉಂಟುಮಾಡಿದೆ. ಹೆಚ್ಚುವರಿ ಬೆಲೆಯನ್ನು ಮಾರುಕಟ್ಟೆ ಬೆಲೆಗಿಂತ 172 ಪ್ರತಿಶತ ಹೆಚ್ಚು ಪಾವತಿಸಲಾಗಿದೆ. ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗಳನ್ನು PEಗಳಿಗೆ ವಿತರಿಸಲಾದ ಸಲಕರಣೆಗಳ ಪೆಟ್ಟಿಗೆ/ಪ್ಯಾಕೇಜ್/ಬಾಕ್ಸ್‌ನಲ್ಲಿ ಮುದ್ರಿಸಲಾದ ಗರಿಷ್ಠ ಚಿಲ್ಲರೆ ಬೆಲೆ (MRP), ಆನ್‌ಲೈನ್ ಮಾರುಕಟ್ಟೆಗಳಲ್ಲಿ ಬೆಲೆಗಳ ಅಡ್ಡ-ಪರಿಶೀಲನೆ, ಅದೇ ವರ್ಷದಲ್ಲಿ ಅದೇ ಉಪಕರಣಗಳಿಗಾಗಿ ಇತರ POಗಳಲ್ಲಿ ಕಿಯೋನಿಕ್ಸ್ ಉಲ್ಲೇಖಿಸಿದ ದರಗಳನ್ನು ಪರಿಗಣಿಸಿ, ಇತ್ಯಾದಿ ಮಾರ್ಗಗಳಲ್ಲಿ ನಿರ್ಧರಿಸಲಾಗಿದೆ.

ಒಂಬತ್ತು ಸಲಕರಣೆಗಳಿಗೆ ವರ್ಧಿಸಲಾದ ಅಂದಾಜಿನ ಪ್ರಮಾಣವನ್ನು ಕೆಳಗಿನ ಚಾರ್ಟ್‌ನಲ್ಲಿ ತೋರಿಸಲಾಗಿದೆ:

**ರೇಖಾಚಿತ್ರ ಸಂಖ್ಯೆ. 6.1.4: ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳ ಮೇಲೆ ಹೆಚ್ಚಿದ ಅಂದಾಜು**




ಇ–1: ಕಂಪ್ಯೂಟರ್ ಲ್ಯಾಬ್ ಸೆಟಪ್ (ವಿಧ–I), E–2: ಕಂಪ್ಯೂಟರ್ ಲ್ಯಾಬ್ ಸೆಟಪ್ (ವಿಧ –II), E–3: ಡಿಜಿಟಲ್ ಆಡಿಯೋ ಸಿಸ್ಟಮ್, E–4: ಕಂಪ್ಯೂಟರ್ ಮತ್ತು ಪರಿಕರಗಳು (ವಿಧ I), E–5: ಕಂಪ್ಯೂಟರ್ ಮತ್ತು ಪರಿಕರಗಳು (ವಿಧ II), E–6: ಕಲಿಕೆಯ ಟಿವಿ, E–7: ಸ್ಮಾರ್ಟ್ ಕ್ಲಾಸ್ ಪರಿಹಾರ (ವಿಧ I), E–8: ಸ್ಮಾರ್ಟ್ ಕ್ಲಾಸ್ ಪರಿಹಾರ (ವಿಧ II), E–9: ಸ್ಮಾರ್ಟ್ ಬೋರ್ಡ್ – ಶೈಕ್ಷಣಿಕ ವಿಷಯ.

[94] ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗಿರಿಜನ ಕಲ್ಯಾಣ ಇಲಾಖೆ ಹಾಗೂ ಬಿಬಿಎಂಪಿ.

**BA ಗಳಿಗೆ ಪಾವತಿಸಿದ ಹೆಚ್ಚುವರಿ ಬೆಲೆಯ ಪಿಒವಾರು ಮತ್ತು ಐಟಂವಾರು ವಿವರಗಳನ್ನು *ಅನುಬಂಧ–23* ರಲ್ಲಿ ನೀಡಲಾಗಿದೆ. ಕೆಳಗಿನ ಆಧ್ಯಯನ ಪ್ರಕರಣ 1 ಮತ್ತು 2 ರಲ್ಲಿ ಕೆಲವು ವಿವರಣಾತ್ಮಕ ಪ್ರಕರಣಗಳನ್ನು ತೋರಿಸಲಾಗಿದೆ:**

**ಆಧ್ಯಯನ ಪ್ರಕರಣ: 1**

**ಕಂಪ್ಯೂಟರ್ ಲ್ಯಾಬ್ ಸೆಟಪ್‌ನ 40 ಯೂನಿಟ್‌ಗಳ ಪೂರೈಕೆಗಾಗಿ (ಜುಲೈ/ಆಗಸ್ಟ್ 2021) ಖಿಘಆ ಆದೇಶಿಸಿತ್ತು. ಪ್ರತಿ ಘಟಕವು 13 ವಸ್ತುಗಳನ್ನು ಒಳಗೊಂಡಿರಬೇಕು. ಇವುಗಳಲ್ಲಿ:**

1. **ಡೆಸ್ಕ್‌ಟಾಪ್ ಸಿಸ್ಟಮ್ (ಕಾನ್ಫಿಗರೇಶನ್: 18.5'' ಮಾನಿಟರ್, 4GB RAM, 1TB ಹಾರ್ಡ್ ಡ್ರೈವ್, ಪೆಂಟಿಯಮ್ ಪ್ರೊಸೆಸರ್, ವಿಂಡೋಸ್ 10 ಹೋಮ್ ಎಡಿಷನ್, ವೈ–ಫೈ ಸಕ್ರಿಯಗೊಳಿಸಲಾಗಿರುವಂತಹದು) ಬಾಕ್ಸ್‌ನಲ್ಲಿ ಮುದ್ರಿಸಲಾದ ₹ 2.90 ಲಕ್ಷ MRPಗೆ ವಿರುದ್ಧವಾಗಿ ಪ್ರತಿ ಯೂನಿಟ್‌ಗೆ ₹ 7.85 ಲಕ್ಷ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿತ್ತು.**
2. **ಈ POನಲ್ಲಿ ಒಳಗೊಂಡಿರುವ 'ಆರು ಸಿಸಿಟಿವಿಗಳು ಮತ್ತು ಮಾನಿಟರ್' ಪ್ರಕರಣದಲ್ಲಿ ₹ 6.72 ಲಕ್ಷ ಎಂದು ಅಂದಾಜಿಸಲಾಗಿದೆ. ಕಿಯೋನಿಕ್ಸ್ ಆಗಸ್ಟ್ 2021 ರಲ್ಲಿ TWD ಗೆ ಮತ್ತೊಂದು ಆದೇಶದಲ್ಲಿ ₹ 53,434/– ಕ್ಕೆ ಅದೇ ಉಪಕರಣ ಐಟಂ ಅನ್ನು ಸರಬರಾಜು ಮಾಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಆದಾಗ್ಯೂ, ಜುಲೈ 2021 ರಲ್ಲಿ TWD ಯ PO ಗಾಗಿ ದರಗಳನ್ನು ಅಂದಾಜು ಮಾಡುವಾಗ, '6 ಸಿಸಿಟಿವಿಗಳು ಮತ್ತು ಒಂದು ಮಾನಿಟರ್' ಅನ್ನು ಒಂದು ಯೂನಿಟ್‌ನಂತೆ ತೆಗೆದುಕೊಳ್ಳಲಾಗಿದ್ದು, ಆರಂಭದಲ್ಲಿ ಪ್ರತಿ ಯೂನಿಟ್‌ಗೆ ₹ 1.12 ಲಕ್ಷ ಬೆಲೆ ಅಂದಾಜಿಸಲಾಗಿದೆ. ಆದರೆ, ಅಂದಾಜು ಬೆಲೆಯನ್ನು TWDಗೆ ತಿಳಿಸಿ ಟೆಂಡರ್ ಕರೆಯುವಾಗ ಯೂನಿಟ್ ದರವನ್ನು 6 ರಿಂದ ಗುಣಿಸಿ ಅಂದಾಜು ಬೆಲೆ ₹ 6.72 ಲಕ್ಷ ಎಂದು ತೋರಿಸಲಾಗಿದೆ. ಈ ಹೆಚ್ಚಿಸಿದ ಬೆಲೆಯನ್ನು ನಂತರದ PO ಗಳಿಗೆ ಅಳವಡಿಸಲಾಯಿತು.**
3. **ಸ್ಕ್ರೀನ್ ಮತ್ತು ವೈ–ಫೈ ರೂಟರ್ ಮಲ್ಟಿಪಲ್ ಆಂಟೆನಾ ಹೊಂದಿರುವ ಪ್ರೊಜೆಕ್ಟರ್‌ಗೆ ಸಂಬಂಧಿಸಿದಂತೆ, ವಿತರಿಸಲಾದ ಆಯಾ ಐಟಂಗಳ ಬಾಕ್ಸ್‌ನಲ್ಲಿ ಮುದ್ರಿಸಲಾದ MRP ಅನ್ನು ಕಿಯೋನಿಕ್ಸ್ ಅಂತಿಮಗೊಳಿಸಿದ ದರಗಳೊಂದಿಗೆ ಹೋಲಿಸಲಾಗಿದೆ.**
4. **ಇತರ ಉಪಕರಣ ವಸ್ತುಗಳಿಗೆ ಸಂಬಂಧಿಸಿದಂತೆ, ಮಾರುಕಟ್ಟೆ ಮೌಲ್ಯಗಳನ್ನು ಆನ್‌ಲೈನ್ ಮಾರುಕಟ್ಟೆ ಸ್ಥಳಗಳಿಂದ ಕಂಡುಹಿಡಿಯಲಾಗುತ್ತದೆ.**

**ಎಲ್ಲಾ 13 ಘಟಕಗಳಿಗೆ, ಅಂದಾಜು ಬೆಲೆಗಳು ನಿಜವಾದ ಮಾರುಕಟ್ಟೆ ಮೌಲ್ಯಕ್ಕಿಂತ ಪ್ರತಿ ಯೂನಿಟ್‌ಗೆ ₹ 17.78 ಲಕ್ಷ ಹೆಚ್ಚಾಗಿದೆ ಎಂದು ಈ ಪರಿಶೋಧನೆಯು ಬಹಿರಂಗಪಡಿಸಿತು. ಪರಿಣಾಮವಾಗಿ, TWD ಖರೀದಿಸಿದ 40 ಘಟಕಗಳಿಗೆ, BAಗಳಿಗೆ ಪಾವತಿಸಿದ ಹೆಚ್ಚುವರಿ ಮೊತ್ತವು ₹ 7.11 ಕೋಟಿಯಾಗಿದೆ.**

**ಅಧ್ಯಯನ ಪ್ರಕರಣ: 2**

**ಕುವೆಂಪು ವಿಶ್ವವಿದ್ಯಾನಿಲಯವು (KU) ಮಾರ್ಚ್ 2022 ರಲ್ಲಿ ಕಿಯೋನಿಕ್ಸ್ ನಲ್ಲಿ "All in one Smart Class Room" ನ 25 ಯೂನಿಟ್‌ಗಳಿಗೆ ಸರಬರಾಜು ಆದೇಶವನ್ನು ನೀಡಿದೆ. ಪ್ರಕರಣದಲ್ಲಿ, ಕಿಯೋನಿಕ್ಸ್ 'ಸ್ಮಾರ್ಟ್ ಕ್ಲಾಸ್ ರೂಮ್'ನ ಪ್ರತಿ ಘಟಕಕ್ಕೆ 34 ಉಪಕರಣಗಳನ್ನು ಗುರುತಿಸಿತ್ತು ಮತ್ತು ಪ್ರತಿ ಘಟಕಕ್ಕೆ ₹ 19,99,923 ಅಂದಾಜನ್ನು ಸಲ್ಲಿಸಿತು. KU ಅಂದಾಜನ್ನು ಅನುಮೋದಿಸಿ ತಲಾ ₹ 99,99,615/– ರಂತೆ ಐದು POಗಳನ್ನು (PO ನಂ. 149 ರಿಂದ 153) ನೀಡಿತ್ತು. ಎಲ್ಲಾ ಐದು POಗಳನ್ನು ಒಬ್ಬ BA (ಮೆ. ಹುನ್ನಾರವಿ ಟೆಕ್ನಾಲಜೀಸ್ ಪ್ರೈ. ಲಿ)ಗೆ ನೀಡಲಾಯಿತು ಮತ್ತು ಅವರು ಕಿಯೋನಿಕ್ಸ್ ಅಂದಾಜು ಬೆಲೆಗಿಂತ ಐದು ಶೇಕಡಾ ಕಡಿಮೆ (₹ 18,99,927) ಅನ್ನು ನಮೂದಿಸಿದ್ದರು. ಕಿಯೋನಿಕ್ಸ್ ಮತ್ತು BA ನಡುವೆ ಒಪ್ಪಂದವನ್ನು (ಏಪ್ರಿಲ್ 2022) ಕಾರ್ಯಗತಗೊಳಿಸಲಾಗಿತ್ತು.**

**ನಂತರ KUನ ತಾಂತ್ರಿಕ ಸಲಹಾ ಸಮಿತಿಯು ಮಾರ್ಚ್ 22 ರಂದು ಆದೇಶಿಸಿದ 34 ಘಟಕಗಳಲ್ಲಿ ಆರು (ಸೀಲ್ ಮೌಂಟಿಂಗ್ ಕಿಟ್, ಒಂದು ವರ್ಷದ ಸೇವಾ ಶುಲ್ಕ, ಇಂಟರ್ನೆಟ್ ಸಂಪರ್ಕ, ಸಾದೃಶ್ಯ ಸೌಂಡ್ ಮಿಕ್ಸರ್, ವಿವಿಧೋದ್ದೇಶ ಸೌಂಡ್ ಮಿಕ್ಸರ್, 3D ಸ್ಟಿಕ್ಕರಿಂಗ್) ಅನ್ನು ತೆಗೆದುಹಾಕಿತು ಮತ್ತು ಕಿಯೋನಿಕ್ಸ್‌ಗೆ (21 ಏಪ್ರಿಲ್ 2022) ಪರಿಷ್ಕೃತ ಅಂದಾಜನ್ನು ಒದಗಿಸಲು ಕೋರಿತ್ತು. ಮೂಲ ಅಂದಾಜಿನ ಪ್ರಕಾರ, KUನಿಂದ ಹೊರಗಿಡಲಾದ ಆರು ಘಟಕಗಳಿಗೆ ಪ್ರತಿ ಘಟಕಕ್ಕೆ ₹ 1.71 ಲಕ್ಷ ವೆಚ್ಚ ಎಂದು ಅಂದಾಜಿಸಲಾಗಿತ್ತು. ಹಾಗಾಗಿ ಪರಿಷ್ಕೃತ ಅಂದಾಜಿನಲ್ಲಿ ಆ ಮಟ್ಟಿಗೆ ವೆಚ್ಚ ಕಡಿಮೆಯಾಗುವ ನಿರೀಕ್ಷೆ ಇತ್ತು.**

**ಆದಾಗ್ಯೂ, ಕಿಯೋನಿಕ್ಸ್ ಸಲ್ಲಿಸಿದ ಪರಿಷ್ಕೃತ ಅಂದಾಜು ಪ್ರತಿ ಯೂನಿಟ್‌ಗೆ ₹ 19,98,819 ಆಗಿತ್ತು, ಇದು ಪ್ರತಿ ಯೂನಿಟ್‌ಗೆ ಕೇವಲ ₹ 1,108 ಕಡಿಮೆಯಾಗಿತ್ತು. ಪರಿಷ್ಕೃತ ಅಂದಾಜನ್ನು KU ಸಹ (27 ಏಪ್ರಿಲ್ 2022) ಒಪ್ಪಿಕೊಂಡಿತ್ತು.**

**ಇದು, ಕಿಯೋನಿಕ್ಸ್ ಸಿದ್ಧಪಡಿಸಿದ ಎರಡೂ ಅಂದಾಜುಗಳು ಉಪಕರಣಗಳ ನಿಜವಾದ ಮಾರುಕಟ್ಟೆ ಬೆಲೆಯ ಮೌಲ್ಯಮಾಪನವನ್ನು ಆಧರಿಸಿಲ್ಲ, ಆದರೆ ಆ ಖರೀದಿಗಾಗಿ ನಿಗದಿಪಡಿಸಿದ ನಿಧಿಗೆ ವೆಚ್ಚವನ್ನು ಸರಿ ಹೊಂದಿಸುವ ಉದ್ದೇಶದಿಂದಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ.**

**ಜುಲೈ 2022 ರಲ್ಲಿ, ಮಾರಾಟಗಾರರು 34 ಘಟಕಗಳಿಗೆ ಪರಿಷ್ಕೃತ POಗಳ ಪ್ರಕಾರ 28 ಉಪಕರಣಗಳನ್ನು ಮಾತ್ರ ಸರಬರಾಜು ಮಾಡಲಾಗಿದ್ದರು ಸಹ ಮೂಲ ಅಂದಾಜಿನ ಪ್ರಕಾರ 25 ಘಟಕಗಳ ಪೂರೈಕೆ ಮತ್ತು ಸ್ಥಾಪನೆಗೆ ಐದು ಬಿಲ್‌ಗಳನ್ನು ತಗಾದೆ ಮಾಡಿದ್ದು,. ಕಿಯೋನಿಕ್ಸ್ ಸಹ ಮಾರಾಟಗಾರರಿಂದ ತಗಾದೆ ಮಾಡಿದ್ದ ನಾಲ್ಕು ಬಿಲ್‌ಗಳನ್ನು ಪಾವತಿಸಿದೆ ಮತ್ತು ₹ 0.95 ಕೋಟಿಗೆ ಒಂದು ಬಿಲ್ ಡಿಸೆಂಬರ್ 2023ರ ಹೊತ್ತಿಗೆ ಬಾಕಿ ಉಳಿದಿತ್ತು. ಇದು ಕಿಯೋನಿಕ್ಸ್ ಮಾರಾಟಗಾರರು ಸಲ್ಲಿಸಿದ ಬಿಲ್‌ಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿಲ್ಲ ಎಂದು ಸ್ಥಾಪಿಸುತ್ತದೆ. ಸರಬರಾಜು ಮಾಡದ/ಸ್ಥಾಪಿನ ಮಾಡದ ಆರು ಉಪಕರಣಗಳಿಗೆ KU ಪರವಾಗಿ ಕಿಯೋನಿಕ್ಸ್ ಪಾವತಿಸಿದ ಮತ್ತು ಮಾರಾಟಗಾರರು ಮಾಡಿದ ತಪ್ಪಾದ ತಗಾದೆ ಮೊತ್ತ ₹ 42.74 ಲಕ್ಷ.**

**BA ಗಳಲ್ಲಿ ಈ PO ಗಳ ವಿರುದ್ಧ ಕರೆದ ಟೆಂಡರ್‌ಗಳು ಅಂದಾಜು ದರಗಳಿಗೆ ತುಂಬಾ ಹತ್ತಿರವಿರುವ L1 ಕೋಟ್‌ಗಳನ್ನು ಪಡೆದುಕೊಂಡಿರುವುದನ್ನು ಆಡಿಟ್ ಗಮನಿಸಿದೆ. ಹೆಚ್ಚಿನ ವಿಶ್ಲೇಷಣೆಯಲ್ಲಿ, ಪರಿಶೀಲಿಸಿದ ಎಲ್ಲಾ ಖರೀದಿ ಆದೇಶದ ಫೈಲ್‌ಗಳಲ್ಲಿ (347 POಗಳು), L1 ಬಿಡ್‌ದಾರರು ಉಲ್ಲೇಖಿಸಿದ ಬೆಲೆಗಳು ಕಿಯೋನಿಕ್ಸ್ ಅಂದಾಜು ಮಾಡಿದ ದರಗಳಿಗಿಂತ ಕೇವಲ ಮೂರು/ಐದು ಶೇಕಡಾ ಕಡಿಮೆ ಎಂದು ಆಡಿಟ್ ಗಮನಿಸಿದೆ. ಕಿಯೋನಿಕ್ಸ್ ಯಶಸ್ವಿ ಬಿಡ್ದಾರರಿಗೆ ಮೇಲೆ PO ಗಳನ್ನು ನೀಡಿತು ಮತ್ತು ಮೂರು/ಐದು ಪ್ರತಿಶತದಷ್ಟು ಸೇವಾ ಶುಲ್ಕವನ್ನು ಸೇರಿಸುವ ಮೂಲಕ ಸಂಬಂಧಿಸಿದ PE ಗಳ ಮೇಲೆ ಸರಕುಪಟ್ಟಿ ತಯಾರಿಸಿತು. ಹೀಗಾಗಿ, ಈ ಎಲ್ಲಾ ಸಂದರ್ಭಗಳಲ್ಲಿ, ಕಿಯೋನಿಕ್ಸ್‌ನ ಹೆಚ್ಚಿಸಿದ ಅಂದಾಜು ದರಗಳಲ್ಲಿ ಉಪಕರಣಗಳನ್ನು PE ಗಳಿಗೆ ಸರಬರಾಜು ಮಾಡಲಾಯಿತು. ಈ ವಿಷಯದಲ್ಲಿ ಒಂದು ವಿವರಣಾತ್ಮಕ ಪ್ರಕರಣವನ್ನು ಕೆಳಗೆ ಕೇಸ್ ಸ್ಟಡಿ 3 ಎಂದು ನೀಡಲಾಗಿದೆ:**

**ಅಧ್ಯಯನ ಪ್ರಕರಣ 3**

**ಜುಲೈ 2020 ರಲ್ಲಿ, ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರು (DMD) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 9 ಮತ್ತು 10 ನೇ ತರಗತಿಗಳಿಗೆ ಡಿಜಿಟಲ್ ತರಗತಿ ಸೌಲಭ್ಯಗಳನ್ನು ಸ್ಥಾಪಿಸಲು ಪ್ರಯತ್ನಿಸಿದರು. ಅದರಂತೆ ರಾಜ್ಯದಲ್ಲಿ 192 ಡಿಜಿಟಲ್ ತರಗತಿ ಕೋಣೆಗಳನ್ನು ಸ್ಥಾಪಿಸಬೇಕಿತ್ತು. ಕಿಯೋನಿಕ್ಸ್ ಡಿಜಿಟಲ್ ತರಗತಿ ಕೋಣೆಗಾಗಿ ಆರು ಉಪಕರಣಗಳನ್ನು ಪರಿಗಣಿಸಿತ್ತು ಮತ್ತು ಪ್ರತಿ ಡಿಜಿಟಲ್ ತರಗತಿ ಕೋಣೆಗೆ ₹ 4.25 ಲಕ್ಷ ವೆಚ್ಚ ಅಂದಾಜಿಸಲಾಗಿತ್ತು ಮತ್ತು ಅದನ್ನು DMDಗೆ (ಜುಲೈ 2020) ತಿಳಿಸಿತು. ಸೆಪ್ಟೆಂಬರ್ 2020 ರಲ್ಲಿ DMD ಯಿಂದ ದರವನ್ನು ಅನುಮೋದಿಸಲಾಗಿದ್ದು, ತದ ನಂತರ ಕಿಯೋನಿಕ್ಸ್ 13 ಅಕ್ಟೋಬರ್ 2020 ರಂದು 14 ಟೆಂಡರ್‌ಗಳನ್ನು ಆಹ್ವಾನಿಸಿತು. ಕೇವಲ ಇಬ್ಬರು (M/s SKR ಇನ್‌ಫ್ರಾಸ್ಟ್ರಕ್ಚರ್ಸ್ ಮತ್ತು M/s ನ್ಯೂಜೀನ್ ಸೆಕ್ಯುರಿಟಿ ಸೊಲ್ಯೂಷನ್ಸ್ LLP) BAಗಳು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದರು ಮತ್ತು ಅವರಿಬ್ಬರೂ ತಲಾ ಏಳು ಟೆಂಡರ್‌ಗಳಿಗೆ ಪ್ರತಿ ಘಟಕಗಳಿಗೆ ₹ 4.85 ಲಕ್ಷಗಳಂತೆ L1 ಆಗಿದ್ದರು. ಅಲ್ಲದೆ, ಇಬ್ಬರೂ BAಗಳು L2 ಎಂದು ಘೋಷಿಸಲಾದ ಇತರ ತಲಾ ಏಳು ಟೆಂಡರ್‌ಗಳಲ್ಲಿ ಒಂದೇ ಬೆಲೆಯನ್ನು ನಮೂದಿಸಿದ್ದರು. ಅದರಂತೆ, ಕಿಯೋನಿಕ್ಸ್, ಪ್ರತಿ ಘಟಕಕ್ಕೆ ₹ 4.85 ಲಕ್ಷಕ್ಕೆ 14 POಗಳನ್ನು ಅಂತಿಮಗೊಳಿಸಿತು.**

**ಹೀಗಾಗಿ, ವರ್ಧಿತ ಬೆಲೆ ಅಂದಾಜುಗಳನ್ನು ಅನುಸರಿಸಿ ಕೆಲವೇ BAಗಳಿಂದ ಬಿಡ್‌ಗಳನ್ನು ಸಲ್ಲಿಕೆಯಾಗಿರುವುದು ಗುಂಪುಗಾರಿಕೆಯನ್ನು ಸೂಚಿಸುತ್ತವೆ.**

**ಪೂರೈಕೆಯ ಚಲನ್‌ಗಳು, BAಗಳಿಂದ ನೀಡಲ್ಪಟ್ಟ ಇನ್‌ವಾಯ್ಸ್‌ಗಳು, ಪೂರೈಕೆಯ ಛಾಯಾಚಿತ್ರ ಪುರಾವೆಗಳು, ಉಪಕರಣಗಳನ್ನು ಸ್ಥಾಪಿಸಿದ GPS ಸ್ಥಳ ಇತ್ಯಾದಿಗಳ ಪರಿಶೀಲನೆಯೊಂದಿಗೆ PO ಗಳಲ್ಲಿ ನಮೂದಿಸಲಾದ ವಿಶೇಷಣಗಳು / ಪ್ರಮಾಣಗಳ ಆಧಾರದ ಮೇಲೆ ಲೆಕ್ಕಪರಿಶೋಧನೆಯು ಸಲಕರಣೆಗಳ ಪೂರೈಕೆಯನ್ನು ಪರಿಶೀಲಿಸಿತು. ಇದಲ್ಲದೆ, ಲೆಕ್ಕಪರಿಶೋಧನೆಯಲ್ಲಿ ಸಂಬಂಧಿತ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆ (JPV) ಅನ್ನು ಸಹ ನಡೆಸಲಾಯಿತು, ಸರಬರಾಜು ಮಾಡಿದ ಸಲಕರಣೆಗಳ ವಿತರಣೆ ಮತ್ತು ಸ್ಥಾಪನೆಯನ್ನು ಪರಿಶೀಲಿಸಲಾಯಿತು. ಅಂತಹ ಪರಿಶೀಲನೆ ಮತ್ತು ದಾಖಲೆಗಳ ಪರೀಕ್ಷೆಯ ಪರಿಣಾಮವಾಗಿ ಕಂಡುಬಂದ ನ್ಯೂನ್ಯತೆಗಳನ್ನು, ಈ ಕೆಳಗಿನ ಕಂಡಿಕೆಗಳಲ್ಲಿ ನೀಡಲಾಗಿದೆ.**

***BA ಯಿಂದ ಸರಬರಾಜು ಮಾಡದ ಉಪಕರಣಗಳು/ಘಟಕಗಳಿಗಾಗಿ ಮಾಡಿದ ಪಾವತಿಗಳು***

**6.1.8 ಸೆಪ್ಟೆಂಬರ್ 2023ರಲ್ಲಿ, BAಗಳು ಎಂ.ಡಬ್ಲ್ಯೂ.ಡಿ ಮತ್ತು ಟಿ.ಡಬ್ಲ್ಯೂ.ಡಿಯಿಂದ ಸಂಗ್ರಹಣೆಗಳಿಗೆ ಸಂಬಂಧಿಸಿದಂತೆ ಉಪಕರಣಗಳು /ಸಂಬಂಧಿತ ಘಟಕಗಳ ನಿಜವಾದ ಪೂರೈಕೆಯಿಲ್ಲದೆ ₹ 9.36 ಕೋಟಿ ಹಕ್ಕೊತ್ತಾಯ ಮಾಡಿದ್ದರು ಎಂದು ಲೆಕ್ಕಪರಿಶೋಧನೆ ಗಮನಿಸಿದೆ. ಕಿಯೋನಿಕ್ಸ್ ಸಹ BAಗಳು ಹಕ್ಕೊತ್ತಾಯ ಮಾಡಿದ ಮೊತ್ತವನ್ನು, ಸಮರ್ಪಕ ಪರಿಶೀಲನೆ ನಡೆಸದೆ ಮತ್ತು ದಾಖಲೆಗಳ ಪರಿಶೀಲನೆ ಇಲ್ಲದೆ ಪಾವತಿಸಿದೆ, ಇದು *ಕೋಷ್ಟಕ 6.1.1*ರಲ್ಲಿ ವಿವರಿಸಿದಂತೆ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಳ್ಳಲು ಕಾರಣವಾಯಿತು.**

**ಕೋಷ್ಟಕ ಸಂಖ್ಯೆ.6.1.1: ಮೋಸದ ಹಕ್ಕೋತ್ತಾಗಳ ಮೇಲೆ BAಗಳಿಗೆ ಪಾವತಿಗಳು**

| ಕ್ರಮ ಸಂಖ್ಯೆ | ವಸ್ತುಗಳ ವಿವರ | ಸಂಖ್ಯೆಯಲ್ಲಿ ಪ್ರಮಾಣ | ಅಂದಾಜುಗಳು ಮತ್ತು ಇನ್‌ವಾಯ್ಸ್‌ಗಳ ಪ್ರಕಾರ ಬೆಲೆ (₹ ಲಕ್ಷದಲ್ಲಿ) | ಗಮನಿಸಲಾದ ಅಂಶಗಳು | BAಗಳಿಗೆ ಹೆಚ್ಚುವರಿ / ಮೋಸದ ಪಾವತಿ (₹ ಕೋಟಿಯಲ್ಲಿ) |
|---|---|---|---|---|---|
| 1. | ಸ್ಮಾರ್ಟ್ ಕ್ಲಾಸ್ ಪರಿಹಾರ (ಇಂಟರಾಕ್ಟಿವ್ ಡಿಸ್‌ಪ್ಲೇ ಬೋರ್ಡ್ 65 ಇಂಚು, ಆಂಡ್ರಾಯ್ಡ್ ಬಾಕ್ಸ್, 1 ಕೆವಿಎ ಯುಪಿಎಸ್, ಲೆನೊವೊ 7 ಇಂಚಿನ ಲರ್ನಿಂಗ್ ಟ್ಯಾಬ್ ಮತ್ತು ಮೌಸ್) | 192 | 5.10 | ಇಬ್ಬರು BAಗಳು ಎರಡು ವಿಭಿನ್ನ PO ಫೈಲ್‌ಗಳಲ್ಲಿ ಒಂದೇ ವಿತರಣಾ ಚಲನ್‌ಗಳನ್ನು ಸಲ್ಲಿಸುವ ಮೂಲಕ ಬಿಲ್ ಅನ್ನು ಹಕ್ಕೊತ್ತಾಯ ಮಾಡಿದ್ದರು ಮತ್ತು ಕಿಯೋನಿಕ್ಸ್ ಎರಡೂ PO ಗಳಿಗೆ ಬಿಲ್‌ಗಳನ್ನು ಪಾವತಿಸಿತ್ತು. 37 ಡಿಜಿಟಲ್ ತರಗತಿ ಕೊಠಡಿಗಳನು[95] ಸರಬರಾಜು ಮಾಡಿ ಅಳವಡಿಸದಿರುವುದು ಲೆಕ್ಕಪರಿಶೋಧನೆಯ ಗಮನಕ್ಕೆ ಬಂದಿತು. ಹೀಗಾಗಿ, BAಗಳು ವಿತರಣಾ ಚಲನ್‌ಗಳ ನಕಲು ಪ್ರತಿಗಳನ್ನು ಆಧರಿಸಿ ₹ 1.79 ಕೋಟಿ ವಂಚನೆಯ ಹಕ್ಕೊತ್ತಾಯ ಮಾಡಿದ್ದರು. | 1.79 |
| 2. | ಆಂಡ್ರಾಯ್ಡ್ ಬಾಕ್ಸ್ (ಮೇಲಿನ ಕ್ರ. ಸಂ. 1 ರಲ್ಲಿ ಉಲ್ಲೇಖಿಸಲಾದ ಐಟಂಗಳ ಪೈಕಿ) | 192 | 1.18 | ಮೊರಾರ್ಜಿ ದೇಸಾಯಿ ಶಾಲೆಗಳು/ಹಾಸ್ಟೆಲ್‌ಗಳ ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ ಹಾಸ್ಟೆಲ್ಗಳು ಸ್ಮಾರ್ಟ್ ಕ್ಲಾಸ್‌ನೊಂದಿಗೆ ಆಂಡ್ರಾಯ್ಡ್ ಬಾಕ್ಸ್‌ಗಳನ್ನು ಸರಬರಾಜು ಮಾಡಿಲ್ಲ ಎಂದು JPV ಸಮಯದಲ್ಲಿ ದೃಢಪಡಿಸಿದರು. ಹೀಗಾಗಿ, BAಗಳು ₹ 1.83 ಕೋಟಿಯ ಮೋಸದ ಹಕ್ಕೊತ್ತಾಯ ಮಾಡಿದ್ದಾರು (ಮೇಲಿನ ಕ್ರ. ಸಂ. 1 ರಲ್ಲಿ ಉಲ್ಲೇಖಿಸಲಾದ 37 ಘಟಕಗಳನ್ನು ಹೊರತುಪಡಿಸಿ ಉಳಿದ 155 ಘಟಕಗಳಿಗೆ ಸಂಬಂಧಿಸಿರುವುದು) | 1.83 |
| | ಒಟ್ಟು | | | | 3.62 |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಲಾದ ದತ್ತಾಂಶ*

ಅಂತೆಯೇ, ಟಿ.ಡಬ್ಲ್ಯೂ.ಡಿ[96] ಯಿಂದ ಮಾಡಿದ ನಾಲ್ಕು ಖರೀದಿಗಳಲ್ಲಿ, *ಕೋಷ್ಟಕ 6.1.2*ರಲ್ಲಿ ವಿವರಿಸಿದಂತೆ ಕೆಲವು ಉಪಕರಣಗಳನ್ನು BAಯಿಂದ ಸರಬರಾಜು ಮಾಡಲಾಗಿರಲಿಲ್ಲ. ಆದಾಗ್ಯೂ, ಕೆಳಗೆ ವಿವರಿಸಿದಂತೆ ಸರಬರಾಜು ಮಾಡದಿದ್ದರೂ ಸಹ ಕಿಯೋನಿಕ್ಸ್ BAಗಳಿಗೆ ₹ 5.74 ಕೋಟಿ ಪಾವತಿಸಲಾಗಿತ್ತು.

**ಕೋಷ್ಟಕ ಸಂಖ್ಯೆ.6.1.2: BAಗಳು ಪೂರೈಸದ ಆದರೆ ಕಿಯೋನಿಕ್ಸ್‌ನಿಂದ ಪಾವತಿಸಲ್ಪಟ್ಟ ಉಪಕರಣಗಳ ವಿವರಗಳು**

| ಕ್ರಮ ಸಂಖ್ಯೆ | PO ಪ್ರಕಾರ ಖರೀದಿಸಿದ ಸಲಕರಣೆಗಳ ವಿವರಗಳು ಮತ್ತು ಉಪಕರಣಗಳ ಸಂಖ್ಯೆ | ಸರಬರಾಜು ಮಾಡದಿದ್ದ ಉಪಕರಣಗಳು | ಕಿಯೋನಿಕ್ಸ್‌ನಿಂದ ವಿಧಿಸಲಾದ ಬೆಲೆ (₹ ನಲ್ಲಿ) | ಉಪಕರಣಗಳ ಸರಬರಾಜಿನಲ್ಲಾದ ಕೊರತೆ | ಹೆಚ್ಚುವರಿ ಪಾವತಿ (₹ ಕೋಟಿಗಳಲ್ಲಿ) |
|---|---|---|---|---|---|
| 1. | ಕಂಪ್ಯೂಟರ್ ಪ್ರಯೋಗಾಲಯ ಸೆಟ್ ಅಪ್ ಟೈಪ್ I 40 ಘಟಕಗಳು | ಆಂಟಿವೈರಸ್ (ಅವಸ್ಟ್/ಕ್ವಿಕ್ ಹೀಲ್ ಮ್ಯಾಕ್‌ಅಫೀ/ನಾರ್ಟನ್ / ಗುಡ್ ಒನ್) | 76,700 | | |
| | | ಸಾಫ್ಟ್‌ವೇರ್ (MS ಆಫೀಸ್ 13) | 2,74,940 | | |
| | | ಇಂಟರ್ನೆಟ್ ಸಂಪರ್ಕ – 1 ವರ್ಷ | 12,331 | | |
| | | ಒಟ್ಟು (1) | 3,63,971 | 40 | 1.46 |
| 2. | ಕಂಪ್ಯೂಟರ್ ಪ್ರಯೋಗಾಲಯ | ಆಂಟಿವೈರಸ್ (ಅವಸ್ಟ್/ಕ್ವಿಕ್ ಹೀಲ್ ಮ್ಯಾಕ್‌ಅಫೀ/ನಾರ್ಟನ್/ ಗುಡ್ ಒನ್) | 72,865 | | |

[95] ವಿಜಯನಗರ (ಕೂಡ್ಲಿಗಿ)–2, ಧಾರವಾಡ–2, ಗದಗ–4, ಹಾವೇರಿ–2, ಕಲಬುರ್ಗಿ–8, ಕೊಪ್ಪಳ–12, ರಾಯಚೂರು–4, ಮೈಸೂರು–1 ಮತ್ತು ರಾಮನಗರ–2.

[96] ಮೇಲಿನ ರೇಖಾಚಿತ್ರ ಸಂಖ್ಯೆ 6.1.4ರ ಇ–1, ಇ–2, ಇ–4 ಮತ್ತು ಇ–5ರಲ್ಲಿ ಉಲ್ಲೇಖಿಸಲಾಗಿದೆ.

| | | | | | |
|---|---|---|---|---|---|
| | ಸೆಟ್ ಅಪ್ ಟೈಪ್ II 56 ಘಟಕಗಳು | ಸಾಫ್ಟ್‌ವೇರ್ (MS ಆಫೀಸ್ 13) | **2,24,200** | | |
| | | ಇಂಟರ್ನೆಟ್ ಸಂಪರ್ಕ – 1 ವರ್ಷ | **12,331** | | |
| | | ಒಟ್ಟು (2) | **3,09,396** | **56** | **1.73** |
| **3.** | ಕಂಪ್ಯೂಟರ್ ಮತ್ತು ಪರಿಕರಗಳು – ಟೈಪ್ I 29 ಘಟಕಗಳು | ಆಂಟಿವೈರಸ್ (ಅವಸ್ಟ್/ಕ್ವಿಕ್ ಹೀಲ್ ಮ್ಯಾಕ್‌ಅಫೀ/ನಾರ್ಟನ್/ಗುಡ್ ಒನ್) | **76,700** | | |
| | | ಪಠ್ಯಪುಸ್ತಕವನ್ನು PDF ಗೆ ಪ್ರೊಜೆಕ್ಷನ್‌ಗೆ ಪರಿವರ್ತಿಸುವುದು | **2,89,100** | | |
| | | ಸಾಫ್ಟ್‌ವೇರ್ (MS ಆಫೀಸ್ 13, ಇಂಗ್ಲಿಷ್ ಗ್ರಾಮರ್ ಮತ್ತು ಮೂಲ ಶೈಕ್ಷಣಿಕ ಸಾಫ್ಟ್‌ವೇರ್) | **2,74,940** | | |
| | | ಇಂಟರ್ನೆಟ್ ಸಂಪರ್ಕ – 1 ವರ್ಷ | **12,331** | | |
| | | ಒಟ್ಟು (3) | **6,53,071** | **29** | **1.89** |
| **4.** | ಕಂಪ್ಯೂಟರ್ ಮತ್ತು ಪರಿಕರಗಳು – ಟೈಪ್ II 10 ಘಟಕಗಳು | ಆಂಟಿವೈರಸ್ (ಅವಸ್ಟ್/ಕ್ವಿಕ್ ಹೀಲ್ ಮ್ಯಾಕ್‌ಅಫೀ/ನಾರ್ಟನ್/ಗುಡ್ ಒನ್) | **76,700** | | |
| | | ಪಠ್ಯಪುಸ್ತಕವನ್ನು PDF ಗೆ ಪ್ರೊಜೆಕ್ಷನ್‌ಗೆ ಪರಿವರ್ತಿಸುವುದು | **2,89,100** | | |
| | | ಸಾಫ್ಟ್‌ವೇರ್ (MS ಆಫೀಸ್ 13, ಇಂಗ್ಲಿಷ್ ಗ್ರಾಮರ್ ಮತ್ತು ಮೂಲ ಶೈಕ್ಷಣಿಕ ಸಾಫ್ಟ್‌ವೇರ್) | **2,74,940** | | |
| | | ಇಂಟರ್ನೆಟ್ ಸಂಪರ್ಕ – 1 ವರ್ಷ | **12,331** | | |
| | | ಒಟ್ಟು (4) | **₹ 6,53,071** | **10** | **0.65** |
| | ಸಮಗ್ರ ಮೊತ್ತ | | | **135** | **5.74** |

*ಮೂಲ: ಲೆಕ್ಕಪರಿಶೋಧನೆಯಿಂದ ಸಂಗ್ರಹಿಸಲಾದ ದತ್ತಾಂಶ*

ಈ ನಿದರ್ಶನಗಳು ಆಂತರಿಕ ನಿಯಂತ್ರಣ ವ್ಯವಸ್ಥೆಗಳಾದ (i) ನೀಡಲಾದ POಗಳಿಗೆ ಸಂಬಂಧಿಸಿದಂತೆ BAಗಳು ಸಲ್ಲಿಸಿದ ಬಿಲ್‌ಗಳ ಪರಿಶೀಲನೆಗಾಗಿ ಫೂಲ್–ಪ್ರೂಫ್ ವಿಧಾನಗಳು (ii) ಸಂಪೂರ್ಣ ವಿತರಣೆ ಮತ್ತು ಉಪಕರಣಗಳ ಸ್ಥಾಪನೆಯನ್ನು ಖಚಿತಪಡಿಸಿಕೊಳ್ಳಲು ಸಮರ್ಥ ಸ್ಟಾಕ್ ಪರಿಶೀಲನಾ ಕಾರ್ಯವಿಧಾನವು ಕಿಯೋನಿಕ್ಸ್‌ನಲ್ಲಿ ಇಲ್ಲದಿರುವುದನ್ನು ತೋರಿಸುತ್ತದೆ. ಪ್ರಕ್ರಿಯೆಯ ಫ್ಲೋಚಾರ್ಟ್ ಸಂಖ್ಯೆ. 1ರಲ್ಲಿ ತೋರಿಸಿರುವಂತೆ, ಸಂಗ್ರಹಣೆ ಪ್ರಕ್ರಿಯೆಯಲ್ಲಿ TPV ಅನ್ನು ಕಲ್ಪಿಸಲಾಗಿದೆಯಾದರೂ, ಸಲಹೆಗಾರರ ನೇಮಕಾತಿಯಲ್ಲಿ ನ್ಯೂನತೆಗಳು, TPV ವರದಿಯ ನಿಜವಾದ ಡೆಲಿವರಿ ಚಲನ್‌ಗಳು, ಇನ್‌ವಾಯ್ಸ್‌ಗಳು ಮತ್ತು BAಗಳು ಸಲ್ಲಿಸಿದ ಛಾಯಾಚಿತ್ರ ಸಾಕ್ಷ್ಯಗಳ ಅಡ್ಡ ಪರಿಶೀಲನೆ ಇತ್ಯಾದಿ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದವುಗಳನ್ನು ನಂತರದ ಪ್ಯಾರಾಗಳಲ್ಲಿ ಚರ್ಚಿಸಲಾಗಿದೆ.

***ಕಿಯೋನಿಕ್ಸ್ ಅಳವಡಿಸಿಕೊಂಡ ಮೂರನೇ ವ್ಯಕ್ತಿಯಿಂದ ಪರಿಶೀಲನಾ ವ್ಯವಸ್ಥೆಯಲ್ಲಿನ ಕೊರತೆಗಳು***

**6.1.9** ಮೂರನೇ ವ್ಯಕ್ತಿಯಿಂದ ಪರಿಶೀಲನೆ (TPV ಹಕ್ಕೊತ್ತಾಯಗಳ ನೈಜತೆಯನ್ನು ಪರಿಶೀಲಿಸುವ ಉದ್ದೇಶದಿಂದ ಮತ್ತು ನಿರ್ದಿಷ್ಟವಾಗಿ ಆದೇಶಿಸಿದ ಉಪಕರಣದ ವಿತರಣೆಯ ನಂತರ ಮಾತ್ರ ಪಾವತಿಯನ್ನು ಮಾಡಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ನಡೆಸಲಾತುತ್ತದೆ. TPVಗೆ ಸಂಬಂಧಿಸಿದಂತೆ KTPP ಕಾಯಿದೆಯಡಿಯಲ್ಲಿ ನೀಡಲಾದ GO, ಸಲಹಾ ಸೇವೆಗಳ ಸಂಗ್ರಹಣೆಯ ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ ಸಮಗ್ರತೆ ಮತ್ತು ವೃತ್ತಿಪರತೆಗೆ ಹೆಸರುವಾಸಿಯಾದ ಸಲಹೆಗಾರರನ್ನು (ಸಂಸ್ಥೆಯ ವ್ಯಕ್ತಿಯಾಗಲಿ) ನೇಮಿಸಬೇಕಾಗಿರುತ್ತದೆ. ಆದಾಗ್ಯೂ, ಕಿಯೋನಿಕ್ಸ್ ಅಳವಡಿಸಿಕೊಂಡ TPV ವಿಧಾನವು ಕೆಳಗೆ ಪಟ್ಟಿ ಮಾಡಲಾದ ನ್ಯೂನತೆಗಳಿಂದ ಬಳಲುತ್ತಿದೆ ಎಂದು ಗಮನಿಸಲಾಗಿದೆ:

(1) **BAಗಳಿಂದ TPV ಸಲಹೆಗಾರರ ಸಮಾಲೋಚಕರ ನೇಮಕಾತಿ:** POಗಳನ್ನು ನೀಡಲಾದ BAಗಳಿಗೆ TPV ಸಲಹೆಗಾರರ ನೇಮಕಾತಿಯನ್ನು ಕಿಯೋನಿಕ್ಸ್ ವಹಿಸಿಕೊಟ್ಟಿರುವುದನ್ನು ಆಡಿಟ್ ಗಮನಿಸಿದೆ. ಅಂತಹ ನೇಮಕಾತಿಯು ಸ್ವಾಭಾವಿಕ ಹಿತಾಸಕ್ತಿ ಸಂಘರ್ಷವನ್ನು ಹೊಂದಿದೆ ಏಕೆಂದರೆ BAಗಳಿಂದ ನೇಮಕಗೊಂಡ TPV ಸಮಾಲೋಚಕರು ನೀಡಿದ ತಪಾಸಣೆ ವರದಿಗಳು BAಗಳ ಪರವಾಗಿ ಪಕ್ಷಪಾತಿಯಾಗಿರಬಹುದು.

(2) **ಕಿಯೋನಿಕ್ಸ್‌ನಿಂದ TPV ಸಲಹೆಗಾರರಿಗೆ ನಿರ್ದೇಶನಗಳು/ಮಾರ್ಗದರ್ಶನಗಳ ಅನುಪಸ್ಥಿತಿ:** PO ಮತ್ತು PEಯ ಅವಶ್ಯಕತೆಗಳಿಗೆ ಅನುಗುಣವಾಗಿ ಸರಬರಾಜು ಮಾಡಲಾದ ಪ್ರತಿಯೊಂದು ಘಟಕ/ಉಪಕರಣಗಳ ವಿಶೇಷಣಗಳು ಮತ್ತು ಸಂರಚನೆಯನ್ನು ಪರಿಶೀಲಿಸಲು TPV ಸಲಹೆಗಾರರಿಗೆ ಕಿಯೋನಿಕ್ಸ್ ಯಾವುದೇ ಮಾರ್ಗಸೂಚಿಗಳು ಅಥವಾ ಪರಿಶೀಲನಾಪಟ್ಟಿಗಳನ್ನು ನೀಡಿರಲಿಲ್ಲ. ಉದಾಹರಣೆಗೆ, IT ಉಪಕರಣಗಳ ಸಂದರ್ಭದಲ್ಲಿ ಹಾರ್ಡ್ ಡಿಸ್ಕ್, RAM, ಪ್ರೊಸೆಸರ್ ಸಾಮರ್ಥ್ಯ, ಸ್ಥಾಪಿಸಲಾದ ಸಾಫ್ಟ್‌ವೇರ್‌ನ ಆವೃತ್ತಿಗಳು ಇತ್ಯಾದಿಗಳಂತಹ ವಸ್ತುಗಳ ನಿರ್ದಿಷ್ಟತೆಯನ್ನು ಪರಿಶೀಲಿಸುವುದು ಅತ್ಯಗತ್ಯ. ಮಾರ್ಗಸೂಚಿಗಳ ಅನುಪಸ್ಥಿತಿಯಲ್ಲಿ, POಗಳಲ್ಲಿ ಉಲ್ಲೇಖಿಸಿದಂತೆ ವಿತರಿಸಲಾದ IT ಉಪಕರಣಗಳು ವಿಶೇಷಣಗಳಿಗೆ ಅನುಗುಣವಾಗಿವೆಯೇ ಎಂದು ಪರಿಶೀಲಿಸಲು ಯಾವುದೇ ಕಾರ್ಯವಿಧಾನವಿರಲಿಲ್ಲ.

(3) **ಮೂರನೇ ವ್ಯಕ್ತಿಯ ತಪಾಸಣೆ ನಡೆಸದೆ ಪಾವತಿ:** 347 ಪರೀಕ್ಷಾರ್ಥ ತಪಾಸಣೆಗೊಳಪಡಿಸಿದ POಗಳಲ್ಲಿ 155 ರಲ್ಲಿ TPV ನಡೆಸದೆ ₹ 85.98 ಕೋಟಿ ಪಾವತಿ ಮಾಡಲಾಗಿತ್ತು.

ಈ ಪ್ರಕಾರಗಳಿಂದ BAಗಳು ಉಪಕರಣಗಳ ನೈಜ ಸರಬರಾಜು ಮಾಡದೆ ಮೋಸದ ಹಕ್ಕೊತ್ತಾಯಗಳನ್ನು ಸಲ್ಲಿಸಿದ್ದನ್ನು ಆಧರಿಸಿ ಅವರಿಗೆ ಪಾವತಿಗಳನ್ನು ಮಾಡಲಾಗಿದ್ದು, ಅವರು ಸರಬರಾಜುಮಾಡಿದ ಪ್ರಮಾಣಕ್ಕಿಂತ ಹೆಚ್ಚಿನ ಪಾವತಿಯಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಸರಬರಾಜು ಮಾಡಿದ ಪ್ರಮಾಣ ಮತ್ತು ತಾಂತ್ರಿಕ ವಿಶೇಷಣಗಳ ಪರಿಶೀಲನೆಯನ್ನು ಖಚಿತಪಡಿಸಿಕೊಳ್ಳುವ ಕ್ರಮವಾಗಿ, ಕಿಯೋನಿಕ್ಸ್ ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯ ಸೇವೆಗಳನ್ನು ಪಡೆದುಕೊಂಡಿದೆ ಮತ್ತು ಕ್ಷೇತ್ರ ಪರಿಶೀಲನೆಯ ವರದಿಗಳನ್ನು ಡಿ.ಟಿ.ಇ ಯಿಂದ ಸಲ್ಲಿಸಲಾಗುತ್ತಿದೆ ಎಂದು ಸರ್ಕಾರವು (ಮೇ 2024) ಉತ್ತರಿಸಿದೆ. ಇದಲ್ಲದೆ, ಮೇಲೆ ತಿಳಿಸಿದ KTPP ಅವಶ್ಯಕತೆಯ ಪ್ರಕಾರ, ಮೂರನೇ ವ್ಯಕ್ತಿಯ ತಪಾಸಣೆ (TPI) ಏಜೆನ್ಸಿಗಳನ್ನು ನೇಮಿಸಲು ಪ್ರಸ್ತಾವನೆಗಾಗಿ ವಿನಂತಿಯನ್ನು (RFP) ಪ್ರಕಟಿಸಲು ಕಿಯೋನಿಕ್ಸ್ ಪ್ರಸ್ತಾಪಿಸಿದೆ.

***ನಕಲಿ ವಿತರಣಾ ಚಲನ್‌ಗಳು ಮತ್ತು ನಕಲಿ TPV ವರದಿಯ ಮೇಲೆ BAಗೆ ಪಾವತಿ***

**6.1.10** ಎಂ.ಡಬ್ಲ್ಯೂ.ಡಿ ಮಾರ್ಚ್ 2020ರಲ್ಲಿ 70 ಮೊರಾರ್ಜಿ ವಸತಿ ಶಾಲೆ/ ಅಲ್ಪಸಂಖ್ಯಾತರ ಹಾಸ್ಟೆಲ್ ಘಟಕಗಳಿಗೆ (34 ಘಟಕಗಳಿಗೆ PO ನಂ. 179 ಮತ್ತು 36 ಘಟಕಗಳಿಗೆ PO ನಂ. 180) ಚಿಲ್ಲರ್‌ಗಳ (ರೆಫ್ರಿಜರೇಟರ್‌ಗಳು) ಪೂರೈಕೆಗಾಗಿ ಎರಡು POಗಳನ್ನು ನೀಡಿತ್ತು. ಅವುಗಳಿಗೆ ಪ್ರತಿಯಾಗಿ, ಕಿಯೋನಿಕ್ಸ್ ಡಿಜಿಟಲ್ ಮೈಕ್ರೋ ಆಧಾರಿತ ತಾಪಮಾನ ನಿಯಂತ್ರಿತ ಚಿಲ್ಲರ್‌ಗೆ (650 L) ₹1,94,350 (₹1,48,453 + GST ಶೇ 18) ಉಲ್ಲೇಖಿಸಿತ್ತು. ಕಿಯೋನಿಕ್ಸ್ ₹ 1.39 ಕೋಟಿ[97] ಮುಂಗಡವಾಗಿ ಪಡೆದಿತ್ತು. ಕೆಲಸದ ಆದೇಶದ ಷರತ್ತುಗಳ ಪ್ರಕಾರ, ಕಿಯೋನಿಕ್ಸ್ ಚಿಲ್ಲರ್‌ಗಳನ್ನು ಪೂರೈಸುವ ಮೊದಲು ಮಾದರಿ, ತಯಾರಿಕೆ, ಬ್ರ್ಯಾಂಡ್ ಮತ್ತು ದರದ ವಿವರಗಳನ್ನು ಒದಗಿಸಬೇಕಾಗಿತ್ತು ಮತ್ತು TPV ಅನ್ನು ಸರಬರಾಜುದಾರರಿಂದ ನಡೆಸಲಾಗುವುದೆಂದು ಮತ್ತು ವರದಿಯನ್ನು ತಯಾರಿಸಲಾಗುವುದೆಂದು ಪ್ರತಿ ಹಾಸ್ಟೆಲ್‌ನ ಪ್ರಾಂಶುಪಾಲರು ಪ್ರಮಾಣೀಕರಿಸಿದ ವಿತರಣಾ ಚಲನ್‌ಗಳನ್ನು ಮತ್ತು ಸರಬರಾಜು ಮಾಡಿದ ಸಲಕರಣೆಗಳ ಛಾಯಾಚಿತ್ರಗಳನ್ನು ಪಾವತಿಗಾಗಿ ಕಿಯೋನಿಕ್ಸ್‌ಗೆ ಸಲ್ಲಿಸಲಾಗುತ್ತದೆ.

ಈ ನಿರ್ದಿಷ್ಟ ಪ್ರಕರಣದಲ್ಲಿ, ಎಲ್ಲಾ ಚಿಲ್ಲರ್ ಘಟಕಗಳನ್ನು PE ಸೂಚಿಸಿದ್ದ ಸ್ಥಳಗಳಿಗೆ ಪೂರೈಸಲಾಗಿದೆ ಮತ್ತು ಸ್ಥಾಪಿಸಲಾಗಿದೆ ಎಂದು ತಿಳಿಸಿ BA ಪಾವತಿಯನ್ನು ಹಕ್ಕೊತ್ತಾಯ ಮಾಡಿದ್ದರು. ಹಕ್ಕೊತ್ತಾಯದ ಬೆಂಬಲವಾಗಿ BA, TPV ವರದಿಗಳನ್ನು ಸಲ್ಲಿಸಿದ್ದರು. ಅಕ್ಟೋಬರ್ 2020 ರಲ್ಲಿ ಎಂ.ಡಬ್ಲ್ಯೂ.ಡಿ ಯಿಂದ ಪಾವತಿಯನ್ನು ಬಿಡುಗಡೆ ಮಾಡಲು ಕಿಯೋನಿಕ್ಸ್ ಅನುಮೋದನೆಯನ್ನು ಕೋರಿತು ಮತ್ತು ಎಂ.ಡಬ್ಲ್ಯೂ.ಡಿ 70 ಚಿಲ್ಲರ್‌ಗಳಲ್ಲಿ 52 ಅನ್ನು BAನಿಂದ ಸರಬರಾಜು ಮಾಡಲಾಗಿಲ್ಲ ಎಂದು (ನವೆಂಬರ್ 2020) ಉತ್ತರಿಸಿತ್ತು. ಪೂರೈಕೆಯಾಗದಿರುವ ಬಗ್ಗೆ ದೃಢೀಕರಣದ ಹೊರತಾಗಿಯೂ, ನವೆಂಬರ್/ಡಿಸೆಂಬರ್

[97] ₹ 69.21 ಲಕ್ಷ 23.03.2020ನಲ್ಲಿ ಮತ್ತು ₹ 69.62 ಲಕ್ಷ 22.10.2020ನಲ್ಲಿ.

2020ರಲ್ಲಿ PO ನಂ. 179ರ ವಿರುದ್ಧ 34 ಚಿಲ್ಲರ್‌ಗಳಿಗೆ ಕಿಯೋನಿಕ್ಸ್ ₹ 62.77 ಲಕ್ಷವನ್ನು ಪಾವತಿಸಲಾಗಿತ್ತು. ಈ ನಿಯಮಬಾಹಿರ ಪಾವತಿಯನ್ನು ಜನವರಿ 2022ರಲ್ಲಿ ಲೆಕ್ಕಪರಿಶೋಧನೆಯು ತೋರಿಸಿಕೊಟ್ಟಿತು.

BA ನಿಂದ ಒಬ್ಬ ವ್ಯಕ್ತಿಯನ್ನು TPV ಸಲಹೆಗಾರ ನೇಮಿಸಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. TPV ವರದಿಗಳು ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಮತ್ತು ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿ ಏಕಕಾಲದಲ್ಲಿ 31 ಆಗಸ್ಟ್ 2020 ಮತ್ತು 01 ಸೆಪ್ಟೆಂಬರ್ 2020 ಎಂದು ತಪಾಸಣೆಯ ದಿನಾಂಕಗಳನ್ನು ಉಲ್ಲೇಖಿಸಿವೆ. ಈ ಸಂದರ್ಭಗಳಲ್ಲಿ TPV ವರದಿಗಳು ಒಬ್ಬರೇ TPV ಸಲಹೆಗಾರರ ಎರಡು ವಿಭಿನ್ನ ರೀತಿಯ ಸಹಿಗಳನ್ನು ಹೊಂದಿದ್ದವು. ಲೆಕ್ಕಪರಿಶೋಧನೆಗೆ ಪ್ರತ್ಯುತ್ತರವಾಗಿ, ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ TPV ಸಲಹೆಗಾರರು ಒಂದು ಸಹಿಯನ್ನು ಅಸಲಿ ಮತ್ತು ಇನ್ನೊಂದು ನಕಲಿ ಎಂದು ಗುರುತಿಸಿದರು.




**ಚಿತ್ರ ಸಂಖ್ಯೆ 6.1.1: TPV ಇನ್ಸ್‌ಪೆಕ್ಟರ್ ಅವರ ಅಸಲಿ ಮತ್ತು ನಕಲಿ ಸಹಿ**

ಕಿಯೋನಿಕ್ಸ್‌ನಲ್ಲಿನ ದಾಖಲೆಗಳ ಪರಿಶೀಲನೆಯು ಮಾರ್ಚ್ 2020ರಲ್ಲಿ ಆರ್ಡರ್ ಮಾಡಲಾದ 36 ಚಿಲ್ಲರ್‌ಗಳನ್ನು ಲೆಕ್ಕಪರಿಶೋಧನೆ ಮೂಲಕ ಕೊರತೆಯನ್ನು ಸೂಚಿಸಿದ ನಂತರವೇ ಫೆಬ್ರವರಿ 2023ರಲ್ಲಿ ಪೂರೈಸಲಾಗಿದೆ ಎಂದು ಬಹಿರಂಗಪಡಿಸಿತು. ಉಳಿದ 16 ಚಿಲ್ಲರ್‌ಗಳನ್ನು ಮಾರ್ಚ್ 2023ರಂತೆ ವಿತರಿಸಲಾಗಿದೆ.

ಆಗಸ್ಟ್ 2021 ಮತ್ತು ಜನವರಿ 2022ರ ನಡುವೆ ಟಿ.ಡಬ್ಲ್ಯೂ.ಡಿ ಗಾಗಿ ಮಾಡಿದ ಕಂಪ್ಯೂಟರ್ ಪ್ರಯೋಗಾಲಯ ಸೆಟಪ್, ಕಂಪ್ಯೂಟರ್‌ಗಳು ಮತ್ತು ಪರಿಕರಗಳು, ಡಿಜಿಟಲ್ ಆಡಿಯೊ ಸಿಸ್ಟಮ್ ಇತ್ಯಾದಿಗಳ 32 ಖರೀದಿಗಳಲ್ಲಿ ಇದೇ ರೀತಿಯ ನಿದರ್ಶನಗಳನ್ನು ಗಮನಿಸಲಾಗಿದೆ. TPV ವರದಿಗಳು ರಾಜ್ಯದ ಎರಡರಿಂದ 18 ವಿಭಿನ್ನ ಸ್ಥಳಗಳಲ್ಲಿ ಒಂದೇ ದಿನಾಂಕದ ತಪಾಸಣೆಯನ್ನು ನಡೆಸಿರುವುದಾಗಿ ತೋರಿಸಿವೆ. ಈ TPVಗಳಲ್ಲಿ ಪ್ರಮಾಣೀಕರಿಸಿದ ಒಟ್ಟು ಸಂಗ್ರಹಣೆಯ ಮೊತ್ತವು ₹ 28.96 ಕೋಟಿ ಯಾಗಿತ್ತು. ವಿವರಗಳನ್ನು *ಅನುಬಂಧ 24*ರಲ್ಲಿ ನೀಡಲಾಗಿದೆ.

*ನಕಲಿ TPV ವರದಿಗಳ ಮೇಲೆ ಮಾಡಿದ ಪಾವತಿಮಾಡಿರುವುದು*

**6.1.11** ಎಂ.ಡಬ್ಲ್ಯೂ.ಡಿಗಾಗಿ ಖರೀದಿಸಿದ ಚಿಲ್ಲರ್‌ಗಳ ಪ್ರಕರಣದಲ್ಲಿ ನಕಲಿ TPV ವರದಿಗಳು ಕಂಡುಬಂದುದನ್ನು ಪರಿಗಣಿಸಿ, ಮೂರು BA ಗಳಿಂದ ಎಂ.ಡಬ್ಲ್ಯೂ.ಡಿಗಾಗಿ ₹ 11.81 ಕೋಟಿಗೆ ಖರೀದಿಸಿದ ಇತರ ನಾಲ್ಕು ಉಪಕರಣಗಳ TPV ವರದಿಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಲಾಯಿತು. ವಿವರಗಳನ್ನು *ಅನುಬಂಧ–24A* ರಲ್ಲಿ ನೀಡಲಾಗಿದೆ. TPV ಗಳನ್ನು M/s RITES ನಿಂದ ನಡೆಸಲಾಗಿದೆ ಎಂದು ತೋರಿಸಲಾದ ಕೆಳಗಿನ ಪ್ರಕರಣಗಳಲ್ಲಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದುದು:

(a) ಕಂಪ್ಯೂಟರ್ ಪ್ರಯೋಗಾಲಯ ಸೆಟಪ್ (10 ಘಟಕಗಳು) ಗಾಗಿ PO ಗಳಿಗೆ (ಸಂಖ್ಯೆ 189 ಮತ್ತು 192) ಸಂಬಂಧಿಸಿದಂತೆ, ಒಂಬತ್ತು ಘಟಕಗಳ TPV ಅನ್ನು 15 ಫೆಬ್ರವರಿ 2023 ರಿಂದ 10 ಮಾರ್ಚ್ 2023 ರ ನಡುವೆ ನಡೆಸಲಾಗಿದೆ ಎಂದು ಹೇಳಲಾಗಿದೆ. ಆದರೆ ಮೂರನೇ

ವ್ಯಕ್ತಿಯಲ್ಲಿ ಪ್ರಮಾಣೀಕರಿಸಲಾದ ವರದಿಯಲ್ಲಿರುವ GPS ಫೋಟೋಗಳನ್ನು 6 ಫೆಬ್ರವರಿ 2023 ಮತ್ತು 12 ಫೆಬ್ರವರಿ 2023 ರ ನಡುವೆ, ಅಂದರೆ, TPVಯ ನಿಜವಾದ ದಿನಾಂಕಗಳ ಮೊದಲೇ ಸೆರೆಹಿಡಿಯಲಾಗಿದತ್ತು.

(b) ಬಾಂಡ್ರಾವಿ–ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ, ಭೀಮನಹಳ್ಳಿ (ಕಲ್ಬುರ್ಗಿ) ನಲ್ಲಿರುವ 'ಕಂಪ್ಯೂಟರ್ ಪ್ರಯೋಗಾಲಯ ಸೆಟಪ್' ಫೋಟೋಗಳನ್ನು ಸಲ್ಲಿಸಿ ಪ್ರಮಾಣೀಕರಿಸಲಾಯಿತು. ವಿತರಣಾ ಚಲನ್‌ಗಳ ಜೊತೆಗೆ ಅದೇ ಫೋಟೋಗಳನ್ನು BA ಸಲ್ಲಿಸಿದ್ದಾರೆ ಎಂದು ವರದಿ ಬಹಿರಂಗಪಡಿಸಿದೆ.

(c) ಹಳಿಯಾಳಕ್ಕೆ ಸಂಬಂಧಿಸಿದಂತೆ, TPV ಅನ್ನು M/s RITES ನಿಂದ 10 ಫೆಬ್ರವರಿ 2023 ರಂದು ಮಾಡಲಾಗಿದೆ ಎಂದು ಹೇಳಲಾಗಿದೆ. ಆದಾಗ್ಯೂ, ಕಂಪ್ಯೂಟರ್ ವಿತರಣೆಯನ್ನು ಪರಿಶೀಲಿಸಲು ಕಿಯೋನಿಕ್ಸ್ ತಾಂತ್ರಿಕ ಶಿಕ್ಷಣ ಇಲಾಖೆಯ ತಂಡದ ಮೂಲಕ ಇತ್ತೀಚೆಗೆ (20 ಅಕ್ಟೋಬರ್ 2023) ನಡೆಸಿದ ಮೂರನೇ ವ್ಯಕ್ತಿಯ ತಪಾಸಣೆಯಲ್ಲಿ ಮತ್ತು ಪರಿಕರಗಳು, ಸಾಮಗ್ರಿಗಳು ಹಳಿಯಾಳ ಬಾಲಕರ ಹಾಸ್ಟೆಲ್‌ಗೆ ಪೂರೈಕೆಯಾಗಿಲ್ಲದಿರುವುದು ಗಮನಕ್ಕೆ ಬಂದಿದೆ.

ಲೆಕ್ಕಪರಿಶೋಧನೆ ಸ್ಪಷ್ಟೀಕರಣದ ಕೇಳಿದ ಮೇಲೆ, M/s RITES, TPV ವರದಿಗಳನ್ನು ತಮ್ಮ ಸಂಸ್ಥೆಯಿಂದ ನೀಡಲಾಗಿಲ್ಲ ಎಂದು ದೃಢಪಡಿಸಿದೆ.

*ಸರಕುಗಳ ನಿಜವಾದ ವಿತರಣೆಯ ಮೊದಲು ನಡೆಸಿದ TPV*

**6.1.12** ಕಿಯೋನಿಕ್ಸ್ ನಿಂದ ಪಾವತಿಸಲ್ಪಟ್ಟ TPV ವರದಿಗಳೊಂದಿಗಿನ ಎಂ.ಡಬ್ಲ್ಯೂ.ಡಿ ಮತ್ತು ಟಿ.ಡಬ್ಲ್ಯೂ.ಡಿಗಳ 17 POಗಳ ಬಿಲ್‌ಗಳಿಗೆ ಸಂಬಂಧಿಸಿದಂತೆ TPV ದಿನಾಂಕಗಳು ಉಪಕರಣದ ಪೂರೈಕೆಯ ನಿಜವಾದ ದಿನಾಂಕಗಳಿಗಿಂತ ಮುಂಚಿತವಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಈ ಪ್ರಕರಣಗಳಲ್ಲಿ ₹ 13.06 ಕೋಟಿ ಪಾವತಿಯಾಗಿದೆ. ವಿವರಗಳನ್ನು *ಅನುಬಂಧ–25* ರಲ್ಲಿ ನೀಡಲಾಗಿದೆ. ಈ ನಿದರ್ಶನಗಳು BA ಗಳು ಮತ್ತು TPV ಸಲಹೆಗಾರರ ನಡುವಿನ ಒಪ್ಪಂದ ಮತ್ತು ನಕಲಿ TPV ವರದಿಗಳು ಸಲ್ಲಿಕೆಯಾಗಿರುವುದನ್ನು ಸೂಚಿಸುತ್ತವೆ.

ಕಿಯೋನಿಕ್ಸ್ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶೋಕಾಸ್ ನೋಟಿಸ್‌ಗಳನ್ನು ನೀಡುವ ಮೂಲಕ ಶಿಸ್ತು ಕ್ರಮವನ್ನು ಪ್ರಾರಂಭಿಸಿದೆ ಎಂದು ಸರ್ಕಾರವು (ಮೇ 2024) ಉತ್ತರಿಸಿದೆ. ಇದಲ್ಲದೆ, ಮೂರನೇ ವ್ಯಕ್ತಿಯ ತಪಾಸಣೆ (TPI) ಏಜೆನ್ಸಿಗಳನ್ನು ನೇಮಿಸಲು ಪ್ರಸ್ತಾವನೆಗಾಗಿ ವಿನಂತಿಯನ್ನು (RFP) ಪ್ರಕಟಿಸಲು ಕಿಯೋನಿಕ್ಸ್ ಕೋರಿದೆಯೆಂದು ತಿಳಿಸಿತು.

**ಗಮನಕ್ಕೆ ಬಂದ ಇತರ ಅಕ್ರಮಗಳು**

*ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲು ಸಾಮಗ್ರಿಗಳ ಪೂರೈಕೆಯಾಗಿರುವುದು*

**6.1.13** KTPP ಕಾಯಿದೆಯು ಪೂರೈಕೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸುವ ಮೂಲಕ ಹೊರತುಪಡಿಸಿ ಯಾವುದೇ PE ಸರಕುಗಳು ಅಥವಾ ಸೇವೆಗಳನ್ನು ಖರೀದಿಸಬಾರದು ಎಂದು ಷರತ್ತು ವಿಧಿಸುತ್ತದೆ. ಅಂತೆಯೇ, ಖರೀದಿ ಪ್ರಕ್ರಿಯೆಯು ಕಿಯೋನಿಕ್ಸ್ ಹೊರಡಿಸಿದ ಸೂಚನೆ ಆಹ್ವಾನ ಟೆಂಡರ್ (NIT), ಅರ್ಹವಾದ L1 BA ಆಯ್ಕೆ, PO ಅನ್ನು ನೀಡುವುದು/ಆಯ್ದ BA ಯೊಂದಿಗೆ ಒಪ್ಪಂದಕ್ಕೆ ಪ್ರವೇಶಿಸುವುದು ಮತ್ತು PO ನೀಡಿದ ಎಂಟು ವಾರಗಳಲ್ಲಿ ಉಪಕರಣಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ.

ಪರಿಶೀಲಿಸಲಾದ 347 POಗಳ ಪರೀಕ್ಷೆಯಲ್ಲಿ, ಎರಡು POಗಳಿಗೆ ಸಂಬಂಧಿಸಿದಂತೆ, ಕಿಯೋನಿಕ್ಸ್ ನಿಂದ NIT ನೀಡುವ ಮೊದಲು ಸರಕುಗಳನ್ನು ತಲುಪಿಸಲಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ

ಗಮನಿಸಲಾಯಿತು ಮತ್ತು ಇತರ ಎರಡು ಸಂದರ್ಭಗಳಲ್ಲಿ, ಅನುಬಂಧ–26ರಲ್ಲಿ ವಿವರಿಸಿದಂತೆ POಗಳ ವಿತರಣೆ / ಒಪ್ಪಂದದ ಕಾರ್ಯಗತಗೊಳಿಸುವ ಮೊದಲು ಉಪಕರಣಗಳನ್ನು ತಲುಪಿಸಲಾಗಿತ್ತು. ಈ ಪ್ರಕರಣಗಳಲ್ಲಿ ಪೂರೈಸಲಾಗಿದ್ದ ಉಪಕರಣಗಳ ಮೌಲ್ಯ ₹ 2.03 ಕೋಟಿ. NIT/ POಗಳ ವಿತರಣೆಯ ಮುಂಚೆಯೇ ಸರಬರಾಜು ಮಾಡಲು BAಗಳಿಗೆ ಅನುಮತಿ ನೀಡಲಾಗಿದೆ ಎಂದು ಇದು ಸೂಚಿಸಿದೆ, ಇದರಿಂದಾಗಿ ಕಿಯೋನಿಕ್ಸ್‌ನಲ್ಲಿ ಸಂಪೂರ್ಣ ಟೆಂಡರ್ ವ್ಯವಸ್ಥೆಯನ್ನು ಅಣಕು ಪ್ರಕ್ರಿಯೆಯನ್ನಾಗಿಸಿತ್ತು.

***NITಯ ನಿಯಮಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ಗುತ್ತಿಗೆದಾರರಿಗೆ ಮುಂಗಡಗಳನ್ನು ಪಾವತಿಸಲಾಗಿರುವುದು***

**6.1.14** 18 POಗಳಲ್ಲಿ, ಕಿಯೋನಿಕ್ಸ್ ಮಾರ್ಚ್ 2022 ಮತ್ತು ಆಗಸ್ಟ್ 2023 ರ ನಡುವೆ BA ಗಳಿಗೆ ₹ 48.65 ಕೋಟಿ ಮುಂಗಡಗಳನ್ನು ಪಾವತಿಸಿತ್ತು ಆದರೆ ಅಂತಹ ಪಾವತಿಗಳಿಗೆ NIT ನಲ್ಲಿ ಯಾವುದೇ ಅವಕಾಶವಿರಲಿಲ್ಲ. ಈ ಪ್ರಕರಣಗಳಲ್ಲಿ ಪಾವತಿಸಿದ ಮುಂಗಡ ಮೊತ್ತವು PO ಮೌಲ್ಯದ 20 ರಿಂದ 85 ಪ್ರತಿಶತದವರೆಗೆ ಇದ್ದಿತು. ಪ್ರಕರಣವಾರು ವಿವರಗಳನ್ನು ಅನುಬಂಧ–27 ರಲ್ಲಿ ನೀಡಲಾಗಿದೆ. ಅಲ್ಲದೆ, ಕಿಯೋನಿಕ್ಸ್ ಸರ್ಕಾರದ ಹಣವನ್ನು ಸಂರಕ್ಷಿಸಲು ಬ್ಯಾಂಕ್ ಗ್ಯಾರಂಟಿ ಅಥವಾ ಯಾವುದೇ ರೀತಿಯ ಭದ್ರತೆಯನ್ನು ಪಡೆದಿರಲಿಲ್ಲ. ಈ ಸಂದರ್ಭಗಳಲ್ಲಿ, BA ಗಳು PO ವಿತರಿಸಿದ ದಿನಾಂಕದಿಂದ 180 ದಿನಗಳಲ್ಲಿ ಉಪಕರಣಗಳನ್ನು ಸರಬರಾಜು ಮಾಡಬೇಕಾಗಿತ್ತು. ಇವುಗಳಲ್ಲಿ, ಆರು ಪ್ರಕರಣಗಳಲ್ಲಿ, ಜನವರಿ 2024 ರಂತೆ BAಗಳು ಇನ್ನೂ ಸರಬರಾಜು ಮಾಡಬೇಕಾಗಿರುವ ₹ 17.32 ಕೋಟಿ ಮೌಲ್ಯದ ಉಪಕರಣಗಳೂ ಸಹ ಸೇರಿವೆ.

ಪ್ಯಾರಾಗ್ರಾಫ್ 6.1.8 ಮತ್ತು 6.1.10 ರಿಂದ 6.1.14 ರವರೆಗಿನ ಅವಲೋಕನಗಳಿಗೆ ಸಂಬಂಧಿಸಿದಂತೆ, ಸರ್ಕಾರವು (ಮೇ 2024) ಉತ್ತರಿಸುತ್ತಾ, ಆಡಿಟ್ ಸಂಶೋಧನೆಗಳಿಗೆ ಕಾರಣವಾಗುವ ಸಮಸ್ಯೆಗಳ ಮೂಲ ಕಾರಣವನ್ನು ವಸ್ತುನಿಷ್ಠವಾಗಿ ಗುರುತಿಸಲು ಮತ್ತು ಸೂಕ್ತ ಕ್ರಮವನ್ನು ನಿರ್ಧರಿಸಲು ಕಿಯೋನಿಕ್ಸ್ ಸ್ವತಂತ್ರ ವಿಚಾರಣಾ ಸಮಿತಿಯನ್ನು ರಚಿಸುವಂತೆ ವಿನಂತಿಸಿತು. ಇದಲ್ಲದೆ, ಕಿಯೋನಿಕ್ಸ್ ತಪ್ಪಿತಸ್ಥ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ನೀಡುವ ಮೂಲಕ ಶಿಸ್ತು ಕ್ರಮವನ್ನು ಪ್ರಾರಂಭಿಸಿದೆ ಎಂದು ಸರ್ಕಾರ ಹೇಳಿದೆ.

| ನಿರ್ಣಯ |
|---|

ಸರ್ಕಾರಿ ಇಲಾಖೆಗಳು/ಸಂಸ್ಥೆಗಳು ಕಿಯೋನಿಕ್ಸ್ ಮೂಲಕ ಸಲಕರಣೆಗಳ ಖರೀದಿಯು ವೆಚ್ಚದ ಪರಿಣಾಮಕಾರಿತ್ವ, ಗುಣಮಟ್ಟದ ಉತ್ಪನ್ನಗಳ ಪೂರೈಕೆ, ತ್ವರಿತ ವಿತರಣೆಯ ನಂತರದ ಸೇವೆಗಳು, ಇತ್ಯಾದಿಗಳಂತಹ ಯಾವುದೇ ಸ್ಪಷ್ಟವಾದ ಪ್ರಯೋಜನಗಳಿಗೆ ಕಾರಣವಾಗಲಿಲ್ಲ. ಮತ್ತೊಂದೆಡೆ, ಕಿಯೋನಿಕ್ಸ್ ಅಳವಡಿಸಿಕೊಂಡ ಸಂಪೂರ್ಣ ಸಂಗ್ರಹಣೆ ಪ್ರಕ್ರಿಯೆಯು ಬೆಲೆಗಳನ್ನು ಅತಿಯಾಗಿ ಅಂದಾಜು ಮಾಡುವುದು, ಉಪಕರಣಗಳು ಅಥವಾ ಅದರ ಘಟಕಗಳ ಕಿರು/ಪೂರೈಕೆ ಮಾಡದಿರುವುದು, ಸುಳ್ಳು ಇನ್‌ವಾಯ್ಸ್‌ಗಳು/ವಿತರಣಾ ಚಲನ್‌ಗಳು ಮತ್ತು ನಕಲಿ/ನಕಲಿ ತೃತೀಯ ಪರಿಶೀಲನಾ ವರದಿಗಳನ್ನು ಸಲ್ಲಿಸುವ ಮೂಲಕ ಮೋಸದ ಹಕ್ಕೊತ್ತಾಯಗಳಿಂದ ಕೂಡಿದೆ. ಈ ಅಕ್ರಮಗಳ ಪರಿಣಾಮ ಸರ್ಕಾರದ ಹಣದ ದುರುಪಯೋಗವಾಗಿತ್ತು ಮತ್ತು ಖರೀದಿಸಿದ ಇಲಾಖೆಗಳು/ಸಂಸ್ಥೆಗಳಿಗೆ ನಷ್ಟವನ್ನು ಉಂಟುಮಾಡಿದವು. KTPP ಕಾಯಿದೆ, 1999ರ ಅಡಿಯಲ್ಲಿ ನಿಗದಿಪಡಿಸಲಾದ ಟೆಂಡರ್ ಪ್ರಕ್ರಿಯೆಗಳಿಂದ ತಪ್ಪಿಸಿಕೊಳ್ಳಲು PEಗಳು ಖರೀದಿಗಳನ್ನು ವಿಭಜಿಸಿದರು ಮತ್ತು ಹೆಚ್ಚಿನ ಖರೀದಿ ದರಗಳೊಂದಿಗೆ ಕಿಯೋನಿಕ್ಸ್‌ಗೆ ಸರಬರಾಜು ಆದೇಶಗಳನ್ನು ವಹಿಸಿಕೊಟ್ಟರು, ಅದು ನಿಯಮಬಾಹಿರವಾಗಿತ್ತು. ಈ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದ ನಂತರ, KTPP ಕಾಯಿದೆಯ ಸೆಕ್ಷನ್ 4 (g) ಅಡಿಯಲ್ಲಿ ಹೊರಡಿಸಲಾದ ವಿನಾಯಿತಿ ಅಧಿಸೂಚನೆಯನ್ನು ಸರ್ಕಾರವು 22 ನವೆಂಬರ್ 2023ರಿಂದ ಜಾರಿಗೆ ಬರುವಂತೆ ಹಿಂಪಡೆಯಿತು.

**ಶಿಫಾರಸ್ಸುಗಳು:**

12. ಸರ್ಕಾರವು ಕಿಯೋನಿಕ್ಸ್‌ಗೆ IT ಉಪಕರಣಗಳನ್ನು OEMಗಳಿಂದ ಅಥವಾ ಅವರ ಅಧಿಕೃತ ಡೀಲರ್‌ಗಳು/ಪೂರೈಕೆದಾರರಿಂದ ಮಾರಾಟದ ನಂತರದ ಸೇವೆಗಳನ್ನು ತ್ವರಿತವಾಗಿ ಒದಗಿಸುವ ಸಾಮರ್ಥ್ಯವಿರುವವರಿಂದ ಪಡೆದುಕೊಳ್ಳಲು ನಿರ್ದೇಶಿಸಬೇಕು. ಅಲ್ಲದೆ, ಕಿಯೋನಿಕ್ಸ್ ತನ್ನ ಮೇಲಿನ ಅಧ್ಯಾದೇಶದ ಪ್ರಕಾರ IT ಉಪಕರಣಗಳು/ಉತ್ಪನ್ನಗಳಿಗೆ ಸಂಬಂಧಿಸಿದ ಆದೇಶಗಳನ್ನು ಮಾತ್ರ ಸ್ವೀಕರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬಹುದು.

13. ಸರ್ಕಾರವು ನೀಡಿದ POಗಳಲ್ಲಿ ಉಲ್ಲೇಖಿಸಲಾದ ನಿರ್ದಿಷ್ಟತೆಯ ಉಪಕರಣಗಳ ನಿಜವಾದ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು. ಕಿಯೋನಿಕ್ಸ್‌ಗೆ ಸ್ವಂತವಾಗಿ TPV ಇನ್ಸ್‌ಪೆಕ್ಟರ್‌ಗಳನ್ನು ನೇಮಿಸಲು ನಿರ್ದೇಶಿಸಬೇಕು,

14. ಸರ್ಕಾರವು ಈ ಕೆಳಗಿನ ಪ್ರಕರಣಗಳಲ್ಲಿ ಜವಾಬ್ದಾರಿಯನ್ನು ನಿಗದಿಪಡಿಸಬಹುದು ಮತ್ತು ಅವರ ವಿರುದ್ಧ ಕ್ರಮ ಕೈಗೊಳ್ಳಬಹುದು:

    a. PEಗಳ ಅಧಿಕಾರಿಗಳು/ಸಿಬ್ಬಂದಿವರ್ಗ, ಕಿಯೋನಿಕ್ಸ್ ಮತ್ತು ಮಾರಾಟಗಾರರಿಂದ ಸರಬರಾಜು ಮಾಡದ ಉಪಕರಣಗಳು/ಘಟಕ ವಸ್ತುಗಳಿಗೆ ಮೋಸದ ಪಾವತಿಯನ್ನು ಕ್ಲೈಮ್ ಮಾಡಿದ ಮಾರಾಟಗಾರರು. ಜೊತೆಗೆ, ಮಾರಾಟಗಾರರಿಗೆ ಪಾವತಿಸಿದ ಹೆಚ್ಚುವರಿ ಮೊತ್ತವನ್ನು ವಸೂಲಿ ಮಾಡಬೇಕು.

    b. ಕಿಯೋನಿಕ್ಸ್‌ಗೆ ಸರಬರಾಜು ಆದೇಶಗಳನ್ನು ನೇರವಾಗಿ ವಹಿಸಿಕೊಡಲು ಅನುಕೂಲವಾಗುವಂತೆ ಸರ್ಕಾರದಿಂದ ಮಂಜೂರಾದ ಸಂಗ್ರಹಣೆಯನ್ನು ತಲಾ ₹ 1 ಕೋಟಿಗಿಂತ ಕಡಿಮೆಯ ಪೂರೈಕೆ ಆದೇಶಗಳಾಗಿ ವಿಭಜಿಸಲು ಅನುವುಮಾಡಿದ PEಗಳ ಅಧಿಕಾರಿಗಳು/ಅಧಿಕಾರಿಗಳು.

    c. ಅತಿಯಾದಬೆಲೆಗಳ ಅಂದಾಜುಗಳನ್ನು ತಯಾರಿಸಿದ್ದ ಮತ್ತು BAಗಳೊಂದಿಗೆ ಐಟಂ ದರದ ಒಪ್ಪಂದದ ಒಪ್ಪಂದಗಳಿಗೆ ಪ್ರವೇಶಿಸದೆ, ಸರಬರಾಜು ಆದೇಶಗಳ ನೇರ ಹೊಣೆಗಾರಿಕೆಯನ್ನು ಸ್ವೀಕರಿಸಿದ ಕಿಯೋನಿಕ್ಸ್‌ನ ಅಧಿಕಾರಿಗಳು/ಅಧಿಕಾರಿಗಳು.

**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ**

### *6.2 ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಕಾಮಗಾರಿಗಳನ್ನು ಪ್ರಾರಂಭಿಸುವುದು*

**ಅಗತ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಕಾಮಗಾರಿ ಆರಂಭಿಸಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿದ್ದು, ₹ 30.00 ಕೋಟಿ ವೆಚ್ಚ ಅನುಪಯುಕ್ತವಾಗಿದೆ.**

ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆಯ (ಕೆಪಿಡಬ್ಲ್ಯುಡಿ ಕೋಡ್) ಕಂಡಿಕೆ 135 (3), ಭೂಮಿಯ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳದೆ ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಾರದು ಅಥವಾ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಬಾರದು ಎಂದು ಷರತ್ತು ವಿಧಿಸುತ್ತದೆ. ಅಪರೂಪದ ಸಂದರ್ಭಗಳಲ್ಲಿ, ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸ್ವೀಕರಿಸಿದರೂ, ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಇನ್ನೂ ಸ್ವಾಧೀನಪಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ, ಭೂಸ್ವಾಧೀನ ಪ್ರಕ್ರಿಯನ್ನು ಅತಿ ತುರ್ತು ಪರಿಸ್ಥಿತಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕೆಪಿಡಬ್ಲ್ಯುಡಿ ಕೋಡ್‌ನ ಕಂಡಿಕೆ 62, ಉಪವಿಭಾಗಗಳ ಸಹಾಯಕ ಆಯುಕ್ತರು ಅಥವಾ ಪ್ರಕ್ರಿಯೆಗಾಗಿ ನೇಮಿಸಲಾದ ವಿಶೇಷ ಭೂಸ್ವಾಧೀನ

ಅಧಿಕಾರಿಗಳು/ಹೆದ್ದಾರಿ ಪ್ರಾಧಿಕಾರದ ಮೂಲಕ ಸಂಬಂಧಿತ ಭೂಸ್ವಾಧೀನ ಕಾಯಿದ[98] ಅಥವಾ ಕರ್ನಾಟಕ ಹೆದ್ದಾರಿ ಕಾಯ್ದೆ 1964 ರ ನಿಬಂಧನೆಗಳ ಅಡಿಯಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಸೂಚಿಸುತ್ತದೆ .

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್‌ಎಲ್), ನಾರಾಯಣಪುರ ಬಲದಂಡೆ ಕಾಲುವೆ ವಿಭಾಗ–6, ಚಿಕ್ಕಹೊನ್ನಕುಣಿ (ವಿಭಾಗ) ದಾಖಲೆಗಳ ಪರಿಶೀಲನೆ ನಡೆಸಿದಾಗ ಮೇಲ್ಕಂಡ ಸಂಹಿತೆಯ ನಿಬಂಧನೆಗಳನ್ನು ಉಲ್ಲಂಘಿಸಿ ವಿಭಾಗವು ಟೆಂಡರ್ ಆಹ್ವಾನಿಸಿರುವುದು (ನವೆಂಬರ್ 2014 ರಿಂದ ಡಿಸೆಂಬರ್ 2017) ಬೆಳಕಿಗೆ ಬಂದಿದೆ. ಗುರುತಿಸಲಾದ ಪ್ರದೇಶಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಲು ₹ 32.91 ಕೋಟಿ ವೆಚ್ಚದ ನಾಲ್ಕು ಕಾಮಗಾರಿಗಳಿಗೆ (ಒಂದು ಕಾಲುವೆ ವಿಸ್ತರಣೆ ಕಾಮಗಾರಿ ಮತ್ತು ಮೂರು ಲ್ಯಾಟರಲ್ ಕಾಮಗಾರಿಗಳು) ಭೂಮಿಯ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳದೆ (ಏಪ್ರಿಲ್ 2015 ರಿಂದ ಮಾರ್ಚ್ 2018) ಕಾಮಗಾರಿಯನ್ನು ನೀಡಲಾಯಿತು.

ಅನುಬಂಧ – 28ರಲ್ಲಿ ವಿವರಿಸಿದಂತೆ ಅಗತ್ಯವಿರುವ ಭೂಮಿಯ ಲಭ್ಯತೆಯಿಲ್ಲದ ಕಾರಣ ಕಳೆದ ಮೂರರಿಂದ ಎಂಟು ವರ್ಷದವರೆಗೆ ಈ ನಾಲ್ಕು ಕಾಮಗಾರಿಗಳನ್ನು ಭಾಗಶಃ ಕಾರ್ಯಗತಗೊಳಿಸಲಾಗಿದೆ ಮತ್ತು ನಂತರ ನಿಲ್ಲಿಸಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿದೆ. ಅಪೂರ್ಣ ಕಾಮಗಾರಿಗಳಿಗಾಗಿ ಭೂ ಸ್ವಾಧೀನ ಪ್ರಕ್ರಿಯೆಯು ಇನ್ನೂ ಪ್ರಗತಿಯಲ್ಲಿದೆ (ಫೆಬ್ರವರಿ 2024) ವಿಭಾಗವು, ಅಕ್ಟೋಬರ್ 2015 ಮತ್ತು ಜೂನ್ 2019 ರ ನಡುವೆ ಈ ನಾಲ್ಕು ಕಾಮಗಾರಿಗಳಿಗೆ ₹ 30.00 ಕೋಟಿ (ಟೆಂಡರ್ ಒಪ್ಪಿದ ವೆಚ್ಚದ ಶೇಕಡಾ 91) ವೆಚ್ಚವನ್ನು ಮಾಡಿದೆ.

ಟೆಂಡರ್ ಆಹ್ವಾನಿಸುವ/ಕಾಮಗಾರಿಗಳ ಆರಂಭದ ಮೊದಲು ಭೂಮಿಯ ಲಭ್ಯತೆಯನ್ನು ಖಾತ್ರಿಪಡಿಸಿಕೊಳ್ಳುವಲ್ಲಿ ವಿಭಾಗವು ವಿಫಲವಾದ ಕಾರಣ ಕಾಮಗಾರಿಗಳು ಸ್ಥಗಿತಗೊಂಡಿದ್ದು, ನಾಲ್ಕರಿಂದ ಎಂಟು ವರ್ಷಗಳ ಅವಧಿಯಲ್ಲಿ ವೆಚ್ಚವಾದ ₹30.00 ಕೋಟಿ ಅನುಪಯುಕ್ತವಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸದಿರುವುದು, ಅಗತ್ಯವಿರುವ ಪ್ರದೇಶಗಳಿಗೆ ನೀರಾವರಿ ಪ್ರಯೋಜನವನ್ನು ಒದಗಿಸುವ ಉದ್ದೇಶಿತ ಉದ್ದೇಶವನ್ನು ವಿಫಲಗೊಳಿಸುವುದಲ್ಲದೆ, ಸಮಯ ಮೀರಿದ ಕಾರಣ ವೆಚ್ಚವು ಹೆಚ್ಚಾಗುವ ಅಪಾಯವನ್ನು ಸಹ ಹೊಂದಿದೆ.

ಕೆಬಿಜೆಎನ್‌ಎಲ್ ತನ್ನ ಉತ್ತರದಲ್ಲಿ (ಫೆಬ್ರವರಿ 2024) ಮೇಲಿನ ನಾಲ್ಕು ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಜೋಡಣೆಯಲ್ಲಿ ಬದಲಾವಣೆ ಮತ್ತು ಹೆಚ್ಚಿನ ಪರಿಹಾರಕ್ಕೆ ಒತ್ತಾಯಿಸಿ ರೈತರ ಪ್ರತಿಭಟನೆಗಳಿಂದಾಗಿ ಭೂಸ್ವಾಧೀನವು ಬಾಕಿ ಉಳಿದಿದೆಯೆಂದು ತಿಳಿಸಿತು. ಗುತ್ತಿಗೆ ಷರತ್ತುಗಳ ಪ್ರಕಾರ ರೈತರ ಒಪ್ಪಿಗೆಯೊಂದಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಗುತ್ತಿಗೆದಾರರು ಸಹ ಜವಾಬ್ದಾರರಾಗಿರುತ್ತಾರೆ ಮತ್ತು ಭೂಸ್ವಾಧೀನ ಸಮಸ್ಯೆಗಳಿಂದಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಳಂಬವಾದ ಕಾರಣ ಅವರಿಗೆ ಯಾವುದೇ ಹೆಚ್ಚುವರಿ ವೆಚ್ಚವನ್ನು ಪಾವತಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ. ಕೆಬಿಜೆಎನ್‌ಎಲ್ ನ ಉತ್ತರವನ್ನು ಸರ್ಕಾರವು (ಏಪ್ರಿಲ್ 2024) ಅನುಮೋದಿಸಿದೆ.

ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದೆ ಕಾಮಗಾರಿಗಳನ್ನು ನಿರ್ವಹಿಸುವುದು ಕೆಪಿಡಬ್ಲ್ಯೂಡಿ ಕೋಡ್‌ನ ನಿಬಂಧನೆಗಳನ್ನು ಉಲ್ಲಂಘಿಸಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ. ಕಾಮಗಾರಿ ಆರಂಭವಾಗಿ ಎಂಟು ವರ್ಷ ಕಳೆದರೂ ಅಗತ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದಿರುವುದು ಕೆಬಿಜೆಎನ್‌ಎಲ್‌ನ ಅಲಕ್ಷ್ಯ ಪ್ರಯತ್ನವನ್ನು ಸೂಚಿಸುತ್ತದೆ. ಗುತ್ತಿಗೆ ಷರತ್ತುಗಳ ಪ್ರಕಾರ, ಗುತ್ತಿಗೆದಾರರು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಹ ಜವಾಬ್ದಾರರಾಗಿರುತ್ತಾರೆ ಎಂಬ ವಾದವು ಸ್ವೀಕಾರಾರ್ಹವಲ್ಲ, ಏಕೆಂದರೆ ಸರ್ಕಾರ / ಇಲಾಖೆಯು ಸಂಬಂಧಿತ ಭೂ ಸ್ವಾಧೀನ ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ, ಉಪವಿಭಾಗಗಳ ಸಹಾಯಕ ಆಯುಕ್ತರು ಅಥವಾ ವಿಶೇಷ ಭೂಸ್ವಾಧೀನ ಅಧಿಕಾರಿಗಳ ಅಧಿಕಾರಿಗಳು/ಹೆದ್ದಾರಿ ಅಧಿಕಾರಿಗಳ ನೇಮಕಾತಿಯ ಮೂಲಕ ಸಾರ್ವಜನಿಕ ಕೆಲಸಗಳಿಗೆ ಅಗತ್ಯವಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ, ಯೋಜನೆಗೆ ಭೂಮಿ ಲಭ್ಯವಾಗುವಂತೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆಯೇ ಹೊರತು ಗುತ್ತಿಗೆದಾರರದ್ದಲ್ಲ. ಅಗತ್ಯವಿರುವ

[98] 1 ಜನವರಿ 2014 ರಿಂದ ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ 2013 ರ ಮೂಲಕ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು.

ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕೆಬಿಜೆಎನ್ಎಲ್ ಕಡೆಯಿಂದ ನಿಷ್ಕ್ರಿಯತೆ, ವೆಚ್ಚದ ಅನುಪಯುಕ್ತತೆಗೆ ಕಾರಣವಾಯಿತು ಮತ್ತು ಅಗತ್ಯವಿರುವ ಫಲಾನುಭವಿಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ಯೋಜಿತ ಗುರಿಯೂ ಸಹ ಸಾಧಿಸಲಾಗಲಿಲ್ಲ.

**ಶಿಫಾರಸು:**

**15. ಭೂಸ್ವಾಧೀನದಲ್ಲಿನ ಅಡಚಣೆಗಳನ್ನು ತೆಗೆದುಹಾಕಿ, ಅಗತ್ಯವಿರುವ ಪ್ರದೇಶಗಳಿಗೆ ನೀರಾವರಿ ಪ್ರಯೋಜನವನ್ನು ಒದಗಿಸಲು ಕಾಮಗಾರಿಗಳನ್ನು ಪೂರ್ಣಗೊಳಿಸಲು ತುರ್ತು ಕ್ರಮವನ್ನು ತೆಗೆದುಕೊಳ್ಳಬಹುದು. ಕೆಬಿಜೆಎನ್ಎಲ್ ಸಹ ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಪರಿಶೀಲಿಸುವ ಅಗತ್ಯವಿದೆ. ಇದರಲ್ಲಿ ಗುತ್ತಿಗೆದಾರನು ಅಗತ್ಯವಿರುವ ಭೂ ಸ್ವಾಧೀನಕ್ಕೆ ಜವಾಬ್ದಾರನಾಗಿರುತ್ತಾನೆ, ಎಂಬುದು ಕೆಪಿಡಬ್ಲ್ಯುಡಿ ಕೋಡ್‌ನ ನಿಬಂಧನೆಗಳಿಗೆ ವಿರುದ್ಧವಾಗಿದೆ.**

### *6.3 ಗುತ್ತಿಗೆದಾರನಿಗೆ ಅನುಚಿತ ಆರ್ಥಿಕ ಲಾಭ*

**ಕಾಮಗಾರಿಯ ವ್ಯಾಪ್ತಿಯ ಬದಲಾವಣೆಗೆ ಅನುಗುಣವಾಗಿ ಒಪ್ಪಂದದ ಮೊತ್ತದಲ್ಲಿ ಬದಲಾವಣೆಗೆ ಸಂಬಂಧಿಸಿದ ಒಪ್ಪಂದದ ಷರತ್ತುಗಳನ್ನು ಜಾರಿಮಾಡಲು ವಿಫಲವಾದ ಕಾರಣ ಗುತ್ತಿಗೆದಾರರನಿಗೆ ₹ 29.77 ಕೋಟಿಯ ಅನುಚಿತ ಆರ್ಥಿಕ ಲಾಭ ಉಂಟಾಗಿದೆ.**

ಒಪ್ಪಂದವು ಗುತ್ತಿಗೆದಾರ ಮತ್ತು ಉದ್ಯೋಗದಾತರ ನಡುವಿನ ಕಾನೂನು ಒಪ್ಪಂದವಾಗಿದ್ದು, ಇದು ಕೆಲಸದ ವ್ಯಾಪ್ತಿ, ಒಪ್ಪಂದದ ಬೆಲೆ, ನಿಯಮಗಳು ಮತ್ತು ಷರತ್ತುಗಳನ್ನು ವ್ಯಾಖ್ಯಾನಿಸುವುದಲ್ಲದೆ, ಕಾಮಗಾರಿ ನಿರ್ವಹಣೆಯ ಗುಣಮಟ್ಟ ಮತ್ತು ವೆಚ್ಚ ನಿಯಂತ್ರಣಕ್ಕೆ ಸಂಬಂಧಿಸಿದ ಷರತ್ತುಗಳನ್ನು ಒಳಪಟ್ಟಿರುತ್ತದೆ. ಒಪ್ಪಂದದಲ್ಲಿನ ವೆಚ್ಚ ನಿಯಂತ್ರಣ ಷರತ್ತು, ಕೈಗೊಳ್ಳಬೇಕಾದ ಕೆಲಸದ ವ್ಯಾಪ್ತಿಯ ಬದಲಾವಣೆಯಿಂದಾಗಿ ಒಪ್ಪಂದದ ಬೆಲೆಯಲ್ಲಿ ಮಾಡಬೇಕಾದ ಬದಲಾವಣೆಗಳನ್ನು ವ್ಯಾಖ್ಯಾನಿಸುತ್ತದೆ. ಒಪ್ಪಿದ ಷರತ್ತುಗಳಿಂದ ಯಾವುದೇ ವಿಚಲನವು ಗುತ್ತಿಗೆದಾರನಿಗೆ ಅನುಚಿತ ಹಣಕಾಸಿನ ಲಾಭವನ್ನು ನೀಡುತ್ತದೆ.

ಭೀಮಾ ನದಿಯಿಂದ ಟರ್ನ್–ಕೀ ಆಧಾರದ ಮೇಲೆ ನೀರನ್ನು ಎತ್ತಲು ಎರಡು ಹಂತದ ಏತಗಳನ್ನು ನಿರ್ಮಿಸುವ ಮೂಲಕ ಯಾದಗಿರಿ ಜಿಲ್ಲೆಯ 35 ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಟ್ಯಾಂಕ್‌ಗಳ ಸಂಗ್ರಹಣಾಸಾಮರ್ಥ ವೃಧಿಸಲು" ಮುಖ್ಯ ಅಭ್ಯಾಯಂತರರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್ಎಲ್), ಕಾಲುವೆ ವಲಯ ನಂ.1, ಭೀಮರಾಯನಗುಡಿ ಅವರು "ಸಮೀಕ್ಷೆ, ತನಿಖೆ, ವಿನ್ಯಾಸ, ಸರಬರಾಜು, ನಿರ್ಮಾಣ, ಪರೀಕ್ಷೆ ಮತ್ತು ಏತ ನೀರಾವರಿ ವ್ಯವಸ್ಥೆಯ (ಎಲ್.ಐ.ಎಸ್) ಕಾರ್ಯಕ್ಕಾಗಿ ತಾಂತ್ರಿಕ ಮಂಜೂರಾತಿಯನ್ನು (ಜನವರಿ 2018) ನೀಡಿದರು. ಕಾರ್ಯನಿರ್ವಾಹಕ ಅಭ್ಯಯಂತರರು, ಕೆಬಿಜೆಎನ್ಎಲ್, ಸೋನ್ತಿ ಎಲ್.ಐ.ಎಸ್ ವಿಭಾಗ, ಖಾನಾಪುರ, ಯಾದಗಿರಿ ಜಿಲ್ಲೆ (ವಿಭಾಗ) ಅವರು ಮೇಲಿನ ಕಾಮಗಾರಿಗೆ ₹ 433.17 ಕೋಟಿ ಅಂದಾಜು ಮೊತ್ತಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ (ಡಿಸೆಂಬರ್ 2017). ನಿಗದಿತ ಟೆಂಡರ್ ಪ್ರಕ್ರಿಯೆಯ ನಂತರ, ಕಾಮಗಾರಿಯನ್ನು ₹ 351.90 ಕೋಟಿ ಬೆಲೆಗೆ M/s ಲಾರ್ಸನ್ ಮತ್ತು ಟೂಬ್ರೊ ಲಿಮಿಟೆಡ್, ಬೆಂಗಳೂರು (ಗುತ್ತಿಗೆದಾರ)ಗೆ.ಗುತ್ತಿಗೆ ನೀಡಲಾಯಿತು. ಕೆಬಿಜೆಎನ್ಎಲ್ ಗುತ್ತಿಗೆದಾರರೊಂದಿಗೆ 15 ಮಾರ್ಚ್ 2018 ರಂದು ಒಪ್ಪಂದವನ್ನು ಮಾಡಿಕೊಂಡಿದ್ದು, 24 ತಿಂಗಳ ಪೂರ್ಣಗೊಳ್ಳುವ ನಿಗದಿತ ದಿನಾಂಕದೊಂದಿಗೆ ಅಂದರೆ 14 ಮಾರ್ಚ್ 2020ರ ಒಳಗೆ ಪೂರ್ಣಗೊಳ್ಳಬೇಕಿತ್ತು. ಒಪ್ಪಿದ ಕೆಲಸವು ಪೂರ್ಣಗೊಂಡು ₹ 333.50 ಕೋಟಿ[99] ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆ (ಅಕ್ಟೋಬರ್ 2022).

ವಿಭಾಗದ ದಾಖಲೆಗಳ ಲೆಕ್ಕಪರಿಶೋಧನೆಯು (ನವೆಂಬರ್ 2023), ಕೆಲಸದ ಒಪ್ಪಂದದ ಷರತ್ತುಗಳು ವೆಚ್ಚ ನಿಯಂತ್ರಣದ ನಿಬಂಧನೆಯನ್ನು (ಷರತ್ತು 32.2) ಒಳಗೊಂಡಿದ್ದು, ಇದು "ಯಾವುದೇ ಐಟಂನ

[99] ಬೆಲೆ ಹೊಂದಾಣಿಕೆ ಬಿಲ್‌ಗಳನ್ನು ಹೊರತುಪಡಿಸಿ.

ಪ್ರಮಾಣದಲ್ಲಿ ಬದಲಾವಣೆಗಳು ಅಥವಾ ಬಿಲ್ಗೆ ಸಂಬಂಧಿಸಿದಂತೆ ಯಾವುದೇ ಐಟಂನ ಸೇರ್ಪಡೆ ಅಥವಾ ಅಳಿಸುವಿಕೆ" ಗುತ್ತಿಗೆದಾರರು ಸಲ್ಲಿಸಿದ ಪ್ರಮಾಣಗಳು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವಿವರಿಸಿರುವ ಅಥವಾ ಒಪ್ಪಂದದಲ್ಲಿ ಒದಗಿಸಲಾದ ಕೆಲಸದ ವ್ಯಾಪ್ತಿಯಲ್ಲಿ ಯಾವುದೇ ಬದಲಾವಣೆಯಿಲ್ಲದಿದ್ದರೆ ಒಟ್ಟು ಮೊತ್ತದ ಬೆಲೆಯ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಷರತ್ತು ವಿಧಿಸಿದ್ದನ್ನು ತೋರಿಸಿತು. ಒಟ್ಟು ಒಪ್ಪಂದದ ಪ್ರಕಾರ, ಕೆಲಸದ ವ್ಯಾಪ್ತಿಯು, "123.59 ಕಿಮೀ[100] ಉದ್ದದ ಗುರುತ್ವಾಕರ್ಷಣೆಯ ವಿತರಣಾ ಪೈಪ್‌ಲೈನ್ ನೆಟ್‌ವರ್ಕ್ ಅನ್ನು ಪೂರೈಸುವುದು, ಹಾಕುವುದು, ಪರೀಕ್ಷಿಸುವುದು ಮತ್ತು ನಿಯೋಜಿಸುವುದು" ಎಂಬ ಅಂಶವನ್ನು ಒಳಗೊಂಡಿದೆ. ಅನುಮೋದಿತ ಬೆಲೆಯ ವಿಂಗಡಣೆಯ ಪ್ರಕಾರ, ಗುತ್ತಿಗೆದಾರರಿಗೆ ಮೇಲಿನ ಕಾಮಗಾರಿಗೆ ₹ 121.08 ಕೋಟಿ ಮೊತ್ತವನ್ನು ಪಾವತಿಸಬೇಕಾಗಿತ್ತು.

ಬಿಡ್ ಷರತ್ತುಗಳ ಪ್ರಕಾರ, ಗುತ್ತಿಗೆದಾರನು ಕೆಲಸದ ಕಾರ್ಯಗತಗೊಳಿಸುವಿಕೆಯನ್ನು ಮುಂದುವರಿಸುವ ಮೊದಲು ವಿವರವಾದ ವಿನ್ಯಾಸ ಮತ್ತು ರೇಖಾಚಿತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಾಗಿತ್ತು. ಅದರಂತೆ, ಮುಖ್ಯ ಅಭ್ಯಯಂತರರು (ಸಿ.ಇ), ಕೆಬಿಜೆಎನ್‌ಎಲ್, ಕಾಲುವೆ ವಲಯ–1 ಭೀಮರಾಯನಗುಡಿ ಅವರು ಮೇಲಿನ ಕೆಲಸದ ಅಂತಿಮ ವಿನ್ಯಾಸ ಮತ್ತು ರೇಖಾಚಿತ್ರವನ್ನು ಅನುಮೋದಿಸಿದ್ದಾರೆ (ಆಗಸ್ಟ್ 2018). ಇದರಲ್ಲಿ ಗುರುತ್ವಾಕರ್ಷಣೆಯ ಪೈಪಿನ (ಗ್ರಾವಿಟಿ ಮೇನ್ಸ್) ಉದ್ದವನ್ನು ಒಪ್ಪಿದ 123.59 ಕಿಮೀ ವ್ಯಾಪ್ತಿಯಿಂದ 90.40 ಕಿಮೀಗೆ ಇಳಿಸಲಾಗಿದೆ. ಮೇಲಿನ ಅನುಮೋದಿತ ವಿನ್ಯಾಸ ಮತ್ತು ರೇಖಾಚಿತ್ರದ ಪ್ರಕಾರ ಕೆಲಸವನ್ನು ಕಾರ್ಯಗತಗೊಳಿಸಲಾಗಿದೆ. ಇದರ ಪರಿಣಾಮವಾಗಿ ಗ್ರಾವಿಟಿ ಮೇನ್ಸ್ ಕಾರ್ಯಗಳ ಅಡಿಯಲ್ಲಿ 33.19 ಕಿಮೀ ಉಳಿತಾಯವಾಗಿದೆ.

ಕೆಲಸದ ವ್ಯಾಪ್ತಿ ಕಡಿಮೆಯಾದಂತೆ, ವಿಭಾಗವು ಗುತ್ತಿಗೆಯ ನಿಬಂಧನೆಯನ್ನು (ಷರತ್ತು 32.2) ಕಾರ್ಯವ್ಯಾಪ್ತಿಯಲ್ಲಿನ ಕಡಿತಕ್ಕೆ ಅನುಗುಣವಾಗಿ ಒಪ್ಪಂದದ ಬೆಲೆಯನ್ನು ಸರಿಹೊಂದಿಸಿ, ಉಳಿತಾಯವನ್ನು ಕೆಬಿಜೆಎನ್‌ಎಲ್‌ಗೆ ವರ್ಗಾಯಿಸಬೇಕಾಗಿತ್ತು. ಕಡಿಮೆಯಾದ ಕೆಲಸದ ವ್ಯಾಪ್ತಿಯಂತೆ, ಗುತ್ತಿಗೆದಾರರು ಗ್ರಾವಿಟಿ ಮೇನ್ಸ್ ಭಾಗಕ್ಕೆ ₹ 88.56 ಕೋಟಿಗಳ[101] ಅನುಪಾತದ ಪಾವತಿಗೆ ಅರ್ಹರಾಗಿದ್ದರು. ಆದಾಗ್ಯೂ, ವಿಭಾಗವು ಒಪ್ಪಂದದ ವೆಚ್ಚ ನಿಯಂತ್ರಣದ ನಿಬಂಧನೆಯನ್ನು ಪರಿಗಣಿಸಲು ವಿಫಲವಾಯಿತು ಮತ್ತು 90.40 ಕಿ.ಮೀಗಳ ನಿಜವಾದ ಕಾರ್ಯಕ್ಕೆ ಬದಲಾಗಿ ಒಪ್ಪಂದದಲ್ಲಿ ಒದಗಿಸಲಾದ 123.59 ಕಿಮೀ ಮೂಲ ವ್ಯಾಪ್ತಿಯ ಪ್ರಕಾರ "ಗ್ರಾವಿಟಿ ಮೇನ್ಸ್" ಭಾಗದ ಅಡಿಯಲ್ಲಿ ₹ 118.33 ಕೋಟಿಗಳನ್ನು ಪಾವತಿಸಿದೆ (ಅಕ್ಟೋಬರ್ 2022). ಇದರಿಂದ ಗುತ್ತಿಗೆದಾರರಿಗೆ ₹ 29.77 ಕೋಟಿ ಅನುಚಿತ ಆರ್ಥಿಕ ಲಾಭವಾಗಿದೆ.

ಕೆಲಸದ ವ್ಯಾಪ್ತಿ "35 ಟ್ಯಾಂಕ್‌ಗಳನ್ನು ತುಂಬುವುದಾಗಿದ್ದು" ಅದನ್ನು ಕಡಿಮೆ ಮಾಡದೆ ಕಾರ್ಯಗತಗೊಳಿಸಲಾಗಿದೆ ಎಂದು ಕೆಬಿಜೆಎನ್‌ಎಲ್ ಉತ್ತರಿಸಿದೆ (ಏಪ್ರಿಲ್ 2024). ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಸೂಚಿಸಲಾದ ವಿನ್ಯಾಸ ಮತ್ತು ರೇಖಾಚಿತ್ರಗಳು ತಾತ್ಕಾಲಿಕವಾಗಿದ್ದವು ಮತ್ತು ಕೆಲಸದ ರೇಖಾಚಿತ್ರಗಳು ಮತ್ತು ವಿವರವಾದ ವಿಶ್ಲೇಷಣೆಗಳನ್ನು ಗುತ್ತಿಗೆದಾರರು ಕಾರ್ಯಗತಗೊಳಿಸುವ ಹಂತದಲ್ಲಿ ಅಭಿವೃದ್ಧಿಪಡಿಸಿದರು ಮತ್ತು ಸಲ್ಲಿಸಿದರು. ಇದರಲ್ಲಿ ಗ್ರಾವಿಟಿ ಮೇನ್ಸ್‌ನ ಉದ್ದವನ್ನು 123.59 ಕಿಮೀ ನಿಂದ 90.40 ಕಿಮೀಗೆ ಇಳಿಸಲಾಯಿತು. ಹೀಗಾಗಿ, ವ್ಯಾಪ್ತಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಮತ್ತು ಒಪ್ಪಂದದ ಬೆಲೆಯನ್ನು ಕಡಿಮೆ ಮಾಡಲು ಟೆಂಡರ್ ದಾಖಲೆಯ ಷರತ್ತು 32.2 ಅನ್ನು ಪರಿಗಣಿಸಲಾಗಿಲ್ಲ ಎಂದು ತಿಳಿಸಿತು. ಕೆಬಿಜೆಎನ್‌ಎಲ್ನ ಉತ್ತರವನ್ನು ಸರ್ಕಾರವೂ ಅನುಮೋದಿಸಿದೆ (ಏಪ್ರಿಲ್ 2024).

ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಸೇರಿಸಲಾದ ಕೆಲಸದ ವ್ಯಾಪ್ತಿಯು ಗ್ರಾವಿಟಿ ಮೈನ್ಸ್‌ನ ಉದ್ದ 123.59 ಕಿಮೀ ಎಂದು ಸ್ಪಷ್ಟವಾಗಿ ಸೂಚಿಸಿರುವುದರಿಂದ ಉತ್ತರವನ್ನು ಸ್ವೀಕರಿಸಲಾಗುವುದಿಲ್ಲ. ಆದಾಗ್ಯೂ, ಅಂತಿಮ ವಿನ್ಯಾಸ ಮತ್ತು ರೇಖಾಚಿತ್ರಗಳಿಗೆ ಸಿಇ ಒಪ್ಪಿಗೆ ನೀಡಿದ ಅನುಮೋದನೆಯು ಗ್ರಾವಿಟಿ ಮೇನ್ಸ್‌ನ ಉದ್ದವನ್ನು 90.40 ಕಿಮೀಗೆ ಮೊಟಕುಗೊಳಿಸುವ ಮೂಲಕ ಕೆಲಸದ ವ್ಯಾಪ್ತಿಯನ್ನು

[100] ಹಂತ 1 ರ ಅಡಿಯಲ್ಲಿ 96.85 ಕಿ.ಮೀ ಮತ್ತು ಹಂತ 2 ರ ಅಡಿಯಲ್ಲಿ 26.74 ಕಿ.ಮೀ.

[101] 90.4 ಕಿಮೀ (ಮಾರ್ಪಡಿಸಿದ ವ್ಯಾಪ್ತಿಯ ಪ್ರಕಾರ)/ 123.59 ಕಿಮೀ (ಮೂಲ ವ್ಯಾಪ್ತಿಯಂತೆ) ̧ ₹ 121.08 ಕೋಟಿ (ಉಲ್ಲೇಖಿತ ಬೆಲೆ) = ₹ 88.56 ಕೋಟಿ.

ಕಡಿಮೆಗೊಳಿಸಿತು. ಕಾಮಗಾರಿಗಳ ವ್ಯಾಪ್ತಿಯಲ್ಲಿ ಶೇಕಡಾ 26 ರಷ್ಟು ಕಡಿತವು, ಷರತ್ತು 32.2 ರ ಪ್ರಕಾರ ಗುತ್ತಿಗೆದಾರರಿಗೆ ಪಾವತಿಯಲ್ಲಿ ಪ್ರಮಾಣಾನುಗುಣವಾದ ಕಡಿತವನ್ನು ಸಮರ್ಥಿಸುತ್ತದೆ.

ಕೆಬಿಜೆಎನ್ಎಲ್ನ ವೆಚ್ಚ ನಿಯಂತ್ರಣಕ್ಕೆ ಸಂಬಂಧಿಸಿದ ಒಪ್ಪಂದದ ಷರತ್ತನ್ನು ಜಾರಿಮಾಡಲು ವಿಫಲವಾದ ಕಾರಣ, ₹ 29.77 ಕೋಟಿ ಹೆಚ್ಚುವರಿ ಪಾವತಿಯಾಗಿದ್ದು ಗುತ್ತಿಗೆದಾರನಿಗೆ ಅನುಚಿತ ಆರ್ಥಿಕ ಲಾಭವಾಗಿದೆ

**ಶಿಫಾರಸು:**

**16. ಒಪ್ಪಿತ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳಿಗೆ ಸರಿಯಾಗಿ ಹೆಚ್ಚುವರಿ ಪಾವತಿಯನ್ನು ಮರುಪಡೆಯಲು ಕೆಬಿಜೆಎನ್ಎಲ್ ತುರ್ತು ಕ್ರಮ ತೆಗೆದುಕೊಳ್ಳಬೇಕು.**

### *6.4 ಗುತ್ತಿಗೆದಾರರನಿಗೆ ಹೆಚ್ಚುವರಿ ಪಾವತಿ*

**ಬೆಲೆ ಹೊಂದಾಣಿಕೆ ಪಾವತಿಗಳನ್ನು ನಿಯಂತ್ರಿಸಲು ತಪ್ಪಾದ ಬೆಲೆ ಸೂಚ್ಯಂಕಗಳನ್ನು ಅಳವಡಿಸಿಕೊಂಡಿದ್ದರಿಂದ ₹ 5.78 ಕೋಟಿ ಹೆಚ್ಚುವರಿ ಪಾವತಿಯಾಗಿದೆ.**

ನಿರ್ಮಾಣ ಸಾಮಗ್ರಿಗಳು ಮತ್ತು ಕಾರ್ಮಿಕರ ದರಗಳಲ್ಲಿ ಆಗುವ ಏರಿಳಿತಗಳನ್ನು ಪರಿಹರಿಸಲು, ಕರ್ನಾಟಕ ಸರ್ಕಾರವು (ನವೆಂಬರ್ 2004) ಆದೇಶವನ್ನು ಹೊರಡಿಸಿತು. ಅದರಂತೆ, ಎಲ್ಲಾ ಕಾಮಗಾರಿಗಳ ಅಂದಾಜು ಟೆಂಡರ್ ವೆಚ್ಚ ₹ 100 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ವೆಚ್ಚದ ಮತ್ತು ಪೂರ್ಣಗೊಳ್ಳುವ ಅವಧಿಯು 12 ತಿಂಗಳುಗಳು ಅಥವಾ ಹೆಚ್ಚಾಗಿದ್ದರೆ. ಒಪ್ಪಂದದ ಷರತ್ತುಗಳ ಅನುಸಾರವಾಗಿ ಮತ್ತು ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಕಾಲಕಾಲಕ್ಕೆ ಹೊರಡಿಸಲಾದ ಸೂಕ್ತ ಸಗಟು ಬೆಲೆ ಸೂಚ್ಯಂಕವನ್ನು ಆಧರಿಸಿ ಬೆಲೆ ಹೊಂದಾಣಿಕೆಯನ್ನು ಲೆಕ್ಕಾಚಾರ ಮಾಡಬೇಕಾಗಿತ್ತು.

ಕೃಷ್ಣಾ ಭಾಗ್ಯ ಜಲ ನಿಗಮ ಲಿಮಿಟೆಡ್ (ಕೆ.ಬಿ.ಜೆ.ಎನ್.ಎಲ್) ನ ಎರಡು ಕಾರ್ಯನಿರ್ವಾಹಕ ವಿಭಾಗಗಳ[102] ದಾಖಲೆಗಳ ಲೆಕ್ಕಪರಿಶೋಧನೆಯು (ಜೂನ್ 2023 ಮತ್ತು ಆಗಸ್ಟ್ 2023) ಕೆಳಗೆ ವಿವರಿಸಿದಂತೆ ಬೆಲೆ ಹೊಂದಾಣಿಕೆಯ ನಿಯಂತ್ರಣಕ್ಕಾಗಿ ಸೂಕ್ತವಲ್ಲದ ಬೆಲೆ ಸೂಚ್ಯಂಕಗಳನ್ನು ಅಳವಡಿಸಿಕೊಂಡ ಕಾರಣ ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿ ಮಾಡಿರುವುದನ್ನು ಕಂಡಿತು.

**i) ಪ್ಲಾಂಟ್ ಮತ್ತು ಮೆಷಿನರಿ ಸ್ಪೇರ್ಸ್ ಕಾಂಪೊನೆಂಟ್‌ಗೆ ಸಂಬಂಧಿಸಿದ ಬೆಲೆ ಸೂಚ್ಯಂಕದ ತಪ್ಪಾದ ಅಳವಡಿಕೆ.**

ಕಾರ್ಯನಿರ್ವಾಹಕ ಅಭ್ಯಯಂತರರು, ನಾರಾಯಣಪುರ ಬಲದಂಡೆ ಕಾಲುವೆ (ಎನ್.ಆರ್.ಬಿ.ಸಿ) ವಿಭಾಗ ನಂ. 5, ಕೆ.ಬಿ.ಜೆ.ಎನ್.ಎಲ್ ಅವರು "ನಾರಾಯಣಪುರ ಬಲದಂಡೆ ಕಾಲುವೆ ವ್ಯವಸ್ಥೆಯ ರಚನೆಗಳು ಸೇರಿದಂತೆ 1 ರಿಂದ 15 ಲ್ಯಾಟರಲ್‌ಗಳ ವಿಸ್ತರಣಾ, ನವೀಕರಣ ಮತ್ತು ಆಧುನೀಕರಣದ" ಕೆಲಸವನ್ನು ಗುತ್ತಿಗೆದಾರರಿಗ[103] ₹ 828.40 ಕೋಟಿ ವೆಚ್ಚದ ಟೆಂಡರ್ ಕಾಮಗಾರಿಯನ್ನು (ಜುಲೈ 2021) ನೀಡಲಾಯಿತು. ಕಾಮಗಾರಿಯು ಪ್ರಗತಿಯಲ್ಲಿದೆ ಮತ್ತು ಗುತ್ತಿಗೆದಾರರು ಮಾರ್ಚ್ 2023 ರ ವೇಳೆಗೆ ₹ 628.40 ಕೋಟಿ ಆರ್ಥಿಕ ಪ್ರಗತಿಯನ್ನು ಸಾಧಿಸಿದ್ದಾರೆ. ಹೆಚ್ಚುವರಿಯಾಗಿ, ಎನ್.ಆರ್.ಬಿ.ಸಿ ವಿಭಾಗವು ₹ 1.58 ಕೋಟಿ ಮೆಷಿನರಿ ಸ್ಪೇರ್ಸ್" ಕಾಂಪೊನೆಂಟ್ ಸೇರಿದಂತೆ ಬೆಲೆ ಹೊಂದಾಣಿಕೆ ಬಿಲ್‌ಗಳ ಮೂಲಕ ಗುತ್ತಿಗೆದಾರರಿಗೆ ₹ 5.72 ಕೋಟಿಯನ್ನು ಪಾವತಿಸಿತು (ಜನವರಿ 2023)

[102] ನಾರಾಯಣಪುರ ಬಲದಂಡೆ ಕಾಲುವೆ ವಿಭಾಗ ನಂ.5 ಮತ್ತು ಇಂಡಿ ಬ್ರಾಂಚ್ ಕಾಲುವೆ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗ, ರಾಂಪುರ.

[103] M/s. ಎನ್. ಡಿ. ವಡ್ಡರ್ ಮತ್ತು ಕಂಪನಿ, ಲಿಂಗಸೂಗೂರ.

ಒಪ್ಪಂದದ ಸಾಮಾನ್ಯ ಷರತ್ತುಗಳ ಷರತ್ತು 44 ರ ಪ್ರಕಾರ, "ಪ್ಲಾಂಟ್ಸ್ ಮತ್ತು ಮೆಷಿನರಿ ಸ್ಪೇರ್ಸ್" ಕಾಂಪೊನೆಂಟ್ ಬೆಲೆ ಹೊಂದಾಣಿಕೆಯು "ಮೆಟೀರಿಯಲ್ ಹ್ಯಾಂಡ್ಲಿಂಗ್, ಲಿಫ್ಟಿಂಗ್ ಮತ್ತು ಹೋಯಿಸ್ಟಿಂಗ್ ಸಲಕರಣೆ" ಗಾಗಿ ಅಖಿಲ ಭಾರತ ಸರಾಸರಿ ಸಗಟು ಬೆಲೆ ಸೂಚ್ಯಂಕವನ್ನು ಆಧರಿಸಿ ನಿಯಂತ್ರಿಸಬೇಕು. ಆದಾಗ್ಯೂ, ಎನ್‌ಆರ್‌ಬಿಸಿ ವಿಭಾಗವು "ಪ್ಲಾಂಟ್ಸ್ ಮತ್ತು ಮೆಷಿನರಿ ಸ್ಪೇರ್ಸ್" ಕಾಂಪೊನೆಂಟ್ ಬೆಲೆ ಹೊಂದಾಣಿಕೆ ಕ್ಲೈಮ್ ಅನ್ನು ನಿಯಂತ್ರಿಸುವಾಗ, ಒಪ್ಪಂದದ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದ "ಮೆಟೀರಿಯಲ್ ಹ್ಯಾಂಡ್ಲಿಂಗ್, ಲಿಫ್ಟಿಂಗ್ ಮತ್ತು ಹೋಯಿಸ್ಟಿಂಗ್ ಸಲಕರಣೆ" ಬದಲಿಗೆ "ಯಂತ್ರೋಪಕರಣಗಳು ಮತ್ತು ಸಲಕರಣೆಗಳ ತಯಾರಿಕೆ" ಸರಾಸರಿ ಸಗಟು ಬೆಲೆ ಸೂಚ್ಯಂಕವನ್ನು ಪರಿಗಣಿಸಿದ್ದರಿಂದ ₹ 1.15 ಕೋಟಿ ಹೆಚ್ಚುವರಿ ಪಾವತಿಯಾಗಿದೆ. (***ಅನುಬಂಧ – 29***).

**ii) ಉಕ್ಕಿನ ಅಂಶಕ್ಕೆ ಸಂಬಂಧಿಸಿದ ಬೆಲೆ ಸೂಚ್ಯಂಕದ ತಪ್ಪಾದ ಅಳವಡಿಕೆ**

ಕಾರ್ಯನಿರ್ವಾಹಕ ಅಭ್ಯಯಂತರರು, ಇಂಡಿ ಬ್ರಾಂಚ್ ಕಾಲುವೆ (ಐಬಿಸಿ) ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗ, ರಾಂಪುರವರು "ಚಡಚಣ ಏತ ನೀರಾವರಿ ಯೋಜನೆಗೆ ನೀರು ಹೆಚ್ಚಿಸಲು ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಉಮಾರಾಣಿ ಬ್ಯಾರೇಜ್‌ನ ಮರುಸ್ಥಾಪನೆ ಮತ್ತು ಯಾಂತ್ರಿಕ ಗೇಟ್‌ಗಳನ್ನು ಬದಲಿಸುವ" ಕೆಲಸವನ್ನು ಟೆಂಡರ್ ಪ್ರಕ್ರಿಯೆಯ ನಂತರ ₹ 133.33 ಕೋಟಿ ಗುತ್ತಿಗೆ ಬೆಲೆಯಲ್ಲಿ ಗುತ್ತಿಗೆದಾರನಿಗೆ[104] ವಹಿಸಿದರು (ಜನವರಿ 2021). ಕಾಮಗಾರಿ ಪ್ರಗತಿಯಲ್ಲಿದ್ದು, ಗುತ್ತಿಗೆದಾರನಿಗೆ ₹ 133.46 ಕೋಟಿ ಮತ್ತು ಬೆಲೆ ಹೊಂದಾಣಿಕೆಗೆ ₹ 24.91 ಕೋಟಿಯನ್ನು ಮಾರ್ಚ್ 2023ರಲ್ಲಿ ಪಾವತಿಸಲಾಗಿದೆ.

ಒಪ್ಪಂದದ ಸಾಮಾನ್ಯ ಷರತ್ತುಗಳ ಷರತ್ತು 44 ಉಕ್ಕಿನ ಅಂಶಕ್ಕೆ ಸಂಬಂಧಿಸಿದಂತೆ, ಬಲವರ್ಧನೆ ಮತ್ತು ರಚನಾತ್ಮಕ ಉಕ್ಕಿನ ಅಖಿಲ ಭಾರತ ಸರಾಸರಿ ಸಗಟು ಬೆಲೆ ಸೂಚ್ಯಂಕವನ್ನು ಬೆಲೆ ಹೊಂದಾಣಿಕೆ ನಿಯಂತ್ರಿಸಲು ಅಳವಡಿಸಿಕೊಳ್ಳಬೇಕೆಂದು ಷರತ್ತು ವಿಧಿಸಿದೆ. ಆದಾಗ್ಯೂ, ಐಬಿಸಿ ವಿಭಾಗ, ರಾಂಪುರವು ಉಕ್ಕಿನ ಬೆಲೆ ಹೊಂದಾಣಿಕೆಗಾಗಿ "ಸ್ಟ್ರಕ್ಚರಲ್ ಸ್ಟೀಲ್ ಕಾಂಪೊನೆಂಟ್" ಅಡಿಯಲ್ಲಿ ಉಪ–ಗುಂಪು "ಮೈಲ್ಡ್ ಸ್ಟೀಲ್ ಫ್ಲಾಟ್‌ಗಳು ಮತ್ತು ಶೀಟ್‌ಗಳು" ಬದಲಿಗೆ "ಮೂಲ ಲೋಹಗಳ ತಯಾರಿಕೆ" ಅಡಿಯಲ್ಲಿ ಉಪ–ಗುಂಪು "ಮೈಲ್ಡ್ ಸ್ಟೀಲ್–ಫ್ಲಾಟ್ ಉತ್ಪನ್ನಗಳು" ಅಳವಡಿಸಿಕೊಂಡಿದೆ.. ಇದು ***ಅನುಬಂಧ – 30***ರಲ್ಲಿ ವಿವರಿಸಿದಂತೆ ₹ 5.87 ಕೋಟಿಗಳಷ್ಟು ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿದೆ.

ಕೆ.ಬಿ.ಜೆ.ಎನ್.ಎಲ್ ತನ್ನ ಉತ್ತರದಲ್ಲಿ (ಜನವರಿ 2024) ಗುತ್ತಿಗೆದಾರನಿಂದ "ಪ್ಲಾಂಟ್ ಮತ್ತು ಮೆಷಿನರಿ ಸ್ಪೇರ್ಸ್" ಕಾಂಪೊನೆಂಟ್ಗೆ ಸಂಬಂಧಿಸಿದ ಬೆಲೆ ಸೂಚ್ಯಂಕವನ್ನು ತಪ್ಪಾಗಿ ಅಳವಡಿಸಿಕೊಂಡಿದ್ದರಿಂದ ₹ 1.25 ಕೋಟಿ ಮೊತ್ತವನ್ನು ವಸೂಲಿ ಮಾಡಲಾಗಿದೆ (ನವೆಂಬರ್ 2023) ಮತ್ತು ಉಕ್ಕಿನ ಘಟಕದ ಬೆಲೆ ಹೊಂದಾಣಿಕೆಗೆ ಸಂಭಂದಿಸಿದ ₹ 5.87 ಕೋಟಿ ವಸೂಲಾತಿಗಾಗಿ ಕ್ರಮವಹಿಸಲಾಗಿದೆ ಎಂದು ಹೇಳಿದೆ. ಕೆ.ಬಿ.ಜೆ.ಎನ್.ಎಲ್ನ ಉತ್ತರವನ್ನು ಸರ್ಕಾರವು ಅನುಮೋದಿಸಿದೆ (ಜನವರಿ 2024).

ಹೀಗಾಗಿ, ಎರಡು ಕಾಮಗಾರಿಗಳಲ್ಲಿ "ಪ್ಲಾಂಟ್ ಮತ್ತು ಮೆಷಿನರಿ" ಮತ್ತು "ಸ್ಟೀಲ್ ಫ್ಲಾಟ್‌ಗಳು" ಕಾಂಪೊನೆಂಟ್ಗಳಿಗೆ ಸಂಬಂಧಿಸಿದಂತೆ ಬೆಲೆ ಹೊಂದಾಣಿಕೆಗೆ ಸೂಕ್ತವಲ್ಲದ ಸೂಚ್ಯಂಕಗಳನ್ನು ಅಳವಡಿಸಿಕೊಂಡಿದ್ದರಿಂದ ಗುತ್ತಿಗೆದಾರರಿಗೆ ₹ 7.02 ಕೋಟಿಗಳಷ್ಟು ಹೆಚ್ಚುವರಿ ಪಾವತಿಯಾಗಿದೆ, ಅದರಲ್ಲಿ ₹ 5.78 ಕೋಟಿ ಮೊತ್ತವನ್ನು ವಸೂಲು ಮಾಡಬೇಕಾಗಿದೆ (ಮೇ 2024).

**ಶಿಫಾರಸು:**

**17. ಕೆ.ಬಿ.ಜೆ.ಎನ್.ಎಲ್ ಗುತ್ತಿಗೆದಾರರಿಗೆ ಪಾವತಿಸಿದ ಹೆಚ್ಚುವರಿ ಮೊತ್ತವನ್ನು ಹಿಂಪಡೆಯಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಬೆಲೆ ಹೊಂದಾಣಿಕೆ ಪಾವತಿಗಳನ್ನು ನಿಯಂತ್ರಿಸುವಾಗ ಒಪ್ಪಂದದ ಷರತ್ತುಗಳನ್ನು ಕಡ್ಡಾಯವಾಗಿ ಅನುಸರಿಸಲು ಎಲ್ಲಾ ವಿಭಾಗಗಳಿಗೆ ನಿರ್ದೇಶನ ನೀಡಬೇಕು.**

[104] ಶ್ರೀ. ಜಿ. ಶಂಕರ್, ವಿಜಯಪುರ.

### *6.5 ಕಾರ್ಯಗತಗೊಳಿಸದ ಕಾಮಗಾರಿಗಳಿಗೆ ವಂಚನೆಯ ಪಾವತಿ*

**ಜಾರಿಯಾಗದಿರುವ ಚರಂಡಿ ಕಾಮಗಾರಿಗೆ ಸುಳ್ಳು ಪ್ರಮಾಣ ಪತ್ರ ನೀಡಿ ₹ 33.95 ಲಕ್ಷ ವಂಚನೆ ಮಾಡಲಾಗಿದೆ.**

ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆಯ (ಕೆಪಿಡಬ್ಲ್ಯುಡಿ ಕೋಡ್) ಕಂಡಿಕೆ 110.1(ಎ) ಮಂಜೂರಾದ ಯೋಜನೆಗಳು, ಅಂದಾಜುಗಳು ಮತ್ತು ನಿಗದಿತ ಅಳತೆಗಳಿಗೆ ಅನುಗುಣವಾಗಿ ಕಾರ್ಯಗತಗೊಳಿಸಿದ ಎಲ್ಲಾ ಕಾಮಗಾರಿಗಳಿಗೆ ಕೆಲಸದ ಉಸ್ತುವಾರಿ ಕ್ಷೇತ್ರ ಅಭ್ಯಾಯಂತರರು ಮಾಪನಗಳನ್ನು ನಡೆಸಬೇಕು ಎಂದು ಷರತ್ತು ವಿಧಿಸುತ್ತದೆ. ಇದಲ್ಲದೆ, ಕೆಪಿಡಬ್ಲ್ಯುಡಿ ಕೋಡ್‌ನ ಕಂಡಿಕೆ 110.8, ಕ್ಷೇತ್ರ ಅಭ್ಯಯಂತರರಿಂದ ಆರಂಭದಲ್ಲಿ ದಾಖಲಿಸಲಾದ ಅಳತೆಗಳನ್ನು ಸಹಾಯಕ ಕಾರ್ಯನಿರ್ವಾಹಕ ಅಭ್ಯಯಂತರರ (ಎ.ಇ.ಇ) ಮೂಲಕ ಪರಿಶೀಲಿಸಬೇಕು ಎಂದು ಕಡ್ಡಾಯಗೊಳಿಸುತ್ತದೆ. ಅಳತೆಯಲ್ಲಿರಬಹುದಾದ ದೋಷಗಳನ್ನು ಪತ್ತೆಹಚ್ಚುವುದು ಮತ್ತು ವಂಚನೆಯ ಪ್ರಕರಣಗಳನ್ನು ತಡೆಗಟ್ಟುವುದು ಚೆಕ್ ಮಾಪನದ ಉದ್ದೇಶಗಳಲ್ಲಿ ಒಂದಾಗಿದೆ. ಚೆಕ್ ಮಾಪನದ ನಂತರ, ಎ.ಇ.ಇ ತನ್ನ ಸಹಿಯ ಅಡಿಯಲ್ಲಿ ದಿನಾಂಕದೊಂದಿಗೆ ತನ್ನ ಕೈಬರಹದಲ್ಲಿ ದಾಖಲಾದ ಅಳತೆಗಳು ಸರಿಯಾಗಿವೆ ಮತ್ತು ಮಂಜೂರಾದ ಯೋಜನೆಗಳು ಮತ್ತು ಅನುಮೋದಿತ ವಿಶ್ಲೇಷಣೆಗಳ ಪ್ರಕಾರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ದೃಡೀಕರಿಸಬೇಕು. ಕ್ಷೇತ್ರ ಅಭ್ಯಯಂತರರು ಅಥವಾ ಎ.ಇ.ಇ ಇಂದ ಸುಳ್ಳು ಪ್ರಮಾಣೀಕರಣವಾದಲ್ಲಿ, ಅದನ್ನು ಅನ್ಯಾಯದ ವಿಧಾನಗಳಿಂದ ಸರ್ಕಾರದ ಪಾವತಿಯನ್ನು ಸುಲಭಗೊಳಿಸುವ ಮೋಸದ ಪ್ರಯತ್ನವೆಂದು ಅರ್ಥೈಸಬಹುದು ಮತ್ತು ದಂಡದ ಕ್ರಮವನ್ನು ಆಹ್ವಾನಿಸಬಹುದು.

ಯಾದಗಿರಿ ಜಿಲ್ಲೆ ಶೋರಾಪುರ ತಾಲೂಕಿನ ಜೋಗುಂಡಭಾವಿಯಿಂದ ಕಮಲಾಪುರದವರೆಗಿನ ರಸ್ತೆ ನಿರ್ಮಾಣ ಕಾಮಗಾರಿಯನ್ನು ₹ 1.60 ಕೋಟಿ ಅಂದಾಜು ವೆಚ್ಚದಲ್ಲಿ ನಾರಾಯಣಪುರ (ವಿಭಾಗ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್‌ಎಲ್) ಅಣೆಕಟ್ಟು ವಿಭಾಗದ ಕಾರ್ಯನಿರ್ವಾಹಕ ಅಭ್ಯಯಂತರರು (ಇಇ) ವಹಿಸಿದ್ದರು. ನಾಲ್ಕು ತಿಂಗಳ ನಿಗದಿತ ಅವಧಿಯೊಂದಿಗೆ ₹ 1.48 ಕೋಟಿ ಮೊತ್ತದ ಗುತ್ತಿಗೆ ಮೊತ್ತಕ್ಕೆ, ಟೆಂಡರ್ ಪ್ರಕ್ರಿಯೆಯ ನಂತರ ಕಾಮಗಾರಿಯನ್ನು ಗುತ್ತಿಗೆದಾರರನಿಗೆ[105] ನೀಡಲಾಯಿತು (ಮಾರ್ಚ್ 2019). ₹ 1.63 ಕೋಟಿ ವೆಚ್ಚದಲ್ಲಿ, 04 ಜುಲೈ 2019 ರಂದು ಕಾಮಗಾರಿ ಪೂರ್ಣಗೊಂಡಿದೆ.

ವಿಭಾಗದ ದಾಖಲೆಗಳ ಪರಿಶೀಲನೆಯು (ಜುಲೈ 2023), ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವ ಅನುಮೋದಿತ ಪ್ರಮಾಣಗಳ ಪಟ್ಟಿಯು (ಬಿಒಕ್ಯು) ಒಳಗೊಂಡಿತ್ತು ಎಂದು ತೋರಿಸಿತು.

**ಕೋಷ್ಟಕ ಸಂಖ್ಯೆ. 6.5.1: ಬಿಒಕ್ಯು ಪ್ರಕಾರ ಕೆಲಸದ ವಿವರಗಳು**

| ಕ್ರಮ. ಸಂಖ್ಯೆ | ಬಿಒಕ್ಯು ನ ಸರಣಿ ಸಂಖ್ಯೆ | ಕಾಮಗಾರಿಯ ವಿವರಣೆ | ಪ್ರಮಾಣ | ಉಲ್ಲೇಖಿಸಲಾದ ದರ (₹) |
|---|---|---|---|---|
| 1 | 3 | ರಸ್ತೆ ಚರಂಡಿ ಉತ್ಖನನದ ಕಾಮಗಾರಿ | 22,000 ಸಿಯುಎಂ | 137.80/ ಸಿಯುಎಂ |
| 2 | 4 | 8 ರಿಂದ 10 ಟನ್ ಪವರ್ ರೋಲರ್‌ನ ಗರಿಷ್ಠ ಆರು ಬಾರಿಗೆ ಮೂಲ ನೆಲದ ಸಂಕೋಚನ | 4,500 ಚ.ಮೀ | 6.36/ ಚ.ಮೀ |

*ಮೂಲ: ಅನುಮೋದಿತ ಬಿಒಕ್ಯು*

ಕೆಲಸದ ಅಂದಾಜುಗಳು/ ಬಿಒಕ್ಯುಗಳ ಲೆಕ್ಕಪರಿಶೋಧನೆಯು ಮೇಲಿನ ಎರಡು ಅಂಶಗಳಿಗೆ ಸಂಬಂಧಿಸಿದಂತೆ ಕಾರ್ಯಗತಗೊಳಿಸಬೇಕಾದ ಪ್ರಮಾಣಗಳನ್ನು ಪರಸ್ಪರ ಬದಲಾಯಿಸಲಾಗಿದೆ ಎಂದು ತೋರಿಸಿತು. ಅಂದಾಜುಗಳ ಜೊತೆಗಿನ ವಿವರವಾದ ಅಳತೆಗಳು ಉತ್ಖನನಕ್ಕೆ 4,500 ಸಿಯುಎಂ (ಐಟಂ ನಂ.3) ಮತ್ತು ಸಂಕೋಚನಕ್ಕೆ (ಐಟಂ ನಂ.4) 22,000 ಚದರ ಮೀಟರ್ ಎಂದು ಸೂಚಿಸಿವೆ. ಅಂದಾಜುಗಳಿಗೆ ಲಗತ್ತಿಸಲಾದ ರಸ್ತೆಯ ವಿಭಾಗೀಯ ರೇಖಾಚಿತ್ರಗಳು ಐಟಂ 3ಗೆ ಸಂಬಂಧಿಸಿದಂತೆ ಕೇವಲ 4,000 ಸಿಯುಎಂ ಪ್ರಮಾಣವನ್ನು ಸೂಚಿಸಿವೆ. ಆದಾಗ್ಯೂ, ಮೇಲಿನ ಪ್ರಮಾಣಗಳನ್ನು ಅಂದಾಜುಗಳಲ್ಲಿ

[105] ಶ್ರೀ ಪರಮಣ್ಣ ಪೊಲೀಸ್ ಪಾಟೀಲ್, ಹುಣಸಗಿ, ಯಾದಗಿರಿ.

ಪರಸ್ಪರ ಬದಲಾಯಿಸಲಾಗಿದೆ ಮತ್ತು ಮುಖ್ಯ ಅಭ್ಯಯಂತರರು ಕೆ.ಬಿ.ಜೆ.ಎನ್.ಎಲ್, ಕಾರ್ಯಾಚರಣೆಗಳು ಮತ್ತು ನಿರ್ವಹಣೆ ವಲಯ, ನಾರಾಯಣಪುರ ಅವರು ಮೇಲಿನ ವ್ಯತ್ಯಾಸವನ್ನು ಗಮನಿಸದೆ ವಿಭಾಗವು ಸಲ್ಲಿಸಿದ ಕೆಲಸಕ್ಕೆ ಅಂದಾಜುಗಳನ್ನು ತಾಂತ್ರಿಕವಾಗಿ ಅನುಮೋದಿಸಿದ್ದಾರೆ (ಡಿಸೆಂಬರ್ 2018).

ವಿಭಾಗವು ಮೂರನೇ ಮತ್ತು ಅಂತಿಮ ರನ್ನಿಂಗ್ ಅಕೌಂಟ್ ಬಿಲ್ (ಆಗಸ್ಟ್ 2019) ಮೂಲಕ 22,000 ಸಿಯುಎಂ ಕಾರ್ಯಗತಗೊಳಿಸಿದ ಪ್ರಮಾಣಕ್ಕಾಗಿ ಐಟಂ ನಂ.3 ಅಂದರೆ 'ರಸ್ತೆ ಚರಂಡಿಗಳ ಉತ್ಖನನದ' ವಿರುದ್ಧ ₹ 30.32 ಲಕ್ಷ ಸಂಚಿತ ಪಾವತಿ ಮಾಡಿದೆ. ಮೇಲ್ಕಂಡ ಕಾಮಗಾರಿಯ ಅಳತೆಯನ್ನು ಕ್ಷೇತ್ರ ಅಭ್ಯಯಂತರರು ದಾಖಲಿಸಿದ್ದಾರೆ ಮತ್ತು ಅಳತೆ ಪುಸ್ತಕದಲ್ಲಿ 22,000 ಸಿಯುಎಂ ಪ್ರಮಾಣಕ್ಕೆ ಎ.ಇ.ಇಯಿಂದ ಪ್ರಮಾಣೀಕರಿಸಲಾಗಿದೆ ಎಂದು ಲೆಕ್ಕ ಪರಿಶೋಧನೆ ತೋರಿಸಿತು.

ಅಂಕಿಅಂಶಗಳಲ್ಲಿನ ವ್ಯತ್ಯಾಸದ ದೃಷ್ಟಿಯಿಂದ, ಲೆಕ್ಕಪರಿಶೋಧನಾ ತಂಡವು ಇಲಾಖೆಯ ಅಧಿಕಾರಿಗಳೊಂದಿಗೆ ಕೆಲಸದ ಸ್ಥಳದ ಜಂಟಿ ಭೌತಿಕ ಪರಿಶೀಲನೆ (ಜೆಪಿವಿ) ನಡೆಸಿತು (ಡಿಸೆಂಬರ್ 2023). ಐಟಂ ನಂ.3 ಅಂದರೆ ಚರಂಡಿಗಾಗಿ ಉತ್ಖನನದ ಕಾಮಗಾರಿಯನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರುವಂತೆ ರಸ್ತೆಯ ಎರಡೂ ಬದಿಯಲ್ಲಿ ನಡೆಸಲಾಗಿಲ್ಲ ಎಂದು ಜೆಪಿವಿ ಬಹಿರಂಗಪಡಿಸಿದೆ. ಚರಂಡಿಗಾಗಿ ಅಗೆಯುವ ಕೆಲಸವನ್ನು ಕೈಗೊಳ್ಳಲಾಗಿಲ್ಲ ಎಂಬ ಅಂಶವನ್ನು ವಿಭಾಗದ ಎಇಇ ಮತ್ತು ಇಇ ಅವರು ಪ್ರಮಾಣೀಕರಿಸಿದ್ದಾರೆ (ಡಿಸೆಂಬರ್ 2023). ರಸ್ತೆಯ ಎರಡೂ ಬದಿಗಳಲ್ಲಿ ಬಂಡೆಗಳು ತುಂಬಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿದೆ ಮತ್ತು ಜೆಪಿವಿಯ ಕೆಳಗಿನ ಛಾಯಾಚಿತ್ರಗಳಿಂದ ನೋಡಿದಂತೆ ಅಳತೆ ಪುಸ್ತಕಗಳಲ್ಲಿ ದಾಖಲಿಸಿರುವಂತೆ ಚರಂಡಿ ಕಾಮಗಾರಿಗೆ ಯಾವುದೇ ಅಗೆಯುವಿಕೆಯಾಗಿಲ್ಲ:




ಛಾಯಾಚಿತ್ರ ಸಂಖ್ಯೆ 6.5.1: ರಸ್ತೆ ಕಾಮಗಾರಿಯ ಸ್ಥಿತಿಯನ್ನು ತೋರಿಸುವ ಚಿತ್ರಗಳು

ಹೀಗಾಗಿ, "ಒಳಚರಂಡಿಗಾಗಿ ಉತ್ಖನನ" ಕಾಮಗಾರಿಯ ಐಟಂ ಅನ್ನು ಕಾರ್ಯಗತಗೊಳಿಸದಿದ್ದರೂ, ಅಳತೆ ಪುಸ್ತಕದಲ್ಲಿ 22,000 ಸಿಯುಎಂ ಭೂಮಿಯ ಉತ್ಖನನದ ಕೆಲಸವನ್ನು ನಡೆಸಲಾಗಿದೆ ಎಂದು ದಾಖಲಿಸಲಾಗಿದೆ. 100 ರಷ್ಟು ಚೆಕ್ ಮಾಪನಗಳನ್ನು ನಡೆಸಲಾಗಿದೆ ಮತ್ತು ಅದರಂತೆ ಪಾವತಿ ಮಾಡಲಾಗಿದೆ ಎಂದು ಎಇಇ ಪ್ರಮಾಣೀಕರಿಸಿದ್ದಾರೆ. ಇದರಿಂದ, ನಡೆಯದೇ ಇದ್ದ ಕಾಮಗಾರಿಗೆ ₹ 33.95

**ಲಕ್ಷ[106] ಪಾವತಿಯಾಗಿದೆ. ಅಳತೆ ಪುಸ್ತಕದಲ್ಲಿನ ದಾಖಲೆಗಳನ್ನು ದುರ್ಬಳಕೆ ಮಾಡಿಕೊಂಡು ಅಧಿಕಾರಿಗಳು ತಪ್ಪು ಪ್ರಮಾಣ ಪತ್ರ ನೀಡಿ ಗುತ್ತಿಗೆದಾರರಿಗೆ ₹ 33.95 ಲಕ್ಷ ವಂಚನೆಯ ಪಾವತಿ ಮಾಡಿದ್ದಾರೆ.**

**ಕೆ.ಬಿ.ಜೆ.ಎನ್.ಎಲ್ ತನ್ನ ಪ್ರತ್ಯುತ್ತರದಲ್ಲಿ (ಏಪ್ರಿಲ್ 2024) "ಚರಂಡಿಗಳಿಗೆ ಉತ್ಖನನ" ಎಂಬ ಕೆಲಸದ ಐಟಂ ಅನ್ನು ಕಾರ್ಯಗತಗೊಳಿಸಲಾಗಿಲ್ಲ ಮತ್ತು ಮೇಲಿನ ಐಟಂಗೆ ಅಂದಾಜುಗಳಲ್ಲಿರುವ ಅನುದಾನವನ್ನು ಮೇಲ್ಮೈ ಬಂಡೆಗಳು ಮತ್ತು ಗಟ್ಟಿಯಾದ ಬಂಡೆಗಳನ್ನು ತೆಗೆದುಹಾಕಲು, ರಸ್ತೆ ಮೇಲ್ಮೈಯನ್ನು ಸಮವಾಗಿ ಮಾಡಲು ಬಳಸಲಾಗಿದೆ ಮತ್ತು ಯಾವುದೇ ಕಾಲ್ಪನಿಕ ಅಳತೆಗಳನ್ನು ದಾಖಲಿಸಲಾಗಿಲ್ಲ ಮತ್ತು ಇದು ಮತ್ತೊಂದು ಅಗತ್ಯ ಐಟಂಗಾಗಿ " ಚರಂಡಿಗಳಿಗೆ ಉತ್ಖನನ" ಕ್ಕೆ ಲಭ್ಯವಿರುವ ಅನುದಾನವನ್ನು ಬಳಸುವಲ್ಲಿ ಕೇವಲ ಕಾರ್ಯವಿಧಾನದ ಅಕ್ರಮವಾಗಿದೆ ಎಂದು ಹೇಳಲಾಗಿದೆ. ಹೆಚ್ಚುವರಿ ಪಾವತಿಯಾಗಿದ್ದರೆ ಅದನ್ನು ಪತ್ತೆಹಚ್ಚಿ ಮತ್ತು ವಸೂಲಿ ಮಾಡಲು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸಲು ವಿವರವಾದ ವಿಚಾರಣೆಯನ್ನು ನಡೆಸಲಾಗುವುದು ಎಂದು ಭರವಸೆ ನೀಡಲಾಯಿತು. ಕೆ.ಬಿ.ಜೆ.ಎನ್.ಎಲ್‌ನ ಉತ್ತರವನ್ನು ಸರ್ಕಾರವು (ಏಪ್ರಿಲ್ 2024) ಅನುಮೋದಿಸಿತು.**

**"ಚರಂಡಿಗಾಗಿ ಉತ್ಖನನ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ 22,000 ಸಿಯುಎಂ ಮಣ್ಣಿನ ಕಾಮಗಾರಿಯನ್ನು ಅಳತೆ ಪುಸ್ತಕದಲ್ಲಿ ಜಾರಿಗೊಳಿಸಿದಂತೆ ಇಲಾಖಾ ಅಧಿಕಾರಿಯಿಂದ ತಪ್ಪಾಗಿ ಪ್ರಮಾಣೀಕರಿಸಲಾಗಿದೆ ಮತ್ತು ಅದರ ಆಧಾರದ ಮೇಲೆ ₹ 33.95 ಲಕ್ಷ ಪಾವತಿಸಲಾಗಿದ್ದರಿಂದ ಉತ್ತರವನ್ನು ಸ್ವೀಕರಿಸಲಾಗುವುದಿಲ್ಲ. "ಮೇಲ್ಮೈ ಬಂಡೆಗಳು ಮತ್ತು ಗಟ್ಟಿಯಾದ ಬಂಡೆಗಳನ್ನು ತೆಗೆದುಹಾಕುವುದು" ಎಂಬ ಹೆಚ್ಚುವರಿ ಐಟಂ ಅನ್ನು ಕಾರ್ಯಗತಗೊಳಿಸಲು ವಿಭಾಗವು ಸಕ್ಷಮ ಪ್ರಾಧಿಕಾರದಿಂದ ಪ್ರಸ್ತಾಪಿಸಿಲ್ಲ ಅಥವಾ ಅನುಮೋದನೆಯನ್ನು ಪಡೆದಿಲ್ಲ. ಆದ್ದರಿಂದ ಈ ಖಾತೆಯಲ್ಲಿ ಮಾಡಿದ ಪಾವತಿಯು ವಂಚನೆಯಿಂದ ಕೂಡಿದೆ**

**ಶಿಫಾರಸು:**

**18. ಕೆ.ಬಿ.ಜೆ.ಎನ್. ಎಲ್ ಗುತ್ತಿಗೆದಾರರಿಗೆ ವಂಚನೆಯಿಂದ ಮಾಡಿದ ಪಾವತಿಯನ್ನು ದಂಡದ ಬಡ್ಡಿಯೊಂದಿಗೆ ಮರುಪಡೆಯಬೇಕು ಮತ್ತು ವಂಚನೆಯ ಪಾವತಿಗೆ ಜವಾಬ್ದಾರರಾಗಿರುವ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸಲು ವಿವರವಾದ ವಿಚಾರಣೆಯನ್ನು ಕೈಗೊಳ್ಳಬೇಕು.**

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

### *6.6 ಹೆಚ್ಚುವರಿ ವೆಚ್ಚಗಳು*

**220 ಕಿವ್ಯಾ ಉಪ–ಸ್ಟೇಷನ್ನಿನ ನಿರ್ಮಾಣಕ್ಕಾಗಿ ಹಂಚಿಕೆ ಮಾಡಲಾಗಿದ್ದಂತಹ ಭೂಮಿಯ ಸೂಕ್ತತೆಯನ್ನು ಪರಿಶೀಲಿಸುವಲ್ಲಿನ ಕಂಪನಿಯ ವೈಫಲ್ಯತೆಯು ಸಮೀಪದಲ್ಲಿದ್ದಂತ ಕೆರೆಯ ಹಿನ್ನೀರಿನಲ್ಲಿ ಉಪ–ಸ್ಟೇಷನ್ನು ಮುಳುಗಡೆಗೊಳ್ಳುವುದನ್ನು ತಡೆಯುವ ಸಲುವಾಗಿ ₹ 5.35 ಕೋಟಿ ಹೆಚ್ಚುವರಿ ಖರ್ಚುವೆಚ್ಚವನ್ನು ಭರಿಸುವ ಮೂಲಕ ತಡೆಗೋಡೆ ನಿರ್ಮಿಸುವಲ್ಲಿ ಪರಿಣಮಿಸಿದ್ದಿತು.**

ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತವು (ಕಂಪನಿಯು) ಚಾಮರಾಜನಗರ ಜಿಲ್ಲೆಯ, ಗುಂಡ್ಲುಪೇಟೆ ತಾಲೂಕಿನ ಬೇಗೂರಿನಲ್ಲಿ 220/66 ಕಿವ್ಯಾ ಸಾಮರ್ಥ್ಯದ ಉಪ–ಸ್ಟೇಷನ್ನು ಹಾಗೂ ಅದರ ಜೊತೆಗೆ ಸಂಬಂಧಿತ ಪ್ರಸರಣಾ ಮಾರ್ಗಗಳ (220 ಕಿವ್ಯಾ ಮತ್ತು 66 ಕಿವ್ಯಾ) ನಿರ್ಮಾಣಕ್ಕಾಗಿ ಸವಿವರ ಯೋಜನಾ ವರದಿಗೆ (ಡಿಪಿಆರ್) ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿತು (ಫೆಬ್ರವರಿ 2018). ಉಪ–ಸ್ಟೇಷನ್ನಿನ ನಿರ್ಮಾಣದ ಧ್ಯೇಯೋದ್ದೇಶವು, ಇನ್ನಿತರೆ ವಿಷಯಗಳ ಜೊತೆಗೆ, ಸುತ್ತಮುತ್ತಲ ಪ್ರದೇಶದಲ್ಲಿ ವಿಶ್ವಾಸಾರ್ಹ ವಿದ್ಯುತ್ ಸರಬರಾಜನ್ನು ಸುಧಾರಿಸುವುದು ಮತ್ತು ಕಡಕೊಳ ಮತ್ತು ಚಾಮರಾಜನಗರದಲ್ಲಿ ಈಗಿರುವ 220/66 ಕಿವ್ಯಾ ಉಪ–ಸ್ಟೇಷನ್ನುಗಳ ಮೇಲಿನ ಹೊರೆಯನ್ನು ತಗ್ಗಿಸುವುದಾಗಿದ್ದಿತು. ಆಗಸ್ಟ್ 2015ರಲ್ಲಿ, ಚಾಮರಾಜನಾಗರದ ಜಿಲ್ಲಾಧಿಕಾರಿಯವರು, ಕಂಪನಿಯ

[106] 30,31,600 + 3,63,972 (ಶೇಕಡಾ 12 GST) = 33,95,392.

ಕೋರಿಕೆಯ ಮೇರೆಗೆ (ಜನವರಿ 2014), ಬೇಗೂರು ಗ್ರಾಮದಲ್ಲಿ (ಸರ್ವೇ ಸಂಖ್ಯೆ 137) ಉಪ–ಸ್ಟೇಷನನ್ನು ನಿರ್ಮಿಸಲು ಬೇಕಾಗಿದ್ದಂತಹ 10 ಎಕರೆಗಳಷ್ಟು ಗೋಮಾಳ[107] ಭೂಮಿಯನ್ನು ₹ 15 ಲಕ್ಷ ಮೊತ್ತಕ್ಕೆ ಹಂಚಿಕೆ ಮಾಡಿದ್ದರು.

ಕಂಪನಿಯು ಟೆಂಡರು ಆಹ್ವಾನದ (ಸೆಪ್ಟೆಂಬರ್ 2018) ಮೂಲಕ ಕಾಮಗಾರಿಯ ಗುತ್ತಿಗೆಯನ್ನು ಮೆ. ಕೆಜಿಎನ್ ಇಲೆಕ್ಟ್ರಿಕಲ್ಸ್, ತುಮಕೂರು ಅವರಿಗೆ ₹ 112.22 ಕೋಟಿ ವೆಚ್ಚದಲ್ಲಿ ಗುತ್ತಿಗೆಯನ್ನು ನೀಡಿತು (ಮಾರ್ಚ್ 2019/ಜೂನ್ 2019[108]). ಕಾಮಗಾರಿಯನ್ನು ಸೆಪ್ಟೆಂಬರ್ 2020ರ ವೇಳೆಗೆ ಮುಕ್ತಾಯಗೊಳಿಸಬೇಕಿದ್ದಿತು. ಉಪ–ಸ್ಟೇಷನನ್ನು ಜುಲೈ 2020ರಲ್ಲಿ ಕಾರ್ಯೋದ್ಯುಕ್ತಗೊಳಿಸಲಾಯಿತು.




**ಚಿತ್ರ ಸಂಖ್ಯೆ 6.6.1: ಕೆರೆ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಉಪ–ಸ್ಟೇಷನನ್ನು ತೋರಿಸುವ ಗೂಗಲ್ ನಕಾಶೆ.**

ಕಾಮಗಾರಿ ಕಾರ್ಯಗತಗೊಳ್ಳುವ ಸಮಯದಲ್ಲಿ (ಕಾಮಗಾರಿಯ ಶೇಕಡಾ 95 ಕೆಲಸವನ್ನು ಪೂರ್ಣಗೊಳಿಸಿದನಂತರ), ಕಮ್ಮರಹಳ್ಳಿ ಕೆರೆಗೆ (ಉಪ–ಸ್ಟೇಷನ್ನಿಗೆ ಹಂಚಿಕೆಯಾಗಿರುವ ಭೂಮಿಗೆ ಹೊಂದಿಕೊಂಡಂತೆ ಇರುವ ರಸ್ತೆಯ ಎಡಬದಿಯಲ್ಲಿ ಇರುತ್ತದೆ) ಗಾಂಧಿಗ್ರಾಮ ಕುಡಿಯುವ ನೀರಿನ ಯೋಜನೆಯ ಅಡಿಯಲ್ಲಿ ನೀರನ್ನು ಭರ್ತಿ ಮಾಡುವಾಗ ನೀರು ಕೇಂದ್ರದೊಳಗೆ ನುಗ್ಗುತ್ತಿರುವುದನ್ನು ಗಮನಿಸಿತು. ಉಪ–ಸ್ಟೇಷನ್ನು ಸರಾಸರಿ ಸಮುದ್ರ ಮಟ್ಟದಿಂದ +751 ಮೀಟರುಗಳ ಮೇಲ್ಭಾಗದಲ್ಲಿತ್ತು, ಕೆರೆಯ ಸಂಪೂರ್ಣ ಜಲಾಶಯದ ಮಟ್ಟವು ಸರಾಸರಿ ಸಮುದ್ರ ಮಟ್ಟದಿಂದ +753 ಮೀಟರುಗಳ ಮೇಲ್ಭಾಗದಲ್ಲಿತ್ತು. ಹೀಗೆ, ಕೆರೆಯನ್ನು ಅದರ ಸಾಮರ್ಥ್ಯಕ್ಕೆ ಪೂರ್ಣವಾಗಿ ತುಂಬಿದಲ್ಲಿ ಉಪ–ಸ್ಟೇಷನ್ನು ಸಂಪೂರ್ಣವಾಗಿ ಮುಳುಗಬಹುದಿತ್ತು. ಆದ್ದರಿಂದ, ಕಂಪನಿಯು, ಜಿಲ್ಲಾಧಿಕಾರಿಯವರ

**ರಾಜ್ಯ ಸರ್ಕಾರವು ಗಾಂಧಿಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು (ಜಿಡಿಡಬ್ಲ್ಯುಎಸ್ಎಸ್) ಅನುಷ್ಠಾನಗೊಳಿಸಲು ಪ್ರಸ್ತಾಪವೊಂದನ್ನು ಅಂಗೀಕರಿಸಿದ್ದಿತ್ತು (ಜನವರಿ 2014ರಲ್ಲಿ ಮತ್ತು ಉಪ–ಸ್ಟೇಷನ್ನಿಗೆ ಭೂಮಿಯ ಹಂಚಿಕೆ ಮಾಡುವ ಮುಂಚೆ). ಯೋಜನೆಯು ನಂಜನ 'ಗೂಡು ಮತ್ತು ಗುಂಡ್ಲುಪೇಟೆ ತಾಲೂಕುಗಳ ಅಂತರ್ಗತ ಬರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸಲು, ಕಬಿನಿ ನದಿಯಿಂದ ನೀರನ್ನು ಪಂಪು ಮಾಡುವ ಮೂಲಕ ಕಮ್ಮರಹಳ್ಳಿ ಕೆರೆಯೂ ಸೇರಿದಂತೆ 12 ಕೆರೆಗಳನ್ನು ಭರ್ತಿ ಮಾಡುವ ಉದ್ದೇಶ ಹೊಂದಿತ್ತು. ಸದರಿ ಯೋಜನೆಯ ಅಡಿಯಲ್ಲಿ ಕಾಮಗಾರಿಗಳನ್ನು ಕಾವೇರಿ ನೀರಾವರಿ ನಿಗಮ ನಿಯಮಿತದಿಂದ (ಸಿಎನ್ಎನ್ಎಲ್) ನವೆಂಬರ್ 2015ರಲ್ಲಿ ನೀಡಲಾಗಿದ್ದಿತ್ತು ಮತ್ತು ಉಪ–ಸ್ಟೇಷನ್ನಿನ ನಿರ್ಮಾಣಕ್ಕಾಗಿ ಗುತ್ತಿಗೆಯನ್ನು ನೀಡುವ (ಸೆಪ್ಟೆಂಬರ್ 2018/ಮಾರ್ಚ್ 2019)ರ ಸಮಯದಲ್ಲಿ ಈ ಕಾಮಗಾರಿಗಳು ಪ್ರಗತಿಯಲ್ಲಿದ್ದವು.**

---

[107] ಪ್ರಾಣಿಗಳ ಮೇವಿಗಾಗಿ ಮೀಸಲಿರಿಸಲಾಗಿದ್ದ ಸರ್ಕಾರಿ ಭೂಮಿ.

[108] ಆಸಕ್ತಿಯ ಪತ್ರದ ದಿನಾಂಕ : (ಎಲ್ಒಐ): ಮಾರ್ಚ್ 2019 ಹಾಗೂ ಸವಿವರ ಕಾಮಗಾರಿಯ ನೀಡಿಕೆ ದಿನಾಂಕ : ಜೂನ್ 2019.

ಜೊತೆಯಲ್ಲಿ ಸಮಾಲೋಚನೆ ನಡೆಸಿ (ಮಾರ್ಚ್/ಮೇ 2020), ಮೂರು ಪಕ್ಕಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿತು, ಜೊತೆಗೆ ಅಗತ್ಯ ಮೂಲಸೌಕರ್ಯಗಳಾದ ಚರಂಡಿ ನೀರು ಸಂಗ್ರಹ ಸಂಪು, ಪಂಪು ಮಾಡುವ ವ್ಯವಸ್ಥೆಗಳು, ಬಾಕ್ಸ್ ಚರಂಡಿಗಳು, ಕಲ್ವರ್ಟುಗಳು, ಮತ್ತು ಸಂಪರ್ಕ ರಸ್ತೆಗೆ ಒಂದು ಸೇತುವೆಯೂ ಸೇರಿದಂತೆ ನಿರ್ಮಾಣ ಕೆಲಸಗಳನ್ನು ಕೈಗೊಂಡಿತು, ಈ ಮೂಲಕ ಕಮ್ಮರಹಳ್ಳಿ ಕೆರೆಯಿಂದ ಉಪ–ಸ್ಟೇಷನ್ನಿನ ಒಳಗೆ ಹಿನ್ನೀರು ಪ್ರವೇಶಿಸುವುದನ್ನು ತಡೆಗಟ್ಟಲು ₹ 5.35 ಕೋಟಿ ಹೆಚ್ಚುವರಿ ವೆಚ್ಚವನ್ನು ಭರಿಸಲಾಯಿತು.

ಈ ಸಂಬಂಧದಲ್ಲಿ, ಕಂದಾಯ ಇಲಾಖೆಯ ದಾಖಲೆಗಳ ಅನುಸಾರ ಹಂಚಿಕೆ ಮಾಡಲಾದ ಭೂಮಿಯು ಗೋಮಾಳ ಭೂಮಿಯಾಗಿತ್ತು ಮತ್ತು ಉದ್ದೇಶಿತ ಉಪ–ಸ್ಟೇಷನ್ನಿನ ನೆಲ ಮಟ್ಟವನ್ನು (ಎಫ್‌ಜಿಎಲ್) ಪೂರ್ಣಗೊಳಿಸುವ ಸಲುವಾಗಿ ಬ್ಲಾಕು ಮಟ್ಟದ ಸಮೀಕ್ಷೆಯನ್ನು ಮಾತ್ರ ಕೈಗೊಳ್ಳಲಾಯಿತು ಎಂಬುದಾಗಿ ಕಂಪನಿಯು ಪ್ರಾರಂಭದಲ್ಲಿ ತಿಳಿಸಿತು (ಸೆಪ್ಟೆಂಬರ್ 2023). ಅಲ್ಲದೆಯೇ ಸ್ಟೇಷನ್ನಿನ ಯಾರ್ಡಿಗೆ ಉಪಗ್ರಹದ ಚಿತ್ರಗಳನ್ನು ಬಳಸಿ ಜಿಪಿಎಸ್ ಸಮೀಕ್ಷೆ ನಡೆಸುವ ಅಭ್ಯಾಸ ಇರಲಿಲ್ಲ ಎಂಬುದಾಗಿ ಹೇಳಲಾಯಿತು. ಕಂದಾಯ ದಾಖಲೆಗಳಲ್ಲಿ ಈ ಕುರಿತು ಮಾಹಿತಿ ಇರಲಿಲ್ಲ ಮತ್ತು ಉಪ–ಸ್ಟೇಷನ್ನಿನ ನಿರ್ಮಾಣ ಸಂಬಂಧಿತ ಅಧಿಸೂಚನೆಯನ್ನು ರಾಜ್ಯ ಗೆಜೆಟ್ (6 ಡಿಸೆಂಬರ್ 2018) ಒಳಗೆ ಪ್ರಕಟಿಸಿದ ನಂತರವೂ, ಸಿಎನ್‌ಎನ್‌ಎಲ್/ ಕಂದಾಯ ಇಲಾಖೆಯಿಂದ ಮುಂಬರುವ ಏತ ನೀರಾವರಿ ಯೋಜನೆಯ ಕುರಿತು ಯಾವುದೇ ಸೂಚನೆಯನ್ನು ನೀಡಲಾಗಲಿಲ್ಲ ಎಂಬುದಾಗಿಯೂ ತಿಳಿಸಿತು.



**ಚಿತ್ರ ಸಂಖ್ಯೆ 6.6.2: ಕೆರೆಯ ಕಡೆಯಿಂದ ತಡೆ ಗೋಡೆಯ ದೃಶ್ಯ .**

*ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳು ಮತ್ತು ವಿದ್ಯುತ್ ಮಾರ್ಗಗಳ ನಿರ್ಮಾಣಕ್ಕೆ ತಾಂತ್ರಿಕ ಪ್ರಮಾಣಗಳು) ನಿಯಂತ್ರಣಗಳು, 2010 ನಿಗದಿಪಡಿಸುತ್ತದೆ ಉಪ–ಕೇಂದ್ರಕ್ಕೆ ಆಯ್ಕೆ ಮಾಡುವ ಜಾಗವು ಪ್ರವಾಹ ಉಂಟಾಗುವುದನ್ನು ತಪ್ಪಿಸಲು ಅದು ಕೆಳ–ಮಟ್ಟದ ಪ್ರದೇಶ ಆಗಿರತಕ್ಕದ್ದಲ್ಲ ಮತ್ತು ಅಲ್ಲಿ ಯಾವುದೇ ತೆರೆದ ಚರಂಡಿ/ನಾಲೆ ಅಥವಾ ರಸ್ತೆ ಜಾಗವನ್ನು ದಾಟಿ ಹೋಗಬಾರದು (ನಿಯಂತ್ರಣ 49(2)) ಎಂದು ನಿಗದಿಪಡಿಸುತ್ತದೆ.*

ಭೂಮಿಯ ಹಂಚಿಕೆಗೆ ಸಂಬಂಧಿಸಿದಂತೆ ಕಂಪನಿಯಿಂದ ಪಡೆದುಕೊಂಡ ದಾಖಲೆಗಳ ಪ್ರಕಾರ (ಆಗಸ್ಟ್ 2015), ಜಾಗವನ್ನು ದಾಟಿ ಹೋಗುತ್ತಿರುವ ಒಂದು ನಾಲೆಯನ್ನು ಗ್ರಾಮದ ನಕ್ಷೆಯಲ್ಲಿ ಸೂಚಿಸಲಾಗಿದೆ. ಕೆರೆಯು ರಸ್ತೆಯ ಆಚೆಗಷ್ಟೇ ಇದೆ ಮತ್ತು ಅದನ್ನು ಸುಲಭವಾಗಿ ಗಮನಿಸಬಹುದಿತ್ತು. ನಾಲೆಯು ಕೆರೆಗೆ ಸಂಪರ್ಕ ಹೊಂದಿದ್ದರಿಂದ, ಹಿನ್ನೀರಿನ ಮಟ್ಟ ಏರುವ ಮತ್ತು ಜಾಗದಲ್ಲಿ ಪ್ರವಾಹ ಉಂಟು ಮಾಡುವ ಸಾಧ್ಯತೆ ಇತ್ತು. ಕೆರೆಯ ಜಲಾಶಯದ ಪೂರ್ಣ ಮಟ್ಟವು ಜಾಗದ ನೆಲ ಮಟ್ಟಕ್ಕಿಂತ ಎತ್ತರದಲ್ಲಿ ಇದ್ದ ಕಾರಣ, ಕೆರೆಯು ಮಳೆಯ ನೀರಿನಿಂದ ತುಂಬಿದ್ದರೂ ಆ ಜಾಗವು ಮುಳುಗುತ್ತಿತ್ತು. ಹೀಗೆ, ಈ ವಿಷಯವನ್ನು ಮತ್ತಷ್ಟು ತನಿಖೆ ಮಾಡುವುದು ಅಗತ್ಯವಾಗಿತ್ತು (ಸಮೀಕ್ಷೆ, ವಿಚಾರಣೆ, ಇತ್ಯಾದಿಯ ಮೂಲಕ) ಮತ್ತು ನಂತರ ಉಪ–ಕೇಂದ್ರದ ನಿರ್ಮಾಣಕ್ಕೆ ಆ ಜಾಗದ ಸೂಕ್ತತೆಯನ್ನು ನಿರ್ಧರಿಸಬಹುದಿತ್ತು. ಕಂಪನಿಯು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಉಪ–ಕೇಂದ್ರದ ನಿರ್ಮಾಣದ ಮುಂಚೆ ವಾಸ್ತವಿಕ ಜಾಗದ

ಪರಿಸ್ಥಿತಿಗಳು, ಪೂರ್ವ–ಅಸ್ತಿತ್ವದ ಕೆರೆ ಮತ್ತು ಪ್ರಗತಿಯಲ್ಲಿರುವ ಜಿಡಿಡಬ್ಲ್ಯುಎಸ್ಎಸ್ ಕಾಮಗಾರಿಗಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲವಾಯಿತು. ಕೆರೆಯ ಹಿನ್ನೀರು ಉಪಕೇಂದ್ರವನ್ನು ಪ್ರವೇಶಿಸಲು ಪ್ರಾರಂಬಿಸಿದ ನಂತರವಷ್ಟೇ ಕಂಪನಿಯು ಕೇಂದ್ರದ ಜಾಗವು ಕೆರೆಯ ಪ್ರದೇಶದಲ್ಲಿದೆ ಎಂಬುದನ್ನು ಗಮನಿಸಿತು.

ಸರ್ಕಾರವು ತನ್ನ ಉತ್ತರದಲ್ಲಿ (ಮಾರ್ಚ್ 2024), ಆಯ್ಕೆ ಮಾಡಿರುವ ಭೂಮಿಯನ್ನು ಗೋಮಾಳ ಭೂಮಿ ಎಂದು ನಮೂದಿಸಲಾಗಿತ್ತು ಮತ್ತು ಮುಂಬರುವ ಏತ ನೀರಾವರಿ ಯೋಜನೆಯ ವಿವರಗಳು ಕಂದಾಯ ದಾಖಲೆಗಳಲ್ಲಾಗಲೀ ಅಥವಾ ಆ ಬಗ್ಗೆ ಕಾವೇರಿ ನೀರಾವರಿ ನಿಗಮ ನಿಯಮಿತದ (ಸಿಎನ್ಎನ್ಎಲ್)/ಕಂದಾಯ ಇಲಾಖೆಯಿಂದಾಗಲೀ ಮಾಹಿತಿ ನೀಡಲಾಗಲಿಲ್ಲ ಎಂಬುದಾಗಿ ತಿಳಿಸಿತು ಜೊತೆಗೆ, ಆ ಬಗ್ಗೆ ರಾಜ್ಯ ಪತ್ರದಲ್ಲಿ ಪ್ರಕಟಣೆ ನೀಡಿದಾಗ ಉದ್ದೇಶಿತ ಕಾಮಗಾರಿಯ ವಿರುದ್ಧ ಸಂಬಂಧಿತ ಇಲಾಖೆಗಳಿಂದ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಲಿಲ್ಲ ಮತ್ತು ನೀರನ್ನು, ನಿರ್ಮಾಣ ಮಾಡಿದ ಹೊರಭಾಗದ ಚರಂಡಿಯೊಳಗೆ ಪಂಪ್ ಮಾಡಲು ಉದ್ದೇಶಿಸಲಾಗಿತ್ತು. ಈ ಉತ್ತರವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ ಕೇಂದ್ರದ ಜಾಗದಿಂದ ಒಂದು ನಾಲೆಯು ಕೆರೆಗೆ ಹೋಗುತ್ತಿದ್ದ ಕಾರಣ, ಈ ಜಾಗವು ಪ್ರವಾಹಕ್ಕೆ ಒಳಗಾಗಬಹುದೆಂಬ ಸೂಚನೆ ಇತ್ತು. ಜೊತೆಗೆ, ಕಮ್ಮರಹಳ್ಳಿ ಕೆರೆ ತುಂಬಿಸುವ ಜಿಡಿಡಬ್ಲ್ಯುಎಸ್ಎಸ್ ಯೋಜನೆಯ ಅಡಿಯಲ್ಲಿ ಕಾಮಗಾರಿಗಳನ್ನು (ನವೆಂಬರ್ 2015) ಸಿಎನ್ಎನ್ಎಲ್‌ನಿಂದ ನೀಡಲಾಗಿತ್ತು ಮತ್ತು ಅವುಗಳು ಕಂಪನಿಯಿಂದ ಉಪ–ಸ್ಟೇಷನ್ನಿನ ನಿರ್ಮಾಣಕ್ಕಾಗಿ ಗುತ್ತಿಗೆ ನೀಡಿದ ಸಮಯದಲ್ಲಿ (ಸೆಪ್ಟೆಂಬರ್ 2018/ಮಾರ್ಚ್ 2019) ಪ್ರಗತಿಯಲ್ಲಿದ್ದವು. ಕಂದಾಯ ಇಲಾಖೆಯು ಕಮ್ಮರಹಳ್ಳಿ ಕೆರೆಯನ್ನು ಭೂದಾಖಲೆಗಳಲ್ಲಿ ಗುರುತು ಮಾಡಲು ವಿಫಲವಾಯಿತು ಮತ್ತು ಇತರ ಇಲಾಖೆಗಳೂ ಸಹ ಉದ್ದೇಶಿತ ಉಪ–ಸ್ಟೇಷನ್ನಿನ ಸ್ಥಾಪನೆಯ ಬಗ್ಗೆ ಗಮನದಲ್ಲಿಟ್ಟುಕೊಳ್ಳುವಲ್ಲಿ ಮತ್ತು ಸೂಕ್ತವಾದಂತೆ ಆಕ್ಷೇಪಣೆಗಳನ್ನು ಎತ್ತುವಲ್ಲಿ ವಿಫಲಗೊಂಡಿದ್ದವು.

ಈ ರೀತಿಯಾಗಿ ಹಂಚಿಕೆಯಾಗಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಉಪ–ಸ್ಟೇಷನ್ನಿನ ನಿರ್ಮಾಣವನ್ನು ಪ್ರಾರಂಭ ಮಾಡುವ ಮುಂಚಿತವಾಗಿ ಅದನ್ನು ಪರೀಕ್ಷಿಸುವಲ್ಲಿ ಹಾಗೂ ಅದರ ಸೂಕ್ತತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಕಂಪನಿಯಿಂದ ಸೂಕ್ತ ರೀತಿಯ ಶ್ರದ್ಧೆಯ ಕೊರತೆಯು, ಜಾಗವನ್ನು ಮುಳುಗುವುದರಿಂದ ತಡೆಗಟ್ಟಲು ರಕ್ಷಣಾ ಕಾಮಗಾರಿಗಳ ಕಡೆಗೆ ₹ 5.35 ಕೋಟಿ ಹೆಚ್ಚುವರಿ ವೆಚ್ಚವನ್ನು ಭರಿಸುವಂತಾಯಿತು. ಉಪ–ಸ್ಟೇಷನ್ನು ಜಾಗವು ಕೆಳ ಮಟ್ಟದಲ್ಲಿ ಇರುವ ಮತ್ತು ಮೂರು ಕಡೆಗಳಿಂದ ಗೋಡೆ ಕಟ್ಟಿರುವ ಕಾರಣ, ಮಳೆಗಾಲದಲ್ಲಿ ಉಪ–ಸ್ಟೇಷನ್ನು ಪ್ರವಾಹಕ್ಕೆ ತುತ್ತಾಗುವ ಸಾಧ್ಯತೆಗಳು ಇರಬಹುದು. ಜೊತೆಗೆ, ಕಂಪನಿಯು ಪದೇ ಪದೇ, ಸೋರುವ ನೀರನ್ನು ಮತ್ತು ಮಳೆ ನೀರನ್ನು ಉಪ–ಕೇಂದ್ರದಿಂದ, ಅದನ್ನು ಸುರಕ್ಷಿತವಾಗಿ ಇರಿಸಲು, ಹೊರಗೆ ಪಂಪು ಮಾಡುತ್ತಿರಬೇಕು.

**ಶಿಫಾರಸು:**

**19. ಉಪ–ಸ್ಟೇಷನ್ನಿಗಾಗಿ ಜಾಗವನ್ನು ಆಯ್ಕೆ ಮಾಡುವ ಸಮಯದಲ್ಲಿ ಸಿಇಎ ನಿಯಂತ್ರಣಗಳಿಗೆ ಬದ್ಧವಾಗಿರುವಲ್ಲಿ ಪ್ರದರ್ಶಿಸಿರುವ ವೈಫಲ್ಯಕ್ಕಾಗಿ ಕರ್ತವ್ಯಚ್ಯುತಿ ಎಸಗಿರುವ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕೆಂದು ಲೆಕ್ಕಪರಿಶೋಧನೆಯು ಈ ಮೂಲಕ ವ್ಯಪಸ್ಥಾಪನೆಗೆ ಶಿಫಾರಸು ಮಾಡುತ್ತಿರುವುದು.**

### *6.7 ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ*

***ನಿರ್ಧಾರ ಕೈಗೊಳ್ಳುವಲ್ಲಿ ವಿವಿಧ ಹಂತಗಳಲ್ಲಿ ಉಂಟಾಗಿರುವ ವಿಳಂಬದಿಂದ ₹ 3.97 ಕೋಟಿ ಮೊತ್ತದಷ್ಟು ತಪ್ಪಿಸಬಹುದಾದ ಬಡ್ಡಿಯನ್ನು ಪಾವತಿ ಮಾಡುವಂತಾಗಿದೆ.***

ಬಿಡದಿ ಕೈಗಾರಿಕಾ ಪ್ರದೇಶದಲ್ಲಿ 12 ಎಕರೆಗಳು 37 ಗುಂಟಾಗಳ ಅಳತೆಯ ಭೂಮಿಯನ್ನು ಮಾರ್ಚ್ 1998ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ (ಕೆಐಎಡಿಬಿ) ಕರ್ನಾಟಕ

ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ (ಕಂಪನಿ) ಹಸ್ತಾಂತರಿಸಲಾಯಿತು. ಭೂಮಿಯ ಒಟ್ಟು ವೆಚ್ಚವನ್ನು ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿರ್ಧರಿಸಿದಂತೆ (ಡಿಸೆಂಬರ್ 1997) ಪ್ರತಿ ಎಕರೆಗೆ ₹ 15 ಲಕ್ಷದ ದರದಲ್ಲಿ ₹ 1.93 ಕೋಟಿಗೆ ನಿಗದಿಪಡಿಸಲಾಯಿತು. ಕಂಪನಿಯು ಅಕ್ಟೋಬರ್ 1998ರಲ್ಲಿ 220 ಕೆವಿ ಉಪ–ಸ್ಟೇಷನನ್ನು ಸ್ಥಾಪಿಸಿತು ಮತ್ತು ಅಕ್ಟೋಬರ್ 2004ರಲ್ಲಿ ಭೂಮಿಯ ಒಟ್ಟು ವೆಚ್ಚವನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪಾವತಿಸಿತು.

ಕಂಪನಿಯು ಭೂಮಿಯ ವೆಚ್ಚದ ಕಡೆಗೆ ಪಾವತಿಯನ್ನು ಮಾಡುವಲ್ಲಿ ಆದ ವಿಳಂಬದ ಕಾರಣ, ಕೆಐಎಡಿಬಿ 1 ಮಾರ್ಚ್ 1998ರಿಂದ 30 ನವೆಂಬರ್ 2004ರ ಅವಧಿಗೆ ₹ 2.09 ಕೋಟಿ ಬಡ್ಡಿಯ ಪಾವತಿಗಾಗಿ ಬೇಡಿಕೆ ಸಲ್ಲಿಸಿತು (ಜನವರಿ 2005). ಬಡ್ಡಿಯನ್ನು ಮನ್ನಾ ಮಾಡುವಂತೆ ಕಂಪನಿಯು ಸಲ್ಲಿಸಿದ ಕೋರಿಕೆಯನ್ನು (ಅಕ್ಟೋಬರ್ 2005) ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ತಿರಸ್ಕರಿಸಿತು (ಏಪ್ರಿಲ್ 2008). ಕಂಪನಿಯು ಬಡ್ಡಿಯ ಸಂಪೂರ್ಣ ಮೊತ್ತವಾದ ₹ 2.09 ಕೋಟಿಯನ್ನು ಫೆಬ್ರವರಿ 2019ರಲ್ಲಿ ಪಾವತಿಸಿತು. ಈ ಮಧ್ಯೆ, ಕಂಪನಿಯು ಬಡ್ಡಿಯ ಪಾವತಿಯಲ್ಲಿ ವಿಳಂಬ ಮಾಡಿದ ಕಾರಣ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು 1 ಮಾರ್ಚ್ 1998ರಿಂದ 31 ಜನವರಿ 2019ರ ಅವಧಿಗೆ ಬಡ್ಡಿಯ ಬಾಬ್ತು ₹ 5.67 ಕೋಟಿಯ ಪರಿಷ್ಕೃತ ಬೇಡಿಕೆಯನ್ನು ಸಲ್ಲಿಸಿತು (ಜನವರಿ 2019). ಆದಾಗ್ಯೂ, ಕಂಪನಿಯ ಕೋರಿಕೆಯನ್ನು ಪರಿಗಣಿಸಿ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು 1 ಡಿಸೆಂಬರ್ 2004ರಿಂದ 31 ಜನವರಿ 2019ರ ಅವಧಿಗೆ ಮತ್ತಷ್ಟು ಬಡ್ಡಿಯ ಭಾಗದ ಶೇಕಡಾ 50 ಮನ್ನಾ ಮಾಡಿತು. ಅದಕ್ಕೆ ಅನುಗುಣವಾಗಿ, ಕಂಪನಿಯು ಉಳಿದ ಬಡ್ಡಿಯ ಮೊತ್ತವಾದ ₹ 1.88 ಕೋಟಿಯನ್ನು[109] ಫೆಬ್ರವರಿ 2020ರಲ್ಲಿ ಪಾವತಿಸಿತು. ಇದರ ಪರಿಣಾಮವಾಗಿ, ಕಂಪನಿಯು ₹ 3.97 ಕೋಟಿ ರೂ.ಗಳ ಬಡ್ಡಿಯನ್ನು ಪಾವತಿಸುವಂತಾಯಿತು, ಇದು ಭೂಮಿಯ ವೆಚ್ಚದ (₹ 1.93 ಕೋಟಿ) ದ್ವಿಗುಣಕ್ಕಿಂತಲೂ ಅಧಿಕವಾಗಿತ್ತು.

ಮೇಲ್ಕಂಡ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಲೆಕ್ಕಪರಿಶೋಧನೆಯು ಈ ಕೆಳಕಂಡ ಅಂಶಗಳನ್ನು ಗಮನಿಸಿತು:

- ಕಂಪನಿಯು ಮಾರ್ಚ್ 2001ರಲ್ಲಿ ಉಪ–ಸ್ಟೇಷನ್ನಿನ ಸ್ಥಾಪನೆಗಾಗಿ ಪಡೆದುಕೊಂಡಿರುವ ಸಾಲದ ಮೇಲೆ ಹೆಚ್ಚು ಬಡ್ಡಿಯನ್ನು ಪಾವತಿಸುತ್ತಿರುವುದು ಮತ್ತು ಉಪ–ಸ್ಟೇಷನ್ನಿನ ಸಾಮರ್ಥ್ಯವು ಕಡಿಮೆ ಬಳಕೆಯಾಗುತ್ತಿರುವ ಕಾರಣ ಭೂಮಿಯ ವೆಚ್ಚವನ್ನು ಪಾವತಿಸುವುದರಿಂದ ವಿನಾಯಿತಿ ನೀಡುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ಮನವಿ ಸಲ್ಲಿಸಿತ್ತು, ಇದನ್ನು ಕೆಐಎಡಿಬಿ ಜೂನ್ 2001ರಲ್ಲಿ ತಿರಸ್ಕರಿಸಿತು. ಬೆಲೆಯನ್ನು ಶೇಕಡಾ 50 ಕಡಿಮೆ ಮಾಡುವಂತೆ ಸಮಾಲೋಚನೆ ನಡೆಸಲು ಕಂಪನಿಯು ಕೆಐಎಡಿಬಿಗೆ ಮಾರ್ಚ್ 2002 ಮತ್ತು ನಂತರ ಜೂನ್ 2004ರಲ್ಲಿ ಸಲ್ಲಿಸಿದ ಮನವಿಗಳನ್ನೂ ಸಹ ತಿರಸ್ಕರಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಕಂಪನಿಯು ಕೆಐಎಡಿಬಿಗೆ ಭೂಮಿಯ ವೆಚ್ಚವನ್ನು ಪಾವತಿ ಮಾಡುವ ಹೊತ್ತಿಗೆ ಆರು ವರ್ಷಗಳಿಗೂ ಹೆಚ್ಚು ಸಮಯ ಕಳೆದಿತ್ತು (ಮಾರ್ಚ್ 1998ರಿಂದ ಅಕ್ಟೋಬರ್ 2004). ಕಂಪನಿಯ ಕೇಂದ್ರ ಕಛೇರಿಯಿಂದ ಮಾರ್ಚ್ 2002ರಲ್ಲಿ, ಶೇಕಡಾ 50 ಪಾವತಿಗೆ ನೀಡಿದ ಅಂಗೀಕಾರ ಮತ್ತು ಕೆಐಎಡಿಬಿಯಿಂದ ಭೂಮಿಯ ಬೆಲೆಯನ್ನು ಕಡಿಮೆ ಮಾಡಲು ನಿರಂತರವಾಗಿ ತಿರಸ್ಕರಿಸಲಾದ ಕಾರಣ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪಾವತಿ ಮಾಡುವಲ್ಲಿ ಉಂಟಾದ ವಿಳಂಬವು ಅನಗತ್ಯವಾಗಿತ್ತು.

---

[109] ₹ 185.80 ಲಕ್ಷ (₹ 371.60 ಲಕ್ಷ ಉಳಿಕೆ ಬಡ್ಡಿಯ ಶೇಕಡಾ 50ರಷ್ಟು) ಇದಕ್ಕೆ ಇಎಂಡಿ ₹ 0.65 ಲಕ್ಷ ಮೊತ್ತವನ್ನು ಮತ್ತು ಕೊಳಚೆ ನಿರ್ಮಾಲನಾ ಶುಲ್ಕಗಳು – ₹ 1.32 ಲಕ್ಷ ಮೊತ್ತಗಳನ್ನು ಕೂಡುವುದು.

- ಬಡ್ಡಿಯ ಮೊತ್ತವನ್ನು ಪಾವತಿಸಲು ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ) ಮೇ 2008ರಲ್ಲಿ ಅಂಗೀಕಾರ ನೀಡಿದ್ದರು ಮತ್ತು ಆಯವ್ಯಯ ಹಂಚಿಕೆಯನ್ನು ಅಕ್ಟೋಬರ್ 2008ರಲ್ಲಿ ಮಾಡಲಾಯಿತು. ಆದಾಗ್ಯೂ, ಪಾವತಿಯನ್ನು ಫೆಬ್ರವರಿ 2019ರಲ್ಲಿ, ಅಂದರೆ ಪಾವತಿಗೆ ಅಂಗೀಕಾರ ನೀಡಿದ ಹತ್ತು ವರ್ಷಗಳಿಗೂ ಹೆಚ್ಚು ಸಮಯದ ನಂತರ ಪಾವತಿಯನ್ನು ಲೆಕ್ಕಪರಿಶೋಧನೆಯು ಗಮನಿಸಿರುವುದು ಏನೆಂದರೆ, ಮುಖ್ಯ ಅಭಿಯಂತರು, ವಿದ್ಯುಚ್ಛಕ್ತಿ, ಪ್ರಸರಣಾ ವಲಯ, ಬೆಂಗಳೂರು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ಬಡ್ಡಿ ಪಾವತಿಯನ್ನು ವ್ಯವಸ್ಥೆಗೊಳಿಸುವಂತೆ ಹಣಕಾಸು ಸಲಹೆಕಾರರನ್ನು (ಲೆಕ್ಕಪತ್ರಗಳು ಮತ್ತು ಸಂಪನ್ಮೂಲಗಳು) ಕೋರಿದ್ದರು (ಸೆಪ್ಟೆಂಬರ್ 2009 ಮತ್ತು ಏಪ್ರಿಲ್ 2010). ಈ ಕೋರಿಕೆಗಳನ್ನು ಸಲ್ಲಿಸಿದ್ದರೂ ಕೂಡ ಪಾವತಿಯನ್ನು ವ್ಯವಸ್ಥೆಗೊಳಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ. ಇದಕ್ಕಾಗಿ ಸಂಬಂಧಿತರ ಮೇಲೆ ಈ ಚ್ಯುತಿಗಳಿಗಾಗಿ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು, ಏಕೆಂದರೆ ಈ ನಿಷ್ಕ್ರಿಯತೆಯಿಂದ 1 ಡಿಸೆಂಬರ್ 2004ರಿಂದ 31 ಜನವರಿ 2019ರ ಅವಧಿಗೆ ₹ 1.88 ಕೋಟಿ ಹೆಚ್ಚಿನ ಬಡ್ಡಿ ಪಾವತಿ ಮಾಡುವಂತಾಯಿತು. ಕಂಪನಿಯ ನಿರ್ದೇಶಕರುಗಳ ಮಂಡಳಿಯು ಬಡ್ಡಿ ಪಾವತಿಯ ಹಣಕಾಸು ಪರಿಣಾಮವನ್ನು ಚರ್ಚಿಸಿದರೂ ಸಹ (ಮಾರ್ಚ್ 2020), ಪಾವತಿಯನ್ನು ಬಿಡುಗಡೆ ಮಾಡುವಲ್ಲಿ ಉಂಟಾದ ವಿಳಂಬಗಳ ಕಾರಣ ಪಾವತಿಸಬೇಕಾದ ಹೆಚ್ಚುವರಿ ಬಡ್ಡಿಯ ವಿಷಯವನ್ನು ಮಂಡಳಿಯ ಸಭೆಯ ವಿಷಯಸೂಚಿಯಲ್ಲಿ ಸೇರ್ಪಡೆ ಮಾಡಲಿಲ್ಲ ಮತ್ತು ಈ ಕಾರಣದಿಂದ ಇದನ್ನು ಚರ್ಚಿಸಲಿಲ್ಲ. ಕೆಐಎಡಿಬಿಯಿಂದ ಏಪ್ರಿಲ್ 2008ರಲ್ಲಿ ಬಡ್ಡಿ ಮನ್ನಾ ಕೋರಿಕೆಯನ್ನು ತಿರಸ್ಕರಿಸಲಾದ ನಂತರ, ಕಂಪನಿಯು ಬಾಕಿಗಳ ಪಾವತಿಗೆ ತಕ್ಷಣ ಕ್ರಮ ಕೈಗೊಂಡಿದ್ದಲ್ಲಿ, 1 ಡಿಸೆಂಬರ್ 2004ರಿಂದ 31 ಜನವರಿ 2019ರ ಅವಧಿಗೆ ಹೆಚ್ಚುವರಿಯಾಗಿ ಪಾವತಿಸಲಾಗಿದ್ದ ಬಡ್ಡಿಯನ್ನು ತಪ್ಪಿಸಬಹುದಿತ್ತು.

ಈ ರೀತಿಯಾಗಿ ನಿರ್ಧಾರ-ಕೈಗೊಳ್ಳುವಲ್ಲಿ ಮತ್ತು ಪಾವತಿಯ ಇತ್ಯರ್ಥದಲ್ಲಿ ಉಂಟಾದ ವಿಳಂಬದ ಕಾರಣ, ಕಂಪನಿಯು 1997-98ರಲ್ಲಿ ಪ್ರಾರಂಭಿಸಲಾದ ಒಂದು ವಹಿವಾಟಿನ ಇತ್ಯರ್ಥಕ್ಕೆ (2019-20) ವಿನಾಕಾರಣ 22 ವರ್ಷಗಳ ದೀರ್ಘ ಅವಧಿಯನ್ನು ತೆಗೆದುಕೊಂಡಿತು. ಇದರಿಂದಾಗಿ ಕಂಪನಿಯು ₹ 3.97 ಕೋಟಿಯಷ್ಟು ಹೆಚ್ಚುವರಿ ವೆಚ್ಚವನ್ನು ಭರಿಸಬೇಕಾಯಿತು, ಇದನ್ನು ತಪ್ಪಿಸಬಹುದಿತ್ತು. ಜೊತೆಗೆ, ಈ ಅದಕ್ಷತೆಗಳು, ಅಂತಹ ವೆಚ್ಚಗಳು ವಿದ್ಯುತ್ ಸರಬರಾಜು ದರಗಳೊಂದಿಗೆ ಸೇರ್ಪಡೆಗೊಳ್ಳುವ ಕಾರಣ ಅಂತಿಮವಾಗಿ ಬಳಕೆದಾರರ ಮೇಲೆ ಹೊರೆಯಾಗುತ್ತವೆ.

ಕಂಪನಿಯು, ಪಾವತಿಯ ಪ್ರಸ್ತಾಪ ಸಲ್ಲಿಕೆಯಲ್ಲಿ ಉಂಟಾಗಿರುವ ವಿಳಂಬವು ಭೂಮಿಯ ವೆಚ್ಚವನ್ನು ಪಾವತಿಸುವುದರಿಂದ ವಿನಾಯಿತಿಯನ್ನು ಪಡೆಯಲು ಕಂಪನಿಯು ಮಾಡಿರುವ ಪ್ರಾಮಾಣಿಕ ಪ್ರಯತ್ನಗಳ ಕಾರಣದಿಂದ ಎನ್ನಬಹುದು ಎಂಬುದಾಗಿ ತಿಳಿಸಿರುವುದು (ಜುಲೈ 2023). ಈ ಉತ್ತರವು ಸ್ವೀಕಾರಾರ್ಹವಲ್ಲ ಏಕೆಂದರೆ ಪಾವತಿಯನ್ನು ಮನ್ನಾ ಮಾಡಲು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಪ್ರಾರಂಭಿಕವಾಗಿ ತಿರಸ್ಕಾರ ಮಾಡಿದ ನಂತರ, ಕಂಪನಿಯು ಬಡ್ಡಿಯು ಕ್ರೋಢೀಕರಣವಾಗುವುದನ್ನು ತಪ್ಪಿಸಲು ಭೂಮಿಯ ವೆಚ್ಚದ ಶೇಕಡಾ 50ನ್ನು ಪಾವತಿಸಬಹುದಿತ್ತು. ಅಲ್ಲದೆಯೇ, ಕಂಪನಿಯು ತನ್ನ ಉತ್ತರದಲ್ಲಿ, ₹ 2.09 ಕೋಟಿ ಬಡ್ಡಿಯ ಪಾವತಿಗೆ ಅಕ್ಟೋಬರ್ 2008ರಲ್ಲಿ ಆಯವ್ಯಯ ಅನುವನ್ನು ಬಿಡುಗಡೆ ಮಾಡಿದರೂ ಸಹ, ಬಡ್ಡಿಯ ಪಾವತಿಯನ್ನು ಮನ್ನಾ ಮಾಡುವಂತೆ ಸಲಿಸಿದ್ದ ಪ್ರಸ್ತಾಪವನ್ನು ತಿರಸ್ಕರಿಸಿರುವುದನ್ನು ಮರುಪರಿಶೀಲನೆ ಮಾಡುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಜೊತೆ ನಿರಂತರವಾಗಿ ಪ್ರಯತ್ನಿಸುತ್ತಿದ್ದ ಕಾರಣ ಪಾವತಿಯನ್ನು ಫೆಬ್ರವರಿ 2019ರಲ್ಲಿ ಬಿಡುಗಡೆ ಮಾಡಲಾಯಿತು ಎಂಬುದಾಗಿ ಹೇಳಿಕೊಂಡಿರುವುದು. ಕಂಪನಿಯು ಹೀಗೆ ಹೇಳಿಕೊಂಡಿರುವುದನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ಏಕೆಂದರೆ ಅದನ್ನು ಯಾವುದೇ ದಾಖಲೆಯ ಪುರಾವೆಯೊಂದಿಗೆ ಸಮರ್ಥಿಸಿಕೊಂಡಿರುವುದಿಲ್ಲ. ಹಾಗೂ, ₹ 2.09 ಕೋಟಿ ಬಡ್ಡಿ ಪಾವತಿಗೆ ಅಂಗೀಕಾರವನ್ನು (ಮೇ 2008) ಏಪ್ರಿಲ್ 2008ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಮನ್ನಾ ಮಾಡಲು ತಿರಸ್ಕರಿಸಿದ ನಂತರವೇ ನೀಡಲಾಗಿತ್ತು.

ಕಂಪನಿಯು ಇ–ಆಫೀಸ್ ಸಾಫ್ಟ್‌ವೇರ್ ಅನ್ನು ಸ್ಥಾಪಿಸಿದೆ ಇದರಲ್ಲಿ ಪ್ರತಿಯೊಂದು ಕಡತದ ಚಲನೆಯನ್ನು ಗಮನಿಸಬಹುದಿತ್ತು ಮತ್ತು ಚಲನೆಯಲ್ಲಿನ ವಿಳಂಬಗಳ ಮೇಲ್ವಿಚಾರನೆ ಮಾಡಬಹುದಿತ್ತು ಎಂಬುದಾಗಿ ಸರ್ಕಾರವು ತಿಳಿಸಿರುವುದು (ಜನವರಿ 2024). ಸದರಿ ವಿಷಯವು 15 ವರ್ಷಗಳಿಗೂ ಹೆಚ್ಚು ಹಳೆಯದಾಗಿರುವ ಕಾರಣ ಮತ್ತು ಸಂಬಂಧಿತ ಅಧಿಕಾರಿಗಳು ಈಗಾಗಲೇ ಸೇವೆಯಿಂದ ನಿವೃತ್ತರಾಗಿರುವ/ಮೃತರಾಗಿರುವ ಕಾರಣ, ಈ ಸಮಯದಲ್ಲಿ, ಲೋಪಗಳಿಗಾಗಿ, ಯಾವುದಾದರೂ ಇದ್ದಲ್ಲಿ, ಯಾವುದೇ ಕ್ರಮವನ್ನು ಜರುಗಿಸಲು ಆಗುವುದಿಲ್ಲ ಎಂದೂ ಸಹ ಸರ್ಕಾರವು ತಿಳಿಸಿರುವುದು.

ಈ ಉತ್ತರವನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ಏಕೆಂದರೆ ಸಕಾಲದಲ್ಲಿ ಪಾವತಿ ಮಾಡುವಲ್ಲಿ ಎಸಗಿರುವ ಲೋಪಗಳಿಗೆ ಹೊಣೆಗಾರರಾದ ವ್ಯಕ್ತಿಗಳನ್ನು ಗುರುತಿಸಲಿಲ್ಲ ಮತ್ತು ಮಾರ್ಚ್ 2020ರಲ್ಲಿ ಹಣಕಾಸು ಪರಿಣಾಮವನ್ನು ಪ್ರಸ್ತುತಪಡಿಸುವಾಗ ಅಥವಾ ನಂತರದ ಹಂತದಲ್ಲಿ ಮಂಡಳಿಯ ಗಮನಕ್ಕೆ ಈ ಅಂಶವನ್ನು ತರಲಿಲ್ಲ.

**ಶಿಫಾರಸು:**

**20. ಭವಿಷ್ಯದಲ್ಲಿ ಅಂತಹ ಲೋಪಗಳನ್ನು ತಪ್ಪಿಸಲು ಅಂತಹ ವಹಿವಾಟುಗಳಿಗೆ ಪಾತ್ರ–ಆಧಾರಿತ ಕಾಲಮಿತಿಗಳನ್ನು ನಿಗದಿಪಡಿಸಬಹುದು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತಿರುವುದು.**

### *6.8 ನಿರುಪಯುಕ್ತ ವೆಚ್ಚ ಮತ್ತು ನಷ್ಟ*

**ವಿವಿಧ ಹಂತಗಳಲ್ಲಿ ಉಂಟಾದ ಲೋಪಗಳು, ಯೋಜನೆಯು ಪೂರ್ಣಗೊಳ್ಳುವಲ್ಲಿ 15 ವರ್ಷಗಳ ವಿಳಂಬವಾಗುವಲ್ಲಿ, ದುಬಾರಿ ಉಪಾಕರಣಗಳು ದಶಕದ ಕಾಲ ನಿರುಪಯುಕ್ತವಾಗಿ ಉಳಿಯಲು ಹಾಗೂ ₹ 3.16 ಕೋಟಿ ಮೊತ್ತದಷ್ಟು ನಷ್ಟ ಉಂಟಾಗುವಲ್ಲಿ ಪರಿಣಮಿಸಿದ್ದಿತು.**

ಡಿಸೆಂಬರ್ 2006ರಲ್ಲಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕಂಪನಿ) ಮಂಗಳೂರು ತಾಲೂಕಿನ ಜೆಪ್ಪುವಿನಲ್ಲಿ 110/33/11 ಕೆವಿ ಉಪ–ಸ್ಟೇಷನ್ನಿನ ಸ್ಥಾಪನೆಗಾಗಿ ಸವಿವರ ಯೋಜನಾ ವರದಿಯನ್ನು (ಡಿಪಿಆರ್) ಮಂಜೂರು ಮಾಡಿದ್ದಿತ್ತು. ಅಲ್ಲದೆಯೇ, ಅದು ಜೆಪ್ಪುವಿನ ಉದ್ದೇಶಿತ ಉಪ–ಸ್ಟೇಷನ್ನಿಗೆ ಈಗಿರುವ ಕುಲಶೇಖರ–ಕೊಣಜೆ ಸಿಂಗಲ್ ಸರ್ಕ್ಯೂಟ್ ಮಾರ್ಗದಿಂದ 10 ಕಿಲೋಮೀಟರ್ ದೂರಕ್ಕೆ 110 ಕೆವಿ LILO[110] ಮಾರ್ಗ ನಿರ್ಮಾಣವನ್ನೂ ಒಳಗೊಂಡಿದ್ದಿತು. ಯೋಜನೆಯು ಈಗಿರುವ 33 ಕೆವಿ ಉಪಕೇಂದ್ರಗಳಲ್ಲಿ ಹೊರೆಗಳನ್ನು ಸರಿದೂಗಿಸಲು, 11 ಕೆವಿ ಫೀಡರುಗಳಲ್ಲಿ ವಿದ್ಯುತ್ ನಷ್ಟಗಳನ್ನು ಕನಿಷ್ಠಗೊಳಿಸಲು ಮತ್ತು ಉಪಕೇಂದ್ರದ ಪ್ರದೇಶದಲ್ಲಿ 11 ಕೆವಿ ಟೈಲ್–ಎಂಡ್ ವೋಲ್ಟೇಜ್ ನಿಯಂತ್ರಣದ ಜೊತೆಗೆ ವಿದ್ಯುತ್ ಅಡಚಣೆಗಳನ್ನು ಕಡಿಮೆ ಮಾಡುವ ಉದ್ದೇಶ ಹೊಂದಿತ್ತು. ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಕಂಪನಿಯು ₹ 9.01 ಕೋಟಿ[111] ಒಟ್ಟು ವೆಚ್ಚದಲ್ಲಿ ಗುತ್ತಿಗೆಯನ್ನು (ಜನವರಿ 2008) ಮೆ. ದೀಪಕ್ ಕೇಬಲ್ಸ್ (ಇಂಡಿಯಾ) ನಿಯಮಿತಕ್ಕೆ (ಗುತ್ತಿಗೆದಾರರು) ನೀಡಿತು. ಉಪಕೇಂದ್ರ ಮತ್ತು ಮಾರ್ಗದ ಕೆಲಸಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಸಮಯವು ಉದ್ದೇಶ ಪತ್ರದ ದಿನಾಂಕದಿಂದ (29 ಜನವರಿ 2008) ಅನುಕ್ರಮವಾಗಿ ಏಳು ಮತ್ತು ಆರು ತಿಂಗಳುಗಳು ಆಗಿತ್ತು. ಗುತ್ತಿಗೆಯ ಷರತ್ತುಗಳನ್ನು ಅನುಪಾಲನೆ ಮಾಡದಿರುವುದು ಪರ್ಫಾರ್ಮೆನ್ಸ್ ಗ್ಯಾರಂಟಿ ಮುಟ್ಟುಗೋಲು, ದಂಡ ವಿಧಿಸುವಿಕೆ, ಮತ್ತು ಗುತ್ತಿಗೆಯನ್ನು ರದ್ದುಗೊಳಿಸುವಿಕೆಗೆ ದಾರಿ ಮಾಡಿಕೊಡುವಂತಿದ್ದಿತು *(ಪರಿಚ್ಛೇದ 45.3)*.

[110] ಎಲ್ಐಎಲ್ಒ – ಮಾರ್ಗ – ಒಳಗಡೆಗೆ ಮಾರ್ಗ ಹೊರಗಡೆಗೆ – ಒಂದು ಹೊಸ ಉಪ–ಸ್ಟೇಷನ್ನಿಗೆ ಸೇವೆ ಸಲ್ಲಿಸುವ ಸಲುವಾಗಿ ಪ್ರಸಕ್ತ ಇರುವಂತಹ ಪ್ರಸರಣ ಮಾರ್ಗದಿಂದ ವಿದ್ಯುತ್ ಪಡೆಯುವ ಸಲುವಾಗಿ ಒಂದು ವ್ಯವಸ್ಥೆ.

[111] ಸಾಮಗ್ರಿಗಳ ಸರಬರಾಜು (₹ 663.46 ಲಕ್ಷ); ನಿರ್ಮಾಣ (₹ 20.06 ಲಕ್ಷ), ಸಿವಿಲ್ ಕಾಮಗಾರಿಗಳು (₹ 217.63ಲಕ್ಷ).

ಗುತ್ತಿಗೆದಾರರು ನಿರ್ದಿಷ್ಟಪಡಿಸಿದ್ದ ಗಡುವುಗಳನ್ನು ಪೂರೈಸಲು ವಿಫಲರಾದರು, ಇದರಿಂದ ಮಾರ್ಚ್ 2016ರಲ್ಲಿ ಅಂತಿಮ ನೋಟಿಸು ನೀಡುವಿಕೆಗೆ ನಂತರ ಮೇ 2016ರಲ್ಲಿ ಗುತ್ತಿಗೆಯ ರದ್ಧತಿಗೆ ದಾರಿಯಾಯಿತು. ರದ್ದತಿಯ ಸಮಯದಲ್ಲಿ, ಗುತ್ತಿಗೆದಾರರು ಭಾಗಶ: ಕಾಮಗಾರಿಯನ್ನು ಪೂರೈಸಿದ್ದರು[112] ಇದಕ್ಕಾಗಿ ಕಂಪನಿಯು ಗುತ್ತಿಗೆದಾರರಿಗೆ ₹ 5.97 ಕೋಟಿ ಪಾವತಿ ಮಾಡಿತು. ಕಂಪನಿಯು ಗುತ್ತಿಗೆದಾರರ ಬಿಲ್ಲಿನಿಂದ ಉಳಿಸಿಕೊಳ್ಳುವಿಕೆ ಹಣಕಾಸು (₹ 1.31 ಕೋಟಿ), ಸಮಾಪನ ನಷ್ಟಗಳು (₹ 94.79 ಲಕ್ಷ), ಮತ್ತು ಬ್ಯಾಂಕು ಖಾತರಿ ನಗದೀಕರಣ (₹ 1.03 ಕೋಟಿ), ಇವುಗಳನ್ನು ಒಳಗೊಂಡಿರುವ ₹ 3.29 ಕೋಟಿಯನ್ನು ಹಿಡಿದುಕೊಂಡಿದ್ದಿತು. ಇದಾದ ನಂತರ, ಉಳಿದ ಕಾಮಗಾರಿಯನ್ನು ಮರುಟೆಂಡರು ಮಾಡಲಾಯಿತು ಮತ್ತು ಮತ್ತೊಂದು ಕಂಪನಿಗೆ[113] ಸೆಪ್ಟೆಂಬರ್ 2019ರಲ್ಲಿ ನೀಡಲಾಯಿತು, ಇದನ್ನು ₹ 4.18 ಕೋಟಿ[114] ವೆಚ್ಚದಲ್ಲಿ ಪೂರ್ಣಗೊಳಿಸಲಾಯಿತು (ಜನವರಿ 2023).

ಈ ಸಂಬಂಧದಲ್ಲಿ, ಲೆಕ್ಕಪರಿಶೋಧನೆಯು ಕೆಳಕಂಡ ಅಂಶಗಳನ್ನು ಗಮನಿಸಿತು:

i) ಜುಲೈ 2013ರಿಂದ ಗುತ್ತಿಗೆದಾರರ ಕಡೆಯಿಂದ ಕಂಡುಬಂದ ಪ್ರಗತಿಯ ಕೊರತೆ ಮತ್ತು ಮೇ 2015ರಿಂದ ಉಂಟಾದ ಸಂಪೂರ್ಣ ಸ್ಥಗಿತದ ನಡುವೆಯೂ, ಗುತ್ತಿಗೆಯನ್ನು ರದ್ದುಪಡಿಸುವ ನಿರ್ಧಾರವನ್ನು ಮೇ 2016ರವರೆಗೆ ವಿಳಂಬ ಮಾಡಲಾಯಿತು. ಕಂಪನಿ, ಈ ನಡುವಿನ ಅವಧಿಯಲ್ಲಿ, ಗುತ್ತಿಗೆದಾರರೊಂದಿಗೆ ತೊಡಗಿಕೊಂಡಿತ್ತು ಆದರೆ ಗುತ್ತಿಗೆಯ ಷರತ್ತುಗಳ ಅನುಸಾರ ತಕ್ಷಣವೇ ಗುತ್ತಿಗೆಯನ್ನು ರದ್ದುಪಡಿಸಲು ವಿಫಲವಾಯಿತು.

ii) ರದ್ದತಿಯ ನಂತರ ಕಂಪನಿಯು ಗುತ್ತಿಗೆಯನ್ನು ಮರು–ನೀಡಲು (ಸೆಪ್ಟೆಂಬರ್ 2019) ಮೂರು ವರ್ಷಗಳಿಗೂ ಹೆಚ್ಚು ಕಾಲ ತೆಗೆದುಕೊಂಡಿತು. ಅಂದಾಜು ಸಿದ್ಧಪಡಿಸುವಿಕೆಯಲ್ಲಿ ವಿಳಂಬ ಮತ್ತು ಹಲವಾರು ಬಾರಿ ಟೆಂಡರು ಆಹ್ವಾನಗಳು ಸುಧೀರ್ಘವಾದಂತಹ ಕಾಲಾವಧಿಗೆ ಕೊಡುಗೆ ನೀಡಿದವು, ಇದರಿಂದ ₹ 7.02 ಕೋಟಿ[115] ಗಮನಾರ್ಹ ವೆಚ್ಚವು ಯಾವುದೇ ಫಲ ನೀಡಲಿಲ್ಲ.

iii) ಕಂಪನಿಯ ಕೋರಿಕೆಯ (ಮೇ 2016) ಮೇರೆಗೆ, ಗುತ್ತಿಗೆದಾರರು ಜಂಟಿ ಸರಕುಸಾಮಗ್ರಿಗಳ ದಾಸ್ತಾನು ಪರಿಶೀಲಿಸಲು ತನ್ನ ಪ್ರತಿನಿಧಿಯನ್ನು ನೇಮಕ ಮಾಡಿದರು (ಜುಲೈ 2016) ಹಾಗೂ ಮಾರ್ಗದ ಕಾಮಗಾರಿಗಳಿಗೆ ಸಂಬಂಧಿಸಿದ ಬಳಸದೆ ಉಳಿದಿದ್ದ ಸಾಮಗ್ರಿಗಳನ್ನು ಹಿಂದಿರುಗಿಸಿದರು. ಗುತ್ತಿಗೆಯ ಷರತ್ತುಗಳ ಅನುಸಾರ, ತಾವು ಹೊಂದಿದ್ದ ಎಲ್ಲಾ ಉಪಕರಣಗಳು/ಸಾಮಗ್ರಿಗಳ ಸುರಕ್ಷತೆಗೆ ಗುತ್ತಿಗೆದಾರರು ಜವಾಬ್ದಾರರಾಗಿದ್ದರು. ಗುತ್ತಿಗೆದಾರರು ಉಪ–ಕೇಂದ್ರದಲ್ಲಿದ್ದ ಆಸ್ತಿಗಳನ್ನು ರಕ್ಷಿಸಿಡಲು ಅಗತ್ಯ ವ್ಯವಸ್ಥೆಗಳನ್ನು ಮಾಡುವಂತೆ ಕಂಪನಿಯನ್ನು ಕೋರಿದರು (ಫೆಬ್ರವರಿ 2017). ಆದಾಗ್ಯೂ, ಕಂಪನಿಯು ಭದ್ರತಾ ಏಜೆನ್ಸಿಯನ್ನು ನವೆಂಬರ್ 2017ರಲ್ಲಿ, ರದ್ಧತಿಯ 18 ತಿಂಗಳುಗಳ ನಂತರ, ನೇಮಕ ಮಾಡಿತು ಮತ್ತು ₹ 3.16 ಕೋಟಿ ಮೌಲ್ಯದ ಸಾಮಗ್ರಿಗಳು[116] ಕಾಣೆಯಾಗಿರುವುದನ್ನು/ಹಾನಿಯಾಗಿರುವುದನ್ನು ಗಮನಿಸಿತು. ಜೊತೆಗೆ, ದಿನಾಂಕ ಮೇ 2016ರ ಗುತ್ತಿಗೆ ರದ್ಧತಿ ನೋಟಿಸ್ ಪ್ರಕಾರ, ಕಂಪನಿಯು ಕಾಮಗಾರಿಯನ್ನು

[112] ಉಪಕರಣದ ಪರೀಕ್ಷಣೆ, ಉಪ–ಸ್ಟೇಷನ್ನಿಗೆ ಸಂಪರ್ಕ ಮಾರ್ಗ, ಇತ್ಯಾದಿಗಳನ್ನು ಹೊರತುಪಡಿಸಿದಂತೆ ಉಪ–ಸ್ಟೇಷನ್ನಿನ ಕಾಮಗಾರಿಗಳು ಪೂರ್ಣಗೊಂಡಿರುವವು 40 ಗೋಪುರಗಳ ಪೈಕಿ 37 ನಿರ್ಮಾಣಗೊಂಡಿದ್ದವು ಮತ್ತು 9.7 ಕಿ.ಮೀ ಗಳ ಪೈಕಿ 5.9 ಕಿ.ಮೀ ಗಳ ಕೇಬಲ್ ಅಳವಡಿಸುವಿಕೆ ಪೂರ್ಣಗೊಂಡಿತ್ತು.

[113] ಮೆ. ಮಣಿಪಾಲ್ ಎನರ್ಜಿ ಅಂಡ್ ಇನ್‌ಫ್ರಾಟೆಕ್, ಉಡುಪಿ.

[114] ಕಾಮಗಾರಿ ನೀಡಿಕೆ ಮೊತ್ತ ₹ 5.18 ಕೋಟಿಗೆ ಪ್ರತಿಯಾಗಿ ಜನವರಿ 2023ರಲ್ಲಿದ್ದಂತೆ ಭರಿಸಲಾಗಿರುವ ವೆಚ್ಚವನ್ನು ಪ್ರತಿನಿಧಿಸುತ್ತದೆ.

[115] ಇದು ಏಜನ್ಸಿಗೆ ಪಾವತಿಸಲಾದ ₹ 5.97 ಕೋಟಿ ಹಾಗೂ ನಿರ್ಮಾಣದ ವೇಳೆಯಲ್ಲಿ ಬಡ್ಡಿ ಪಾವತಿ ₹ 1.05 ಕೋಟಿ ಮೊತ್ತಗಳನ್ನು ಒಳಗೊಂಡಿರುತ್ತದೆ.

[116] 10 ಎಂವಿಎ ವಿದ್ಯುತ್ ಟ್ರಾನ್ಸ್‌ಫಾರ್ಮರುಗಳು 11 ಕಿವ್ಯಾ ಸ್ವಿಚ್ ಗೇರುಗಳು ಕಂಟ್ರೋಲ್ ಪ್ಯಾನೆಲ್ಲುಗಳು, ಕೇಬಲ್ಲುಗಳು, ಇತ್ಯಾದಿ.

ವಹಿಸಿಕೊಂಡಿರುವುದೆಂದು ಭಾವಿಸಲಾಗಿತ್ತು. ಕಂಪನಿಯು ಗುತ್ತಿಗೆ ರದ್ಧತಿ ಆದ ಕೂಡಲೇ ಆಸ್ತಿಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವ ತನ್ನ ಬಾಧ್ಯತೆಯನ್ನು ನಿರ್ಲಕ್ಷಿಸಿತು, ಇದರಿಂದ ₹ 3.16 ಕೋಟಿ ನಷ್ಟ ಉಂಟಾಯಿತು. ಭದ್ರತಾ ಏಜೆನ್ಸಿ ನೇಮಕ ಮಾಡುವಲ್ಲಿ ಉಂಟಾದ ವಿಳಂಬವು ₹ 2 ಕೋಟಿ ಮೌಲ್ಯದ ಎರಡು ಟ್ರಾನ್ಸ್ಫಾರ್ಮರುಗಳೂ ಸೇರಿದಂತೆ ಸಾಮಗ್ರಿಗಳ ಕಾಣೆಯಾಗುವಿಕೆ/ಹಾನಿಗೆ ಅವಕಾಶ ನೀಡಿತು, ಇವುಗಳು ದುರಸ್ತಿ ಮಾಡಲು ಸೂಕ್ತ ಅಲ್ಲವೆಂದು ಕಂಡುಹಿಡಿಯಲಾಯಿತು. ಕಂಪನಿಯು ಸಾಮಗ್ರಿಗಳ ಕಾಣೆಯಾಗುವಿಕೆ/ಕಳ್ಳತನದ ವಿರುದ್ಧ ಪೋಲೀಸ್ ದೂರನ್ನು ಸಲ್ಲಿಸಿದರೂ ಸಹ, (ನವೆಂಬರ್ 2017) ಈ ಪ್ರಕರಣದಲ್ಲಿ ಯಾವುದೇ ಪ್ರಗತಿ ಇರಲಿಲ್ಲ (ಫೆಬ್ರವರಿ 2024).

iv) ಕಂಪನಿಯ ನಿರ್ದೇಶಕರುಗಳ ಮಂಡಳಿಯು ತನ್ನ 27 ಡಿಸೆಂಬರ್ 2022ರಂದು ನಡೆದ ಸಭೆಯಲ್ಲಿ, ಲೋಪಗಳಿಗೆ ಕಾರಣರಾದ ಮತ್ತು ತಪಾಸಣಾ ಅವಧಿಯಲ್ಲಿ ಉಗ್ರಾಣದ ಮೇಲ್ವಿಚಾರಣೆ ಮಾಡಲು ಪ್ರಮಾಣಿತ ಕಾರ್ಯಾಚರಣಾ ವಿಧಾನಗಳನ್ನು ಅನುಷ್ಠಾನಗೊಳಿಸಲು ವಿಫಲರಾದ ಎಲ್ಲಾ ಅಧಿಕಾರಿಗಳು/ಉದ್ಯೋಗಿಗಳ ವಿರುದ್ಧ ಹೊಸತಾಗಿ ತನಿಖೆಯನ್ನು ನಡೆಸಲು ನಿರ್ಧರಿಸಿತು. ಇಲಾಖಾ ವಿಚಾರಣೆಯನ್ನು, ಆದಾಗ್ಯೂ, ಹಿಂತೆಗೆದುಕೊಳ್ಳಲಾಯಿತು ಮತ್ತು ಅಧಿಕಾರಿಗಳನ್ನು ಅವರ ವಿರುದ್ಧ ಇದ್ದ ಆಪಾದನೆಗಳಿಂದ ಮುಕ್ತಗೊಳಿಸಲಾಯಿತು, ಹೀಗಾಗಿ ಕಂಪನಿಯು ತನ್ನ ಆಸ್ತಿಗಳನ್ನು ಸಂರಕ್ಷಿಸುವಲ್ಲಿ ಆದ ವೈಫಲ್ಯಕ್ಕೆ ಹೊಣೆಗಾರಿಕೆ ನಿಗದಿಪಡಿಸಲು ವಿಫಲವಾಯಿತು.

ಸರ್ಕಾರವು, ಮಾರ್ಗದ ಪ್ರದೇಶಗಳಲ್ಲಿ ಭೂಮಾಲೀಕರ ಆಕ್ಷೇಪಣೆಗಳು, ನ್ಯಾಯಾಲಯದ ಪ್ರಕರಣಗಳು ಹಾಗೂ, ಏಜೆನ್ಸಿಯಿಂದ ವಿಳಂಬದಂತಹ ಕಾರಣಗಳಿಗಾಗಿ ಕಾಮಗಾರಿಗಳಲ್ಲಿ ವಿಳಂಬ ಉಂಟಾಯಿತು ಎಂಬುದಾಗಿ ಉತ್ತರ ನೀಡಿರುವುದು (ಮಾರ್ಚ್ 2024). ಜೊತೆಗೆ, ನವೆಂಬರ್ 2015ರಂದು, ಗುತ್ತಿಗೆದಾರರಿಂದ ಶೇಕಡಾ 70 ಕಾಮಗಾರಿಯನ್ನು ಪೂರ್ಣಗೊಳಿಸಲಾಗಿತ್ತು ಮತ್ತು ಗುತ್ತಿಗೆಯನ್ನು ಪೂರ್ವಸಮಾಪ್ತಿ ಮಾಡದಂತೆ ಗುತ್ತಿಗೆದಾರರ ಕೋರಿಕೆಯ ಮೇರೆಗೆ ಮತ್ತು ಗುತ್ತಿಗೆದಾರರು ಕಂಪನಿಯೊಂದಿಗೆ ಧೀರ್ಘಕಾಲದಿಂದ ಹೊಂದಿರುವ ವ್ಯವಹಾರ ಬಾಂಧವ್ಯದ ಕಾರಣ, ಗುತ್ತಿಗೆ ರದ್ಧತಿಯು ವಿಳಂಬವಾಯಿತು. ಗುತ್ತಿಗೆಯ ರದ್ಧತಿಯ ಪ್ರಕ್ರಿಯೆಯನ್ನು ಮರು–ಟೆಂಡರು ಪ್ರಕ್ರಿಯೆಗೆ ಹಿಡಿಯುವ ಸಮಯ ಮತ್ತು ವೆಚ್ಚವನ್ನು ತಪ್ಪಿಸಲೂ ಸಹ ವಿಳಂಬ ಮಾಡಲಾಯಿತು. ಈ ಉತ್ತರವನ್ನು ಒಪ್ಪಲಾಗುವುದಿಲ್ಲ ಏಕೆಂದರೆ ಕಾಮಗಾರಿಯನ್ನು 2008ರಲ್ಲಿ ವಹಿಸಲಾಗಿತ್ತು, ಮತ್ತು ನಿಗದಿಪಡಿಸಲಾಗಿದ್ದ ಸಮಯವು ಅನುಕ್ರಮವಾಗಿ ಆರು ಮತ್ತು ಏಳು ತಿಂಗಳುಗಳು ಆಗಿತ್ತು. ಆದಾಗ್ಯೂ ಕಂಪನಿಯು ಗುತ್ತಿಗೆದಾರರು ನಿಗದಿತ ಕಾಲಾವಧಿಯ ಬಹಳ ನಂತರ ಮುಂದುವರೆಯಲು ಅವಕಾಶ ನೀಡಿತು.

ಅಲ್ಲದೆಯೇ, ಉಳಿದ ಕಾಮಗಾರಿಗಳಿಗಾಗಿ, ಗುತ್ತಿಗೆಯನ್ನು ಮರು–ನೀಡಿಕೆಯಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ, ಸರ್ಕಾರವು ಸಾಮಗ್ರಿಗಳು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸಿದ್ದು ಮತ್ತು ಸಾಮಗ್ರಿಗಳ ಹಾನಿ/ನಷ್ಟದ ಕಾರಣದಿಂದಾಗಿ ಸಿದ್ಧಪಡಿಸಲಾದ ಅಂದಾಜುಗಳನ್ನು ಹಲವಾರು ಬಾರಿ ಪರಿಷ್ಕರಿಸಿದ ಕಾರಣ ವಿಳಂಬವು ಉಂಟಾಗಿರುವುದು ಎಂಬುದಾಗಿ ಉತ್ತರಿಸಿರುವುದು ಒಳಗೊಂಡಿರುವ ಕ್ರಮವು ಸಂಪೂರ್ಣವಾಗಿ ಕಂಪನಿಯ ವ್ಯಾಪ್ತಿಯೊಳಗೇ ಇದ್ದ ಕಾರಣ ವಿಳಂಬವನ್ನು ತಪ್ಪಿಸಬಹುದಾಗಿತ್ತು. ಅಂದಾಜುಗಳ ಸಿದ್ಧಪಡಿಸುವಿಕೆ ಮತ್ತು ಅವುಗಳ ತಾಂತ್ರಿಕ ಮಂಜೂರಾತಿಯು ರದ್ಧತಿಯ ದಿನಾಂಕದಿಂದ (ಮೇ 2016ರಿಂದ ಜುಲೈ 2018) ಎರಡು ವರ್ಷಗಳಿಗೂ ಹೆಚ್ಚಿನ ಸಮರ್ಥನೀಯವಲ್ಲದ ಸಮಯವನ್ನು ತೆಗೆದುಕೊಂಡಿದ್ದಿತು, ಇದನ್ನು ಸಮರ್ಥಿಸಲು ಸಾಧ್ಯವಿಲ್ಲ. ಜೊತೆಗೆ, ಜಿಎಸ್ಟಿಯನ್ನು ಜಾರಿಗೊಳಿಸಿದ್ದು ಅಂದಾಜಿನಲ್ಲಿ ಹಲವಾರು ಪರಿಷ್ಕರಣೆಗಳನ್ನು ನಿರ್ದಿಷ್ಟವಾಗಿ ಹೇಗೆ ಉಂಟುಮಾಡಿತು ಎಂಬುದರ ಬಗ್ಗೆಯೂ ಉತ್ತರವು ಮೌನವಾಗಿದೆ.

₹ 3.16 ಕೋಟಿ ಮೌಲ್ಯದ ಸಾಮಗ್ರಿಗಳ ನಷ್ಟಕ್ಕೆ ಸಂಬಂಧಿಸಿದಂತೆ, ಜಂಟಿ ಇನ್ವೆಂಟರಿ ತ:ಖ್ತೆಯ ಅನುಸಾರ ಉಗ್ರಾಣದ ಅಧಿಕಾರಿಗಳಿಗೆ ಸಾಮಗ್ರಿಗಳನ್ನು ಹಿಂದಿರುಗಿಸುವವರೆಗೆ, ಸಾಮಗ್ರಿಗಳ ಸುರಕ್ಷತೆಗೆ ಗುತ್ತಿಗೆದಾರರು ಹೊಣೆಗಾರರಾಗಿದ್ದರು ಎಂಬುದಾಗಿ ಸರ್ಕಾರವು ಉತ್ತರಿಸಿರುವುದು ಹಾಗೂ, ಗುತ್ತಿಗೆದಾರರ ವಿರುದ್ಧ ಐಪಿಸಿಯ ಸಂಬಂಧಿತ ಕಲಂಗಳ ಅಡಿಯಲ್ಲಿ ದೂರನ್ನೂ ಸಹ ಸಲ್ಲಿಸಲಾಗಿದೆ ಮತ್ತು ತನಿಖೆಯು ಪ್ರಗತಿಯಲ್ಲಿದೆ. ಈ ಉತ್ತರವನ್ನು ಒಪ್ಪಿಕೊಳ್ಳಲು ಆಗುವುದಿಲ್ಲ ಏಕೆಂದರೆ ಗುತ್ತಿಗೆಯನ್ನು ರದ್ದುಪಡಿಸಿದಾಗ, ರದ್ಧತಿ ಆದೇಶದಲ್ಲಿ ಹೇಳಿರುವಂತೆ ಕವಿಪ್ರನಿನಿದ ಅಧಿಕೃತ

ಪ್ರತಿನಿಧಿಯೊಬ್ಬರಿಂದ ಕಾಮಗಾರಿಗಳನ್ನು ವಹಿಸಿಕೊಳ್ಳಲಾಗಿದೆ ಎಂದು ಭಾವಿಸಲಾಗಿತ್ತು. ಇದರ ಜೊತೆಗೆ, ಗುತ್ತಿಗೆದಾರರು ಆವರಣದಲ್ಲಿ ಆಸ್ತಿಗಳಿಗೆ ಭದ್ರತೆ ಒದಗಿಸಲು ತಮ್ಮ ಅಸಮರ್ಥತೆಯನ್ನು ತಿಳಿಸಿರುವಾಗ ಆಸ್ತಿಗಳನ್ನು ರಕ್ಷಿಸಿಕೊಳ್ಳಲು ಭದ್ರತಾ ಏಜೆನ್ಸಿಯನ್ನು ತಕ್ಷಣವೇ ಕಂಪನಿಯು ನೇಮಕ ಮಾಡಬೇಕಾಗಿತ್ತು.

ವಿವಿಧ ಹಂತಗಳಲ್ಲಿ ಉಂಟಾದ ಲೋಪಗಳು ಯೋಜನೆ ಪೂರ್ಣಗೊಳ್ಳುವಲ್ಲಿ 15-ವರ್ಷಗಳ ವಿಳಂಬ, ಒಂದು ದಶಕದ ಕಾಲ ದುಬಾರಿ ಉಪಕರಣಗಳು ನಿಷ್ಕ್ರಿಯವಾಗಿರುವುದು, ಮತ್ತು ₹ 3.16 ಕೋಟಿ ನಷ್ಟವನ್ನು ಉಂಟುಮಾಡುವಲ್ಲಿ ಪರಿಣಮಿಸಿರುವುದು. ಈ ವಿಷಯಗಳನ್ನು ಬಗೆಹರಿಸುವ ಸಲುವಾಗಿ ಕಂಪನಿಯು ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ಅಂತಹ ಹೊಣೆಗೇಡಿತನಕ್ಕಾಗಿ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

**ಶಿಫಾರಸು:**

**21. ಗುತ್ತಿಗೆಯ ರದ್ದತಿಯಾದ ಮೇಲೆ ಆಸ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದೆ ಆಸ್ತಿಗಳ ನಷ್ಟ ಉಂಟಾಗಿರುವುದಕ್ಕಾಗಿ ಅಧಿಕಾರಿಗಳ ಮೇಲೆ ಹೊಣೆಗಾರಿಕೆ ನಿಗದಿಪಡಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ವ್ಯವಸ್ಥಾಪನೆಗೆ ಶಿಫಾರಸು ಮಾಡುತ್ತಿರುವುದು.**

## ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

### *6.9 ವಿದ್ಯುತ್ ಶುಲ್ಕದ ಹೆಚ್ಚುವರಿ ಪಾವತಿ*

**ವಿದ್ಯುತ್ ಬಿಲ್‌ಗಳ ನಿಖರತೆಯನ್ನು ಪರಿಶೀಲಿಸುವಲ್ಲಿ ವಿಜೆಎನ್‌ಎಲ್ ವಿಫಲವಾದ ಕಾರಣ ₹ 16.89 ಕೋಟಿ ಮೊತ್ತದ ವಿದ್ಯುತ್ ಶುಲ್ಕವನ್ನು ಹೆಚ್ಚುವರಿಯಾಗಿ ಪಾವತಿಸಲಾಗಿದೆ.**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಕಾಲಕಾಲಕ್ಕೆ ಸುಂಕದ ಆದೇಶಗಳನ್ನು ಹೊರಡಿಸುತ್ತದೆ ಅದು ಇಂಧನ ಶುಲ್ಕಗಳ ಲೆಕ್ಕಾಚಾರಕ್ಕೆ ಮಾರ್ಗಸೂಚಿಗಳನ್ನು ನೀಡುತ್ತದೆ. ಸುಂಕದ ಆದೇಶಗಳ ಪ್ರಕಾರ, ಏತ ನೀರಾವರಿ ಯೋಜನೆಗಳನ್ನು (ಎಲ್‌ಐಎಸ್) ನಿರ್ವಹಿಸುವ ಸರ್ಕಾರಿ ಸ್ವಾಮ್ಯದ ನಿಗಮಗಳು ವಾರ್ಷಿಕ ಇಂಧನ ಶುಲ್ಕಗಳು ಕನಿಷ್ಠ ನಿಗದಿತ ಮಿತಿಗಿಂತ ಕಡಿಮೆಯಾದರೆ, ನಿಗದಿತ ವಾರ್ಷಿಕ ಕನಿಷ್ಠ ಶುಲ್ಕವನ್ನು ಪಾವತಿಸಲು ಬಾಧ್ಯತೆ ಹೊಂದಿರುತ್ತದೆ. ಪಂಪ್ ಹೌಸ್‌ನ ಸ್ಥಾಪಿತ ಸಾಮರ್ಥ್ಯವನ್ನು ಪರಿಗಣಿಸಿ, ಸರ್ಕಾರಿ ಸ್ವಾಮ್ಯದ ನಿಗಮಗಳ ಒಡೆತನದ ಎಲ್‌ಐಎಸ್‌ಗಳ ಕನಿಷ್ಠ ವಿದ್ಯುತ್ ಶುಲ್ಕವನ್ನು ವಾರ್ಷಿಕ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

ಸರ್ಕಾರಿ ಸ್ವಾಮ್ಯದ ನಿಗಮಗಳಿಂದ ಜಾರಿಗೊಳಿಸಲಾದ ಏತ ನೀರಾವರಿಗಾಗಿ ನಿಗದಿತ ಇಂಧನ ಶುಲ್ಕಗಳು ಮತ್ತು ಕನಿಷ್ಠ ಸುಂಕದ ಶುಲ್ಕಗಳು ಕೆಳಗೆ ಪಟ್ಟಿಮಾಡಲಾಗಿದೆ:

**ಕೋಷ್ಟಕ ಸಂಖ್ಯೆ. 6.9.1: ಎಲ್‌ಐಎಸ್ ಯೋಜನೆಗಳಿಗೆ ವಿದ್ಯುತ್ ಸುಂಕ**

| ಕ್ರಮ ಸಂಖ್ಯೆ | ವರ್ಷ | ಕೆಇಆರ್‌ಸಿ ಸುಂಕದ ಆದೇಶದ ಪ್ರಕಾರ ಇಂಧನ ಶುಲ್ಕಗಳು ಮತ್ತು ಕನಿಷ್ಠ ಸುಂಕ |
|---|---|---|
| 1 | 2019-20 | ಪ್ರತಿ ಯೂನಿಟ್‌ಗೆ 275 ಪೈಸೆ ಇದ್ದು, ವಾರ್ಷಿಕ ಕನಿಷ್ಠ ₹ 1480 ಪ್ರತಿ ಹೆಚ್.ಪಿ/ ವರ್ಷಕ್ಕೆ ಒಳಪಟ್ಟಿರುತ್ತದೆ. |
| 2 | 2020-21 | ಪ್ರತಿ ಯೂನಿಟ್‌ಗೆ 300 ಪೈಸೆ ಇದ್ದು, ವಾರ್ಷಿಕ ಕನಿಷ್ಠ ₹ 1600 ಪ್ರತಿ ಹೆಚ್.ಪಿ / ವರ್ಷಕ್ಕೆ ಒಳಪಟ್ಟಿರುತ್ತದೆ. |
| 3 | 2021-22 | ಪ್ರತಿ ಯೂನಿಟ್‌ಗೆ 310 ಪೈಸೆ ಇದ್ದು, ವಾರ್ಷಿಕ ಕನಿಷ್ಠ ₹ 1720 ಪ್ರತಿ ಹೆಚ್.ಪಿ / ವರ್ಷಕ್ಕೆ ಒಳಪಟ್ಟಿರುತ್ತದೆ. |
| 4 | 2022-23 | ಪ್ರತಿ ಯೂನಿಟ್‌ಗೆ 315 ಪೈಸೆ ಇದ್ದು, ವಾರ್ಷಿಕ ಕನಿಷ್ಠ ₹ 1900 ಪ್ರತಿ ಹೆಚ್.ಪಿ / ವರ್ಷಕ್ಕೆ ಒಳಪಟ್ಟಿರುತ್ತದೆ. |

**ಮೂಲ: ಕೆಇಆರ್‌ಸಿ ಆದೇಶಗಳು**

ಕಾರ್ಯನಿರ್ವಾಹಕ ಅಭ್ಯಯಂತರರು (ಇಇ), ಅಪ್ಪರ್ ಭದ್ರಾ ಪ್ರಾಜೆಕ್ಟ್ ವಿಭಾಗ ನಂ 2, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ವಿಜೆಎನ್‌ಎಲ್) ರವರು ಶಾಂತಿಪುರ ಮತ್ತು ಬೆಟ್ಟತಾವರೆಕೆರೆಯಲ್ಲಿ ಎರಡು ಪಂಪ್ ಹೌಸ್‌ಗಳನ್ನು ನಿರ್ವಹಿಸುತ್ತಿದ್ದರು. ಅಪ್ಪರ್ ಭದ್ರಾ ಪ್ರಾಜೆಕ್ಟ್ ಭಾಗವಾಗಿ ಅಜ್ಜಂಪುರದ ಉದ್ದೇಶಿತ ಸುರಂಗದ ಬಳಿ ಇರುವ ವಿತರಣಾ ತೊಟ್ಟಿಗೆ ಭದ್ರಾ ಜಲಾಶಯದಿಂದ ನೀರನ್ನು ಎತ್ತಲು ಈ ಪಂಪ್ ಹೌಸ್‌ಗಳನ್ನು ಬಳಸಲಾಗುತ್ತಿತ್ತು. ಶಾಂತಿಪುರ ಮತ್ತು ಬೆಟ್ಟತಾವರೆಕೆರೆ ಪಂಪ್‌ಹೌಸ್‌ಗಳನ್ನು ಕ್ರಮವಾಗಿ ಫೆಬ್ರವರಿ 2019 ಮತ್ತು ಆಗಸ್ಟ್ 2019 ರಲ್ಲಿ ಕಾರ್ಯಾರಂಭ ಮಾಡಲಾಗಿತ್ತು.

ಅಪ್ಪರ್ ಭದ್ರಾ ಪ್ರಾಜೆಕ್ಟ್ ವಲಯ, ವಿಜೆಎನ್‌ಎಲ್‌ನ ಮುಖ್ಯ ಅಭ್ಯಯಂತರರು ಕಚೇರಿಯ ವಿದ್ಯುತ್ ಬಿಲ್‌ಗಳ ಲೆಕ್ಕಪರಿಶೋಧನೆ ಮಾಡಲಾಗಿ (ಸೆಪ್ಟೆಂಬರ್ 2021), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ (ಮೆಸ್ಕಾಂ) ಪಂಪ್‌ಹೌಸ್‌ಗಳ ಇಂಧನ ಬಿಲ್‌ಗಳನ್ನು ಮಾಸಿಕ ಆಧಾರದ ಮೇಲೆ ಕೆಇಆರ್‌ಸಿ ನಿಗದಿಪಡಿಸಿದ ವಾರ್ಷಿಕ ಕನಿಷ್ಠ ಶುಲ್ಕವನ್ನು ಹನ್ನೆರಡರಿಂದ ಭಾಗಿಸಿ ಲೆಕ್ಕ ಹಾಕಿದೆ ಮತ್ತು ಇದನ್ನು ವಾಸ್ತವಿಕ ಇಂಧನ ಶುಲ್ಕಗಳೊಂದಿಗೆ ಹೋಲಿಸಲಾಯಿತೆಂದು ತಿಳಿದು ಬಂದಿತು. ಎರಡು ಶುಲ್ಕಗಳ ಪೈಕಿ ಹೆಚ್ಚಿನ ಶುಲ್ಕವನ್ನು ಪಂಪ್ ಹೌಸ್‌ಗಳ ಮಾಸಿಕ ಬಿಲ್‌ಗಳಲ್ಲಿ ಪರಿಗಣಿಸಲಾಗಿದೆ. ಲೆಕ್ಕಪರಿಶೋಧನೆಯು ವಾರ್ಷಿಕ ಇಂಧನ ಶುಲ್ಕವನ್ನು ವಾಸ್ತವಿಕ ಬಳಕೆ, ಕೆಇಆರ್‌ಸಿ ನಿಗದಿಪಡಿಸಿದ ಕನಿಷ್ಠ ವಾರ್ಷಿಕ ಶುಲ್ಕ ಮತ್ತು ಮಾಸಿಕ ಲೆಕ್ಕಾಚಾರದ ಆಧಾರದ ಮೇಲೆ ಮೆಸ್ಕಾಂನಿಂದ ಬಿಲ್ ಮಾಡಲಾದ ಇಂಧನ ಶುಲ್ಕಗಳಿಗೆ ಹೋಲಿಸಿದೆ ಮತ್ತು ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.

**ಕೋಷ್ಟಕ ಸಂಖ್ಯೆ. 6.9.2: ವಾಸ್ತವಿಕ ಬಳಕೆಯ ಮೇಲಾದ ಇಂಧನ ಶುಲ್ಕ, ಕೆಇಆರ್‌ಸಿಯ ಕನಿಷ್ಠ ಶುಲ್ಕ ಮತ್ತು ಮೆಸ್ಕಾಂನಿಂದ ಮಾಡಲಾದ ವಾಸ್ತವಿಕ ಬಿಲ್ಲುಗಳ ಹೋಲಿಕೆಯ ವಿವರ.**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವರ್ಷ | ಶಾಂತಿಪುರ ಪಂಪ್ ಹೌಸ್ | | | ಬೆಟ್ಟತಾವರೆಕೆರೆ ಪಂಪ್ ಹೌಸ್ | | |
|---|---|---|---|---|---|---|---|
| | | ವಾಸ್ತವಿಕ ಬಳಕೆಯ ಆಧಾರದ ಮೇಲೆ ವಾರ್ಷಿಕ ಇಂಧನ ಶುಲ್ಕಗಳು | ಸ್ಥಾಪಿಸಲಾದ ಸಾಮರ್ಥ್ಯದ ಆಧಾರದ ಮೇಲೆ ವಾರ್ಷಿಕ ಕನಿಷ್ಠ ಶುಲ್ಕಗಳು | ಮಾಸಿಕ ಲೆಕ್ಕಾಚಾರದ ಆಧಾರದ ಮೇಲೆ ಮೆಸ್ಕಾಂನಿಂದ ಬಿಲ್ ಮಾಡಲಾದ ವಾಸ್ತವಿಕ ಇಂಧನದ ಶುಲ್ಕಗಳು | ವಾಸ್ತವಿಕ ಬಳಕೆಯ ಆಧಾರದ ಮೇಲೆ ವಾರ್ಷಿಕ ಇಂಧನ ಶುಲ್ಕಗಳು | ಸ್ಥಾಪಿಸಲಾದ ಸಾಮರ್ಥ್ಯದ ಆಧಾರದ ಮೇಲೆ ವಾರ್ಷಿಕ ಕನಿಷ್ಠ ಶುಲ್ಕಗಳು | ಮಾಸಿಕ ಲೆಕ್ಕಾಚಾರದ ಆಧಾರದ ಮೇಲೆ ಮೆಸ್ಕಾಂನಿಂದ ಬಿಲ್ ಮಾಡಲಾದ ವಾಸ್ತವಿಕ ಇಂಧನದ ಶುಲ್ಕಗಳು |
| 1 | 2019-20 | 5.09 | 11.63 | 13.18 | 2019ರ ಆಗಸ್ಟ್‌ನಲ್ಲಿ ಪಂಪ್‌ಹೌಸ್ ಕಾರ್ಯಾರಂಭ ಮಾಡಿದ್ದರಿಂದ ವಾರ್ಷಿಕ ಶುಲ್ಕವನ್ನು ಹೋಲಿಸಲು ಸಾಧ್ಯವಾಗಿಲ್ಲ. | | |
| 2 | 2020-21 | 10.18 | 12.89 | 17.41 | 9.81 | 12.87 | 17.07 |
| 3 | 2021-22 | 10.91 | 12.98 | 17.15 | 10.46 | 12.93 | 16.83 |
| 4 | 2022-23 | 1.08 | 15.17 | 13.85 | 11.49 | 15.20 | 15.09 |

***ಮೂಲ: ಪಂಪ್ ಹೌಸ್‌ಗಳ ವಿದ್ಯುತ್ ಬಿಲ್‌ಗಳಿಂದ ಸಂಗ್ರಹಿಸಿದ ಮಾಹಿತಿ***

ಮೇಲೆ ಗಮನಿಸಿದಂತೆ, ಎರಡೂ ಪಂಪ್‌ಹೌಸ್‌ಗಳಿಗೆ, ವಾಸ್ತವಿಕ ಬಳಕೆಯ ಆಧಾರದ ಮೇಲೆ ವಾರ್ಷಿಕ ಇಂಧನ ಶುಲ್ಕಗಳು 2019–23ರ ಅವಧಿಯಲ್ಲಿ ಎಲ್ಲಾ ಹಣಕಾಸು ವರ್ಷಗಳ ವಾರ್ಷಿಕ ಕನಿಷ್ಠ ನಿಗದಿತ ಶುಲ್ಕಗಳಿಗಿಂತ ಕಡಿಮೆಯಾಗಿದೆ. 2022–23ರ ಅವಧಿಯಲ್ಲಿ, ಮೆಸ್ಕಾಂ ವಿಧಿಸಿದ ವಾಸ್ತವಿಕ ಇಂಧನ ಶುಲ್ಕಗಳು ವಾರ್ಷಿಕ ಕನಿಷ್ಠ ಶುಲ್ಕಗಳಿಗಿಂತ ಕಡಿಮೆಯಾಗಿದೆ. ಕೆಇಆರ್‌ಸಿ ಸುಂಕದ ಆದೇಶದ ಪ್ರಕಾರ, ಸ್ಥಾಪಿತ ಸಾಮರ್ಥ್ಯದ ಆಧಾರದ ಮೇಲೆ ವಾರ್ಷಿಕ ಕನಿಷ್ಠ ಶುಲ್ಕವನ್ನು ಆಯಾ ವರ್ಷಗಳ ವಿದ್ಯುತ್ ಶುಲ್ಕವಾಗಿ ವಿಧಿಸಬೇಕಾಗಿತ್ತು. ವಾರ್ಷಿಕ ಕನಿಷ್ಠ ಶುಲ್ಕಗಳನ್ನು ಅಳವಡಿಸಿಕೊಳ್ಳುವುದನ್ನು ಸೂಚಿಸಿರುವ ಕೆಇಆರ್‌ಸಿ ಆದೇಶವನ್ನು ಅನುಸರಿಸದೆ ವಿದ್ಯುತ್ ಶುಲ್ಕವನ್ನು ಮಾಸಿಕವಾಗಿ ಲೆಕ್ಕಹಾಕಿದ ಕಾರಣ, ವಿ.ಜೆ.ಎನ್.ಎಲ್ 2019–20 ರಿಂದ 2022–23 ರ ಅವಧಿಯಲ್ಲಿ ವಿದ್ಯುತ್ ಶುಲ್ಕದ ಖಾತೆಯಲ್ಲಿ ₹ 16.89 ಕೋಟಿ ಹೆಚ್ಚುವರಿ ಪಾವತಿ ಮಾಡಿದೆ (ವಿವರಗಳು ***ಅನುಬಂಧ – 31 ಮತ್ತು ಅನುಬಂಧ – 32***)

ಹೀಗಾಗಿ, ಎಲ್ಐಎಸ್ ಯೋಜನೆಗಳಿಗೆ ಸಂಬಂಧಿಸಿದಂತೆ ಕೆಇಆರ್‌ಸಿ ಸುಂಕದ ಆದೇಶಗಳನ್ನು ಮೆಸ್ಕಾಂ ತಪ್ಪಾಗಿ ಅನುಸರಣೆ ಮಾಡಿರುವುದು ಮತ್ತು ಮೆಸ್ಕಾಂ ಬಿಲ್‌ಗಳ ನಿಖರತೆಯನ್ನು ಪರಿಶೀಲಿಸುವಲ್ಲಿ ವಿಜೆಎನ್‌ಎಲ್ ವಿಫಲವಾದ ಪರಿಣಾಮವಾಗಿ ₹ 16.89 ಕೋಟಿಗಳಷ್ಟು ವಿದ್ಯುತ್ ಶುಲ್ಕವನ್ನು ಹೆಚ್ಚುವರಿ ಪಾವತಿಸಲಾಗಿದೆ.

ವಿ.ಜೆ.ಎನ್.ಎಲ್ ತನ್ನ ಉತ್ತರದಲ್ಲಿ (ನವೆಂಬರ್ 2023), ಲೆಕ್ಕಪರಿಶೊಧನೆಯ ಅವಲೋಕನವನ್ನು ಒಪ್ಪಿಕೊಂಡಿತು ಮತ್ತು ಹೆಚ್ಚುವರಿ ಬಿಲ್ಲಿಂಗ್ ಅನ್ನು ಹಿಂಪಡೆಯಲು ಮತ್ತು ಹೆಚ್ಚುವರಿ ಮೊತ್ತದ ₹ 24.22 ಕೋಟಿ[117] (₹ 2.57 ಕೋಟಿ ಬಡ್ಡಿಯೊಂದಿಗೆ) ಶಾಂತಿಪುರ ಮತ್ತು ಬೆಟ್ಟತಾವರೆಕೆರೆ ಪಂಪ್‌ಹೌಸ್‌ಗಳ ಮುಂದಿನ ಬಿಲ್‌ಗಳಿಂದ ಸರಿಹೊಂದಿಸಲು ಮೆಸ್ಕಾಂ ಒಪ್ಪಿಕೊಂಡಿದೆ (ನವೆಂಬರ್ 2023) ಎಂದು ಹೇಳಿದೆ. ವಿ.ಜೆ.ಎನ್.ಎಲ್ ನ ಉತ್ತರವನ್ನು ಸರ್ಕಾರವು ಅನುಮೋದಿಸಿದೆ (ಡಿಸೆಂಬರ್ 2023).

ಮಾಡಲಾದ ಹೊಂದಾಣಿಕೆಗಳು/ಮರುಪಡೆಯುವಿಕೆಗಳ ಕುರಿತು ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗಿದೆ (ಮೇ 2024).

**ಶಿಫಾರಸು:**

**22. ವಿ.ಜೆ.ಎನ್. ಎಲ್ ಇತರ ಎಲ್.ಐ.ಎಸ್ ಯೋಜನೆಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಬಿಲ್‌ಗಳ ನೈಜತೆಯನ್ನು ಪರಿಶೀಲಿಸಬೇಕು. ಸುಂಕದ ದರಗಳ ಅನ್ವಯ ಮತ್ತು ಅದರ ಲೆಕ್ಕಾಚಾರದ ನೈಜತೆಯನ್ನು ಪರಿಶೀಲಿಸಲು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬಹುದು.**

**ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

### *6.10 ಗುತ್ತಿಗೆದಾರರುಗಳಿಗೆ ಮಾಡಿಕೊಡಲಾದ ಅನರ್ಹ ಲಾಭ*

***ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಕೇಂದ್ರೀಯ ಖರೀದಿ ಸಮಿತಿಯು ಯಾವುದೇ ಸಮಂಜಸವಾದ ಕಾರಣಗಳಿಲ್ಲದೆಯೇ ಮತ್ತು ಗುತ್ತಿಗೆದಾರರ ಮೇಲೆ ವಹಿಸಬಹುದಾಗಿದ್ದ ವಿಳಂಬಗಳನ್ನು ನಿರ್ಲಕ್ಷಿಸಿ ₹ 10.26 ಕೋಟಿ ಮೊತ್ತದಷ್ಟು ಸಮಾಪನ ನಷ್ಟಗಳ ಮರುಪಾವತಿಯನ್ನು ಅಂಗೀಕರಿಸಿತ್ತು, ಇದರಿಂದಾಗಿ ಗುತ್ತಿಗೆದಾರರುಗಳಿಗೆ ಅನಗತ್ಯ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿದ್ದಿತು.***

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು (ಕಂಪನಿ) 2011–12 ಮತ್ತು 2012–13ರ ಅವಧಿಯಲ್ಲಿ ವಿವಿಧ ವ್ಯವಸ್ಥಾ ಸುಧಾರಣಾ ಕಾಮಗಾರಿಗಳನ್ನು ಕೇಂದ್ರ/ರಾಜ್ಯ ಪ್ರಾಯೋಜಿತ ಯೋಜನೆಗಳ[118] ಅಡಿಯಲ್ಲಿ, ಹಾಗೂ ತನ್ನ ಕ್ಯಾಪೆಕ್ಸ್ ಆಯವ್ಯಯದ ಮೂಲಕ ನೀಡಿದ್ದಿತು. ಕಾಮಗಾರಿಗಳ ವ್ಯಾಪ್ತಿಯಲ್ಲಿ ಪ್ರಮುಖವಾಗಿ, ಓವರ್–ಹೆಡ್ ಮಾರ್ಗಗಳನ್ನು ಎಲ್‌ಟಿ ಎಬಿ ಕೇಬಲ್ಲುಗಳಿಂದ ಬದಲಾಯಿಸುವುದು, 11 ಕೆವಿ ಮಾರ್ಗಗಳ ಮರು–ಕಂಡಕ್ಟರಿಂಗ್ ಮಾಡುವಿಕೆ, ಹೆಚ್ಚುವರಿ ಡಿಸ್ಟ್ರಿಬ್ಯೂಶನ್ ಟ್ರಾನ್ಸ್‌ಫಾರ್ಮರುಗಳ ಕೇಂದ್ರಗಳ ಸ್ಥಾಪನೆ, ಈಗಿರುವ ಮಾಪಕಗಳ ಬದಲಿಗೆ ಎಲೆಕ್ಟ್ರೋಸ್ಟಾಟಿಕ್ ಮಾಪಕಗಳನ್ನು ಹಾಕುವುದು, ಉಪ–ಸ್ಟೇಷನ್ನುಗಳು ಮತ್ತು ಮಾರ್ಗಗಳ ನಿರ್ಮಾಣ, ಮತ್ತು ಕೃಷಿ ಫೀಡರುಗಳ ನಿರ್ಮಾಣವು ಸೇರಿದ್ದವು. ಕಾಮಗಾರಿಗಳ ವಿವರಗಳನ್ನು ***ಅನುಬಂಧ – 33***ರಲ್ಲಿ ನೀಡಲಾಗಿದೆ.

---

[117] ಅಕ್ಟೋಬರ್ 2023 ರವರೆಗಿನ ಅವಧಿಗೆ ಮೆಸ್ಕಾಂ ಲೆಕ್ಕಾಚಾರ ಮಾಡಿದಂತೆ.

[118] ಪುನರ್–ರಚಿತ ತ್ವರಿತಗೊಳಿಸಲ್ಪಟ್ಟಿರುವ ವಿದ್ಯುತ್ ಅಭಿವೃದ್ಧಿ ಸುಧಾರಣಾ ಕಾರ್ಯಕ್ರಮ (ಆರ್–ಎಪಿಡಿಪಿಆರ್‌ಪಿ) ಹಾಗೂ ನಿರಂತರ ಜ್ಯೋತಿ ಯೋಜನೆ (ಎನ್‌ಜೆವೈ).

ಕಂಪನಿಯ ಮೂರು ವಿಭಾಗಗಳ ವ್ಯಾಪ್ತಿಯಲ್ಲಿ (ಗುಲ್ಬರ್ಗಾ ನಗರ, ಗುಲ್ಬರ್ಗಾ ಮತ್ತು ಬೀದರ್) ಬರುವ ಮೇಲ್ಕಂಡ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಗುತ್ತಿಗೆಗಳನ್ನು ಮೆ. ಲಾರ್ಸೆನ್ ಅಂಡ್ ಟೂಬ್ರೋ (ಆರ್ ಎ ಪಿ ಡಿ ಆರ್ ಪಿ – ಮಾರ್ಚ್ 2012), ಮೆ. ರಾಮಲಿಂಗಂ ಕಂಸ್ಟ್ರಕ್ಷನ್ ಕಂಪನಿ (ಎನ್ ಜೆ ವೈ – ಜುಲೈ 2011/ಮಾರ್ಚ್ 2012) ಮತ್ತು ಮೆ. ಶರಾವತಿ ಕಂಡಕ್ಟರ್ಸ್ ಪ್ರೈ ಲಿಮಿಟೆಡ್, ಬೆಂಗಳೂರು (ಕ್ಯಾಪೆಕ್ಸ್ – ಮಾರ್ಚ್ 2016) ಇವುಗಳಿಗೆ ಒಟ್ಟು ₹ 172.38 ಕೋಟಿ ವೆಚ್ಚದಲ್ಲಿ ನೀಡಲಾಯಿತು, ಉದ್ದೇಶ ಪತ್ರಗಳನ್ನು ನೀಡಿದ ದಿನಾಂಕದಿಂದ ಅನುಕ್ರಮವಾಗಿ 11 ತಿಂಗಳುಗಳು, 6 ತಿಂಗಳುಗಳು ಮತ್ತು 9 ತಿಂಗಳುಗಳಲ್ಲಿ ಪೂರೈಸಬೇಕೆಂಬ ಕಾಲಮಿತಿಯನ್ನು ನಿಗದಿಪಡಿಸಲಾಗಿತ್ತು. ಆದಾಗ್ಯೂ, ಕಾಮಗಾರಿಗಳನ್ನು 2015–16 ಮತ್ತು 2018–19ರ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು, ವಿಳಂಬವು ಗುತ್ತಿಗೆಗಳಲ್ಲಿ ನಿಗದಿಪಡಿಸಿದ್ದ ದಿನಾಂಕಗಳಿಗಿಂತ 17 ತಿಂಗಳುಗಳಿಂದ 38 ತಿಂಗಳುಗಳವರೆಗೆ ಆಗಿದ್ದಿತು.

ಕಂಪನಿಯು, ಗುತ್ತಿಗೆಯ ಷರತ್ತುಗಳ ಅನುಸಾರ, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಉಂಟಾದ ವಿಳಂಬಕ್ಕಾಗಿ ಏಜೆನ್ಸಿಗಳ ಬಿಲ್ಲುಗಳಿಂದ ₹ 10.26 ಕೋಟಿ ಮೊತ್ತದಷ್ಟು ಸಮಾಪನ ನಷ್ಟಗಳನ್ನು ಮೂಲದಲ್ಲಿಯೇ ಕಡಿದುಕೊಂಡಿತು. ತದನಂತರ, ಏಜೆನ್ಸಿಗಳ ಕೋರಿಕೆಯ ಮೇರೆಗೆ, ಕಂಪನಿಯ ಕೇಂದ್ರೀಯ ಖರೀದಿ ಸಮಿತಿಯ (ಸಿಪಿಸಿ) ಅಂಗೀಕಾರದೊಂದಿಗೆ (2020–21) ವಿಳಂಬವನ್ನು ಮನ್ನಾ ಮಾಡುವ ಮೂಲಕ ಸಂಪೂರ್ಣ ಸಮಾಪನ ನಷ್ಟಗಳಿಗೆ ಸಂಬಂಧಿತ ಮೊತ್ತವನ್ನು ಮರುಪಾವತಿ ಮಾಡಲಾಯಿತು.

ಎನ್‌ಜೆವೈ ಮತ್ತು ಆರ್–ಎಪಿಡಿಆರ್‌ಪಿಅಡಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಉಂಟಾದ ವಿಳಂಬದ ಕುರಿತು ಅನುಕ್ರಮವಾಗಿ 31 ಮಾರ್ಚ್ 2015 ಮತ್ತು 31 ಮಾರ್ಚ್ 2016ರಂದು ಅಂತ್ಯಗೊಂಡ ಸಾಲಿಗಾಗಿ ಕರ್ನಾಟಕ ಸರ್ಕಾರದ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಯಲ್ಲಿ ಟೀಕೆಟಿಪ್ಪಣಿ ಮಾಡಲಾಗಿದ್ದಿತು. ಲೆಕ್ಕಪರಿಶೋಧನೆಯು ಕೇಂದ್ರ ಖರೀದಿ ಸಮಿತಿಯ ಕಾರ್ಯಕಲಾಪಗಳನ್ನು ಮತ್ತು ಯಾವ ಕಾರಣಗಳ ಮೇಲೆ ಏಜೆನ್ಸಿಗಳಿಗೆ ಸಮಾಪನ ನಷ್ಟಗಳನ್ನು ಮರುಪಾವತಿ ಮಾಡಲಾಯಿತು ಎನ್ನುವುದನ್ನು ಮತ್ತಷ್ಟು ಪರಿಶೀಲಿಸಿತ್ತು (2022–23).

ಲೆಕ್ಕಪರಿಶೋಧನೆಯು ವಿಳಂಬವನ್ನು ಮನ್ನಾ ಮಾಡಲು ಮತ್ತು ಸಮಾಪನ ನಷ್ಟವನ್ನು ಮರುಪಾವತಿ ಮಾಡುವ ನಿರ್ಧಾರವನ್ನು ಯಾವ ಕಾರಣಗಳ ಮೇಲೆ ಕೈಗೊಳ್ಳಲಾಗಿದ್ದಿತ್ತೋ, ಅಂತಹ ಕಾರಣಗಳು ಸಮರ್ಥನೀಯವಾಗಿರಲಿಲ್ಲ ಮತ್ತು ದಾಖಲೆಯಲ್ಲಿ ಲಭ್ಯವಿರುವ ಸತ್ಯಾಂಶಗಳಿಗೆ ವಿರುದ್ಧವಾಗಿತ್ತು ಎಂಬುದನ್ನು ಗಮನಿಸಿತು. ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಕೇಂದ್ರ ಖರೀದಿ ಸಮಿತಿಯು ಕೊಟ್ಟಿರುವ ಪ್ರತಿಯೊಂದೂ ಕಾರಣಗಳ ಮೇಲಿನ ವಿವರವಾದ ಲೆಕ್ಕಪರಿಶೋಧನೆಯ ಟೀಕೆಟಿಪ್ಪಣಿಗಳನ್ನು ***ಅನುಬಂಧ – 34***ರಲ್ಲಿ ಕೊಡಲಾಗಿದೆ. ಏಜೆನ್ಸಿಗಳಿಗೆ ಸಂಬಂಧಿಸಿರುವ ವಿಳಂಬಗಳು, ಸಿಪಿಸಿಯಿಂದ ಗಮನಿಸಲಾಗಿದ್ದರೂ ಸಹ, ಏಜೆನ್ಸಿಗಳು ತಪ್ಪಿತಸ್ತಗೊಂಡಿದ್ದವು ಎಂಬುದರ ಬಗ್ಗೆ ಸ್ಪಷ್ಟ ಪುರಾವೆಗಳನ್ನು ಹೊಂದಿದ್ದರೂ ಸಹ. ಸಮಾಪನ ನಷ್ಟ ಮರುಪಾವತಿ ಅಂಗೀಕರಿಸುವಾಗ ಕಡೆಗಣಿಸಲಾಯಿತು. ಜೊತೆಗೆ, ವಿಳಂಬಗಳನ್ನು ಮನ್ನಾ ಮಾಡುವಾಗ ಕೇಂದ್ರ ಖರೀದಿ ಸಮಿತಿಯು, ಕಾಮಗಾರಿಗಳ ಪೂರ್ಣಗೊಳಿಸುವಿಕೆಯಲ್ಲಿನ ವಿಳಂಬಕ್ಕೆ ಕಾರಣವಾಗದ ಅಂಶಗಳ ಮೇಲೆ ಅವಲಂಬಿತ ಆಗಿತ್ತು.

- ಉದಾಹರಣೆಗೆ, ಆರ್‌ಎಪಿಡಿಆರ್‌ಪಿ ಭಾಗ ಬಿ ಕಾಮಗಾರಿಗಳ[119] ಕಾರ್ಯಗತಕ್ಕೆ ಸಂಬಂಧಿಸಿದಂತೆ, 'ಹೆಚ್ಚುವರಿ ಕಾಮಗಾರಿಗಳನ್ನು ವಹಿಸುವಿಕೆ' ಮತ್ತು 'ವ್ಯಾಪ್ತಿಯಲ್ಲಿ ಇಳಿಮುಖ' ವಿಳಂಬಗಳ ಕಾರಣಗಳೆಂದು ಪರಿಗಣಿಸಲಾಯಿತು, ವಾಸ್ತವವಾಗಿ, ಅವುಗಳು ಮೂಲ ಕಾರ್ಯ ವ್ಯಾಪ್ತಿಯ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲ. ಜೊತೆಗೆ, ಮನ್ನಾ

[119] ಆರ್‌ಎಪಿಡಿಆರ್‌ಪಿ ಭಾಗ ಬಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಿಕೆ: (i)ಗುಲಬರ್ಗ ನಗರ ವಿಭಾಗ ಮತ್ತು ಗುಲಬರ್ಗ – I (ಆಳಂದ ಪಟ್ಟಣ) ಮತ್ತು (ii) ಬೀದರ್ ವಿಭಾಗ (ಬೀದರ್ ಮತ್ತು ಭಾಲ್ಕಿ ಪಟ್ಟಣಗಳು) **ಏಜನ್ಸಿ:** ಮೆ. ಲಾರ್ಸೆನ್ ಅಂಡ್ ಟೂಬ್ರೊ ಲಿಮಿಟೆಡ್, ಬೆಂಗಳೂರು, **ಮರುಪಾವತಿ:** (i)₹ 2.68 , ಕೋಟಿ (ii) ₹ 1.75 ಕೋಟಿ.

ಮಾಡುವುದಕ್ಕೆ ಪ್ರಮುಖ ಅಂಶವೆಂದು ಪರಿಗಣಿಸಲಾದ ಮಾಪಕಗಳ ಸರಬರಾಜಿನಲ್ಲಿ ಆಗಿರುವ ವಿಳಂಬವು ಸದರಿ ಗುತ್ತಿಗೆಯ ನಾಲ್ಕು ಅಂಶಗಳಲ್ಲಿ ಕೇವಲ ಒಂದರ ಮೇಲೆ ಮಾತ್ರ ಪ್ರಭಾವ ಉಂಟುಮಾಡಿತ್ತು, ಉಳಿದ ಕಾಮಗಾರಿಗಳ ಪೂರ್ಣಗೊಳಿಸುವಿಕೆಯಲ್ಲಿನ ವಿಳಂಬವನ್ನು ಸಿಪಿಸಿಯು ಚರ್ಚೆ ಮಾಡಲಿಲ್ಲ.

- ಅಂತೆಯೇ, ಎನ್ ಜೆ ವೈ ಕಾಮಗಾರಿಗಳಿಗೆ[120] ಸಂಬಂಧಿಸಿದಂತೆ, ಬೀದರ್, ವಿಭಾಗ I ಮತ್ತು IIರಲ್ಲಿ, 24 ಫೀಡರುಗಳ ಪೈಕಿ 16ರ ಪೂರ್ಣಗೊಳಿಸುವಿಕೆಯು, ರೈಲ್ವೇ ಕ್ರಾಸಿಂಗುಗಳ ಸಮಸ್ಯೆ ಹೊಂದಿಲ್ಲದಿದ್ದರೂ ಸಹ, ಗುರಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಎರಡು ತಿಂಗಳುಗಳಿಂದ ಮೂರು ವರ್ಷಗಳವರೆಗಿನ ಶ್ರೇಣಿಯಲ್ಲಿ ವಿಳಂಬಗೊಂಡಿವೆ ಎಂಬುದನ್ನು ಕೇಂದ್ರ ಖರೀದಿ ಸಮಿತಿಯು ಗಮನಿಸಿದ್ದಿತು. ಏಜೆನ್ಸಿಗಳಿಗೆ ಸಂಬಂಧಿಸಿದ ವಿಳಂಬಗಳನ್ನು ಗುರುತಿಸಲಾಗಿದ್ದರೂ ಸಹ, ಯಾವುದೇ ಮಾನ್ಯ ದಾಖಲಾಗಿರುವ ಕಾರಣಗಳನ್ನು ನೀಡದಿದ್ದರೂ ಕೂಡ ವಿಧಿಸಿದ್ದ ಸಮಾಪನ ನಷ್ಟಕ್ಕೆ ಸಂಬಂಧಿತ ಮೊತ್ತಗಳನ್ನು ಮರುಪಾವತಿ ಮಾಡಲಾಗಿದ್ದಿತು.

  - ಜಿಐಎಸ್ ಉಪ–ಸ್ಟೇಷನ್ನುಗಳ[121] ಸ್ಥಾಪನೆಯ ವಿಚಾರದಲ್ಲಿ, ಕೇಂದ್ರ ಖರೀದಿ ಸಮಿತಿಯು ದಾಖಲೆಯಲ್ಲಿ ಲಭ್ಯವಿರುವ ಸತ್ಯಾಂಶಗಳನ್ನು ಕಡೆಗಣಿಸಿ ಎಲ್ ಡಿ ಮರುಪಾವತಿಯನ್ನು ಅಂಗೀಕರಿಸಿತು. ಏಜೆನ್ಸಿ ಕಡೆಯಿಂದ ಉಂಟಾದ ಹಲವಾರು ಲೋಪಗಳ ಕುರಿತು ಕಾರ್ಯನಿರ್ವಾಹಕ ಅಭಿಯಂತರು (ವಿದ್ಯುತ್), ಸಿ ಅಂಡ್ ಎಂ ವಿಭಾಗ, ಗುಲ್ಬರ್ಗಾ ಅವರ ವರದಿಯನ್ನು ವಿಳಂಬವನ್ನು ಮನ್ನಾ ಮಾಡುವ ಸಮಯದಲ್ಲಿ ಕಡೆಗಣಿಸಲಾಯಿತು. ಲೋಪಗಳಲ್ಲಿ ಅಸಮರ್ಪಕ ಮಾನವಶಕ್ತಿ ನಿಯೋಜನೆ, ವಿಳಂಬವಾಗಿ ನಕಾಶೆಗಳ ಸಲ್ಲಿಕೆ, ಜಂಟಿ–ಪರಿವೀಕ್ಷಣೆಯಲ್ಲಿ ವಿಳಂಬ, ಶಾಸನಬದ್ಧ ಶುಲ್ಕಗಳನ್ನು ಪಾವತಿಸದಿರುವಿಕೆ, ಮಾರ್ಗದ ಹಕ್ಕು ಸಮಸ್ಯೆ ಇರದ ಕಡೆಗಳಲ್ಲೂ ಕಾಮಗಾರಿ ಪ್ರಗತಿಯ ಕೊರತೆ ಇತ್ಯಾದಿಗಳು ಸೇರಿರುತ್ತವೆ. ಕೇಂದ್ರ ಖರೀದಿ ಸಮಿತಿಯು, ಈ ಲೋಪದೋಷಗಳನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ ಎಂಬುದು ಸುಸ್ಪಷ್ಟವಾಗಿರುತ್ತದೆ.

  - ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆಯ ಎರಡೂ ಭಾಗಗಳನ್ನು ಸಮಾಪನ ನಷ್ಟವು ಒಳಗೊಂಡಿದ್ದಿತ್ತು. ಸರಬರಾಜಿನಲ್ಲಿ ವಿಳಂಬದ ಪ್ರಯುಕ್ತ ಕಡಿತಗೊಳಿಸಲಾಗಿದ್ದ ₹ 2.90 ಕೋಟಿ ಮೊತ್ತವನ್ನು[122] ಏಜೆನ್ಸಿಗಳಿಗೆ ಮರುಪಾವತಿ ಮಾಡಲಾಯಿತು. ಸಾಮಗ್ರಿಗಳ ಸರಬರಾಜಿನಲ್ಲಿ ಉಂಟಾದ ವಿಳಂಬದ ಪುರಾವೆಗಳು ದಾಖಲೆಯಲ್ಲಿ ಇರಲಿಲ್ಲ ಅಥವಾ ಕೇಂದ್ರ ಖರೀದಿ ಸಮಿತಿಯಿಂದ ಕಾರಣಗಳ ವಿಶ್ಲೇಷಣೆಯೂ ನಡೆದಿರಲಿಲ್ಲ.

  - ವಿಳಂಬ ಮನ್ನಾ ಮಾಡುವಿಕೆ ಮತ್ತು ಸಮಾಪನ ನಷ್ಟ ಮರುಪಾವತಿಯನ್ನು ಮೆ. ಲಾರ್ಸನ್ ಅಂಡ್ ಟೂಬ್ರೋ ನಿಯಮಿತ ಮತ್ತು ಮೆ. ರಾಮಲಿಂಗಂ ಕಂಸ್ಟ್ರಕ್ಷನ್ ಕಂಪನಿ ಪ್ರೈ ಲಿಮಿಟೆಡ್ ಅವರಿಂದ ಕಾಮಗಾರಿಗಳ ಅನುಷ್ಠಾನವನ್ನು ಪೂರೈಸಿದ ನಾಲ್ಕರಿಂದ ಐದು ವರ್ಷಗಳ ನಂತರ (ಫೆಬ್ರವರಿ 2015/ಡಿಸೆಂಬರ್ 2015/ಮಾರ್ಚ್ 2016) ನಿರ್ಧರಿಸಲಾಯಿತು. (ಆಗಸ್ಟ್ 2020/ನವೆಂಬರ್ 2020) ಅಷ್ಟೊಂದು ಸಮಯ ಕಳೆದ ನಂತರ ಈ ವಿಷಯವನ್ನು

---

[120] ಎನ್‌ಜೆವೈ ಕಾಮಗಾರಿಗಳು: (i) ಭಾಲ್ಕಿ ತಾಲ್ಲೂಕಿನಲ್ಲಿ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ವಿಭಾಗದಲ್ಲಿ, ಗುವಿಸಕಂ, ಬೀದರ್ (ii) ಗುಲ್ಬರ್ಗ ತಾಲ್ಲುಕು ಕಾರ್ಯಾಚರಣೆಗಳು ಮತ್ತು ನಿರ್ವಹಣಾ ವಿಭಾಗ–1 ಗುವಿಸಕಂ (iii) ಚಿತ್ತಾಪುರ ತಾಲ್ಲೂಕು, ಕಾರ್ಯಾಚರಣೆಗಳು ಮತ್ತು ನಿರ್ವಹಣಾ ವಿಭಾಗ–2 ಗುವಿಸಕಂ. **ಏಜನ್ಸಿ**: ಮೆ. ರಾಮಲಿಂಗಂ ಕನ್ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, **ಮರುಪಾವತಿ**: (i) ₹ 0.45 ಕೋಟಿ, (ii) ₹ 1.23ಕೋಟಿ (iii) ₹ 1.28 ಕೋಟಿ.

[121] ಗುಂಪು (ಲಾಟ್) – 1: 33/11ಕಿವ್ಯಾ ಜಿಐಎಸ್ ಉಪ–ಸ್ಟೇಷನ್ನುಗಳ ಸ್ಥಾಪನೆ 3 ಸಂಖ್ಯೆಗಳು: i. ಶಾಂತಿನಗರ, ii. ಸೇವಾ ಸ್ಟೇಷನ್ನು –44 ಮತ್ತು iii. ಕಗ್ಗಮಂ ಆಸ್ಪತ್ರೆ (ಉಚ್ಛ ನ್ಯಾಯಾಲಯ), ಈ ಸ್ಥಳಗಳಲ್ಲಿ, ಗುಂಪು (ಲಾಟ್) 2: 33/11 ಕಿವ್ಯಾ ಜಿಐಎಸ್ ಉಪ–ಸ್ಟೇಷನ್ನುಗಳ ಸ್ಥಾಪನೆ 2 ಸಂಖ್ಯೆಗಳು: i. ಕೆಸಿಟಿ ಗೇಟು, ii. ಸರ್ಕಾರಿ ಜನರಲ್ ಆಸ್ಪತ್ರೆ, **ಏಜನ್ಸಿ**: ಮೆ. ಶರಾವತಿ ಕಂಡಕ್ಟರ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು **ಮರುಪಾವತಿ**: ₹ 2.88 ಕೋಟಿ.

[122] ***ಅನುಬಂಧ 34ನ್ನು ಗಮನಿಸುವುದು***: ಕ್ರಮ ಸಂಖ್ಯೆ 2 (₹ 1.27 ಕೋಟಿ), ಕ್ರಮ ಸಂಖ್ಯೆ 3 (₹ 0.34 ಕೋಟಿ), ಕ್ರಮ ಸಂಖ್ಯೆ 6 (₹ 1.29 ಕೋಟಿ).

ಕೈಗೆತ್ತಿಕೊಂಡ ಕೇಂದ್ರ ಖರೀದಿ ಸಮಿತಿಯ ನಿರ್ಧಾರದ ಹಿಂದಿನ ತರ್ಕದಲ್ಲಿ ಸಮರ್ಥನೆಯ ಕೊರತೆಯಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕಂಪನಿಯ ನಿರ್ದೇಶಕರುಗಳ ಮಂಡಳಿಯು, ಕೇಂದ್ರ ಖರೀದಿ ಸಮಿತಿಯ ನಿರ್ಧಾರಗಳನ್ನು ಗಮನಿಸುತ್ತಾ, ಕಂಪನಿಯಿಂದ ಸಾಮಗ್ರಿಗಳನ್ನು ಒದಗಿಸುವಲ್ಲಿ ಅಸಾಮಾನ್ಯ ವಿಳಂಬ ಉಂಟಾಗಿದ್ದಿತು, ಇದರಿಂದ ಕಾಮಕಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವಾಯಿತು ಎಂಬುದಾಗಿ ಗಮನಿಸಿರುವುದು (ನವೆಂಬರ್ 2020). ವಿಳಂಬವನ್ನು ಮನ್ನಾ ಮಾಡುವುದಕ್ಕೆ ಅಂಗೀಕಾರ ನೀಡುವುದಕ್ಕೆ ಮುಂಚಿತವಾಗಿ ವಿವೇಚನೆಗಳಿಂದ ಕೂಡಿದ ತಪಾಸಣೆಗಳನ್ನು ಅನ್ವಯಿಸಬೇಕು ಮತ್ತು ಕಾಲಾವಧಿ ವಿಸ್ತರಣೆ ಮತ್ತು ಸಮಾಪನ ನಷ್ಟದ ಮರುಪಾವತಿ ಪ್ರಕರಣಗಳನ್ನು ನಿರ್ವಹಿಸುವಾಗ ಸೂಕ್ತ ನಿಯಮಗಳು[123] ಮತ್ತು ಕಾರ್ಯವಿಧಾನಗಳನ್ನು ನೀಡಬೇಕೆಂಬುದಾಗಿ ವ್ಯವಸ್ಥಾಪಕ ನಿರ್ದೇಶಕರಿಗೆ ನಿರ್ದೇಶನಗಳನ್ನು ನೀಡಲಾಯಿತು. ನಿರ್ದೇಶಕರುಗಳ ಮಂಡಳಿಯು, ಕೇಂದ್ರ ಖರೀದಿ ಸಮಿತಿಯ ನಿರ್ಧಾರದ ಸತ್ಯಾಸತ್ಯತೆಯನ್ನು ಪರಿಗಣಿಸದೆಯೇ ಪ್ರಮುಖವಾಗಿ ಕಂಪನಿಯಿಂದ ಸಾಮಗ್ರಿಗಳ ಸರಬರಾಜಿನಲ್ಲಿ ಆಗಿರುವ ವಿಳಂಬವನ್ನು ಗಮನಿಸಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿಳಂಬವನ್ನು ಮನ್ನಾ ಮಾಡಲು ವಿವೇಚನೆಯಿಂದ ಕೂಡಿದ ತಪಾಸಣೆಗಳನ್ನು ನಡೆಸುವ ಅವಶ್ಯಕತೆಯನ್ನು ಒತ್ತಿಹೇಳಿದರೂ ಸಹ, ಮಂಡಳಿಯು ಏಜೆನ್ಸಿಗಳಿಗೆ ಸಂಬಂಧಿಸಿದ ವಿಳಂಬದ ಕುರಿತು ಮತ್ತು ಕೇಂದ್ರ ಖರೀದಿ ಸಮಿತಿಯಿಂದ ಸಮಾಪನ ನಷ್ಟ ಮರುಪಾವತಿ ಅಂಗೀಕರಿಸುವಾಗ ಅಂತಹ ಜಾಣ್ಮೆಯ ತಪಾಸಣೆಗಳನ್ನು ವಿವೇಚನೆಯಿಂದ ನಡೆಸಲಾಯಿತೆ ಎಂಬುದನ್ನು ಚರ್ಚಿಸಿರಲಿಲ್ಲ.

ಈ ರೀತಿಯಾಗಿ, ಗುತ್ತಿಗೆದಾರರ ಬಿಲ್ಲುಗಳಿಂದ ಸಮಾಪನ ನಷ್ಟಗಳ ಕಡೆಗೆ ಪ್ರಾರಂಭದಲ್ಲಿ ಹಿಡಿದಿಟ್ಟುಕೊಳ್ಳಲಾಗಿದ್ದ ಸಂಪೂರ್ಣ ಮೊತ್ತವನ್ನು, ಗುತ್ತಿಗೆದಾರರಿಗೆ ಸಂಬಂಧಿಸಬಹುದಾದ ವಿಳಂಬವನ್ನು ಕಡೆಗಣಿಸಿ, ಮರುಪಾವತಿ ಮಾಡಿರುವುದು ವಿವೇಚನೆಯಿಂದ ಕೂಡಿರಲಿಲ್ಲ ಮತ್ತು ಅದು ಗುತ್ತಿಗೆಯ ಷರತ್ತುಗಳ ಉಲ್ಲಂಘನೆ ಆಗಿದ್ದಿತು. ಕಂಪನಿಯು ನೀಡಿದ ಮೂಲ ಕಾಮಗಾರಿಗೆ ಸಂಬಂಧಿಸಿದ, ಒಪ್ಪಂದದ ಷರತ್ತುಗಳ ಅನುಸಾರ ಲಿಕ್ವಿಡೇಟೆಡ್ ಡ್ಯಾಮೇಜುಗಳನ್ನು ಹಿಡಿದುಕೊಳ್ಳಬಹುದಾದ ಕುರಿತು, ಗುತ್ತಿಗೆದಾರರಿಗೆ ಸಂಬಂಧಿಸಿರಬಹುದಾದ ವಿಳಂಬಗಳನ್ನು ಸೂಕ್ತವಾಗಿ ಪರಿಗಣಿಸಿ, ವಿಶ್ಲೇಷಣೆ ಮಾಡಬೇಕಿದ್ದಿತು.

ಸರ್ಕಾರದ ಉತ್ತರವು (ಮಾರ್ಚ್ 2024) ಕೇಂದ್ರ ಖರೀದಿ ಸಮಿತಿಯ ಕಾರ್ಯಕಲಾಪಗಳಲ್ಲಿ ಚರ್ಚಿಸಲಾದ ವಿಷಯಗಳನ್ನು ಪುನರುಚ್ಚರಿಸಿತು, ಇವುಗಳನ್ನು ಲೆಕ್ಕಪರಿಶೋಧನೆಯು ಈಗಾಗಲೇ ಪರಿಗಣಿಸಿತ್ತು. ಉತ್ತರವು ಲೆಕ್ಕಪರಿಶೋಧನೆಯು ಗಮನಿಸಿರುವ ನಿರ್ದಿಷ್ಟ ಅಂಶಗಳ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ.

**ಶಿಫಾರಸು:**

**23. ವ್ಯವಸ್ಥಾಪನೆಯು ಸಮಾಪನ ನಷ್ಟಗಳನ್ನು ಮರುಪಾವತಿ ಮಾಡುವಾಗ ಗುತ್ತಿಗೆಯ ಷರತ್ತುಗಳನ್ನು ಪರಿಗಣಿಸಬೇಕು ಎಂಬುದಾಗಿ. ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ.**

[123] ಈ ನಿಟ್ಟಿನಲ್ಲಿ ಸುತ್ತೋಲೆಯನ್ನು ಏಪ್ರಿಲ್ 2021ರಲ್ಲಿ ನೀಡಲಾಗಿದ್ದಿತು.

**ಕೆಪಿಸಿ ಅನಿಲ ಇಂಧನ ನಿಗಮ ನಿಯಮಿತ**

### *6.11 ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚ*

**ಸ್ಟಾರ್ಟ್-ಅಪ್ ವಿದ್ಯುತ್ ಆವಶ್ಯಕತೆಯನ್ನು ಮರು-ನಿರ್ಧಾರಣೆ ಮಾಡುವಲ್ಲಿನ ವಿಫಲತೆಯು ₹ 10.17 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿದ್ದಿತು.**

ಕೆಪಿಸಿ ಅನಿಲ ಇಂಧನ ನಿಗಮ ನಿಯಮಿತ (ಕಂಪನಿ), ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) ಒಂದು ಸಂಪೂರ್ಣ-ಸ್ವಾಮ್ಯದ ಅಂಗಸಂಸ್ಥೆಯಾಗಿದ್ದು, ಯಲಹಂಕದಲ್ಲಿ 1×370 ಮೆವಾ ಯಲಹಂಕ ಸಂಯೋಜಿತ ಆವರ್ತನ ವಿದ್ಯುತ್ ಸ್ಥಾವರವನ್ನು (ವೈಸಿಸಿಪಿಪಿ) ಸ್ಥಾಪಿಸುವ ಸಲುವಾಗಿ ಕಾಮಗಾರಿಯನ್ನು ಮೆ. ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್)ಗೆ ಅಂದಾಜು ಯೋಜನಾ ವೆಚ್ಚವಾದ ₹ 1,571.18 ಕೋಟಿಗೆ ವಹಿಸಿತು (ನವೆಂಬರ್ 2015). ಗುತ್ತಿಗೆಯಲ್ಲಿ ಇಂಜಿನಿಯರಿಂಗ್, ಖರೀದಿ ಮತ್ತು ನಿರ್ಮಾಣಗಳನ್ನು (ಇಪಿಸಿ) ಒಳಗೊಂಡಿದ್ದು ಇದನ್ನು 30 ತಿಂಗಳ ನಿಗಧಿತ ಅವಧಿಯೊಂದಿಗೆ ಅಂದರೆ ಮೇ 2018ರ ಹೊತ್ತಿಗೆ ಪೂರ್ಣಗೊಳಿಸುವ ಒಪ್ಪಂದ ಮಾಡಿಕೊಳ್ಳಲಾಗಿತ್ತು.

ಕಂಪನಿಯು ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತವನ್ನು (ಬೆಸ್ಕಾಂ) ವೈಸಿಸಿಪಿಪಿಯ ಸಿಂಕ್ರೋನೈಜೇಶನ್ ಮುಂಚೆ ಪ್ರಾರಂಭಿಕ ಪ್ರಾಯೋಗಿಕ ಕಾರ್ಯಾಚರಣೆಗಾಗಿ ಅವಶ್ಯಕವಿರುವ 20,000 ಕೆವಿಎ ಸ್ಟಾರ್ಟ್-ಅಪ್ ವಿದ್ಯುತ್ತನ್ನು[124] 220 ಕೆವಿ ವೋಲ್ಟೇಜಿನಲ್ಲಿ ಒದಗಿಸುವಂತೆ ಕೋರಿಕೆ ಸಲ್ಲಿಸಿತು (ಮಾರ್ಚ್ 2018). ಘಟಕವನ್ನು ಮಾರ್ಚ್/ಏಪ್ರಿಲ್ 2018ರಲ್ಲಿ ಚಾಲನೆ ಮಾಡುವ ಕಾಲನಿಗದಿಯಾಗಿತ್ತು ಬೆಸ್ಕಾಂ ಸ್ಟಾರ್ಟ್-ಅಪ್ ವಿದ್ಯುತ್ ಸರಬರಾಜನ್ನು ಎಕ್ಸ್ಟ್ರಾ ಹೈ ಟೆನ್ಷನ್ (ಇಎಚ್‌ಟಿ) ಆಧಾರದಲ್ಲಿ ಪಕ್ಕದ ಪುಟ್ಟೇನಹಳ್ಳಿ ಉಪ-ಸ್ಟೇಷನ್ನಿನಿಂದ ಸ್ಥಾವರದ ಆವರಣಕ್ಕೆ 220 ಕೆವಿ ಮಾರ್ಗದ ಮೂಲಕ ಹೊರ ಹರಿಸಲು ಅಂಗೀಕಾರ (ಆಗಸ್ಟ್ 2018) ನೀಡಿತು. ಕಂಪನಿಯು ಪ್ರಾರಂಭಿಕ ಭದ್ರತಾ ಠೇವಣಿಯ ಮೊತ್ತ ₹ 4.42 ಕೋಟಿಯನ್ನು ಪಾವತಿಸಿತು (ಅಕ್ಟೋಬರ್ 2018) ಮತ್ತು ಬೆಸ್ಕಾಂ ಜೊತೆಗೆ ಗುತ್ತಿಗೆಯ ಬೇಡಿಕೆಯಾದ 20,000 ಕೆವಿಎಗಾಗಿ ಒಪ್ಪಂದ (ಡಿಸೆಂಬರ್ 2018) ಮಾಡಿಕೊಂಡಿತು. ಒಪ್ಪಂದವು ಪ್ರಾರಂಭದ ಹಂತದಲ್ಲಿ ಸರಬರಾಜು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿದ್ದಿತು ಮತ್ತು ಅದರನಂತರ, ವರ್ಷದಿಂದ ವರ್ಷಕ್ಕೆ ಸ್ವಯಂಚಾಲಿತವಾಗಿ, ಯಾರಾದರೂ ಸ್ಪಷ್ಟ, ಲಿಖಿತ ರೂಪದಲ್ಲಿ ಅದನ್ನು ರದ್ದುಗೊಳಿಸುವ ತನಕ, ನವೀಕರಣ ಆಗುವಂತಿತ್ತು. ಪ್ರಚಲಿತ ವಿದ್ಯುತ್ ದರಪಟ್ಟಿಯ ಅನುಸಾರ, ಡಿಮ್ಯಾಂಡ್ ಶುಲ್ಕಗಳನ್ನು ತಿಂಗಳು ಒಂದರಲ್ಲಿ ದಾಖಲಿಸಲಾದ ವಾಸ್ತವಿಕ ಗರಿಷ್ಠ ಡಿಮ್ಯಾಂಡ್ ಮೇಲೆ ಅಥವಾ ಗುತ್ತಿಗೆ ಒಪ್ಪಂದದ ಶೇಕಡಾ 85ರಂತೆ, ಯಾವುದು ಹೆಚ್ಚೋ ಅದು, ಜೊತೆಗೆ ಕಾಲಕಾಲಕ್ಕೆ ಅನ್ವಯವಾಗುವ (ಎಚ್‌ಟಿ 2(ಬಿ) ಟ್ಯಾರಿಫ್) ದರಗಳಲ್ಲಿ ವಾಸ್ತವಿಕ ವಿದ್ಯುತ್ ಬಳಕೆಗೆ ಚಾರ್ಜಸ್ ಅನ್ನು ವಿಧಿಸಲಾಗುವುದು.

ಮೇ 2018ರ ಹೊತ್ತಿಗೆ ಮುಕ್ತಾಯಗೊಳ್ಳಬೇಕಾಗಿದ್ದ ಯೋಜನೆಯು, ಅನಿಲ ಲಭ್ಯತೆ ಇತ್ಯಾದಿಯಂತಹ ವಿವಿಧ ಕಾರಣಗಳಿಂದಾಗಿ ಸೆಪ್ಟೆಂಬರ್ 2023ರ ತನಕವೂ ಕಾರ್ಯಾಚರಣೆ ಪ್ರಾರಂಭಗೊಂಡಿರಲಿಲ್ಲ. ಯೋಜನೆ ಪೂರ್ಣಗೊಳಿಸುವಿಕೆಯಲ್ಲಿ ಅನಗತ್ಯ ವಿಳಂಬವನ್ನು 2021ರ ವರ್ಷದ ಅನುಪಾಲನಾ ಲೆಕ್ಕಪರಿಶೋಧನಾ ವರದಿಯ ***ಕಂಡಿಕೆ 2.2.7.1***ರಲ್ಲಿ ವರದಿ ಮಾಡಲಾಗಿದ್ದಿತು.

ಡಿಸೆಂಬರ್ 2018ರಿಂದ ಮಾರ್ಚ್ 2023ರ ಅವಧಿಯಲ್ಲಿ, ವೈಸಿಸಿಪಿಪಿ ಸ್ಥಾವರವು ₹ 36.84 ಕೋಟಿ ಖರ್ಚನ್ನು ವಿದ್ಯುಚ್ಛಕ್ತಿ ಶುಲ್ಕಗಳ ಕಡೆಗೆ ಆಕ್ಸಿಲಿಯರಿಗಳನ್ನು ಓಡಿಸಲು ಸ್ಟಾರ್ಟ್-ಅಪ್ ವಿದ್ಯುತ್ ಸರಬರಾಜಿನ ಅಡಿಯಲ್ಲಿ, ವಾಸ್ತವವಾಗಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸದೆ, ಭರಿಸಿತು. ಮೇಲ್ಕಂಡ ಅವಧಿಯಲ್ಲಿ ದಾಖಲಿಸಲಾದ ಗರಿಷ್ಠ ಬೇಡಿಕೆಯು 720ರಿಂದ 8,880 ಕೆವಿಎ ಶ್ರೇಣಿಯಲ್ಲಿ (ಗುತ್ತಿಗೆ ಬೇಡಿಕೆಯ ಶೇಕಡಾ 3.6ರಿಂದ ಶೇಕಡಾ 44.4ವರೆಗೆ) ಇತ್ತು. ಆದಾಗ್ಯೂ, ಪ್ರಚಲಿತ ವಿದ್ಯುತ್

[124] ಒಂದು ಹೊಸ ವಿದ್ಯುತ್ ಉತ್ಪಾದನಾ ಸ್ಟೇಷನ್ನಿನ ಕಾರ್ಯಚಟುವಟಿಕೆಗಳನ್ನು ಕಾರ್ಯೋದ್ಯುಕ್ತಗೊಳಿಸುವ ಸಲುವಾಗಿ ಸಂಬಂಧಿತ (ಆಕ್ಸಲಿಯರಿ) ಉಪಕರಣದ ಚಾಲನೆಗಾಗಿ ಅಗತ್ಯವಿದ್ದ ವಿದ್ಯುತ್.

ದರಪಟ್ಟಿ ಅನುಸಾರ, ಡಿಮ್ಯಾಂಡ್ ಶುಲ್ಕಗಳನ್ನು ವಾಸ್ತವಿಕ ದಾಖಲಾದ ಡಿಮ್ಯಾಂಡ್ ಅಥವಾ ಗುತ್ತಿಗೆ ಒಪ್ಪಂದದ ಡಿಮ್ಯಾಂಡ್‌ನ ಶೇಕಡಾ 85ರಂತೆ, ಯಾವುದು ಹೆಚ್ಚೋ ಅದು, ವಿದ್ಯುತ್ ದರಪಟ್ಟಿ ಒಳಗೆ ನಿರ್ದಿಷ್ಟಪಡಿಸಿರುವ ದರಗಳಲ್ಲಿ, ಪಾವತಿಸಬೇಕಾಗಿತ್ತು ಮತ್ತು ಬಿಲ್ಲನ್ನು ಗುತ್ತಿಗೆ ಒಪ್ಪಂದದ ಡಿಮ್ಯಾಂಡ್‌ನ ಶೇಕಡಾ 85ರಂತೆ ಅಂದರೆ 17,000 ಕೆವಿಎಗೆ ಮಾಡಲಾಯಿತು.

ಹಂಚಿಕೆ ಲೈಸೆನ್ಸುಗಳ ವಿದ್ಯುಚ್ಛಕ್ತಿ ಸರಬರಾಜಿನ ಷರತ್ತುಗಳು (ನಿಯಮ 34ರ ಉಪ–ನಿಯಮ 2) ಹೊಸ ಒಪ್ಪಂದವನ್ನು ಕಾರ್ಯಗತ ಮಾಡುವ ಮೂಲಕ ಒಪ್ಪಂದದ ಅವಧಿಯಲ್ಲಿ ಗುತ್ತಿಗೆ ಡಿಮ್ಯಾಂಡ್‌ನಲ್ಲಿ ಇಳಿಮುಖ/ವ್ಯತ್ಯಾಸ ಮಾಡಿಕೊಳ್ಳುವ ಅವಕಾಶವಿದೆ. ಇಳಿಮುಖವು ಹೊಸ ಒಪ್ಪಂದದ ಜೊತೆಗೆ ಗುತ್ತಿಗೆ ಒಪ್ಪಂದದ ಡಿಮ್ಯಾಂಡ್/ಮಂಜೂರಾಗಿರುವ ಹೊರೆಯನ್ನು ಇಳಿಸುವಂತೆ ಅರ್ಜಿಯನ್ನು ನೋಂದಾಯಿಸಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯು ಮುಕ್ತಾಯವಾದ ನಂತರ ಮಾಪಕವನ್ನು ಓದುವ ದಿನಾಂಕದಿಂದ ಜಾರಿಗೆ ಬರುತ್ತದೆ ಕಡಿಮೆ ವಿದ್ಯುತ್ ಬಳಕೆಯ ನಡುವೆಯೂ, ಕಂಪನಿಯು ತನ್ನ ಗುತ್ತಿಗೆ ಬೇಡಿಕೆಯನ್ನು ಇಳಿಸಲು ಈ ಅವಕಾಶವನ್ನು ಬಳಸಲಿಲ್ಲ. ಗುತ್ತಿಗೆ ಒಪ್ಪಂದದ ಡಿಮ್ಯಾಂಡ್‌ನ್ನು ಇಳಿಸದ ಕಾರಣ, ಕಂಪನಿಯು ತಪ್ಪಿಸಬಹುದಾದ ವೆಚ್ಚವಾದ ₹ 10.17 ಕೋಟಿಯನ್ನು[125] ***ಅನುಬಂಧ – 35***ರಲ್ಲಿ ವಿವರಿಸಿರುವಂತೆ ಭರಿಸಿತು.

ಸರ್ಕಾರವು (ಜನವರಿ 2024) ಕಂಪನಿಯ ಉತ್ತರವನ್ನು ರವಾನಿಸಿತು (ಜನವರಿ 2024), ಮೆ. ಬಿಎಚ್ಇಎಲ್‌ಗೆ ಸಂಬಂಧಿಸಿರುವ ಹಲವಾರು ಕಾರಣಗಳಿಂದಾಗಿ, ಚಾಲನೆಯ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಲಾಗಲಿಲ್ಲ ಎಂಬುದಾಗಿ ತಿಳಿಸಿರುವುದು. ಇದರಿಂದಾಗಿ, ಸ್ಟಾರ್ಟ್–ಅಪ್ ವಿದ್ಯುತ್ತನ್ನು ಪೂರ್ಣ ಸಾಮರ್ಥ್ಯದಲ್ಲಿ ಬಳಸಿಕೊಳ್ಳಲಾಗಲಿಲ್ಲ. ಜೊತೆಗೆ, ಸ್ಥಾವರವನ್ನು ರಾಜ್ಯದ ಗ್ರಿಡ್ ಜೊತೆಗೆ ಏಕಕಾಲಿಕಗೊಳಿಸುವ/ಜೊತೆಗೂಡಿಸುವ ದಿನಾಂಕದಲ್ಲಿನ ಅನಿಶ್ಚಿತತೆಯ ಕಾರಣ, ಊಹಿಸಲಾಗದ ಸ್ಟಾರ್ಟ್–ಅಪ್ ಚಟುವಟಿಕೆಗಳ ಅರ್ಥದಲ್ಲಿ ಗುತ್ತಿಗೆ ಡಿಮ್ಯಾಂಡ್ ವ್ಯತ್ಯಾಸವಾಯಿತು, ಈ ಉತ್ತರವನ್ನು ಒಪ್ಪಿಕೊಳ್ಳಲು ಆಗುವುದಿಲ್ಲ, ಏಕೆಂದರೆ ಕಂಪನಿಯು ಅನಿಲದ ಲಭ್ಯತೆ ಇರದ ಕಾರಣ ಸಿಂಕ್ರೋನೈಜೇಶನ್ ದಿನಾಂಕದಲ್ಲಿ ಅನಿಶ್ಚಿತತೆ ಇದ್ದರೂ ಸಹ ಸ್ಟಾರ್ಟ್–ಅಪ್ ವಿದ್ಯುತ್ ಅವಶ್ಯಕತೆಯನ್ನು ಮರು–ವಿಶ್ಲೇಷಣೆ ಮಾಡಲಿಲ್ಲ. ಈ ಸನ್ನಿವೇಶದಲ್ಲಿ, ಕಂಪನಿಯು ಗುತ್ತಿಗೆ ಡಿಮ್ಯಾಂಡ್‌ನಲ್ಲಿ ತಾತ್ಕಾಲಿಕ ಇಳಿಮುಖವನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತು, ಇದರಿಂದ ಡಿಮ್ಯಾಂಡ್ ಶುಲ್ಕಗಳ ಮೇಲಿನ ವೆಚ್ಚವನ್ನು ತಪ್ಪಿಸಬಹುದಿತ್ತು.

ಈ ರೀತಿಯಾಗಿ, ಗುತ್ತಿಗೆ ಡಿಮ್ಯಾಂಡನ್ನು ಇಳಿಮುಖ–ಮಾಡದ ಕಾರಣ ತಪ್ಪಿಸಬಹುದಾದ ₹ 10.17 ಕೋಟಿ ವೆಚ್ಚವನ್ನು ಭರಿಸುವಂತಾಯಿತು, ಜೊತೆಗೆ ಬಳಕೆದಾರರಿಗೆ ಇದರ ಹೊರೆಯನ್ನು ಹೊರಿಸುವಂತಾಯಿತು, ಏಕೆಂದರೆ ಸ್ಥಾವರವನ್ನು ಇನ್ನೂ ಬಂಡವಾಳೀಕರಿಸಬೇಕಾಗಿರುವುದರಿಂದ ಮತ್ತು ನಿರ್ಮಾಣದಲ್ಲಿ ಭರಿಸುವ ಹೆಚ್ಚುವರಿ ವೆಚ್ಚವನ್ನು ವಿದ್ಯುತ್ ದರಪಟ್ಟಿಯಲ್ಲಿ ಸೇರಿಸಬಹುದಾಗಿದೆ.

**ಶಿಫಾರಸು:**

**24. ಲೆಕ್ಕಪರಿಶೋಧನೆಯು ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಮಯದಲ್ಲಿ ವೆಚ್ಚ ಇಳಿಮುಖದತ್ತ ಲಭ್ಯವಿರುವ ಎಲ್ಲಾ ಮಾರ್ಗಗಳನ್ನು ಕಂಡುಕೊಳ್ಳುವಂತೆ ವ್ಯವಸ್ಥಾಪನೆಗೆ ಈ ಮೂಲಕ ಶಿಫಾರಸು ಮಾಡುತ್ತಿರುವುದು.**

[125] ಅಕ್ಟೋಬರ್ 2020ರಲ್ಲಿ ಸ್ಟಾರ್ಟ್–ಅಪ್ ಕಾರ್ಯಾಚರಣೆ ವೇಳೆಯಲ್ಲಿ ಅಧಿಕ ಮಟ್ಟದ ಬೇಡಿಕೆಯ ಆಧಾರದ ಮೇರೆಗಿನ ಗುತ್ತಿಗೆ ಬೇಡಿಕೆಯ ಅಗತ್ಯತೆಯಂತೆ 11,000 ಕೆವಿಎ ತೆಗೆದುಕೊಳ್ಳುವ ಮೂಲಕ ಲೆಕ್ಕಹಾಕಲಾಗಿರುವುದು (ಗರಿಷ್ಠ ಬಳಕೆ, ಇದಕ್ಕೆ ಶೇಕಡಾ 20ರಷ್ಟು ಸೇರಿಸಿ ಸಮೀಪದ 11,000 ಕೆವಿಎಗೆ ತರಲಾಗಿರುವುದು).

**ಕರ್ನಾಟಕ ನೀರಾವರಿ ನಿಗಮ ನಿಯಮಿತ**

### *6.12 ನಕಲಿ ಇನ್‌ವಾಯ್ಸ್‌ಗಳ ಆಧಾರದ ಮೇಲೆ ಅನಿಯಮಿತ ಮುಂಗಡ ಪಾವತಿ*

**ಕೆಲಸದ ಸ್ಥಳದಲ್ಲಿ ಪೈಪ್‌ಗಳ ಪೂರೈಕೆಯನ್ನು ಬೆಂಬಲಿಸಲು ಗುತ್ತಿಗೆದಾರರು ಸಲ್ಲಿಸಿದ ಇನ್‌ವಾಯ್ಸ್‌ಗಳು ಪೂರೈಕೆದಾರ ಮತ್ತು ಖರೀದಿದಾರರ ಜಿ.ಎಸ್.ಟಿ ದಾಖಲೆಗಳೊಂದಿಗೆ ಹೊಂದಿಕೆಯಾಗಿರುವುದಿಲ್ಲ. ಪೈಪ್‌ಗಳನ್ನು ಸಾಗಿಸಲು ಬಳಸಲಾಗಿದೆ ಎಂದು ಹೇಳಲಾದ ವಾಹನಗಳು ದ್ವಿಚಕ್ರ ವಾಹನಗಳು / ತ್ರಿಚಕ್ರ ವಾಹನಗಳು ಮತ್ತು ಲಘು ಮೋಟಾರು ವಾಹನಗಳು ಎಂದು ಕಂಡುಬಂದಿದೆ. ಕೆಎನ್‌ಎನ್‌ಎಲ್ ಅಧಿಕಾರಿಗಳು ಸಾಮಗ್ರಿಗಳ ಪೂರೈಕೆಯನ್ನು ಪರಿಶೀಲಿಸದೆ ₹ 40.16 ಕೋಟಿ ಮುಂಗಡ ಪಾವತಿ ಮಾಡಲಾಗಿದೆ ಎಂದು ಮೇಲಿನ ಸಾಕ್ಷ್ಯಾಧಾರಗಳು ಸೂಚಿಸಿವೆ. ಅನಿಯಮಿತ ಮುಂಗಡ ಪಾವತಿಯಿಂದಾಗಿ ಕೆಎನ್‌ಎನ್‌ಎಲ್‌ಗೆ ₹ 4.53 ಕೋಟಿ ಬಡ್ಡಿ ನಷ್ಟವಾಗಿದೆ.**

**ಸವಣೂರು ಏತ ನೀರಾವರಿ ಯೋಜನೆ (ಎಲ್‌ಐಎಸ್) ಅಡಿಯಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾಂವ್ ಮತ್ತು ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ "48 ಎಂ.ಐ/ಜಿ.ಪಂ ಟ್ಯಾಂಕ್‌ಗಳನ್ನು ಟರ್ನ್–ಕೀ ಆಧಾರದ ಮೇಲೆ ಭರ್ತಿ ಮಾಡುವ ವಿನ್ಯಾಸ, ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ" ಕಾರ್ಯವನ್ನು ಆಡಳಿತಾತ್ಮಕವಾಗಿ ಕರ್ನಾಟಕ ನೀರಾವರಿ ನಿಗಮ ನಿಗಮ ನಿಯಮಿತದಿಂದ (ಕೆಎನ್‌ಎನ್‌ಎಲ್) ಅನುಮೋದಿಸಲಾಗಿದೆ (ಫೆಬ್ರವರಿ 2017). ಕಾಮಗಾರಿಗೆ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭ್ಯಯಂತರರು, ಮಲಪ್ರಭಾ ಯೋಜನಾ ವಲಯ, ಕೆಎನ್‌ಎನ್‌ಎಲ್, ಧಾರವಾಡ ಅವರು ₹ 97 ಕೋಟಿಗೆ ನೀಡಿದ್ದಾರೆ (ಏಪ್ರಿಲ್ 2017). ಟೆಂಡರ್ ಪ್ರಕ್ರಿಯೆಯ ನಂತರ, ಕಾರ್ಯನಿರ್ವಾಹಕ ಅಭ್ಯಯಂತರರು, ಕೆಎನ್‌ಎನ್‌ಎಲ್ ಶಿಗ್ಗಾಂವ್ ಏತ ನೀರಾವರಿ ವಿಭಾಗ, ಧಾರವಾಡ (ವಿಭಾಗ) ಅವರು ಕಾಮಗಾರಿಯ ಗುತ್ತಿಗೆಯನ್ನು ₹ 90.57 ಕೋಟಿಗಳಿಗೆ ಮೇ. ಓಶಿಯನ್ ಕನ್ಸ್ಟ್ರಕ್ಷನ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್, ಮಂಗಳೂರು (ಗುತ್ತಿಗೆದಾರ) ರವರಿಗೆ ನೀಡಿದರು (ಜನವರಿ 2018). 11 ಜನವರಿ 2018 ರಂದು ಗುತ್ತಿಗೆದಾರರೊಂದಿಗೆ ಒಪ್ಪಂದವನ್ನು ಮಾಡಿದ್ದು, 18 ತಿಂಗಳ ಒಳಗೆ, ಅಂದರೆ 10 ಜುಲೈ 2019ರ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಷರತ್ತನ್ನು ಒಳಗೊಂಡಿದೆ. ಕೆಎನ್‌ಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕರು ಯೋಜನೆಯನ್ನು ಪೂರ್ಣಗೊಳಿಸಲು 31 ಮಾರ್ಚ್ 2022 ರವರೆಗೆ ಸಮಯವನ್ನು ವಿಸ್ತರಿಸಿದ್ದಾರೆ (ಜನವರಿ 2024) ಆದಾಗ್ಯೂ, ಕೆಲಸವು ಪ್ರಗತಿಯಲ್ಲಿದೆ (ಸೆಪ್ಟೆಂಬರ್ 2023) ಮತ್ತು ನಂತರ ಯಾವುದೇ ಸಮಯದ ವಿಸ್ತರಣೆಯನ್ನು ನೀಡಲಾಗಿಲ್ಲ. ಮಾರ್ಚ್ 2022 ರಂತೆ ಗುತ್ತಿಗೆದಾರರಿಗೆ ₹83.20 ಕೋಟಿ ಪಾವತಿಯನ್ನು ಮಾಡಲಾಗಿದೆ.**

**ಟೆಂಡರ್ ಡಾಕ್ಯುಮೆಂಟ್, ಗುಣಮಟ್ಟ ಭರವಸೆ ಯೋಜನೆ (ಕ್ಯೂಎಪಿ), ರನ್ನಿಂಗ್ ಅಕೌಂಟ್ ಬಿಲ್‌ಗಳು (ಆರ್. ಎ ಬಿಲ್‌ಗಳು) ಮತ್ತು ಪಾವತಿ ಶೆಡ್ಯೂಲ್ನ ಲೆಕ್ಕಪರಿಶೋಧನೆ (ಸೆಪ್ಟೆಂಬರ್ 2023) ಕೆಲಸದ ವ್ಯಾಪ್ತಿಯು "ಪೂರೈಕೆ, ಹಾಕುವುದು, ಸೇರಿಸುವುದು" ಮತ್ತು ಗುರುತ್ವಾಕರ್ಷಣೆಯ ಮುಖ್ಯ ಹೆಚ್.ಡಿ.ಪಿ.ಇ[126] ಪೈಪ್‌ಗಳ ಪರೀಕ್ಷೆ ಎಂಬ ಪೂರ್ಣಗೊಂಡ ಕೆಲಸದ ಐಟಂ ಅನ್ನು ಒಳಗೊಂಡಿರುತ್ತದೆ ಎಂದು ತೋರಿಸಿತು ಮತ್ತು ಪಾವತಿ ಶೆಡ್ಯೂಲ್ ಪ್ರಕಾರ ₹ 57.38 ಕೋಟಿ ಮೊತ್ತವನ್ನು ಪಾವತಿಸಬೇಕಾಗಿತ್ತು. ಹೆಚ್.ಡಿ.ಪಿ.ಇ ಪೈಪ್‌ನ ಉದ್ದವನ್ನು 114.03 ಕಿಮೀ ಎಂದು ಅಂದಾಜಿಸಲಾಗಿದ್ದು. ಕೆಳಗಿನ ಕೋಷ್ಟಕದಲ್ಲಿ ಸೂಚಿಸಿದಂತೆ ಷರತ್ತು 24.3 ಟೆಂಡರ್ ದಾಖಲೆಗಳ ವಿಭಾಗ 5 (ಕಾಂಟ್ರಾಕ್ಟ್ ಡೇಟಾ) ರಲ್ಲಿ ಕೆಲಸದ ಮೇಲಿನ ಐಟಂಗೆ ಪಾವತಿಯ ನಿಯಮಗಳು ಮತ್ತು ಹಂತಗಳನ್ನು ವ್ಯಾಖ್ಯಾನಿಸಲಾಗಿದೆ:**

[126] ಹೈ ಡೆನ್ಸಿಟಿ ಪಾಲಿ ಎಥಿಲಿನ್.

**ಕೋಷ್ಟಕ ಸಂಖ್ಯೆ. 6.12.1: "ಹೆಚ್.ಡಿ.ಪಿ.ಇ ಪೈಪ್‌ಗಳ ಸರಬರಾಜು, ಹಾಕುವಿಕೆ ಮತ್ತು ಕಾರ್ಯಾರಂಭ" ಕಾಮಗಾರಿ ಐಟಂಗೆ ಪಾವತಿಸಬೇಕಾದ ಷರತ್ತುಗಳು**

| ಕ್ರಮ ಸಂಖ್ಯೆ | ವಿವರಣೆ | ಪಾವತಿ ದರ |
|---|---|---|
| 1 | ಎಂ.ಎಸ್.ಪೈಪ್‌ಗಳು/ಹೆಚ್.ಡಿ.ಪಿ.ಇ ಪೈಪ್‌ಗಳನ್ನು ಮತ್ತು ಸ್ಪೆಶಲ್ಗಳ ಸರಬರಾಜು ಮಾಡುವುದು ಮತ್ತು ಅಗತ್ಯ ಪರೀಕ್ಷೆಗಳು ಮತ್ತು ಗುತ್ತಿಗೆದಾರರ ಅಂಗಳದಲ್ಲಿ ಪೇರಿಸುವುದು ಮತ್ತು ಪೈಪ್‌ಗಳನ್ನು ಕೆಲಸದ ಸ್ಥಳಕ್ಕೆ ಸಾಗಿಸುವುದು. | ಶೇ 70 ಪೈಪ್‌ಗಳಿಗೆ ಉಲ್ಲೇಖಿಸಿದ ದರದಲ್ಲಿ |
| ಗಮನಿಸಿ: ಕ್ರಮ. ಸಂಖ್ಯೆ.1 ರ ಅಡಿಯಲ್ಲಿ ಬಾಕಿ ಇರುವ ಮೊತ್ತವನ್ನು ಈ ಕೆಳಗಿನಂತೆ ಪಾವತಿಸಲಾಗುತ್ತದೆ: (ಎ) ಮೊದಲ ಮತ್ತು ಎರಡನೆಯ ಬಾರಿಗೆ ರವಾನೆಯಾದ ಪೈಪಗಳಿಗೆ, ಪೈಪ್‌ಗಳು ಮತ್ತು ವಿಶೇಷತೆಗಳನ್ನು ಅಭ್ಯಯಂತರರು ತಮ್ಮ ಅಂಗಳದಲ್ಲಿ ಸ್ವೀಕರಿಸಿದಾಗ. | | |
| (ಬಿ) ಮೂರನೇ ಮತ್ತು ನಂತರದ ಸರಕುಗಳಿಗೆ, ಅಭ್ಯಾಯಂತರರು ಪೈಪ್‌ಗಳು ಮತ್ತು ವಿಶೇಷತೆಗಳನ್ನು ಪೈಪ್ ಯಾರ್ಡ್‌ನಲ್ಲಿ ಸ್ವೀಕರಿಸಿದಾಗ ಮತ್ತು ಹಿಂದೆ ಸರಬರಾಜು ಮಾಡಿದ ಪೈಪ್‌ಗಳು ಮತ್ತು ವಿಶೇಷತೆಗಳಲ್ಲಿ ಕನಿಷ್ಠ 50 ಪ್ರತಿಶತವನ್ನು ಹಾಕಿ, ಜೋಡಿಸಿ ಮತ್ತು ಅಭ್ಯಾಯಂತರರಿಗೆ ತೃಪ್ತಿಯಾಗುವಂತೆ ಪರೀಕ್ಷಿಸಿದಾಗ. | | |
| 2 | ನಿರ್ದೇಶಿಸಿದಂತೆ ಮತ್ತು ವಿಶ್ಲೇಷಣೆಗಳ ಪ್ರಕಾರ ಹಾಕುವುದು, ಜೋಡಿಸುವುದು ಮತ್ತು ಪರೀಕ್ಷಿಸುವುದು | .ಶೇ 20 ಪೈಪ್‌ಗಳಿಗೆ ಉಲ್ಲೇಖಿಸಿದ ದರದಲ್ಲಿ |
| 3 | ತೃಪ್ತಿದಾಯಕ ಕಾರ್ಯಾರಂಭದ ನಂತರ | ಶೇ 5 ಪೈಪ್‌ಗಳಿಗೆ ಉಲ್ಲೇಖಿಸಿದ ದರದಲ್ಲಿ |
| 4 | ಅಂತಿಮ ಪಾವತಿಗಳು | ಶೇ. 5 ಅಂತಿಮ ಬಿಲ್ ಸಮಯದಲ್ಲಿ. |

*ಮೂಲ: – ಒಪ್ಪಂದದ ಪ್ರತಿ*

ಗುತ್ತಿಗೆದಾರರು ತಯಾರಕರಿಂದ[127] ಹೆಚ್.ಡಿ.ಪಿ.ಇ ಪೈಪ್‌ಗಳನ್ನು ಖರೀದಿಸಿದರು ಮತ್ತು ವಿಭಾಗವು 12 ಜುಲೈ 2018 ರಂದು ತಯಾರಕರ ಸ್ಥಳದಲ್ಲಿ (ರಾಜ್‌ಕೋಟ್) ಪೂರ್ವ–ರವಾನೆ ಜಂಟಿ ತಪಾಸಣೆ[128] ನಡೆಸಿತು. ಅದರ ನಂತರ, 16 ಜುಲೈ 2018 ರಂದು, ಗುತ್ತಿಗೆದಾರನು ಎಲ್ಲಾ ಹೆಚ್.ಡಿ.ಪಿ.ಇ ಪೈಪ್‌ಗಳನ್ನು ಪೂರೈಸಲಾಗಿದೆ ಮತ್ತು ಕೆಲಸದ ಸ್ಥಳದಲ್ಲಿ ತನ್ನ ಸ್ಟಾಕ್ ಯಾರ್ಡ್‌ನಲ್ಲಿ ಸಂಗ್ರಹಿಸಲಾಗಿದೆ ಎಂದು ಹೇಳಿದ್ದಾರೆ.. ಅದರಂತೆ, ವಿಭಾಗವು 07 ಆಗಸ್ಟ್ 2018 ರಂದು ಮೊದಲ ರನ್ನಿಂಗ್ ಅಕೌಂಟ್ (ಆರ್.ಎ) ಬಿಲ್‌ನಲ್ಲಿ ಪೈಪ್‌ಗಳ ಪೂರೈಕೆಗೆ (ಅಂದರೆ ಪೂರ್ಣಗೊಂಡ ಕಾಮಗಾರಿಯ ಶೇಕಡಾ 70 ರಷ್ಟು) ₹ 40.16 ಕೋಟಿಯನ್ನು ಪಾವತಿಸಿದೆ. ಉಳಿದ ಕಾಮಗಾರಿಗಳಾದ (i) ಹಾಕುವುದು, ಜೋಡಿಸುವುದು, ಪೈಪ್‌ಗಳ ಪರೀಕ್ಷೆ ಮತ್ತು (ii) ಕಾರ್ಯಾರಂಭಗಳನ್ನು ಸೆಪ್ಟೆಂಬರ್ 2018 ಮತ್ತು ಆಗಸ್ಟ್ 2021 ರ ನಡುವೆ ನಂತರ ಮಾಡಲಾಯಿತು.

ಅಳತೆ ಪುಸ್ತಕ/ಮೊದಲ ಆರ್.ಎ ಬಿಲ್‌ನ ವಿವರವಾದ ಪರಿಶೀಲನೆಯು ಈ ಕೆಳಗಿನ ಆಧಾರದ ಮೇಲೆ ಕೆಲಸದ ಸ್ಥಳದಲ್ಲಿ ಪೈಪ್‌ಗಳ ಪೂರೈಕೆಯ ಖಾತೆಯಲ್ಲಿ ವಿಭಾಗದಿಂದ ಗುತ್ತಿಗೆದಾರರಿಗೆ ಮಾಡಿದ ಪಾವತಿಯು ಅನಿಯಮಿತವಾಗಿದೆ ಎಂದು ತಿಳಿದುಬಂದಿದೆ:

(1) ವಿತರಕರು/ಪೂರೈಕೆದಾರರು[129] ನೀಡಿದ ಪೈಪ್ ಖರೀದಿಗೆ ಬೆಂಬಲವಾಗಿ ಗುತ್ತಿಗೆದಾರರು 69 ತೆರಿಗೆ ಇನ್‌ವಾಯ್ಸ್‌ಗಳನ್ನು ಸಲ್ಲಿಸಿದರು (ಉದಾಹರಣೆಗೆ ಮಾರಾಟಗಾರರ/ಖರೀದಿದಾರರ ವಿವರಗಳು, ವಹಿವಾಟಿನ ದಿನಾಂಕ/ಮೌಲ್ಯ, ಸರಕುಗಳ ವಿವರಣೆ/ ಪ್ರಮಾಣ/ದರ, ಸಾರಿಗೆಗಾಗಿ ಬಳಸಿದ ವಾಹನದ ನೋಂದಣಿ ಸಂಖ್ಯೆ). ತೆರಿಗೆ ಇನ್‌ವಾಯ್ಸ್‌ಗಳಲ್ಲಿ ದಾಖಲಾದ ವಹಿವಾಟಿನ ವಿವರಗಳು ಪೂರೈಕೆದಾರರ ಜಿ.ಎಸ್.ಟಿ.ಆರ್–I[130] ಅಥವಾ ಖರೀದಿದಾರರ ಜಿ.ಎಸ್.ಟಿ.ಆರ್ – 2ಎ[131] ವಿವರಗಳೊಂದಿಗೆ ಹೊಂದಿಕೆಯಾಗುವುದಿಲ್ಲ ಎಂದು ಲೆಕ್ಕಪರಿಶೋಧನೆಯು ಜಿ.ಎಸ್.ಟಿ.

[127] M/s. ಕೆಲ್ವಿನ್ ಪ್ಲಾಸ್ಟಿಕ್ ಪ್ರೈವೇಟ್ ಲಿಮಿಟೆಡ್, ರಾಜ್‌ಕೋಟ್,

[128] ತಯಾರಕರ ಸ್ಥಳದಲ್ಲಿ ಗುತ್ತಿಗೆದಾರರೊಂದಿಗೆ ಕೆಎನ್‌ಎನ್‌ಎಲ್ ಅಧಿಕಾರಿಗಳ ಜಂಟಿ ತಪಾಸಣೆ.

[129] ಕಿಸಾನ್ ಸೇಲ್ಸ್ ಕಾರ್ಪೋರೇಶನ್, ಹುಬ್ಬಳ್ಳಿ, ಕರ್ನಾಟಕ.

[130] ಎಲ್ಲಾ ಸಾಮಾನ್ಯ ಮತ್ತು ಸಾಂದರ್ಭಿಕ ನೋಂದಾಯಿತ ತೆರಿಗೆದಾರರಿಂದ ಒದಗಿಸಬೇಕಾದ ಹೊರಗಿನ ಸರಬರಾಜುಗಳ ಮಾಸಿಕ/ತ್ರೈಮಾಸಿಕ ಹೇಳಿಕೆಯಾಗಿದ್ದು, ಸರಕು ಮತ್ತು ಸೇವೆಗಳ ಬಾಹ್ಯ ಸರಬರಾಜು ಅಥವಾ ಎರಡನ್ನೂ ಮತ್ತು ಸರಕು ಮತ್ತು ಸೇವೆಗಳ ಬಾಹ್ಯ ಪೂರೈಕೆಗಳ ವಿವರಗಳನ್ನು ಒಳಗೊಂಡಿರುತ್ತದೆ.

[131] ಇದು ಖರೀದಿಗೆ ಸಂಬಂಧಿಸಿದ ಡೈನಾಮಿಕ್ ತೆರಿಗೆ ರಿಟರ್ನ್ ಆಗಿದ್ದು, ಇದನ್ನು ಜಿಎಸ್‌ಟಿ ಪೋರ್ಟಲ್‌ನಿಂದ ಪ್ರತಿ ವ್ಯವಹಾರಕ್ಕೆ ಸ್ವಯಂಚಾಲಿತವಾಗಿ ರಚಿಸಲಾಗುತ್ತದೆ. ಮಾರಾಟಗಾರನು ತನ್ನ ಜಿ.ಎಸ್.ಟಿ.ಆರ್ –1 ಅನ್ನು ಸಲ್ಲಿಸಿದಾಗ,

**ಡೇಟಾದೊಂದಿಗೆ ಪರಿಶೀಲಿಸಿದೆ. 69 ಇನ್‌ವಾಯ್ಸ್‌ಗಳಲ್ಲಿ 52 ಇನ್‌ವಾಯ್ಸ್‌ಗಳು[132] ಗುತ್ತಿಗೆದಾರರಿಗೆ ಸಂಬಂಧಿಸಿಲ್ಲ. ಹೆಚ್ಚುವರಿಯಾಗಿ, ಮೊದಲ ಆರ್.ಎ ಬಿಲ್‌ನೊಂದಿಗೆ ಲಗತ್ತಿಸಲಾದ 13 ಇನ್‌ವಾಯ್ಸ್‌ಗಳು[133] ಪೂರೈಕೆದಾರರ ಜಿ.ಎಸ್.ಟಿ.ಆರ್–1 ನಲ್ಲಿ ಕಂಡುಬಂದಿಲ್ಲ. ಉಳಿದ ನಾಲ್ಕು ಇನ್‌ವಾಯ್ಸ್‌ಗಳು[134], ಗುತ್ತಿಗೆದಾರರಿಗೆ ಸಂಬಂಧಿಸಿದ್ದಾದರೂ, ವಹಿವಾಟಿನ ಮೌಲ್ಯ ಮತ್ತು ವಹಿವಾಟಿನ ದಿನಾಂಕದಲ್ಲಿ ಹೊಂದಾಣಿಕೆಯಿಲ್ಲ (*ಅನುಬಂಧ – 36*).**

**(2) ಸಂಬಂಧಪಟ್ಟ ಆರ್.ಟಿ.ಓ ಅಧಿಕಾರಿಗಳೊಂದಿಗೆ ತೆರಿಗೆ ಇನ್‌ವಾಯ್ಸ್‌ಗಳಲ್ಲಿ ನಮೂದಿಸಲಾದ ವಾಹನಗಳ ವಿವರಗಳನ್ನು (12 ಮೀಟರ್ ಉದ್ದದ ಹೆಚ್.ಡಿ.ಪಿ.ಇ ಪೈಪ್‌ಗಳ ಸಾಗಣೆಗೆ ಬಳಸಲಾಗಿದೆ ಎಂದು ಹೇಳಲಾಗಿದೆ) ಪರಿಶೀಲಿಸಿದಾಗ, 69 ಇನ್‌ವಾಯ್ಸ್‌ಗಳಲ್ಲಿ 32 ವಾಹನ ಸಂಖ್ಯೆಗಳು ದ್ವಿಚಕ್ರ ವಾಹನಗಳು. ಮತ್ತು 20 ತ್ರಿಚಕ್ರ ವಾಹನಗಳು, ಮೋಟಾರು ಕಾರು ಮತ್ತು ಟ್ರಾಕ್ಟರ್‌ಗಳು ಇತ್ಯಾದಿಗಳಿಗೆ ಸಂಬಂಧಿಸಿದ್ದವು ಎಂದು ತಿಳಿದುಬಂದಿದೆ. ಆ ಇನ್‌ವಾಯ್ಸ್‌ಗಳಲ್ಲಿ ನಮೂದಿಸಲಾದ ಉಳಿದ 16[135] ವಾಹನಗಳ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ನಿರೀಕ್ಷಿಸಲಾಗಿದೆ (ಅನುಬಂಧ – 36).**

**(3) ಕೆಲಸದ ಆದೇಶದ ದಿನಾಂಕದಿಂದ (11 ಜನವರಿ 2018) ಮೊದಲ ಆರ್.ಎ ಬಿಲ್ (16 ಜುಲೈ 2018) ದಿನಾಂಕದವರೆಗಿನ ಅವಧಿಗೆ ಗುತ್ತಿಗೆದಾರರ ಜಿ.ಎಸ್.ಟಿ.ಆರ್–2ಎ ವಿವರಗಳು, ಕೇವಲ ₹ 5.99 ಕೋಟಿ ವೆಚ್ಚದ ಕೆಲವು ಸಾಮಗ್ರಿಗಳನ್ನು ಹೊರತುಪಡಿಸಿ ಗುತ್ತಿಗೆದಾರರು ಹೇಳಿರುವ ಪೈಪ್‌ಗಳನ್ನು ಪೂರೈಕೆದಾರರಿಂದ ಖರೀದಿ ಮಾಡಿಲ್ಲ ಎಂದು ತೋರಿಸಿದೆ.**

**ಸೈಟ್‌ನಲ್ಲಿ ಪೈಪ್‌ಗಳ ಪೂರೈಕೆಗೆ ಸಂಬಂಧಿಸಿದಂತೆ ಮೊದಲ ಆರ್‌ಎ ಬಿಲ್‌ನಲ್ಲಿ ₹ 40.16 ಕೋಟಿ ಕ್ಲೈಮ್ ಮಾಡಲು ಗುತ್ತಿಗೆದಾರರು ಸಲ್ಲಿಸಿದ ಇನ್‌ವಾಯ್ಸ್‌ಗಳು ನೈಜವಾದದ್ದಲ್ಲ ಎಂದು ಇದು ತೋರಿಸುತ್ತದೆ.**

**ಆದಾಗ್ಯೂ, ಇಲಾಖಾ ಅಧಿಕಾರಿಯು 16 ಜುಲೈ 2018 ರಂದು ಅಳತೆ ಪುಸ್ತಕದಲ್ಲಿ 114.03 ಕಿಮೀ ಉದ್ದದ ಪೈಪ್‌ಗಳ ಸ್ವೀಕೃತಿಯ ದೃಢೀಕರಣ ಗುತ್ತಿಗೆದಾರರಿಗೆ ಪಾವತಿಸಲು ಆಧಾರವಾಗಿದೆ. 16 ಜುಲೈ 2018 ರಂದು ಮಾಪನ ಪುಸ್ತಕದಲ್ಲಿ ಮಾಡಲಾದ ರೆಕಾರ್ಡಿಂಗ್‌ಗಳು (ಪೈಪ್‌ಗಳ ವ್ಯಾಸ, ಉದ್ದ ಮತ್ತು ಪ್ರಮಾಣದಂತಹ ವಿವರಗಳು) ಪೈಪ್‌ಗಳನ್ನು ಹಾಕುವ ಸಮಯದಲ್ಲಿ (ಸೆಪ್ಟೆಂಬರ್ 2018 ರಿಂದ ಆಗಸ್ಟ್ 2021) ಮಾಪನ ಪುಸ್ತಕದಲ್ಲಿ ಮಾಡಲಾದ ರೆಕಾರ್ಡಿಂಗ್‌ಗಳೊಂದಿಗೆ ಹೊಂದಿಕೆಯಾಗುವುದಿಲ್ಲ ಎಂದು ಲೆಕ್ಕಪರಿಶೋಧನೆ ಗಮನಿಸಿದೆ. (ಅನುಬಂಧ – 37)**

**ಗುತ್ತಿಗೆದಾರರು ನಕಲಿ ಇನ್‌ವಾಯ್ಸ್‌ಗಳನ್ನು ಸಲ್ಲಿಸಿದ್ದಾರೆ ಮತ್ತು ಇಲಾಖಾ ಅಧಿಕಾರಿಗಳು ₹ 40.16 ಕೋಟಿಯ ಒಂದು ಬಾರಿ ಮುಂಗಡ ಪಾವತಿಯ ಅನಗತ್ಯ ಆರ್ಥಿಕ ಲಾಭವನ್ನು ಪಡೆಯಲು ಗುತ್ತಿಗೆದಾರರಿಗೆ ಸಹಾಯ ಮಾಡಿದ್ದಾರೆ ಎಂದು ಮೇಲಿನ ಪುರಾವೆಗಳು ಸ್ಪಷ್ಟವಾಗಿ ಸೂಚಿಸುತ್ತವೆ, ಇದು ಪೂರ್ಣಗೊಂಡ ಕಾಮಗಾರಿಯ ಮೌಲ್ಯದ ಒಟ್ಟು ಮೊತ್ತದ ಶೇಕಡಾ 70 ಆಗಿದೆ. ಒಪ್ಪಂದದ ಷರತ್ತುಗಳು ಕಾರ್ಯಗತಗೊಳಿಸುವ ಸಮಯದಲ್ಲಿ ಪೈಪ್‌ಗಳ ಬಳಕೆಗೆ ಅನುಗುಣವಾಗಿ ಪೈಪ್‌ಗಳ ಪೂರೈಕೆಯನ್ನು ಹಲವು ಸರಕಿನಲ್ಲಿ ಕಲ್ಪಿಸಿದ್ದರೂ, ಯೋಜನೆಗೆ ಪೈಪ್‌ಗಳ ಸಂಪೂರ್ಣ ಅಗತ್ಯವನ್ನು ನಕಲಿ ಇನ್‌ವಾಯ್ಸ್‌ಗಳ ಮೂಲಕ ಒಂದೇ ಸರಣಿಯಲ್ಲಿ ವಿತರಿಸಲಾಗಿದೆ. ಪೈಪ್‌ಗಳ ನಂತರದ ಹಾಕುವಿಕೆಯನ್ನು ಸೆಪ್ಟೆಂಬರ್ 2018 ರಿಂದ ಆಗಸ್ಟ್ 2021ರವರೆಗೆ ಮೂರು ವರ್ಷಗಳ ಅವಧಿಯಲ್ಲಿ ನಡೆಸಲಾಯಿತು.**

**ಮೇಲಿನ ಅಂಶಗಳ ದೃಷ್ಟಿಯಿಂದ, ಸೈಟ್‌ನಲ್ಲಿ ವಸ್ತುಗಳ ಖರೀದಿ ಮತ್ತು ಪೂರೈಕೆಗೆ ನಿಜವಾದ/ಮಾನ್ಯವಾದ ಪುರಾವೆ ಇಲ್ಲದಿದ್ದರಿಂದ, ಷರತ್ತು 24.3 ರ ಪ್ರಕಾರ ಟೆಂಡರ್ ಡಾಕ್ಯುಮೆಂಟ್ (ಒಪ್ಪಂದದ ಡೇಟಾ) ವಿಭಾಗ**

ಮಾಹಿತಿಯನ್ನು ಜಿ.ಎಸ್.ಟಿ.ಆರ್ 2A ನಲ್ಲಿ ಸೆರೆಹಿಡಿಯಲಾಗುತ್ತದೆ. ಇದು ಮಾರಾಟಗಾರರ ಜಿ.ಎಸ್.ಟಿ.ಆರ್ –1 ನಿಂದ ಪ್ರತಿ ತಿಂಗಳು ಖರೀದಿಸಿದ ಸರಕುಗಳು ಮತ್ತು/ಅಥವಾ ಸೇವೆಗಳ ಮಾಹಿತಿಯನ್ನು ತೆಗೆದುಕೊಳ್ಳುತ್ತದೆ.

[132] ಕ್ರಮ ಸಂಖ್ಯೆ. 1ರಿಂದ 52 ***ಅನುಬಂಧ – 36.***

[133] ಕ್ರಮ ಸಂಖ್ಯೆ. 53ರಿಂದ 65 ***ಅನುಬಂಧ – 36.***

[134] ಕ್ರಮ ಸಂಖ್ಯೆ. 66ರಿಂದ 69 ***ಅನುಬಂಧ – 36.***

[135] ಇನ್‌ವಾಯ್ಸ್‌ನಲ್ಲಿ ಒಂದು ವಾಹನದ ವಿವರಗಳನ್ನು ಒದಗಿಸಲಾಗಿಲ್ಲ.

**5 ರಲ್ಲಿ ವ್ಯಾಖ್ಯಾನಿಸಿರುವಂತೆ ಕಾಮಗಾರಿಯನ್ನು ನಿರ್ವಹಿಸುವಾಗ ಪೈಪ್‌ಗಳ ನೈಜ ಬಳಕೆಯ ಪ್ರಕಾರ ಗುತ್ತಿಗೆದಾರರಿಗೆ ವಿಭಾಗವು ಪಾವತಿಯನ್ನು ಬಿಡುಗಡೆ ಮಾಡಬೇಕಾಗಿತ್ತು ಎಂದು ಉಲ್ಲೇಖಿಸಿದೆ. ಲೆಕ್ಕಪರಿಶೋಧನೆಯು ₹ 40.16 ಕೋಟಿಯ ಮುಂಗಡ ಪಾವತಿಗೆ ಸಂಬಂಧಿಸಿದಂತೆ ಆ ಪೈಪ್‌ಗಳ ನೈಜ ಬಳಕೆಯ ದಿನಾಂಕದವರೆಗೆ ಬಡ್ಡಿ ಅಂಶವನ್ನು ಲೆಕ್ಕಹಾಕಿದೆ ಮತ್ತು ಗುತ್ತಿಗೆದಾರರಿಗೆ ಮುಂಗಡ ಪಾವತಿಯು ಕೆ.ಎನ್.ಎನ್.ಎಲ್‌ಗೆ ₹4.53 ಕೋಟಿ[136] ಬಡ್ಡಿಯ ನಷ್ಟದಲ್ಲಿ ಕಳೆದುಕೊಳುವಲ್ಲಿ ಪರಿಣಮಿಸಿತು ಎಂದು ಕಂಡುಬಂದಿದೆ (*ಅನುಬಂಧ – 38*).**

**ಕೆ.ಎನ್.ಎನ್.ಎಲ್ ಪ್ರತ್ಯುತ್ತರ ನೀಡುತ್ತಾ (ಏಪ್ರಿಲ್ 2024) ವಿತರಣಾ ಪುರಾವೆಯಾಗಿ ಗುತ್ತಿಗೆದಾರರು ಸಲ್ಲಿಸಿದ ಇನ್‌ವಾಯ್ಸ್‌ಗಳು ಅಧಿಕೃತ ದಾಖಲೆಗಳ ಭಾಗವಾಗಿಲ್ಲ ಮತ್ತು ಅವುಗಳಲ್ಲಿನ ವ್ಯತ್ಯಾಸಗಳಿಗೆ ಕೆ.ಎನ್.ಎನ್.ಎಲ್ ಜವಾಬ್ದಾರರಾಗಿರುವುದಿಲ್ಲ ಎಂದಿತು. ಸ್ಟಾಕ್ ಯಾರ್ಡ್‌ನಲ್ಲಿ ಪೈಪ್‌ಗಳ ಸ್ವೀಕೃತಿಯ ಭೌತಿಕ ಪರಿಶೀಲನೆ ಮತ್ತು ಪ್ರಮಾಣೀಕರಣದ ಆಧಾರದ ಮೇಲೆ ಪಾವತಿಗಳನ್ನು ಮಾಡಲಾಗಿದೆ ಮತ್ತು ಗುತ್ತಿಗೆದಾರರು ಯೋಜನೆಯ ಹೆಸರಿನಲ್ಲಿ ₹ 40.16 ಕೋಟಿಯ ಸಂಪೂರ್ಣ ಮುಂಗಡ ಪಾವತಿಗೆ ತೆರಿಗೆ ಬೆಲೆಯಪಟ್ಟಿ ನೀಡಲಾಗಿದೆ ಎಂದು ಹೇಳಲಾಗಿದೆ. ಕೆ.ಎನ್.ಎನ್.ಎಲ್ ಉತ್ತರವನ್ನು ಸರ್ಕಾರವು (ಏಪ್ರಿಲ್ 2024) ಅನುಮೋದಿಸಿದೆ.**

**12 ಮೀಟರ್ ಉದ್ದದ ಪೈಪ್‌ಗಳನ್ನು ಮೋಟಾರ್‌ಸೈಕಲ್‌ಗಳು ಮತ್ತು ತ್ರಿಚಕ್ರ ವಾಹನಗಳಲ್ಲಿ ವಿತರಿಸಲಾಗಿದೆ ಎಂದು ಹೇಳಲಾಗಿದ್ದು, ಗುತ್ತಿಗೆದಾರರ (ಖರೀದಿದಾರ) ವಿತರಕರು/ಪೂರೈಕೆದಾರರು ಒದಗಿಸಿದ (ಮಾರಾಟಗಾರರು) ಜಿಎಸ್‌ಟಿ ರಿಟರ್ನ್ಸ್‌ನಲ್ಲಿ ಹೊಂದಾಣಿಕೆಯಿಲ್ಲದಿರುವುದರಿಂದ, ಕೆಎನ್‌ಎನ್‌ಎಲ್ ಅಗತ್ಯವಾದ ಶ್ರದ್ಧೆಯನ್ನು ವಹಿಸಿಲ್ಲ ಎಂಬುದು ಸ್ಪಷ್ಟವಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ ಮತ್ತು ಗುತ್ತಿಗೆದಾರರು ಸಲ್ಲಿಸಿದ ಇನ್‌ವಾಯ್ಸ್‌ಗಳು ಅಸಲಿಯಲ್ಲ ಎಂದು ಸ್ಪಷ್ಟವಾಗಿ ಸಾಬೀತುಪಡಿಸಿದೆ ಗುತ್ತಿಗೆದಾರರಿಂದ ಸಂಗ್ರಹಿಸಲಾದ ತೆರಿಗೆ ಬೆಲೆಯಪಟ್ಟಿಯು ಕಾಮಗಾರಿಯ ಸೈಟ್‌ಗೆ ವಸ್ತುಗಳ ಖರೀದಿ ಮತ್ತು ಪೂರೈಕೆಯ ಪುರಾವೆಯಲ್ಲ, ಆದರೆ ಮುಂಗಡ ಪಾವತಿಯನ್ನು ಕ್ಲೈಮ್ ಮಾಡಲು ಅವರು ಸಲ್ಲಿಸಿದ ಬಿಲ್ ಮಾತ್ರವಾಗಿದೆ.**

**ಶಿಫಾರಸು:**

**25.** ಸರ್ಕಾರವು ಸೂಕ್ತ ತನಿಖಾ ಸಂಸ್ಥೆಯ ಮೂಲಕ ವಿವರವಾದ ವಿಚಾರಣೆಯನ್ನು ನಡೆಸಬೇಕು ಮತ್ತು ವಸ್ತುಗಳ ಸ್ವೀಕೃತಿಯ ತಪ್ಪು ಪ್ರಮಾಣೀಕರಣಕ್ಕೆ ಜವಾಬ್ದಾರರಾಗಿರುವ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸಬೇಕು.

**26.** ಮುಂಗಡ ಪಾವತಿಯ ಮೇಲಿನ ಬಡ್ಡಿಯ ಮೊತ್ತವನ್ನು ವಸೂಲಿ ಮಾಡುವುದನ್ನು ಖಾತ್ರಿಪಡಿಸಿಕೊಳ್ಳಬಹುದು.

## ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

### *6.13 ಧ್ಯೇಯೋದ್ದೇಶಗಳನ್ನು ಸಾಧಿಸದಿರುವುದು*

**₹ 1.28 ಕೋಟಿ ವೆಚ್ಚವನ್ನು ಭರಿಸಿದಾಗ್ಯೂ, ಪೀಣ್ಯಾ ಕೈಗಾರಿಕಾ ಪ್ರದೇಶದಲ್ಲಿ ಬಹು–ಉಪಯೋಗಿ ಸಂಕೀರ್ಣ ಮತ್ತು ಕೋಲಾರ ಜಿಲ್ಲೆಯ ಶಿವಾರಪಟ್ಟಣದಲ್ಲಿ ಸಮುದಾಯ ಕೇಂದ್ರದ ನಿರ್ಮಾಣ ಮತ್ತು ದೇವಸ್ಥಾನವೊಂದರ ನವೀಕರಣವನ್ನು ಪೂರ್ಣಗೊಳಿಸುವಲ್ಲಿ ಅಸಾಮಾನ್ಯ ವಿಳಂಬದಿಂದ ಧ್ಯೇಯೋದ್ದೇಶಗಳನ್ನು ಸಾಧಿಸದಿರುವಂತಾಯಿತು.**

I. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು (ಕಂಪನಿ) ಕುಶಲಕರ್ಮಿಗಳ ಪ್ರಯೋಜನಕ್ಕಾಗಿ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣ ಮಾಡಿದ (1990) ಕಂಚಿನ ಕಲೆ

[136] ಒಪ್ಪಂದದ ಪ್ರಕಾರ ಮುಂಗಡ ಪಾವತಿಗಳಿಗೆ ವಿಧಿಸಲಾಗುವ ಬಡ್ಡಿಯನ್ನು ಶೇಕಡಾ 13.5 ಎಂದು ಲೆಕ್ಕಹಾಕಲಾಗಿದೆ.

ಸಂಕೀರ್ಣ ಕಟ್ಟಡವನ್ನು ತನ್ನ ಸ್ವಾಮ್ಯದಲ್ಲಿ ಹೊಂದಿತ್ತು. ಕುಶಲಕರ್ಮಿಗಳು ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಹರಡಿದ್ದು, ದೂರದಲ್ಲಿರುವ ಕಾರಣ ಕಂಚಿನ ವಸ್ತುಗಳ ಉತ್ಪಾದನೆಯನ್ನು ನಿಲ್ಲಿಸಿರುವುದರಿಂದ, ಈ ಕಟ್ಟಡವನ್ನು 1995ರಿಂದ ಬಳಸಲಾಗಿರುವುದಿಲ್ಲ.

ಕಂಪನಿಯ ನಿರ್ದೇಶಕರುಗಳ ಮಂಡಳಿಯು (ಬಿಒಡಿ) ತನ್ನ 286ನೇ ಸಭೆಯಲ್ಲಿ, ಈಗಿರುವ ನಿರ್ಮಾಣವನ್ನು ಕೆಡವಲು ಅನುಮತಿ ನೀಡಿತು (ಜುಲೈ 2017) ಮತ್ತು ಉಗ್ರಾಣ, ವಸ್ತುಪ್ರದರ್ಶನ ಕೇಂದ್ರ, ಕಛೇರಿ ಸ್ಥಳ, ಇತ್ಯಾದಿಯೂ ಸೇರಿದಂತೆ ಬಹು-ಉಪಯೋಗಿ ಸಂಕೀರ್ಣವೊಂದನ್ನು ನಿರ್ಮಿಸಲು ನಿರ್ಧರಿಸಿತು. ಯೋಜನೆಗೆ ಕಂಪನಿಯೇ ತನ್ನ ಹಣಕಾಸು ಸಂಪನ್ಮೂಲಗಳನ್ನು ಒದಗಿಸಬೇಕಿದ್ದಿತ್ತು. ಉಗ್ರಾಣ ವೆಚ್ಚ ಮಾಡುತ್ತಿರುವ ₹ 50.68 ಲಕ್ಷ ವಾರ್ಷಿಕ ಬಾಡಿಗೆಯನ್ನು ವಾರ್ಷಿಕವಾಗಿ ಉಳಿತಾಯ ಮಾಡಬಹುದು ಎಂಬುದಾಗಿ ಅಂದಾಜು ಮಾಡಲಾಗಿದ್ದಿತು. ನಿರ್ದೇಶಕರುಗಳ ಮಂಡಳಿಯು ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ಅಥವಾ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಮೂಲಕ ವಹಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿತು. ಕೆಆರ್‌ಐಡಿಎಲ್ ಸಂಕೀರ್ಣದ ನಿರ್ಮಾಣವನ್ನು ಏಳು ಕಾಮಗಾರಿಗಳಲ್ಲಿ ವಿಭಜಿಸಿ ₹ 8.84 ಕೋಟಿ ಒಟ್ಟು ವೆಚ್ಚದಲ್ಲಿ ಏಳು[137] ಅಂದಾಜುಪಟ್ಟಿಗಳನ್ನು ಸಲ್ಲಿಸಿತು (ಅಕ್ಟೋಬರ್ 2017).

ಪರಸ್ಪರ ತಿಳಿವಳಿಕೆ ಪತ್ರವನ್ನು (ಎಂಒಯು) ಕೆಆರ್‌ಐಡಿಎಲ್‌ನೊಂದಿಗೆ ನೆಲಮಾಳಿಗೆಯ ಕಾಮಗಾರಿಗಾಗಿ (₹ 1.78 ಕೋಟಿ) ಸಹಿ ಮಾಡಲಾಯಿತು (ಮಾರ್ಚ್ 2018). ಪರಸ್ಪರ ತಿಳಿವಳಿಕೆ ಪತ್ರದ ಅನುಸಾರ, ಪರಸ್ಪರ ತಿಳಿವಳಿಕೆ ಪತ್ರಕ್ಕೆ ಸಹಿ ಮಾಡಿಕೊಂಡಾಗ ಅಂದಾಜುಪಟ್ಟಿಯ ಶೇಕಡಾ 50ನ್ನು ಪಾವತಿಸಬೇಕಾಗಿತ್ತು, ಶೇಕಡಾ 40 ಕಾಮಗಾರಿ ಪೂರ್ಣಗೊಂಡ ನಂತರ ಶೇಕಡಾ 25 ಪಾವತಿ ಮಾಡಬೇಕಾಗಿತ್ತು, ಕಾಮಗಾರಿಯ ಶೇಕಡಾ 60 ಪೂರ್ಣಗೊಂಡ ನಂತರ ಶೇಕಡಾ 20 ಪಾವತಿಯನ್ನು ಮಾಡಬೇಕಾಗಿತ್ತು ಮತ್ತು ಉಳಿದ ಶೇಕಡಾ 5ನ್ನು ಕಾಮಗಾರಿ ಪೂರ್ಣಗೊಂಡ ನಂತರ ಪಾವತಿಸಬೇಕಿತ್ತು. ಕಾಮಗಾರಿಯನ್ನು ಭೂಮಿಯನ್ನು ವಹಿಸಿಕೊಟ್ಟ ದಿನಾಂಕದಿಂದ ಆರು ತಿಂಗಳೊಳಗೆ ಪೂರ್ಣಗೊಳಿಸಬೇಕಿತ್ತು. ಪರಸ್ಪರ ತಿಳಿವಳಿಕೆ ಪತ್ರದ ಅನುಸಾರ, ₹ 88.88 ಲಕ್ಷವನ್ನು (ವೆಚ್ಚದ ಶೇಕಡಾ 50) ಮಾರ್ಚ್ 2018ರಲ್ಲಿ ಬಿಡುಗಡೆ ಮಾಡಲಾಯಿತು. ಯೋಜನೆಯ ನಕಾಶೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂಗೀಕಾರವನ್ನು ಸೆಪ್ಟೆಂಬರ್ 2018ರಲ್ಲಿ ಪಡೆಯಲಾಯಿತು ಮತ್ತು ಜಾಗವನ್ನು ಸೆಪ್ಟೆಂಬರ್ 2018ರಲ್ಲಿ ಕೆಆರ್‌ಐಡಿಎಲ್‌ಗೆ ಹಸ್ತಾಂತರಿಸಲಾಯಿತು. ಕಾಮಗಾರಿಯು ಮಾರ್ಚ್ 2019ರ ಹೊತ್ತಿಗೆ ಪೂರ್ಣಗೊಳ್ಳಬೇಕಿದ್ದಿತು. ಆದಾಗ್ಯೂ, ಕಾಮಗಾರಿಯು ಇನ್ನೂ ಪೂರ್ಣಗೊಳ್ಳಬೇಕಾಗಿರುವುದು (ಫೆಬ್ರವರಿ 2024).

ಈ ಸಂಬಂಧದಲ್ಲಿ, ಲೆಕ್ಕಪರಿಶೋಧನೆಯು ಗಮನಿಸಿರುವುದು ಏನೆಂದರೆ:

- ಕರ್ನಾಟಕ ಸರ್ಕಾರವು, ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ (ಕೆಟಿಟಿಪಿ) ಅಧಿನಿಯಮ (ಜುಲೈ 2016 ಮತ್ತು ಏಪ್ರಿಲ್ 2017)ರ 4(ಜಿ) ಅಡಿಯಲ್ಲಿ ಕೆಆರ್‌ಐಡಿಎಲ್‌ಗೆ ವಿನಾಯಿತಿ ಮಂಜೂರು ಮಾಡಿದ್ದಿತು. ಇದರ ಅನುಸಾರ, ಸಾರ್ವಜನಿಕ ವಲಯದ ಉದ್ದಿಮೆಗಳು, ಕಂಪನಿಗಳು, ಇಲಾಖೆಗಳು ಇತ್ಯಾದಿ ಟೆಂಡರ್ ಕರೆಯದೆಯೇ ಕೆಆರ್‌ಐಡಿಎಲ್‌ಗೆ ₹ 2 ಕೋಟಿವರೆಗಿನ ಕಾಮಗಾರಿಗಳನ್ನು ನೇರವಾಗಿ ವಹಿಸಬಹುದಿತ್ತು. ಆದಾಗ್ಯೂ, ಯಾವುದೇ ಕಾಮಗಾರಿಯನ್ನು ವಿಭಜಿಸಬಾರದು ಎಂಬ ಷರತ್ತು ನಿಗದಿಪಡಿಸಲಾಗಿತ್ತು. ಕೆಆರ್‌ಐಡಿಎಲ್ ಏಳು ಪ್ರತ್ಯೇಕ ಅಂದಾಜು ಪಟ್ಟಿಗಳನ್ನು ಸಲ್ಲಿಸಿತು (ಅಕ್ಟೋಬರ್ 2017) – ಕಟ್ಟಡದ ಪ್ರತಿಯೊಂದು ಅಂತಸ್ತಿಗೂ ಒಂದೊಂದು. ಕಂಪನಿಯು, ಆದಾಗ್ಯೂ, ವಿಭಜನೆ ಮಾಡಲಾಗಿದ್ದ ಅಂದಾಜುಪಟ್ಟಿಗಳ ಆಧಾರದ ಮೇರೆಗೆ ಕೆಆರ್‌ಐಡಿಎಲ್‌ಗೆ ಕಾಮಗಾರಿಯನ್ನು ವಹಿಸಿತು.

[137] ನೆಲಮಾಳಿಗೆಯ ₹ 177.75 ಲಕ್ಷ, ನೆಲ ಮಹಡಿ ₹ 178.10 ಲಕ್ಷ ಮೊದಲ ಮಹಡಿ ₹ 103.40 ಲಕ್ಷ; ಎರಡನೇ ಮಹಡಿ₹ 108 ಲಕ್ಷ, ಮೂರನೇ ಮಹಡಿ ₹ 118.15 ಲಕ್ಷ , ನಾಲ್ಕನೇ ಮಹಡಿ ₹ 121.35 ಲಕ್ಷ ಹಾಗೂ ಬಾಹ್ಯ ವಿದ್ಯುದೀಕರಣ ಮತ್ತು ಡಿಜಿ ಸೆಟ್ಟು ಕಾಮಗಾರಿ ₹ 77.35 ಲಕ್ಷ.

- ₹ 82 ಲಕ್ಷ (ಇದು ಅಂದಾಜುಪಟ್ಟಿಯ ಶೇಕಡಾ 40ಕ್ಕಿಂತ ಅಧಿಕವಾಗಿತ್ತು) ಮೌಲ್ಯದ ಕಾಮಗಾರಿಯು ಪೂರ್ಣಗೊಂಡಿರುವುದರಿಂದ ಅಂದಾಜುಪಟ್ಟಿಯ ಶೇಕಡಾ 25ರಷ್ಟು (₹ 44.43 ಲಕ್ಷ) ಮೊತ್ತವನ್ನು ಬಿಡುಗಡೆ ಮಾಡುವಂತೆ ಕೆಆರ್‌ಐಡಿಎಲ್ ಕಂಪನಿಗೆ ಕೋರಿಕೆಯನ್ನು ಮಾಡಿ (ಜನವರಿ 2019) ಕೇಳಿತು. ಕಂಪನಿಯು ಆ ಹಣವನ್ನು ಬಿಡುಗಡೆ ಮಾಡದ ಕಾರಣ, ಕೆಆರ್‌ಐಡಿಎಲ್ ಪುನ: ಕಂಪನಿಯನ್ನು ಹಣ ಬಿಡುಗಡೆ ಮಾಡುವಂತೆ ಕೋರಿತು (ಮಾರ್ಚ್ 2019). ಕಂಪನಿಯು ಹಣವನ್ನು ಮೇ 2019ರಲ್ಲೂ ಬಿಡುಗಡೆ ಮಾಡದ ಕಾರಣ, ಕಾಮಗಾರಿಯನ್ನು ನಿಲ್ಲಿಸಲಾಯಿತು. ಅಂದಿನವರೆಗೆ, ₹ 111.61 ಲಕ್ಷ ಮೌಲ್ಯದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿತ್ತು. ಇಇ, ಕೆಆರ್‌ಐಡಿಎಲ್ ಅವರು ಮತ್ತೊಮ್ಮೆ ಕಂಪನಿಯನ್ನು ಬಾಕಿ ಹಣವನ್ನು ಬಿಡುಗಡೆ ಮಾಡುವಂತೆ ಕೋರಿದರು (ಜನವರಿ 2020) ಮತ್ತು ಕಾಂಕ್ರೀಟ್ ಕಾಮಗಾರಿ ಮಾಡದಿದ್ದಲ್ಲಿ ಕಾಲಂ ಸ್ಟೀಲ್ ರೀಇನ್ಫೋರ್ಸ್ಮೆಂಟ್ ತುಕ್ಕು ಹಿಡಿಯಬಹುದೆಂದು ತಿಳಿಸಿದರು. ಕಂಪನಿಯು ಕೆಆರ್‌ಐಡಿಎಲ್‌ಗೆ ಕೋರಿಕೆ ಸಲ್ಲಿಸಿ (ಅಕ್ಟೋಬರ್ 2020) ನೆಲದ ಅಂತಸ್ತನ್ನು ಬಳಸಲು ಸಾಧ್ಯವಾಗುವಂತೆ ನೆಲಮಾಳಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು, ಪರಿಷ್ಕೃತ ಅಂದಾಜುಪಟ್ಟಿಯನ್ನು ಸಲ್ಲಿಸುವಂತೆ ತಿಳಿಸಿದರು. ಈ ಕೆಲಸದಲ್ಲಿ ಇಂದಿನ ದಿನಾಂಕದವರೆಗೆ ಯಾವುದೇ ಹೆಚ್ಚಿನ ಪ್ರಗತಿ ಇರಲಿಲ್ಲ.

  ಕೆಆರ್‌ಐಡಿಎಲ್‌ಗೆ ಹಣ ಬಿಡುಗಡೆ-ಮಾಡದ ಕಾರಣ ಮತ್ತು ತತ್ಪರಿಣಾಮವಾಗಿ ಬಿಲ್ಲುಗಳನ್ನು ಪಾವತಿಮಾಡದ ಕಾರಣ, ಮಾರ್ಚ್ 2019ರಲ್ಲಿ ಪೂರ್ಣಗೊಳ್ಳಬೇಕಾಗಿದ್ದ ಕಾಮಗಾರಿಯು ಇನ್ನೂ ಪೂರ್ಣಗೊಳ್ಳಬೇಕಿರುವುದು. ಈ ಕಾಮಗಾರಿಯನ್ನು ಪೂರ್ಣಗೊಳಿಸಿದ ತರುವಾಯವೂ (ನೆಲಮಾಳಿಗೆ), ಇನ್ನೂ ಆರು ಅಂದಾಜುಪಟ್ಟಿಗಳನ್ನು ಕೈಗೆತ್ತಿಕೊಳ್ಳಬೇಕು, ಇದು ಕಟ್ಟಡ ಪೂರ್ಣಗೊಳ್ಳುವ ಕಾಲವನ್ನು ಅನಿಶ್ಚಿತಗೊಳಿಸಿರುವುದು.

ಹಣದ ಲಭ್ಯತೆಯ ಆಧಾರದ ಮೇಲೆ ಮತ್ತು ಯೋಜನೆಯ ಮೇಲ್ವಿಚಾರಣೆ ಮಾಡಲು ಕುಶಲ ಸಿಬ್ಬಂದಿಯ ಕೊರತೆಯ ಕಾರಣ ಹಂತ ಹಂತವಾಗಿ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಲಾಗಿತ್ತು. ಎಂಬುದಾಗಿ ನೀಡಲಾಗಿದ್ದ ಕಂಪನಿಯ ಉತ್ತರವನ್ನು ಸರ್ಕಾರ ಅನುಮೋದಿಸಿತು (ಮಾರ್ಚ್ 2024), ಇದಕ್ಕೆ ಅನುಗುಣವಾಗಿ, ಕೆಆರ್‌ಐಡಿಎಲ್‌ನಿಂದ ಅಂದಾಜುಪತ್ರಗಳನ್ನು ಪಡೆಯಲಾಯಿತು. ಅದಾಗ್ಯೂ, ಕಳೆದ ಮೂರು ವರ್ಷಗಳಲ್ಲಿ ಎದುರಿಸಿದ ಹಣಕಾಸು ನಷ್ಟಗಳ ಕಾರಣ ಯೋಜನೆಯನ್ನು ಕೈಗೆತ್ತಿಕೊಳ್ಳಲು ಆಗಲಿಲ್ಲ. ಜೊತೆಗೆ, ಕಂಪನಿಯು ಯೋಜನೆಯನ್ನು ಪೂರ್ಣಗೊಳಿಸಲು ನಿರ್ಧರಿಸಿತು (28-12-2023ರಂದು ನಡೆದ 307ನೇ ಬಿಎಂ ಸಭೆಯಲ್ಲಿ).

ಈ ಉತ್ತರವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ಕೆಆರ್‌ಐಡಿಎಲ್‌ಗೆ ಕಾಮಗಾರಿಯನ್ನು ವಹಿಸಲು ವಿನಾಯಿತಿ ಅಧಿಸೂಚನೆಯ ಷರತ್ತುಗಳನ್ನು ಕಡೆಗಣಿಸಿ ಕಾಮಗಾರಿಯನ್ನು ಏಳು ಅಂದಾಜುಪತ್ರಗಳಲ್ಲಿ ವಿಭಜನೆ ಮಾಡಿರುವುದು ಸರಿಯಲ್ಲ. ನೆಲಮಾಳಿಗೆಯನ್ನು ಪೂರ್ಣಗೊಳಿಸಿದ ನಂತರ, ಇನ್ನೂ ಆರು ಅಂದಾಜುಪತ್ರಗಳಿಗೆ ಸಂಬಂದಿಸಿದ ಕಾಮಗಾರಿಯನ್ನು ಒಂದಾನ ನಂತರ ಒಂದನ್ನು ಕೈಗೆತ್ತಿಕೊಳ್ಳಬೇಕು. ಇದು ಖಚಿತವಾಗಿ ಯೋಜನೆ/ಕಟ್ಟಡವನ್ನು ಪೂರ್ಣಗೊಳಿಸಲು ವಿಳಂಬ ಉಂಟುಮಾಡುತ್ತದೆ.

ಹೀಗಾಗಿ, ಕಾಮಗಾರಿ ಪ್ರಾರಂಬಿಸಿದ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲದ ನಂತರವೂ ಮತ್ತು ₹ 88.88 ಲಕ್ಷ ವೆಚ್ಚ ಮಾಡಿದ ನಂತರವೂ, ವಾರ್ಷಿಕವಾಗಿ ₹ 50.68 ಲಕ್ಷ ಉಗ್ರಾಣದ ಬಾಡಿಗೆಯನ್ನು ಉಳಿಸಬಹುದಾಗಿದ್ದ ಕಟ್ಟಡವನ್ನು ಹೊಂದುವ ಧ್ಯೇಯೋದ್ದೇಶವು ಈಡೇರಲಿಲ್ಲ. ಜೊತೆಗೆ, ಭಾಗಶ: ನಿರ್ಮಾಣ ಮಾಡಿರುವ ಕಟ್ಟಡವೂ ಕಾಲಕಳೆದಂತೆ ದುರ್ಬಲಗೊಳ್ಳುತ್ತದೆ.

II. ಕರ್ನಾಟಕ ಸರ್ಕಾರವು (ಜಿಒಕೆ) ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಶಿವಾರಪಟ್ಟಣ ಗ್ರಾಮವನ್ನು ಶಿಲ್ಪಿಗಳ ಸಮುದಾಯದ ಸಾಂಪ್ರದಾಯಿಕ ಶಿಲೆ ಕೆತ್ತನೆ ಕೌಶಲ್ಯಗಳನ್ನು ಸಂರಕ್ಷಿಸಲು ಮತ್ತು ಇಡೀ ಗ್ರಾಮದ ಜೀವನೋಪಾಯವನ್ನು ಸುಧಾರಿಸಲು ಇದನ್ನು ಒಂದು ಮಾರ್ಗವನ್ನಾಗಿ ಬಳಸಲು "ಶಿಲ್ಪ ಗ್ರಾಮ"ವಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಿತು (ಮಾರ್ಚ್ 2007). ಕರ್ನಾಟಕ ಸರ್ಕಾರವು ಇದಕ್ಕಾಗಿ ಕಂಪನಿಗೆ ₹ 1 ಕೋಟಿಯನ್ನು ಮಂಜೂರು ಮಾಡಿತು (ಮಾರ್ಚ್ 2007).

ಕಾದಂಬರಿ, ಒಂದು ಸರ್ಕಾರೇತರ ಸಂಸ್ಥೆ (ಎನ್‌ಜಿಒ), ಈ ಯೋಜನೆಯಲ್ಲಿ ಬಹಳ ಆಸಕ್ತಿಯನ್ನು ತೋರಿಸಿತು ಮತ್ತು ಯೋಜನೆಯ ಆರ್ಕಿಟೆಕ್ಟ್ ಮತ್ತು ನಿರ್ವಾಹಕರಾಗಿರಲು ಮುಂದೆ ಬಂದಿತು. ಕರಕುಶಲಕಲೆಗಳ ಅಭಿವೃದ್ಧಿ ಆಯೋಗ, ಭಾರತ ಸರ್ಕಾರ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಂಪನಿ ಮತ್ತು ಕಾದಂಬರಿ ನಡುವೆ ಜರುಗಿದ ಸಭೆಯೊಂದರಲ್ಲಿ, ಇತರ ಕಾಮಗಾರಿಗಳ ಪೈಕಿ, ಶ್ರೀ ವರದರಾಜಸ್ವಾಮಿ ದೇವಸ್ಥಾನದ ಪುನರುತ್ಥಾನ, ಸಮುದಾಯ ಸೌಲಭ್ಯ ಕೇಂದ್ರದ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಯಿತು (ಮಾರ್ಚ್ 2008). ಪರಿಣಾಮವಾಗಿ, ಸಮುದಾಯ ಭವನ ನಿರ್ಮಾಣದ ಕಾಮಗಾರಿಯನ್ನು ಅಂದಾಜು ವೆಚ್ಚವಾದ ₹ 59.50 ಲಕ್ಷ ಮತ್ತು ಶ್ರೀ ವರದರಾಜಸ್ವಾಮಿ ದೇವಸ್ಥಾನದ ಪುನರುತ್ಥಾನವನ್ನು ಅಂದಾಜು ವೆಚ್ಚವಾದ ₹ 13.68 ಲಕ್ಷದೊಂದಿಗೆ ಶ್ರೀ ಕೆ. ಶ್ರೀನಿವಾಸ್ (ಗುತ್ತಿಗೆದಾರರು) ಅವರಿಗೆ ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ ಅವರಿಂದ ನೀಡಲಾಯಿತು (ಫೆಬ್ರವರಿ 2009). ಕರ್ನಾಟಕ ಸರ್ಕಾರವು ₹ 10 ಲಕ್ಷ ವೆಚ್ಚದಲ್ಲಿ ಕಾದಂಬರಿಗೆ ಆರ್ಕಿಟೆಕ್ಚರ್ ಮತ್ತು ಯೋಜನಾ ನಿರ್ವಹಣೆಯ ಕಾಮಗಾರಿಯನ್ನು ವಹಿಸಲು ಕೆಟಿಪಿಪಿ ಅಧಿನಿಯಮದಲ್ಲಿ 4 (ಜಿ) ವಿನಾಯಿತಿಯನ್ನು ನೀಡಿತು (ಫೆಬ್ರವರಿ 2009). ಜಾಗವನ್ನು ಗುತ್ತಿಗೆದಾರರಿಗೆ ಅಕ್ಟೋಬರ್ 2009ರಲ್ಲಿ ಹಸ್ತಾಂತರಿಸಲಾಯಿತು ಮತ್ತು ಕಾಮಗಾರಿಯನ್ನು ಜಾಗವನ್ನು ಹಸ್ತಾಂತರಿಸಿದ ದಿನಾಂಕದಿಂದ ಒಂಬತ್ತು ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕಾಗಿತ್ತು (ಜುಲೈ 2010ರ ಹೊತ್ತಿಗೆ). ಕೋರಿಕೆಗಳ ಆಧಾರದ ಮೇಲೆ, ಕಂಪನಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ಇವರಿಗೆ ₹ 35.35 ಲಕ್ಷ[138] ಬಿಡುಗಡೆ ಮಾಡಿತು.

ಕಾಮಗಾರಿಗಳು ಪ್ರಮುಖವಾಗಿ ಗುತ್ತಿಗೆದಾರರ ಕಾರಣ ವಿಳಂಬವಾದವು. ಜೂನ್ 2010 ಮತ್ತು ಆಗಸ್ಟ್ 2011ರ ನಡುವೆ ಗುತ್ತಿಗೆದಾರರಿಗೆ ಐದು ನೋಟಿಸುಗಳನ್ನು ನೀಡಲಾಯಿತು. ಗುತ್ತಿಗೆದಾರರು ಕಾಮಗಾರಿಯನ್ನು ಸೆಪ್ಟೆಂಬರ್ 2011ರ ಹೊತ್ತಿಗೆ ಪೂರ್ಣಗೊಳಿಸಲು ಒಪ್ಪಿದ್ದರು (ಮೇ 2011). ಆದಾಗ್ಯೂ, ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲಿಲ್ಲ.

ಗುತ್ತಿಗೆದಾರರು ಎಲ್ಲಾ ಗುಣಮಟ್ಟದ ಮತ್ತು ಮೂಲಭೂತ ನಿರ್ಮಾಣದ ಸಮಸ್ಯೆಗಳನ್ನು ಸರಿಪಡಿಸಬೇಕು ಮತ್ತು ಕಾಮಗಾರಿಯ ವಿಮರ್ಶೆಗಾಗಿ ಕರೆಯುವ ಸಭೆಗಳಲ್ಲಿ ತಾವು ಮತ್ತು ತಮ್ಮ ತಂಡವು ಲಭ್ಯವಿರಬೇಕು ಎಂಬುದಾಗಿ ಕಾದಂಬರಿ ಹೇಳಿತು (ಜೂನ್ 2013). ಕಾಮಗಾರಿಯು ಅಪೂರ್ಣವಾಗಿದೆ ಮತ್ತು ಸ್ಥಗಿತವಾಗಿದೆ ಎಂಬುದಾಗಿ ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ ಹೇಳಿದರು (ಜೂನ್ 2016). ವಿನ್ಯಾಸಗಳು ಮತ್ತು ಸೂಚನೆಗಳ ಅನುಸಾರ ಕಾಮಗಾರಿಯನ್ನು ಕಾರ್ಯಗತಗೊಳಿಸುವಲ್ಲಿ ಗುತ್ತಿಗೆದಾರರ ವೈಫಲ್ಯದ ಕಾರಣ, ಕಾದಂಬರಿಯು ಯೋಜನೆಯಿಂದ ಹಿಂದಕ್ಕೆ ಸರಿಯಿತು (ಜೂನ್ 2016). ಈ ಕಾಮಗಾರಿಯಲ್ಲಿ ಮತ್ತಾವುದೇ ಪ್ರಗತಿ ಇರಲಿಲ್ಲ. ಯೋಜನೆಯ ಮೇಲೆ ಭರಿಸಲಾದ ₹ 39.04 ಲಕ್ಷ[139] ವೆಚ್ಚವು ಸಮನ್ವಯತೆ ಮತ್ತು ಮೇಲ್ವಿಚಾರಣೆಯ ಕೊರತೆಯಿಂದಾಗಿ ಫಲಪ್ರದವಾಗಲಿಲ್ಲ.

ಸರ್ಕಾರವು ಕಂಪನಿಯ ಉತ್ತರವನ್ನು ಅನುಮೋದಿಸಿತು (ಮಾರ್ಚ್ 2024) ಈ ಉತ್ತರವು ಫೆಬ್ರವರಿ 2022/ಮೇ 2023ರ ಅವಧಿಯಲ್ಲಿ, ಅದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ಅವರಿಗೆ ಪತ್ರಗಳನ್ನು ಬರೆದು ವೆಚ್ಚದ ವಿವರಗಳು, ಬಳಕೆಯ ದೃಢೀಕರಣಪತ್ರಗಳು ಮತ್ತು ಹತ್ತು ವರ್ಷಗಳ ನಂತರವೂ ಕಾಮಗಾರಿಯು ಅಪೂರ್ಣವಾಗಿರುವುದಕ್ಕೆ ಕಾರಣಗಳನ್ನು ಸಲ್ಲಿಸುವಂತೆ ಕೇಳಿತು, ಇದಕ್ಕೆ ಉತ್ತರವು ಇನ್ನೂ ಬರಬೇಕಿರುವುದು ಎಂಬುದಾಗಿ ತಿಳಿಸಿರುವುದು. ಕಂಪನಿಯು ಮುಂದಿನ ಕ್ರಮದ ಮೇಲೆ ನಿರ್ಧಾರ ಕೈಗೊಳ್ಳಲು ಅಧಿಕಾರಿಗಳ ಜೊತೆಗೆ ನಿರಂತರ ಸಂಪರ್ಕದಲ್ಲಿ ಇರುವುದಾಗಿ ಸಹ ತಿಳಿಸಿರುವುದು. ಕಂಪನಿಯು ಜೂನ್ 2016ರಿಂದ

[138] ₹ 13.35 ಲಕ್ಷ 29 ಏಪ್ರಿಲ್ 2010ರಂದು; ₹ 11 ಲಕ್ಷ 28 ಸೆಪ್ಟಂಬರ್ 2010ರಂದು ಹಾಗೂ ₹ 11ಲಕ್ಷ 18 ನವಂಬರ್ 2010ರಂದು.

[139] ಮುದ್ರಣದ ಕಡೆಗೆ ₹ 3.19 ಲಕ್ಷ ಮತ್ತು ಗೌರವಧನದ ಕಡೆಗೆ ₹ 0.50 ಲಕ್ಷ ಸೇರಿದಂತೆ.

ಫೆಬ್ರವರಿ 2022ರವರೆಗೆ ಯಾವುದೇ ಕ್ರಮವನ್ನು ಕೈಗೊಂಡಿರದ ಕಾರಣ ಈ ಉತ್ತರವು ಮೇಲ್ವಿಚಾರಣೆಯಲ್ಲಿನ ಕೊರತೆಯನ್ನು ಪುನರುಚ್ಚರಿಸುತ್ತದೆ.

ಆದ್ದರಿಂದ, 14 ವರ್ಷಗಳು ಪೂರ್ಣಗೊಂಡರೂ ಸಹ, ಶಿವಾರಪಟ್ಟಣ ಗ್ರಾಮವನ್ನು ಶಿಲ್ಪಿಗಳ ಸಮುದಾಯದ ಕಲ್ಯಾಣಕ್ಕಾಗಿ "ಶಿಲ್ಪ ಗ್ರಾಮ"ವಾಗಿ ಅಭಿವೃದ್ಧಿಪಡಿಸುವ, ತನ್ಮೂಲಕ ಇಡೀ ಗ್ರಾಮದ ಜೀವನೋಪಾಯವನ್ನು ಸುಧಾರಿಸುವ, ಕರ್ನಾಟಕ ಸರ್ಕಾರದ ಧ್ಯೇಯೋದ್ದೇಶವೇ ಈಡೇರಿರುವುದಿಲ್ಲ. ಜೊತೆಗೆ, 4 ವರ್ಷಗಳು ಪೂರ್ಣಗೊಂಡ ಮೇಲೂ ತನ್ನದೇ ಆದ ಬಹು-ಉಪಯೋಗಿ ಸಂಕೀರ್ಣವನ್ನು ಅದರ ಪ್ರಯೋಜನ ಪಡೆದುಕೊಳ್ಳುವ ಸಲುವಾಗಿ ಹೊಂದಬೇಕೆಂಬ ಕಂಪನಿಯ ಧ್ಯೇಯೋದ್ದೇಶವೂ ಸಹ ಅಡಚಣೆಯಲ್ಲಿ ಸಿಲುಕಿಕೊಂಡಿರುವುದು.

ಆದ್ದರಿಂದ, ಕಂಪನಿಯು ಮೇಲ್ಕಂಡ ಪ್ರಕರಣಗಳಲ್ಲಿ ₹ 1.28 ಕೋಟಿ ವೆಚ್ಚವನ್ನು ಭರಿಸಿದರೂ ಕೂಡ ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಲು ಆಗಲಿಲ್ಲ. ಕಾಮಗಾರಿಗಳ ಅಪೂರ್ಣತೆಯ ಕಾರಣಗಳು ಕಾಮಗಾರಿಗಳನ್ನು ವಿಭಜಿಸಿರುವುದು, ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿ ಮಾಡದಿರುವುದು, ಸಮನ್ವಯ ಮತ್ತು ಮೇಲ್ವಿಚಾರಣೆಯ ಕೊರತೆ, ಇತ್ಯಾದಿ ಕಾರಣಗಳಿಂದ ಆಗಿರುತ್ತವೆ.

**ಶಿಫಾರಸು:**

**27. ಲೆಕ್ಕಪರಿಶೋಧನೆಯು ಆಡಳಿತ ಮಂಡಳಿಯು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಾಗ ಕೆಟಿಪಿಪಿ ಅಧಿನಿಯಮದ ಅಂತರ್ಗತ 4(ಜಿ) ವಿನಾಯಿತಿಯ ಅನುವುಗಳ ಅನುಪಾಲನೆ ಮಾಡಬೇಕು ಮತ್ತು ಉದ್ದೇಶಿತ ಪ್ರಯೋಜನಗಳನ್ನು ಸಾಧಿಸಲು ಮತ್ತು ಹೆಚ್ಚುವರಿ ಹಣಕಾಸು ಹೊರೆಯನ್ನು ತಪ್ಪಿಸಲು ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡುತ್ತಿದೆ.**

**ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ**

### *6.14 ದೋಷಪೂರಿತ ಕೆಲಸದ ಹೊಣೆಗಾರಿಕೆ ಷರತ್ತನ್ನು ಜಾರಿಗೊಳಿಸಲು ವಿಫಲವಾದರಿಂದ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಯಿತು.*

**ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮವು ಕೆಪಿಡಬ್ಲ್ಯೂಡಿ ಕೋಡ್‌ನಲ್ಲಿ ತಿಳಿಸಿರುವಂತೆ ಕಾಮಗಾರಿ ಪೂರ್ಣಗೊಂಡ ದಿನಾಂಕದ ಲೆಕ್ಕಾಚಾರವನ್ನು ಅನುಸರಿಸದಿರುವುದರಿಂದ ಗುತ್ತಿಗೆದಾರರ ವಿರುದ್ಧ ದೋಷಪೂರಿತ ಕೆಲಸದ ಹೊಣೆಗಾರಿಕೆ ಷರತ್ತನ್ನು ಜಾರಿಗೊಳಿಸಲಿಲ್ಲ. ಕಾರಣ ಕಟ್ಟಡ ನಿರ್ಮಾಣದ ದೋಷಗಳನ್ನು ಸರಿಪಡಿಸಲು ₹ 1.23 ಕೋಟಿ ಹೆಚ್ಚುವರಿ ವೆಚ್ಚವಾಗಿದೆ.**

ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಂಹಿತೆಯ (ಕೆಪಿಡಬ್ಲ್ಯೂಡಿ ಕೋಡ್) ಕಂಡಿಕೆ 188 ರಂತೆ, ಕಾಮಗಾರಿಯ ಉಸ್ತುವಾರಿ ವಹಿಸಿರುವ ಉಪವಿಭಾಗಾಧಿಕಾರಿಯು ಕೆಲಸದ ಪ್ರಗತಿಯಿಂದ ತೃಪ್ತರಾದಾಗ, ಗುತ್ತಿಗೆದಾರರು ಪೂರ್ಣಗೊಳಿಸಿದ ವರದಿಯನ್ನು ಸಲ್ಲಿಸಬೇಕು ಎಂದು ಸೂಚಿಸುತ್ತದೆ: ಅದರಂತೆ;

- ನೀರು ಸರಬರಾಜು, ಯುಜಿಡಿ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಅಂದಾಜು ಅಥವಾ ಇತರ ಅಗತ್ಯ ಸಂಭವನೀಯ ವಸ್ತುಗಳಲ್ಲಿ ನಮೂದಿಸಲಾದ ಎಲ್ಲಾ ವಸ್ತುಗಳು ಪೂರ್ಣಗೊಂಡಿರಬೇಕು ಮತ್ತು

- ಎಲ್ಲಾ ಅನಗತ್ಯ ವಸ್ತುಗನ್ನು ತೆಗೆದು ಸುತ್ತಮುತ್ತಲಿನ ಮತ್ತು ಕೆಲಸದ ಒಳಭಾಗವನ್ನು ಸ್ವಚ್ಛಗೊಳಿಸಬೇಕು.

ತದನಂತರ, ಕಾರ್ಯನಿರ್ವಾಹಕ ಅಭ್ಯಯಂತರರು ಗುತ್ತಿಗೆದಾರರಿಂದ ಕೆಲಸವನ್ನು ವಹಿಸಿಕೊಳ್ಳಬಹುದು ಮತ್ತು ಗುತ್ತಿಗೆದಾರರ ಅಂತಿಮ ಬಿಲ್ ಪಾವತಿಸಬಹುದು. ಪೂರ್ಣಗೊಂಡ ಪ್ರಮಾಣಪತ್ರವನ್ನು ಸಲ್ಲಿಸುವ ಮೂಲಕ ಕಾಮಗಾರಿಯ ಲೆಕ್ಕಗಳನ್ನು ಮುಕ್ತಾಯಗೊಳಿಸ ಬಹುದು.

ಪೊಲೀಸ್ ಗೃಹ 2020 ಯೋಜನೆಯಡಿ, ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 11,000 ಪೊಲೀಸ್ ವಸತಿ ಗೃಹಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ (ಕಂಪನಿ) ಯೋಜನೆಗೆ ಕರ್ನಾಟಕ ಸರ್ಕಾರ (ನವೆಂಬರ್ 2013) ಅನುಮೋದನೆ ನೀಡಿದೆ. ಅದರಂತೆ, ಕಂಪನಿಯು ಬೆಂಗಳೂರು ನಗರ ಜಿಲ್ಲೆಯ ಟ್ಯಾಂಕ್ ಬಂಡ್ ರಸ್ತೆಯ ಬಿನ್ನಿ ಮಿಲ್‌ನಲ್ಲಿ 128 ಪೊಲೀಸ್ ಕಾನ್ಸ್‌ಟೇಬಲ್ ಕ್ವಾರ್ಟರ್ಸ್ ನಿರ್ಮಾಣದ ಕೆಲಸವನ್ನು ಕೈಗೆತ್ತಿಕೊಂಡಿತು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು (ಡಿಸೆಂಬರ್ 2015) ಅಂದಾಜು ₹ 30.91 ಕೋಟಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿ, ಟೆಂಡರ್‌ದಾರರ ಸ್ವಂತ ವಿನ್ಯಾಸ/ಪರ್ಯಾಯ ತಂತ್ರಜ್ಞಾನ/ಸಾಂಪ್ರದಾಯಿಕ ವಿಧಾನದ ನಿರ್ಮಾಣದ ಆಧಾರದ ಮೇಲೆ ಲಂಪ್ಸಮ್ ಟರ್ನ್-ಕೀ ಆಧಾರದ ಮೇಲೆ ಕೆಲಸ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದರು(ಡಿಸೆಂಬರ್ 2015). ಕಂಪನಿಯು ಕೆಲಸವನ್ನು ಮೇ: ಪಿ.ಜಿ. ಶೆಟ್ಟಿ ಕನ್ಸ್ಟ್ರಕ್ಷನ್ಸ್ ಟೆಕ್ನಾಲಜಿ ಪ್ರೈ. ಲಿಮಿಟೆಡ್, ಮೈಸೂರು (ಗುತ್ತಿಗೆದಾರ)ರವರಿಗೆ ₹ 23.98 ಕೋಟಿ ವೆಚ್ಚಕ್ಕೆ ಟೆಂಡರ್ ವಹಿಸಿದರು(ಏಪ್ರಿಲ್ 2016). ಕಾಮಗಾರಿಯ ವ್ಯಾಪ್ತಿಯು ಎ ಮತ್ತು ಬಿ ಎರಡು ಬ್ಲಾಕ್‌ಗಳಲ್ಲಿ ತಲಾ 64 ಫ್ಲಾಟ್‌ಗಳನ್ನು ಹೊಂದಿರುವ 128 ಫ್ಲಾಟ್‌ಗಳ ನಿರ್ಮಾಣವನ್ನು ಒಳಗೊಂಡಿತ್ತು. ಕಾಮಗಾರಿಯನ್ನು 2017ರ ನವೆಂಬರ್ 28ರೊಳಗೆ ಪೂರ್ಣಗೊಳಿಸುವಂತೆ ಸೂಚಿಸಲಾಗಿತ್ತು.

ಕಂಪನಿ ಮತ್ತು ಗುತ್ತಿಗೆದಾರರ ನಡುವೆ ಕಾರ್ಯಗತಗೊಳಿಸಿದ (ಮಾರ್ಚ್ 2016) ಒಪ್ಪಂದದ ಷರತ್ತು ನಂ.8 ಇದನ್ನು ನಿರ್ದಿಷ್ಟಪಡಿಸಿದೆ:

(i) ದೋಷದ ಹೊಣೆಗಾರಿಕೆಯ ಅವಧಿ (ಡಿ.ಎಲ್.ಪಿ) ಎಂದರೆ ಅಧಿಕಾರ ಹೊಂದಿರುವ ಅಭ್ಯಯಂತರರಿಂದ ಕೆಲಸವನ್ನು ಪೂರ್ಣಗೊಳಿಸಿದ ಪ್ರಮಾಣಪತ್ರವನ್ನು ನೀಡಿದ ನಂತರದ ಅವಧಿಯಲ್ಲಿ ಯಾವುದೇ ತೊಂದರೆ ಅಥವಾ ದೋಷಗಳಿಲ್ಲದೆ ರಚನೆಯು ಕಾರ್ಯನಿರ್ವಹಿಸಬೇಕಾಗುತ್ತದೆ.

(ii) ಲಿಫ್ಟ್ ಮತ್ತು ಎಸ್.ಟಿ.ಪಿ ಕಾಮಗಾರಿಗಳು ಡಿ.ಎಲ್. ಪಿ ಪೂರ್ಣಗೊಂಡ ದಿನಾಂಕದಿಂದ ಮೂರು ವರ್ಷಗಳು ಮತ್ತು ಇದನ್ನು ಹೊರತುಪಡಿಸಿ, ಅಧಿಕಾರ ಹೊಂದಿರುವ ಅಭ್ಯಾಯಂತರರಿಂದ ಪ್ರಮಾಣೀಕರಿಸಿದಂತೆ ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ ಡಿ.ಎಲ್.ಪಿಯು 12 ತಿಂಗಳುಗಳಾಗಿರಬೇಕು.

(iii) ಡಿ.ಎಲ್. ಪಿ ಸಮಯದಲ್ಲಿ, ಕಾರ್ಯಗತಗೊಳಿಸಿದ ಕೆಲಸದಲ್ಲಿ ಕಂಡುಬರುವ ಯಾವುದೇ ರಚನಾತ್ಮಕ ದೋಷಗಳನ್ನು ಸರಿಪಡಿಸಲು / ಬದಲಿಸಲು ಗುತ್ತಿಗೆದಾರನು ಸಂಪೂರ್ಣ ಜವಾಬ್ದಾರನಾಗಿರುತ್ತಾನೆ.

ಒಪ್ಪಂದದ *ಷರತ್ತು 31.1* ರಂತೆ, ಡಿಎಲ್‌ಪಿ ಅಂತ್ಯದ ಮೊದಲು ಗಮನಿಸಲಾದ ಯಾವುದೇ ದೋಷಗಳಿಗೆ ಉದ್ಯೋಗದಾತರು ಗುತ್ತಿಗೆದಾರರಿಗೆ ಸೂಚನೆ ನೀಡಬೇಕು ಮತ್ತು ದೋಷಗಳನ್ನು ಸರಿಪಡಿಸದಿರುವವರೆಗೆ ಡಿಎಲ್‌ಪಿಯನ್ನು ವಿಸ್ತರಿಸಲಾಗುತ್ತದೆ.

ಕಂಪನಿಯ ದಾಖಲೆಗಳ ಲೆಕ್ಕಪರಿಶೋಧನೆಯ (ನವೆಂಬರ್ 2022), ಗುತ್ತಿಗೆದಾರನು ನಿಗದಿತ ಅವಧಿಯೊಳಗೆ ಕೆಲಸವನ್ನು ಪೂರ್ಣಗೊಳಿಸಲಿಲ್ಲ ಎಂದು ತಿಳಿಸಿತು ಮತ್ತು ಆದ್ದರಿಂದ, ಕಂಪನಿಯು ಕಾಲಕಾಲಕ್ಕೆ ಕೆಲಸವನ್ನು ಪೂರ್ಣಗೊಳಿಸಲು ಸಮಯವನ್ನು ವಿಸ್ತರಿಸಿತು. ಮೂರನೇ ಮತ್ತು ಕೊನೆಯ ಅವಧಿಯ ವಿಸ್ತರಣೆಯು 31 ಆಗಸ್ಟ್ 2018 ವರೆಗೆ ಇತ್ತು. ಅಂತಿಮ ಬಿಲ್‌ಗಳ ಅಳತೆಗಳನ್ನು 25

ಮಾರ್ಚ್ 2019 ರಂದು ತೆಗೆದುಕೊಳ್ಳಲಾಯಿತು ಮತ್ತು ₹ 23.98 ಕೋಟಿ ಮೊತ್ತದ ಕಾಮಗಾರಿಯ ಅಂತಿಮ ಬಿಲ್ ಅನ್ನು 23 ಮೇ 2019 ರಂದು ಗುತ್ತಿಗೆದಾರರಿಗೆ ಪಾವತಿಸಲಾಗಿಯಿತು. ಆದಾಗ್ಯೂ, ಕಾರ್ಯನಿರ್ವಾಹಕ ಅಭ್ಯಾಯಂತರರು, ಬೆಂಗಳೂರು ನಗರ–2 (ವಿಭಾಗ) ಅವರು ನೀಡಿದ ಕಾಮಗಾರಿ ಪೂರ್ಣಗೊಂಡ ಪ್ರಮಾಣಪತ್ರದಲ್ಲಿ, ಕಾಮಗಾರಿಯನ್ನು ಪೂರ್ಣಗೊಳಿಸುವ ದಿನಾಂಕವನ್ನು 31 ಆಗಸ್ಟ್ 2018 ಎಂದು ಸೂಚಿಸಲಾಗಿದೆ. ಕಂಪನಿಯು ದೋಷದ ಹೊಣೆಗಾರಿಕೆ ಅವಧಿಯ ಖಾತೆಯಲ್ಲಿ ತಡೆಹಿಡಿಯಲಾದ ₹ 0.36 ಕೋಟಿ ಮತ್ತು ಮೇಲಿನ ಕೆಲಸಕ್ಕೆ ಸಂಬಂಧಿಸಿದಂತೆ ₹ 1.20 ಕೋಟಿ ಭದ್ರತಾ ಠೇವಣಿ ಬಿಡುಗಡೆ ಮಾಡಿದೆ (ಮಾರ್ಚ್ 2020). ಗುತ್ತಿಗೆದಾರರು 31 ಆಗಸ್ಟ್ 2018 ರಂತೆ ಕೆಲಸವನ್ನು ಪೂರ್ಣಗೊಳಿಸಿಲ್ಲ ಎಂಬ ಅಂಶವು ಈ ಕೆಳಗಿನವುಗಳಿಂದ ದೃಢೀಕರಿಸಲ್ಪಟ್ಟಿದೆ:

- ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭ್ಯಯಂತರವರಿಗೆ ಬರೆದ (ಸೆಪ್ಟೆಂಬರ್ 2018) ಪತ್ರದಲ್ಲಿ ನಿರಂತರ ಮಳೆಯಾಗುತ್ತಿರುವುದರಿಂದ ಆಂತರಿಕ ರಸ್ತೆಗಳ ಅಂತಿಮ ಡಾಂಬರೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಲಿಲ್ಲ ಎಂದು ಒಪ್ಪಿಕೊಂಡಿದ್ದಾರೆ.

- ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಕನ್ಸಲ್ಟೆಂಟ್ (ಪಿ.ಎಂ.ಸಿ)[140] ಅವರು ಗುತ್ತಿಗೆದಾರರಿಗೆ ಬರೆದ (ಅಕ್ಟೋಬರ್ 2018 ಮತ್ತು ಫೆಬ್ರವರಿ 2019) ಪತ್ರಗಳಲ್ಲಿ ರಸ್ತೆ ಡಾಂಬರೀಕರಣ, ಬಾಹ್ಯ ಮತ್ತು ಆಂತರಿಕ ವಿದ್ಯುತ್ ನಿಯೋಜನೆ, ಮರಗಳ ನೆಡುವಿಕೆ ಮತ್ತು ಅಗ್ನಿಶಾಮಕ ಬಿಡಬ್ಲ್ಯೂಎಸ್ಎಸ್‌ಬಿ ಮತ್ತು ಬೆಸ್ಕಾಂಗಳಿಂದ ಶಾಸನಬದ್ಧ ಸಂಸ್ಥೆಗಳಾದ ಅನುಮೋದನೆ ಬಾಕಿ ಇದೆ ಎಂದು ತಿಳಿಸಲಾಗಿತ್ತು.

- •ಸಹಾಯಕ ಕಾರ್ಯಪಾಲಕ ಅಭ್ಯಯಂತರರು, ನಂ.1 ಉಪವಿಭಾಗ, ಬೆಂಗಳೂರು ರವರು, ವಿಭಾಗದ ಕಾರ್ಯನಿರ್ವಾಹಕ ಅಭ್ಯಾಯಂತರರು ಅವರಿಗೆ ಬರೆದ (ಫೆಬ್ರವರಿ 2019) ಪತ್ರದಲ್ಲಿ ಗುತ್ತಿಗೆದಾರರ ಬಾಕಿ ಉಳಿದಿರುವ[141] ಕಾಮಗಾರಿಗಳನ್ನು ಪೂರ್ಣಗೊಳಿಸಿದರೆ ಮತ್ತು ಸಮಯವನ್ನು 17 ಡಿಸೆಂಬರ್ 2018 ವಿಸ್ತರಿಸಿದರೆ ಮಾತ್ರ ಅಂತಿಮ ಬಿಲ್ಲನ್ನು ಪಾವತಿಸಬಹುದು ಎಂದು ಅಭಿಪ್ರಾಯಿಸಿದ್ದಾರೆ.

- ಗುತ್ತಿಗೆದಾರರಿಂದ ಸಲ್ಲಿಸಿದ (ಫೆಬ್ರವರಿ 2019) ಅಂತಿಮ ಬಿಲ್‌ನ ಪರಿಶೀಲನೆಯ ನಂತರ ಪಿಎಂಸಿಯು ಪೂರ್ಣಗೊಳ್ಳಲು ಬಾಕಿ ಉಳಿದಿರುವ ಕೆಲಸಗಳಿಗೆ ಸಂಬಂಧಿತ ಮೊತ್ತವನ್ನು ತಡೆಹಿಡಿದ ನಂತರ ಅಂತಿಮ ಪಾವತಿಯನ್ನು ಪರಿಗಣಿಸಬಹುದು ಎಂದು ತಿಳಿಸಿದೆ.(ಮಾರ್ಚ 2019) ಬಾಕಿ ಕೆಲಸಗಳನ್ನು ಗುತ್ತಿಗೆದಾರರು ಹಾಜರುಪಡಿಸಿದ ನಂತರವೇ ಅಂತಿಮ ಬಿಲ್ ಅನ್ನು ಪಾವತಿಗಾಗಿ (ಏಪ್ರಿಲ್ 2019) ಒಪ್ಪಿಕೊಳ್ಳಲಾಯಿತು.

ಹೀಗಾಗಿ, ಕಂಪನಿ, ಪಿಎಂಸಿ ಮತ್ತು ಗುತ್ತಿಗೆದಾರರ ನಡುವಿನ ಮೇಲಿನ ಸಂವಹನಗಳಿಂದ, ಅಂತಿಮ ಅಳತೆಗಳನ್ನು ಮಾಡುವಾಗ ಮಾರ್ಚ್ 2019 ರವರೆಗೆ ಕೆಲಸ ಪೂರ್ಣಗೊಂಡಿಲ್ಲ ಎಂಬುದು ಸ್ಪಷ್ಟವಾಗಿದೆ. ಆದ್ದರಿಂದ, 31 ಆಗಸ್ಟ್ 2018 ರಂತೆ ಪೂರ್ಣಗೊಂಡ ದಿನಾಂಕವನ್ನು ಸೂಚಿಸುವ ಕೆಲಸ ಪೂರ್ಣಗೊಳಿಸುವಿಕೆಯ ಪ್ರಮಾಣಪತ್ರವನ್ನು ಸರಿಯಾದ ಶ್ರದ್ಧೆಯಿಲ್ಲದೆ ಮಾಡಲಾಗಿದೆ ಮತ್ತು ಸಮರ್ಥನೆಯ ಅಗತ್ಯವಿದೆ.

ಏತನ್ಮಧ್ಯೆ, ಕಂಪನಿಯು ಕಾರಿಡಾರ್‌ನ ಪ್ಯಾರಪೆಟ್ ಮತ್ತು ಬ್ಲಾಕ್ ಬಿ ಯ ಲಿಫ್ಟ್ ವೆಲ್ ನಡುವೆ ಗ್ರೌಟೆಡ್ ಜಾಯಿಂಟ್ ಬೇರ್ಪಟ್ಟಿರುವುದನ್ನು ಗಮನಿಸಿದೆ (ಜೂನ್ 2019). ಸೆಪ್ಟೆಂಬರ್ 2019 ರಲ್ಲಿ, ಕ್ವಾರ್ಟರ್ಸ್‌ನ ಬಿ ಬ್ಲಾಕ್ ಅಡಿಪಾಯದ ನೆಲೆಯು ವಿಚ್ಛಲಿತಗೂಂಡಿದ್ದರಿಂದ ಬಿ ಬ್ಲಾಕ್ ಪೂರ್ವಕ್ಕೆ ವಾಲಿತು. ಕಂಪನಿಯ ಅಧಿಕಾರಿಗಳು, ಪಿ.ಎಂ.ಸಿ ಮತ್ತು ಗುತ್ತಿಗೆದಾರರು ಬಿ ಬ್ಲಾಕ್‌ನ ಎರಡೂ

[140] ಎಸಿಎಸ್ ಡಿಸೈನ್ ಕನ್ಸಲ್ಟಿಂಗ್ ಪ್ರೈ. ಲಿಮಿಟೆಡ್, ಬೆಂಗಳೂರು.

[141] ನೀರು ಸರಬರಾಜು ಸಂಪರ್ಕವನ್ನು ಒದಗಿಸುವುದು, ಕಚ್ಚಾ ಮತ್ತು ಸಂಸ್ಕರಿಸಿದ ನೀರನ್ನು ಪರೀಕ್ಷಿಸುವುದು, ಕಾರಿಡಾರ್‌ಗಳಿಗೆ ಸೇವಾ ಶಾಫ್ಟ್‌ಗಳು ಮತ್ತು ತೆರಪಿನ ಬಾಗಿಲುಗಳನ್ನು ಒದಗಿಸುವುದು, ಕರ್ಬ್ ಸ್ಟೋನ್‌ಗಳ ಪೇಂಟಿಂಗ್, ಟಾಯ್ಲೆಟ್ ಸೀಲಿಂಗ್ ಮತ್ತು ಎಸ್.ಟಿ.ಪಿ ಪಂಪ್ ರೂಮ್, ನೀರು ಸರಬರಾಜು ಮತ್ತು ನೈರ್ಮಲ್ಯ ಪೈಪ್‌ಲೈನ್‌ಗಳ ಪರೀಕ್ಷೆ ಇತ್ಯಾದಿ.

ಬದಿಯಲ್ಲಿರುವ ಕೀಲುಗಳಲ್ಲಿನ ಅಂತರವನ್ನು ಪರಿಶೀಲಿಸಲು ಸೈಟ್‌ಗೆ ಭೇಟಿ ನೀಡಿದರು (ಜೂನ್ 2020). ಬಿ ಬ್ಲಾಕ್‌ನ ಎಂಟು ಮೂಲೆಗಳಲ್ಲಿ ಕಟ್ಟಡದ ಲಂಬ ಜೋಡಣೆ ಮತ್ತು ಪ್ಲಂಬಿಂಗ್ ಲೈನ್‌ಗಳ ನಡುವಿನ ಅಂತರ ಆರು ತಿಂಗಳ ಕಾಲ ನಿರಂತರವಾಗಿ ವೀಕ್ಷಿಸಲಾಯಿತು ಇದರ ಅಂತರವು ಮತ್ತಷ್ಟು ವಿಸ್ತರಿಸಿದೆ ಎಂದು ದೃಢಪಡಿಸಿತು.

ಕಂಪನಿಯು ಪಿಸಿ ಕ್ವಾರ್ಟರ್ಸ್‌ನ ಬ್ಲಾಕ್-ಬಿ ಯಲ್ಲಿ ಲಿಫ್ಟ್ ವೆಲ್ನ ಎರಡೂ ಬದಿಯಲ್ಲಿನ ಅಗಲವಾದ ಅಂತರದ ಕೀಲುಗಳಿಗೆ ಸೂಕ್ತವಾದ ಪರಿಹಾರ ಕ್ರಮಗಳನ್ನು ಪಡೆಯಲು ತಾಂತ್ರಿಕ ತಜ್ಞರ ಸಲಹಾ ಸಮಿತಿಯನ್ನು (ಟಿ.ಇ.ಎ.ಸಿ) ಸ್ಥಾಪಿಸಿದೆ. (ಏಪ್ರಿಲ್ 2022). ಉಪ ಮಣ್ಣು ಮತ್ತು ಅಸ್ತಿತ್ವದಲ್ಲಿರುವ ರಾಫ್ಟ್ ಅನ್ನು ಗ್ರೌಟಿಂಗ್‌ನೊಂದಿಗೆ ಮೈಕ್ರೋ ಪೈಲ್‌ಗಳನ್ನು ಚಾಲನೆ ಮಾಡುವ ಮೂಲಕ ಮತ್ತು ಅಸ್ತಿತ್ವದಲ್ಲಿರುವ ರಾಫ್ಟ್‌ಗೆ ಬಲವರ್ಧಿತ ಕಾಂಕ್ರೀಟ್‌ನ ಹೆಚ್ಚುವರಿ ದಪ್ಪವನ್ನು ಒದಗಿಸುವ ಮೂಲಕ ಬಿ ಬ್ಲಾಕ್‌ನ ಟಿಲ್ಟಿಂಗ್ ಭಾಗದ ಅಸ್ತಿತ್ವದಲ್ಲಿರುವ ರಾಫ್ಟ್ ಅನ್ನು ಬಲಪಡಿಸಲು ಟಿ.ಇ.ಎ.ಸಿ ಶಿಫಾರಸು ಮಾಡಿದೆ (ಸೆಪ್ಟೆಂಬರ್ 2021).

ಎಂಡಿಯವರು ಗುತ್ತಿಗೆದಾರರಿಗೆ 15 ದಿನಗಳ ಅವಧಿಯೊಳಗೆ ದೋಷಗಳನ್ನು ಸರಿಪಡಿಸಲು ನೋಟಿಸ್ ನೀಡಿದ್ದರೂ (ಅಕ್ಟೋಬರ್ 2021), ಈ ಸಂಬಂಧದಲ್ಲಿ ಗುತ್ತಿಗೆದಾರರ ವಿರುದ್ಧ ಅಥವಾ ತೆಗೆದುಕೊಂಡ ಕ್ರಮ ಲೆಕ್ಕಪರಿಶೋಧನೆಗೆ ಲಭ್ಯವಾಗಲಿಲ್ಲ. ಮರುಸ್ಥಾಪನೆ ಕಾರ್ಯಕ್ಕೆ ನೀಡಿದ (ಮಾರ್ಚ್ 2022) ಅನುಮೋದನೆಯ ಪ್ರಕಾರ ನಿರ್ದೇಶಕರ ಮಂಡಳಿಯು ಭದ್ರತಾ ಠೇವಣಿ ರೂಪದಲ್ಲಿ ಕಂಪನಿಯ ಬಳಿ ಇರುವ ಮೂಲ ಗುತ್ತಿಗೆದಾರರ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಮರುಸ್ಥಾಪನೆಯ ವೆಚ್ಚವನ್ನು ಮರುಪಡೆಯಲು ಮತ್ತು ನಿರ್ಲಕ್ಷ್ಯ, ಸತ್ಯಗಳ ತಪ್ಪು ನಿರೂಪಣೆ ಮತ್ತು ವಂಚನೆಗಾಗಿ ದಂಡವನ್ನು ವಿಧಿಸುವ ಮತ್ತು ಹಾನಿಯನ್ನು ನೀಡುವ ಪ್ರಕ್ರಿಯೆಗಳಿಗೆ ಸಿವಿಲ್ ಮತ್ತು ಕ್ರಿಮಿನಲ್ ಧಾವೆಯನ್ನು ಪ್ರಾರಂಭಿಸಲು ನಿರ್ದೇಶನ ನೀಡಿದೆ ಎಂದು ದಾಖಲೆಗಳು ತಿಳಿಸಿವೆ. ಕಂಪನಿಯು ಮೇಲಿನ ಕೆಲಸವನ್ನು ಮೇ: ಜಿ.ಪಂ. ಸಾಯಿಲ್ ಟೆಕ್ನಿಕ್ಸ್, ಬೆಂಗಳೂರುಗೆ ₹ 1.23 ಕೋಟಿಗೆ ಒಪ್ಪಿಗೆ ಟೆಂಡರ್ ಮೊತ್ತಕ್ಕೆ ವಹಿಸಿಕೊಟ್ಟಿದೆ (ಜುಲೈ 2022), ಕಾಮಗಾರಿಯು ಪ್ರಗತಿಯಲ್ಲಿದ್ದು, ₹ 1.10 ಕೋಟಿ ಮೇ: ಜಿ.ಪಂ. ಸಾಯಿಲ್ ಟೆಕ್ನಿಕ್ಸ್ ಗೆ ಪಾವತಿಸಲಾಗಿದೆ (ಮಾರ್ಚ್ 2023).

ಹೀಗಾಗಿ, ಗಣನೀಯ ಕೆಲಸಗಳು ಪೂರ್ಣಗೊಳ್ಳಲು ಬಾಕಿ ಉಳಿದ್ದಿದರು ಸಹ ಕಂಪನಿಯು ಕೆಪಿಡಬ್ಲ್ಯೂಡಿ ಕೋಡ್‌ನ ನಿಬಂಧನೆಗಳನ್ನು ಅನುಸರಿಸದೆ ಕೆಲಸ ಪೂರ್ಣಗೊಳಿಸುವ ದಿನಾಂಕವನ್ನು ನಿರ್ಧರಿಸಲು ದಿನಾಂಕವನ್ನು ಆಗಸ್ಟ್ 2018 ಕ್ಕೆ ಪೂರ್ವಭಾವಿಯಾಗಿ ದಾಖಲಿಸಿದೆ,. ಇದಲ್ಲದೆ, ಜೂನ್ 2019 ರ ಸಮಯದಲ್ಲಿ ಡಿಎಲ್‌ಪಿಯೊಳಗೆ ದೋಷಗಳು ಕಂಡುಬಂದರೂ, ಕಂಪನಿಯು ಒಪ್ಪಂದದ ಷರತ್ತು 31.1 ರಂತೆ, ದೋಷಗಳನ್ನು ಸರಿಪಡಿಸುವವರೆಗೆ ಡಿಎಲ್‌ಪಿ ವಿಸ್ತರಣೆಯ ಅಗತ್ಯತೆಯನ್ನು ಅಳವಡಿಸಲು ವಿಫಲವಾಗಿದೆ. ಇದರ ಪರಿಣಾಮವಾಗಿ, ನಿರ್ಮಾಣದಲ್ಲಿನ ದೋಷಗಳಿಗೆ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿ ಮಾಡುವ ನಿರ್ದೇಶಕರ ಮಂಡಳಿಯ ನಿರ್ದೇಶನಗಳನ್ನು ಅನುಸರಿಸಲು ಕಂಪನಿಯು ವಿಫಲವಾಗಿದೆ ಮತ್ತು ರಚನಾತ್ಮಕ ದೋಷಗಳನ್ನು ಸರಿಪಡಿಸಲು ₹ 1.23 ಕೋಟಿ ಹೆಚ್ಚುವರಿ ವೆಚ್ಚವನ್ನು ಮಾಡಲಾಗಿದೆ. ರಚನಾತ್ಮಕ ದೋಷಗಳು 32 ಫ್ಲಾಟ್‌ಗಳನ್ನು ಒಳಗೊಂಡಿರುವ "ಬಿ" ಬ್ಲಾಕ್‌ನ ವಾಲಿರುವ ಭಾಗವನ್ನು ಸರಿಪಡಿಸುವ ಕಾರ್ಯಗಳು ಪೂರ್ಣಗೊಳ್ಳುವವರೆಗೆ ಬಳಸಲಾಗದಂತೆ ಮಾಡಿತು.

ಕಂಪನಿಯು ಡಿಎಲ್‌ಪಿಯ ನಂತರ ಪ್ರಮುಖ ರಚನಾತ್ಮಕ ದೋಷಗಳನ್ನು ಗಮನಿಸಲಾಗಿದೆ ಹಾಗು ಡಿಎಲ್‌ಪಿ ಸಮಯದಲ್ಲಿ ನಡೆಸಲಾದ ಬಾಕಿ ಉಳಿದಿರುವ ಕಾಮಗಾರಿಗಳು ಸ್ವಭಾವತಃ ಚಿಕ್ಕದಾಗಿದೆ ಮತ್ತು ಮೇಲಿನ ಬಾಕಿ ಉಳಿದಿರುವ ಕೆಲಸಗಳನ್ನು ಪೂರ್ಣಗೊಳಿಸಿದ ನಂತರ ಅಂತಿಮ ಬಿಲ್‌ಗಳನ್ನು ಸಲ್ಲಿಸಲಾಗಿದೆ ಎಂದು ಉತ್ತರಿಸಿದೆ (ಮಾರ್ಚ್ 2024). ಜೂನ್ 2019 ರಲ್ಲಿ ದೋಷವನ್ನು ಆರಂಭದಲ್ಲಿ ಗಮನಿಸಿದ್ದರೂ, ಗುತ್ತಿಗೆದಾರನು ಅದನ್ನು ಕೀಲುಗಳ ಪ್ರತ್ಯೇಕತೆಯೆಂದು ಕಲ್ಪಿಸಿಕೊಂಡು, ಡಿ.ಎಲ್.ಪಿ ಸಮಯದಲ್ಲಿ ತನ್ನ ಜವಾಬ್ದಾರಿಯನ್ನು ಮುಕ್ತಗೊಳಿಸಲು ರಚನಾತ್ಮಕ ದೋಷಗಳನ್ನು ಮುಚ್ಚಿಟ್ಟಿದ್ದಾನೆ ಎಂದು ಕಂಪನಿ ಹೇಳಿದೆ. ಆದ್ದರಿಂದ, ಕಂಪನಿಯು ಕ್ರಿಮಿನಲ್ ಮೊಕದ್ದಮೆಯನ್ನು (ಮಾರ್ಚ್ 2022) ಮತ್ತು ₹ 15.80 ಕೋಟಿಯ (ಅಕ್ಟೋಬರ್ 2023) ಸಿವಿಲ್ ಮೊಕದ್ದಮೆಯನ್ನು ಗುತ್ತಿಗೆದಾರರ ವಿರುದ್ಧ ಮರುಸ್ಥಾಪನೆ ಕಾರ್ಯಕ್ಕಾಗಿ ಉಂಟಾದ ₹ 1.23 ಕೋಟಿ ಸೇರಿದಂತೆ

ಹಣಕಾಸಿನ ನಷ್ಟ ಮತ್ತು ಮೇಲಾಧಾರ ಹಾನಿಯನ್ನು ಸರಿದೂಗಿಸಲು ಹೂಡಿದೆ. ಕಂಪನಿಯ ಉತ್ತರವನ್ನು ಸರ್ಕಾರವು (ಮಾರ್ಚ್ 2024) ಅನುಮೋದಿಸಿದೆ.

ಕೆಳಗಿನ ಕಾರಣಗಳಿಂದ ಉತ್ತರವು ಸ್ವೀಕಾರಾರ್ಹವಲ್ಲ:

- ಆಗಸ್ಟ್ 2018 ರಂತೆ ಬಾಕಿ ಉಳಿದಿರುವ ಕೆಲಸಗಳು ಚಿಕ್ಕದಾಗಿರಲಿಲ್ಲ ಆದರೆ ಕೆಲಸದ ಮೂಲ ಕಾರ್ಯದ ಒಂದು ಭಾಗವಾಗಿದ್ದು, ಎ.ಇ.ಇ ಮತ್ತು ಪಿ.ಎಂ.ಸಿ ಕೆಲಸದ ಉಸ್ತುವಾರಿ ಸಲ್ಲಿಸಿದ ಪತ್ರಗಳಿಂದ ಸಾಕ್ಷಿಯಾಗಿದೆ ಮತ್ತು ಕೆ.ಪಿ. ಕೆಪಿಡಬ್ಲ್ಯೂಡಿ ಕೋಡ್ ಕಂಡಿಕೆ 188 ರ ಪ್ರಕಾರ ಪೂರ್ಣಗೊಂಡ ಪ್ರಮಾಣಪತ್ರವನ್ನು ನೀಡುವ ಮೊದಲು ಪೂರ್ಣಗೊಳಿಸಬೇಕಾಗಿದೆ;

- ಕಂಪನಿಯು ಒಪ್ಪಂದದ ಷರತ್ತು 31.1 ರ ಪ್ರಕಾರ ಡಿ.ಎಲ್.ಪಿಯನ್ನು ವಿಸ್ತರಿಸಲು ವಿಫಲವಾಗಿದ್ದಲ್ಲದೆ ಲಭ್ಯವಿರುವ ಭದ್ರತಾ ಠೇವಣಿ (₹ 1.20 ಕೋಟಿ) ಮತ್ತು ಜೂನ್ 2019 ರಲ್ಲಿ ಪೊಲೀಸ್ ಕ್ವಾರ್ಟರ್ಸ್ ನಿರ್ಮಾಣದಲ್ಲಿ ಪ್ರಮುಖ ರಚನಾತ್ಮಕ ದೋಷಗಳು ಗಮನಕ್ಕೆ ಬಂದಿದ್ದರೂ ಸಹ ಗುತ್ತಿಗೆದಾರರಿಂದ ತಡೆಹಿಡಿಯಲಾದ ಹಣವನ್ನು (₹ 0.36 ಕೋಟಿ) ಬಿಡುಗಡೆ ಮಾಡಿದೆ (ಮಾರ್ಚ್ 2020).

ಹೀಗಾಗಿ ಕಾಮಗಾರಿ ಪೂರ್ಣಗೊಂಡ ದಿನಾಂಕದ ತಪ್ಪಾದ ನಿರ್ಣಯ, ದೋಷದ ಹೊಣೆಗಾರಿಕೆ ಷರತ್ತುಗಳನ್ನು ನಿರ್ವಹಿಸದಿರುವುದು ಮತ್ತು ಕಟ್ಟಡದಲ್ಲಿನ ರಚನಾತ್ಮಕ ದೋಷಗಳಿಗೆ ಗುತ್ತಿಗೆದಾರರ ಮೇಲೆ ಹೊಣೆಗಾರಿಕೆಯನ್ನು ನಿಗದಿಪಡಿಸುವಲ್ಲಿ ವಿಫಲವಾದ ಕಾರಣ ಮರುಸ್ಥಾಪನಾ ಕಾರ್ಯಗಳಿಗಾಗಿ ₹ 1.23 ಕೋಟಿ ಹೆಚ್ಚುವರಿ ವೆಚ್ಚದಿಂದ ಕಂಪನಿಗೆ ಆರ್ಥಿಕ ನಷ್ಟವಾಯಿತು.

**ಶಿಫಾರಸು:**

**28. ದೋಷದ ಹೊಣೆಗಾರಿಕೆ ಅವಧಿಯ ಕಾರ್ಯಾಚರಣೆಗೆ ಸಂಬಂಧಿ'ದಂತೆ ಕೆಲಸ ಪೂರ್ಣಗೊಳಿಸುವ ದಿನಾಂಕ ಮತ್ತು ಒಪ್ಪಂದದ ಷರತ್ತುಗಳ ನಿರ್ಣಯದ ಬಗ್ಗೆ ಕೆಪಿಡಬ್ಲ್ಯೂಡಿ ಕೋಡ್ ನಿಬಂಧನೆಗಳನ್ನು ಉಲ್ಲಂಘಿಸಲು ಜವಾಬ್ದಾರರಾಗಿರುವ ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸಬೇಕಾಗಿದೆ.**

**ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್**

### *6.15 ತಪ್ಪಿಸಬಹುದಾಗಿದ್ದ ವೆಚ್ಚ*

**ಗೋದಾಮು ಕಟ್ಟಡ ನಿರ್ಮಾಣ ಯೋಜನೆಯ ಕಾರ್ಯಗತಿಯಲ್ಲಿನ ವಿಳಂಬವು ₹ 93.14 ಲಕ್ಷ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ವೆಚ್ಚವಾಗುವಲ್ಲಿ ಪರಿಣಮಿಸಿರುವುದು.**

ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್ (ಕಂಪನಿ) ಕಲಬುರಗಿಯಲ್ಲಿ (ಅಂದಿನ ಗುಲ್ಬರ್ಗಾ) ಕಾಗದ ಮತ್ತು ಮದ್ಯ ಘಟಕಗಳಿಗಾಗಿ ವೇರ್ ಹೌಸ್ ನಿರ್ಮಿಸಲು ಗೋದಾಮು ನಿರ್ಮಾಣಕ್ಕಾಗಿ ಒಂದು ಎಕರೆ ಭೂಮಿಯನ್ನು ಹಂಚಿಕೆ ಮಾಡುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ)ಯನ್ನು ಸಂಪರ್ಕಿಸಿತು (ಜೂನ್ 2002). ಕೆಐಎಡಿಬಿಯು ಭೂಮಿಯನ್ನು (ಪ್ಲಾಟ್ ಸಂಖ್ಯೆಗಳು 30 ಮತ್ತು 31, 3,873 ಚದರ ಮೀಟರುಗಳ ಅಳತೆ) ಕಪನೂರ 2ನೇ ಹಂತ, ಕೈಗಾರಿಕಾ ಪ್ರದೇಶ, ಕಲಬುರಗಿ ಇಲ್ಲಿ ತಾತ್ಕಾಲಿಕ ಬೆಲೆಯಾದ ₹ 4.00 ಲಕ್ಷಕ್ಕೆ ಭೂಮಿಯ ಹಂಚಿಕೆ ಮಾಡಿತು. ಭೂಮಿಯ ಸ್ವಾಧೀನವನ್ನು ತೆಗೆದುಕೊಳ್ಳಲಾಯಿತು (ಆಗಸ್ಟ್ 2007) ಮತ್ತು ಭೋಗ್ಯ ಹಾಗೂ ಮಾರಾಟ ಒಪ್ಪಂದವನ್ನು ಕೆಐಎಡಿಬಿಯೊಂದಿಗೆ ಮಾಡಿಕೊಳ್ಳಲಾಯಿತು (ಅಕ್ಟೋಬರ್ 2007).

ಭೋಗ್ಯ ಹಾಗೂ ಮಾರಾಟ ಒಪ್ಪಂದದ ನಿಯಮಗಳು ಮತ್ತು ನಿಬಂಧನೆಗಳ ಅನುಸಾರ, ಭೋಗ್ಯವು ಶೆಡ್ಯೂಲ್ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ 24 ತಿಂಗಳುಗಳ ಒಳಗೆ ಕಂಪನಿಯು ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ಆರು ವರ್ಷಗಳ ಅವಧಿಗೆ ಇರುತ್ತದೆ.

ಕಂಪನಿಯು, ಜನವರಿ 2011ರ ಅವಧಿಯಲ್ಲಿ, ಕಲಬುರಗಿಯಲ್ಲಿ ಗೋದಾಮು ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿತು ಮತ್ತು ಅಂದಾಜುಪತ್ರಗಳು ಮತ್ತು ರಚನಾ ನಕಾಶೆಗಳನ್ನು ಸಿದ್ಧಪಡಿಸಲು ಒಬ್ಬರು ಆರ್ಕಿಟೆಕ್ಟ್ ಅವರನ್ನು ನೇಮಕ ಮಾಡಿತು (ಸೆಪ್ಟೆಂಬರ್ 2012). ಆರ್ಕಿಟೆಕ್ಟ್ ನೆಲ ಮತ್ತು ಮೊದಲನೇ ಅಂತಸ್ತಿನ ನಿರ್ಮಾಣಕ್ಕಾಗಿ ₹ 7.59 ಕೋಟಿಯ ಅಂದಾಜುಪತ್ರವನ್ನು ಸಿದ್ಧಪಡಿಸಿದರು. ಅಂದಾಜುಪತ್ರದ ಆಧಾರದ ಮೇಲೆ, ಕಂಪನಿಯು ಡಿಸೆಂಬರ್ 2012ರಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿತು ಆದರೆ ಟೆಂಡರುಗಳ ಮೌಲ್ಯಮಾಪನದ ನಂತರ ಬೈಕಂಪಾಡಿ, ಮಂಗಳೂರು ಮತ್ತು ಮುಂಬಯಿಯ ಕರ್ನಾಟಕ ಭವನದಲ್ಲಿ ನಡೆಯುತ್ತಿರುವ ಯೋಜನೆಗಳನ್ನು ಪೂರ್ಣಗೊಳಸಿದ ನಂತರ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದೆಂದು ಹೇಳಿ ಟೆಂಡರುಗಳನ್ನು ರದ್ದುಗೊಳಿಸಿತು. ನಿರ್ಮಾಣವನ್ನು 2017ರವರೆಗೆ ಮುಂದೂಡಲಾಯಿತು ಮತ್ತು 2018ರಲ್ಲಿ, ಕಂಪನಿಯು ಸಲಹಾಕಾರ ಸಿವಿಲ್ ಇಂಜಿನಿಯರ್ ಅವರನ್ನು ನೇಮಕ ಮಾಡಿತು, ಅವರು ನೆಲದ ಅಂತಸ್ತಿಗೆ ₹ 3.00 ಕೋಟಿಯ ಅಂದಾಜುಪತ್ರವನ್ನು ಸಿದ್ಧಪಡಿಸಿದರು. ಕಂಪನಿಯು ವೇರ್ ಹೌಸ್ ನಿರ್ಮಾಣಕ್ಕಾಗಿ ಟೆಂಡರುಗಳನ್ನು ಆಹ್ವಾನಿಸಿತು (ಡಿಸೆಂಬರ್ 2018) ಮತ್ತು ಅತ್ಯಂತ ಕಡಿಮೆ ಟೆಂಡರ್ ಬಿಡ್ ಸಲ್ಲಿಸಿದ್ದ ಮೆ. ಎಸ್ ಅಂಡ್ ಎಸ್ ಇನ್ನೋವೇಶನ್ಸ್ (ಗುತ್ತಿಗೆದಾರರು) ಅವರಿಗೆ ಸಮಾಲೋಚಿಸಲಾದ ಬೆಲೆಯಾದ ₹ 2.90 ಕೋಟಿಗೆ, ಕಾಮಗಾರಿಯನ್ನು 14 ತಿಂಗಳುಗಳಲ್ಲಿ ಅಂದರೆ ಸೆಪ್ಟೆಂಬರ್ 2020ರ ಹೊತ್ತಿಗೆ ಪೂರ್ಣಗೊಳಿಸಬೇಕೆಂದು ನಿಗದಿಪಡಿಸಿ ಕಾಮಗಾರಿ ಆದೇಶವನ್ನು ನೀಡಿತು (ಜುಲೈ 2019). ಆದಾಗ್ಯೂ, ಕಾಮಗಾರಿಯನ್ನು ಪೂರ್ಣಗೊಳಿಸಲಿಲ್ಲ ಮತ್ತು ₹ 1.88 ಕೋಟಿ ಹೆಚ್ಚುವರಿ ವೆಚ್ಚದೊಂದಿಗೆ ಪರಿಷ್ಕೃತ ಕಾಮಗಾರಿ ಆದೇಶವನ್ನು ನವೆಂಬರ್ 2021ರಲ್ಲಿ ನೀಡಲಾಯಿತು. ಮೇ 2022ರ (ಪರಿಷ್ಕೃತ ಕಾಮಗಾರಿ ಆದೇಶದ ಅನುಸಾರ) ಹೊತ್ತಿಗೆ ಪೂರ್ಣಗೊಳ್ಳಬೇಕಾಗಿದ್ದ ಕಾಮಗಾರಿಯು ಇನ್ನೂ ಪೂರ್ಣಗೊಳ್ಳಬೇಕಾಗಿದೆ (ಸೆಪ್ಟೆಂಬರ್ 2023).

ಈ ಸಂಬಂಧದಲ್ಲಿ, ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಯೋಜನೆಯನ್ನು ಪ್ರಾರಂಭಿಸುವಲ್ಲಿ ಅಸಾಮಾನ್ಯ ವಿಳಂಬವು ಉಂಟಾಗಿತ್ತು. ಭೋಗ್ಯ ಹಾಗೂ ಮಾರಾಟ ಒಪ್ಪಂದದ ಪರಿಚ್ಛೇದ 10(1))(iii)ರ ಅನುಸಾರ, ಗೇಣಿದಾರರು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ 24 ತಿಂಗಳುಗಳ ಒಳಗೆ (ಜುಲೈ 2009) ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು. ಕಂಪನಿಯು ನಿಗದಿತ ಸಮಯದ ಒಳಗೆ ಗೋದಾಮು ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಆಗದ ಕಾರಣ, ಸಮಯ ವಿಸ್ತರಣೆಯನ್ನು ಕೋರಲಾಯಿತು ಮತ್ತು ಕೆಐಎಡಿಬಿಯು ದಂಡ ವಿಧಿಸುವ ಮತ್ತು ಭೂಮಿಗೆ ಪ್ರಸಕ್ತ ಮಾರುಕಟ್ಟೆ ಬೆಲೆಯನ್ನು ಸಂಗ್ರಹಿಸುವ ಮೂಲಕ ಕಾಲಕಾಲಕ್ಕೆ ವಿಸ್ತರಣೆ ನೀಡಿತು. ಕಂಪನಿಯು ಭೂಮಿ ವೆಚ್ಚದಲ್ಲಿನ ವ್ಯತ್ಯಾಸದ ರೂಪದಲ್ಲಿ ₹ 15.15 ಲಕ್ಷ ಮೊತ್ತವನ್ನು ಆಗಸ್ಟ್ 2013ರಲ್ಲಿ ಮತ್ತು ದಂಡದ ರೂಪದಲ್ಲಿ ₹ 2 ಲಕ್ಷವನ್ನು ಫೆಬ್ರವರಿ 2016ರಲ್ಲಿ ಪಾವತಿಸಿತು.

- ಕೆಐಎಡಿಬಿಯಿಂದ ಮಂಜೂರು ಮಾಡಲಾಗಿದ್ದ ಕಟ್ಟಡದ ನಕಾಶೆಯು (ಮಾರ್ಚ್ 2013) ನೆಲದ ಅಂತಸ್ತು ಮತ್ತು ಮೊದಲನೇ ಅಂತಸ್ತಿನ ಅವಕಾಶ ಹೊಂದಿದ್ದಿತು. ಯೋಜನೆಗಾಗಿ ಕಂಪನಿಯು ನೇಮಕ ಮಾಡಿದ ಸಲಹಾಕಾರ ಸಿವಿಲ್ ಇಂಜಿನಿಯರ್ ಸೂಕ್ತವಾದ ಡ್ರಾಯಿಂಗುಗಳು ಇಲ್ಲದೆ ಮತ್ತು ಯೋಜನೆಯನ್ನು ನೆಲದ ಅಂತಸ್ತಿಗೆ ಮಾತ್ರ ಸೀಮಿತಗೊಳಿಸುವ ಮತ್ತು ಪ್ರಮುಖವಾದ ಐಟಂಗಳಾದ ಉತ್ಖನನ, ಕಾಲಂಗಳು ಮತ್ತು ಬೀಮ್ ಗಳ ಪ್ರಮಾಣಗಳನ್ನು ಸೀಮಿತಗೊಳಿಸುವ ಮೂಲಕ ₹ 3 ಕೋಟಿಗೆ ಅಂದಾಜು ಪತ್ರ ಸಿದ್ಧಪಡಿಸಿದರು. ಇಂಜಿನಿಯರ್ ಸಿದ್ಧಪಡಿಸಿದ ಸದರಿ ಅಂದಾಜು ಪತ್ರದ ಆಧಾರದ ಮೇಲೆ

ಕಂಪನಿಯು ಟೆಂಡರುಗಳನ್ನು ಆಹ್ವಾನಿಸಿತು ಮತ್ತು ಜುಲೈ 2019ರಲ್ಲಿ ಕಾಮಗಾರಿಯ ಆದೇಶವನ್ನು ನೀಡಿತು. ಆದಾಗ್ಯೂ, ಕಾರ್ಯಗತಗೊಳಿಸಲಾದ ಪ್ರಮಾಣಗಳು ಅಂದಾಜು ಮಾಡಲಾಗಿದ್ದ ಪ್ರಮಾಣಗಳೊಂದಿಗೆ ಹೊಂದದ ಕಾರಣ, ಆರ್ಕಿಟೆಕ್ಟುಗಳು[142] ₹ 4.88 ಕೋಟಿ ಪರಿಷ್ಕೃತ ಅಂದಾಜು ಪತ್ರವನ್ನು ಸಿದ್ಧಪಡಿಸಿದರು (ಅಕ್ಟೋಬರ್ 2020) ಮತ್ತು ಹೆಚ್ಚುವರಿ ವೆಚ್ಚವಾದ ₹ 1.88 ಕೋಟಿಗೆ ಪರಿಷ್ಕೃತ ಕಾಮಗಾರಿ ಆದೇಶವನ್ನು ಮಂಡಳಿಯ ಅಂಗೀಕಾರದ ನಂತರ (ಸೆಪ್ಟೆಂಬರ್ 2021) ನವೆಂಬರ್ 2021ರಲ್ಲಿ ನೀಡಲಾಯಿತು. ಹೆಚ್ಚುವರಿ ಐಟಂಗಳಲ್ಲಿ ಮೃದು ಮತ್ತು ಗಟ್ಟಿ ಬಂಡೆಯಲ್ಲಿ ಉತ್ಖನನ, ಎಂಬ್ಯಾಂಕ್‌ಮೆಂಟ್ ನಿರ್ಮಾಣ ಮತ್ತು ಮೇಲ್ಛಾವಣಿಗೆ ವಾಟರ್ ಪ್ರೂಫ್ ವ್ಯವಸ್ಥೆ ನೀಡುವುದು ಜೊತೆಗೆ ಹೆಡ್ ರೂಂ ನಿರ್ಮಾಣವು ಸೇರಿದ್ದವು. ಜೊತೆಗೆ, ಗುತ್ತಿಗೆದಾರರು/ಆರ್ಕಿಟೆಕ್ಟ್ ₹ 1.88 ಕೋಟಿ ಹೆಚ್ಚುವರಿ ವೆಚ್ಚವನ್ನು ಒಳಗೊಂಡಿದ್ದ ಹೆಚ್ಚುವರಿ ಕಾಮಗಾರಿಯನ್ನು ಕೈಗೊಳ್ಳಲು ಕಂಪನಿಯ ಪೂರ್ವ ಮಂಜೂರಾತಿಯನ್ನು ಪಡೆಯಲಿಲ್ಲ. ಹೀಗೆ, ಸಲಹಾಕಾರ ಇಂಜಿನಿಯರ್ ಸಿದ್ಧಪಡಿಸಿದ ದೋಷಪೂರ್ಣ ಅಂದಾಜು ಪತ್ರವು ಯೋಜನೆಯ ವೆಚ್ಚದಲ್ಲಿ ಹೆಚ್ಚಳ ಮತ್ತು ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ಮತ್ತಷ್ಟು ವಿಳಂಬಕ್ಕೆ ಕಾರಣವಾಯಿತು

- ಕಾರ್ಯಸಾಧ್ಯತೆಗೆ ಮೂರು ತಿಂಗಳುಗಳನ್ನು (ಜನವರಿ 2013ರಿಂದ) ಮತ್ತು ಟೆಂಡರುಗಳ ಅಂತಿಮಗೊಳಿಸುವಿಕೆ ಮತ್ತು ಕಾಮಗಾರಿಯನ್ನು ಕಾರ್ಯಗತಗೊಳಿಸುವಿಕೆಗೆ ಎರಡು ವರ್ಷಗಳ ಸಮಯವನ್ನು ಪರಿಗಣಿಸಿದಾಗ, ಕಂಪನಿಯು ಕಟ್ಟಡದ ನಿರ್ಮಾಣ ಕಾರ್ಯವನ್ನು ಮಾರ್ಚ್ 2016ರ ಹೊತ್ತಿಗೆ ಪೂರ್ಣಗೊಳಿಸಬಹುದಿತ್ತು ಮತ್ತು ಅದು ಆ ಆವರಣವನ್ನು ಬಳಸಿಕೊಳ್ಳಬಹುದಿತ್ತು, ತನ್ಮೂಲಕ ತನ್ನ ಕಛೇರಿ ಮತ್ತು ಗೋದಾಮಿಗೆ ಬಾಡಿಗೆ ಪಾವತಿಯನ್ನು ತಪ್ಪಿಸಬಹುದಿತ್ತು. ಏಪ್ರಿಲ್ 2016ರಿಂದ ಸೆಪ್ಟೆಂಬರ್ 2023ರವರೆಗಿನ ಅವಧಿಗೆ ತಪ್ಪಿಸಬಹುದಾಗಿದ್ದ ಬಾಡಿಗೆ ಪಾವತಿಯು ***ಅನುಬಂಧ – 39***ರಲ್ಲಿ ವಿವರಿಸಿರುವಂತೆ ₹ 75.99 ಲಕ್ಷ ಆಗುತ್ತದೆ.

- ನಿರ್ಮಾಣದ ಸಮಯದಲ್ಲಿ, ಮೃದು ಬಂಡೆ (1727.56 ಘನ ಮೀಟರ್) ಮತ್ತು ಗಟ್ಟಿ ಬಂಡೆಗಳನ್ನು (854.70 ಘನ ಮೀಟರ್) ಹೆಚ್ಚುವರಿ ಐಟಂಗಳಾಗಿ ಉತ್ಖನನ ಮಾಡಲಾಯಿತು ಮತ್ತು ₹ 42.00 ಲಕ್ಷ ಮೊತ್ತವನ್ನು ಪಾವತಿಸಲಾಯಿತು. ಆದಾಗ್ಯೂ, ಇವುಗಳನ್ನು ಲೆಕ್ಕ ಇಡಲಿಲ್ಲ ಅಥವಾ ಬಳಸಲಿಲ್ಲ.

ಕಂಪನಿಯು ಯೋಜನೆಯನ್ನು, ಅದು ಪ್ರಮುಖ ಯೋಜನೆಗಳನ್ನು ಪೂರ್ಣಗೊಳಿಸುವ ಪ್ರಕ್ರಿಯೆಯಲ್ಲಿದ್ದ ಕಾರಣ (ನವಿ ಮುಂಬಯಿಯಲ್ಲಿ ಕರ್ನಾಟಕ ಭವನ, ಮಂಗಳೂರಿನಲ್ಲಿ ವೇರ್ ಹೌಸ್ ಅಂತಹವು) ಮತ್ತು ಆಡಳಿತಾತ್ಮಕ ಕಾರಣಗಳಿಗಾಗಿ ವಿಸ್ತರಿಸಿದ ಸಮಯದೊಳಗೆ ಕೈಗೆತ್ತಿಕೊಳ್ಳಲು ಆಗಲಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಜನವರಿ 2024). ಈ ಉತ್ತರವನ್ನು ಒಪ್ಪಲು ಸಾಧ್ಯವಿಲ್ಲ ಏಕೆಂದರೆ ನವಿ ಮುಂಬಯಿಯಲ್ಲಿ ಕರ್ನಾಟಕ ಭವನವೂ ಸಹ ವಿಳಂಬಗೊಂಡಿತ್ತಾದರೂ[143] ಗೋಡೌಸ್ ನಿರ್ಮಾಣವು ಕರ್ನಾಟಕ ಭವನದ ನಿರ್ಮಾಣಗೊಳ್ಳದೆಯೇ ಆಗಿತ್ತು ಹಾಗೂ ಮಂಗಳೂರು ಗೋಡೌಸ್ ನಿರ್ಮಾಣ ಪೂರ್ಣಗೊಂಡು ಜೂನ್ 2022 ರಲ್ಲಿಯಷ್ಟೇ ಭೋಗ್ಯಕ್ಕೆ ನೀಡಲಾಗಿತ್ತು. ನಿಖರವಾದ ಆಡಳಿತಾತ್ಮಕ ಕಾರಣಗಳನ್ನು ಲೆಕ್ಕಪರಿಶೋಧನೆಗೆ ವಿವರಿಸಲಾಗಿರುವುದಿಲ್ಲ.

ಈ ರೀತಿಯಾಗಿ, 2013–14ರಲ್ಲಿಯೇ, ಅಂದಾಜು ಪತ್ರವನ್ನು ಸಿದ್ಧಪಡಿಸಿ, ಟೆಂಡರುಗಳನ್ನು ಆಹ್ವಾನಿಸಿ ಮತ್ತು ಕೆಐಎಡಿಬಿಯಿಂದ ಕಟ್ಟಡದ ನಕಾಶೆಯನ್ನು ಮಂಜೂರು ಮಾಡಿದ್ದರೂ ಕೂಡ, ಕಟ್ಟಡದ

[142] ಮೆ. ಶೋಭಾ ಅಂಡ್ ಮಹೇಶ್ ಅಸೋಸಿಯೇಟ್ಸ್.

[143] ಕರ್ನಾಟಕ ಸರ್ಕಾರದ ***2022 ಸಾಲಿನ ವರದಿ ಭಾಗ II ಸಂಖ್ಯೆ 3ರ ಕಂಡಿಕೆ 2.3***ರಲ್ಲಿ ಟೀಕೆಟಿಪ್ಪಣಿ ಮಾಡಲಾಗಿರುವುದು.

ನಿರ್ಮಾಣ ಕಾಮಗಾರಿಯ ಪ್ರಾರಂಭವನ್ನು ಮುಂದೂಡಿರುವುದು ತಪ್ಪಿಸಬಹುದಾಗಿದ್ದ ₹ 93.14 ಲಕ್ಷ[144] ವೆಚ್ಚವನ್ನು ಭರಿಸುವಂತಾಯಿತು

**ಶಿಫಾರಸು:**

**29. ಆಡಳಿತ ಮಂಡಳಿಯು ಅಂದಾಜು ಪತ್ರದ ಸಿದ್ಧತೆಯಲ್ಲಿ ಕರ್ತವ್ಯಲೋಪ ಎಸಗಿರುವ ಅಧಿಕಾರಿ/ಸಿಬ್ಬಂಧಿಗಳ ಹೊಣೆಗಾರಿಕೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಕೈಯಲ್ಲಿರುವ ಯೋಜನೆಗಳನ್ನು ವೆಚ್ಚ ಇಳಿಮುಖ ಮಾಡಲು ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ.**



**ಬೆಂಗಳೂರು** **(ವಿಮಲೇಂದ್ರ ಎ. ಪಟವರ್ಧನ್) ಆನಂದ್**
**ದಿನಾಂಕ** **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
**ಕರ್ನಾಟಕ**

**ಮೇಲು ರುಜು ಮಾಡಲಾಗಿದೆ**



**ನವದೆಹಲಿ** **(ಕೆ ಸಂಜಯ್ ಮೂರ್ತಿ)**
**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

[144] ಕೆಐಎಡಿಬಿಗೆ ಪಾವತಿಸಲಾಗಿರುವ ಚಾಲ್ತಿ ಮಾರುಕಟ್ಟೆ ದರದ ಕಡೆಗೆ ₹ 15.15 ಲಕ್ಷ ದಂಡ ಪಾವತಿ ಕಡೆಗೆ ₹ 2 ಲಕ್ಷ ಹಾಗೂ ಬಾಡಿಗೆ ಪಾವತಿ ಕಡೆಗೆ ₹ 75.99 ಲಕ್ಷ.

# ಅನುಬಂಧಗಳು

## ಅನುಬಂಧ – 1
### (ಕಂಡಿಕೆ 1.1.4.1 ರಲ್ಲಿ ಉಲ್ಲೇಖಿಸಲಾಗಿದೆ)
### ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ

| ಕ್ರಮ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳ ಹೆಸರು | ಸಂಕ್ಷೇಪಣ | ವರ್ಗ |
|---|---|---|---|
| | **ಹಣಕಾಸು** | | |
| 1 | ಡಿ. ದೇವರಾಜ್ ಅರಸ್ ಹಿಂದುಳಿದ *ವರ್ಗಗಳ* ಅಭಿವೃದ್ಧಿ ನಿಗಮ ನಿಯಮಿತ * | ಡಿಯುಬಿಸಿಡಿಸಿಎಲ್ | ಸಕಂ |
| 2 | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ * | ಕೆಎಸ್‌ಡಬ್ಲ್ಯೂಡಿಸಿ | ಸಕಂ |
| 3 | ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ * | ಬಿಆರ್‌ಎಡಿಸಿಎಲ್ | ಸಕಂ |
| 4 | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ * | ಕೆಎಮ್‌ವಿಎಸ್‌ಟಿಡಿಸಿಎಲ್ | ಸಕಂ |
| 5 | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ * | ಕೆಎಮ್‌ಡಿಸಿ | ಸಕಂ |
| 6 | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ * | ಕೆಟಿಡಿಸಿಎಲ್ | ಸಕಂ |
| 7 | ಕರ್ನಾಟಕ ವಿಶ್ವಕರ್ಮ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ * | ಕೆವಿಸಿಡಿಸಿಎಲ್ | ಸಕಂ |
| 8 | ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ನಿಯಮಿತ * | ಕೆಬಿಡಿಸಿಎಲ್ | ಸಕಂ |
| 9 | ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ * | ಎನ್‌ಎಸಿಡಿಸಿಎಲ್ | ಸಕಂ |
| 10 | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ * | ಕೆಎಸ್‌ಎಸ್‌ಕೆಡಿಸಿಎಲ್ | ಸಕಂ |
| 11 | ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ * | ಕೆಎಜೆಡಿಸಿ | ಸಕಂ |
| 12 | ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ * | ಕೆಯುಡಿಸಿಎಲ್ | ಸಕಂ |
| 13 | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ * | ಕೆಹೆಚ್‌ಡಿಸಿಎಲ್ – ಕೈಮಗ್ಗ | ಸಕಂ |
| 14 | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಹೆಚ್‌ಡಿಸಿಎಲ್ – ಕರಕುಶಲ | ಸಕಂ |
| 15 | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಐಐಡಿಸಿ | ಸಕಂ |
| 16 | ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ ನಿಯಮಿತ * | ಕೆಯುಐಡಿಎಫ್‌ಸಿ | ಸಕಂ |
| 17 | ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ * | ಕೆಎಸ್‌ಎಲ್ | ಸಕಂ |
| 18 | ಕರ್ನಾಟಕ ಅಸೆಟ್ ಮೇನೆಜ್‌ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್ # | ಕೆಎಎಮ್‌ಸಿಪಿಎಲ್ | ಸನಿಇಕಂ |
| 19 | ಕರ್ನಾಟಕ ಟ್ರಸ್ಟೀ ಕಂಪನಿ ಪ್ರೈವೇಟ್ ಲಿಮಿಟೆಡ್ # | ಕೆಟಿಸಿಪಿಎಲ್ | ಸನಿಇಕಂ |
| 20 | ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ * | ಕೆಬಿಡಿಬಿ – ಬ್ರಾಹ್ಮಣ | ಸಕಂ |
| 21 | ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಎಸ್‌ಡಿಸಿಎಲ್ – ಸವಿತಾ ಸಮಾಜ | ಸಕಂ |
| 22 | ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ ನಿಯಮಿತ * | ಕೆಎಮ್‌ಎಮ್‌ಡಿಸಿಎಲ್ – ಮಡಿವಾಳ | ಸಕಂ |
| 23 | ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತ * | ಕೆಎವಿಸಿಡಿಸಿಎಲ್ – ಆರ್ಯ ವೈಶ್ಯ | ಸಕಂ |
| 24 | ಕರ್ನಾಟಕ ಅಲೆಮಾರಿ ಅರೆ ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತ * | ಕೆಎಡಿಸಿಎಲ್ – ಅಲೆಮಾರಿ | ಸಕಂ |
| 25 | ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ * | ಕೆವಿಎಲ್‌ಡಿಸಿಎಲ್ – ವೀರಶೈವ | ಸಕಂ |
| | **ಮೂಲಸೌಕರ್ಯ** | | |
| 26 | ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ * | ಕೆಎಸ್‌ಸಿಸಿಎಲ್ | ಸಕಂ |
| 27 | ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ * | ಕೆಆರ್‌ಐಡಿಎಲ್ | ಸಕಂ |
| 28 | ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಪಿಹೆಚ್‌ಐಡಿಸಿಎಲ್ | ಸಕಂ |
| 29 | ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ * | ಆರ್‌ಜಿಹೆಚ್‌ಸಿಎಲ್ | ಸಕಂ |
| 30 | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ * | ಕೆಆರ್‌ಡಿಸಿಎಲ್ | ಸಕಂ |
| 31 | ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ * | ಕೆಬಿಜೆಎನ್‌ಎಲ್ | ಸಕಂ |
| 32 | ಕರ್ನಾಟಕ ನೀರಾವರಿ ನಿಗಮ ನಿಯಮಿತ* | ಕೆಎನ್‌ಎನ್‌ಎಲ್ | ಸಕಂ |
| 33 | ಕಾವೇರಿ ನೀರಾವರಿ ನಿಗಮ ನಿಯಮಿತ * | ಸಿಎನ್‌ಎನ್‌ಎಲ್ | ಸಕಂ |

**ಅನುಬಂಧ-1 (ಮುಂದುವರಿದಿದೆ)**

| ಕ್ರಮ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳ ಹೆಸರು | ಸಂಕ್ಷೇಪಣ | ವರ್ಗ |
|---|---|---|---|
| 34 | ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ * | ವಿಜೆಎನ್ಎಲ್ | ಸಕಂ |
| 35 | ತದಡಿ ಬಂದರು ನಿಯಮಿತ * | ಟಿಪಿಎಲ್ | ಸಕಂ |
| 36 | ಹುಬ್ಬಳ್ಳಿ ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ * | ಹೆಚ್‌ಡಿಬಿಆರ್‌ಟಿಎಸ್ | ಸಕಂ |
| 37 | ಇನ್ವೆಸ್ಟ್ ಕರ್ನಾಟಕ ಫೋರಂ # | ಐಕೆಎಫ್ | ಸನಿಇಕಂ |
| 38 | ತುಮಕೂರು ಮೆಷೀನ್ ಟೂಲ್ಸ್ ಪಾರ್ಕ್ # | ಟಿಎಮ್‌ಟಿಪಿ | ಸನಿಇಕಂ |
| 39 | ಹುಬ್ಬಳ್ಳಿ ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತ # | ಹೆಚ್‌ಡಿಎಸ್‌ಸಿಎಲ್ | ಸನಿಇಕಂ |
| 40 | ದಾವಣಗೆರೆ ಸ್ಮಾರ್ಟ್ ಸಿಟಿ ನಿಯಮಿತ # | ಡಿಎಸ್‌ಸಿಎಲ್ | ಸನಿಇಕಂ |
| 41 | ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ # | ಬಿಎಸ್‌ಸಿಎಲ್ – ಬೆಳಗಾವಿ | ಸನಿಇಕಂ |
| 42 | ಶಿವಮೊಗ್ಗ ಸ್ಮಾರ್ಟ್ ಸಿಟಿ ನಿಯಮಿತ # | ಎಸ್‌ಎಸ್‌ಸಿಎಲ್ | ಸನಿಇಕಂ |
| 43 | ತುಮಕೂರು ಸ್ಮಾರ್ಟ್ ಸಿಟಿ ನಿಯಮಿತ # | ಟಿಎಸ್‌ಸಿಎಲ್ | ಸನಿಇಕಂ |
| 44 | ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತ # | ಎಮ್‌ಎಸ್‌ಸಿಎಲ್ | ಸನಿಇಕಂ |
| 45 | ಬೆಂಗಳೂರು ಸ್ಮಾರ್ಟ್ ಸಿಟಿ ನಿಯಮಿತ # | ಬಿಎಸ್‌ಸಿಎಲ್ – ಬೆಂಗಳೂರು | ಸನಿಇಕಂ |
| 46 | ಬೆಂಗಳೂರು ಪಿಆರ್‌ಆರ್ ಅಭಿವೃದ್ಧಿ ನಿಗಮ ನಿಯಮಿತ # | ಬಿಪಿಆರ್‌ಆರ್‌ಡಿಸಿಎಲ್ | ಸನಿಇಕಂ |
| 47 | ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ * | ಕೆ–ರೈಡ್ | ಸಕಂ |
| 48 | ಸಿಬಿಐಸಿ ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ನಿಯಮಿತ # | ಟಿಐಟಿಎಲ್ – ಸಿಬಿಐಸಿ ತುಮಕೂರು | ಸನಿಇಕಂ |
| 49 | ಬೆಂಗಳೂರು ಸಮಗ್ರ ರೈಲು ಮೂಲಸೌಕರ್ಯ ಅಭಿವೃದ್ಧಿ ಉದ್ಯಮ ನಿಯಮಿತ * | ಬಿ–ರೈಡ್ | ಸಕಂ |
| 50 | ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಕಂಪನಿ ಲಿಮಿಟೆಡ್ # | ಬಿಎಸ್‌ಡಬ್ಲ್ಯೂಎಂಸಿಎಲ್ | ಸನಿಇಕಂ |
| 51 | ಬೆಂಗಳೂರು ಏರ್‌ಪೋರ್ಟ್ ರೇಲ್ ಲಿಂಕ್ ಲಿಮಿಟೆಡ್ (ಸ್ವಯಂಪ್ರೇರಿತ ದಿವಾಳಿಯ ಅಡಿಯಲ್ಲಿ)* | ಬಿಎಆರ್‌ಎಲ್ | ದಿವಾಳಿಯ ಅಡಿಯಲ್ಲಿ |
| 52 | ಬೆಂಗಳೂರು ಸಬರ್ಬನ್ ರೇಲ್ ಕಂಪನಿ ನಿಯಮಿತ (ಕಾರ್ಯಸ್ಥಗಿತ)* | ಬಿಎಸ್‌ಆರ್‌ಸಿಎಲ್ | ದಿವಾಳಿಯ ಅಡಿಯಲ್ಲಿ |
| | **ಇಂಧನ** | | |
| 53 | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ * | ಕೆಪಿಸಿಎಲ್ | ಸಕಂ |
| 54 | ಕೆಪಿಸಿ ಅನಿಲ ಇಂಧನ ನಿಗಮ ನಿಯಮಿತ * | ಕೆಪಿಸಿಜಿಪಿಸಿಎಲ್ | ಸಕಂ |
| 55 | ರಾಯಚೂರು ವಿದ್ಯುತ್ ನಿಗಮ ನಿಯಮಿತ * | ಆರ್‌ಪಿಸಿಎಲ್ | ಸಕಂ |
| 56 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ * | ಕೆಪಿಟಿಸಿಎಲ್ | ಸಕಂ |
| 57 | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ * | ಬೆಸ್ಕಾಂ | ಸಕಂ |
| 58 | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ * | ಹೆಸ್ಕಾಂ | ಸಕಂ |
| 59 | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ * | ಮೆಸ್ಕಾಂ | ಸಕಂ |
| 60 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ * | ಸೆಸ್ಕ್ | ಸಕಂ |
| 61 | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ * | ಜೆಸ್ಕಾಂ | ಸಕಂ |
| 62 | ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ * | ಕೆಆರ್‌ಇಡಿಎಲ್ | ಸಕಂ |
| 63 | ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ # | ಪಿಸಿಕೆಎಲ್ | ಸನಿಇಕಂ |
| | **ಸೇವೆಗಳು** | | |
| 64 | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಟಿಡಿಸಿ | ಸಕಂ |
| 65 | ಅರಣ್ಯ ವಸತಿ ಮತ್ತು ವಿಹಾರಧಾಮ ನಿಯಮಿತ * | ಜೆಎಲ್‌ಆರ್ | ಸಕಂ |
| 66 | ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ # | ಡಿಡಿಯುಟಿಟಿಎಲ್ | ಸನಿಇಕಂ |
| 67 | ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ * | ಕೆಎಫ್‌ಸಿಎಸ್‌ಸಿಎಲ್ | ಸಕಂ |
| 68 | ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ಲಿಮಿಟೆಡ್ * | ಕೆಟಿಐಎಲ್ | ಸಕಂ |
| 69 | ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ * | ಕೆಎಸ್‌ಎಂಎಸ್‌ಸಿಎಲ್ | ಸಕಂ |

**ಅನುಬಂಧ-1 (ಮುಂದುವರಿದಿದೆ)**

| ಕ್ರಮ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳ ಹೆಸರು | ಸಂಕ್ಷೇಪಣ | ವರ್ಗ |
|---|---|---|---|
| | ಇತರೆ | | |
| 70 | ಡಾ॥ ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ * | ಲಿಡ್ಕರ್ | ಸಕಂ |
| 71 | ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಸಿಡಿಸಿಎಲ್ | ಸಕಂ |
| 72 | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ * | ಕೆಎಸ್‌ಡಿಎಲ್ | ಸಕಂ |
| 73 | ಮೈಸೂರು ಕಾಗದ ಕಾರ್ಖಾನೆ ನಿಯಮಿತ * | ಎಮ್‌ಪಿಎಮ್ | ಸಕಂ |
| 74 | ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ * | ಕವಿಕ | ಸಕಂ |
| 75 | ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ * | ಎಮ್‌ಇಐ | ಸಕಂ |
| 76 | ಎನ್‌ಜಿಇಎಫ್ (ಹುಬ್ಬಳ್ಳಿ) ನಿಯಮಿತ * | ಎನ್‌ಜಿಇಎಫ್ {ಹು} | ಸಕಂ |
| 77 | ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ * | ಕೆಎಸ್‌ಐಸಿ | ಸಕಂ |
| 78 | ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ * | ಕೆಎಸ್‌ಎಮ್‌ಬಿ | ಸಕಂ |
| 79 | ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಟಿಡಿಐಸಿಎಲ್ | ಸಕಂ |
| 80 | ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ * | ಕೆಎಸ್‌ಎಮ್‌ಸಿಎಲ್ | ಸಕಂ |
| 81 | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ * | ಹೆಚ್‌ಜಿಎಮ್‌ಎಲ್ | ಸಕಂ |
| 82 | ಮೈಸೂರು ಸಕ್ಕರೆ ಕಂಪನಿ ನಿಯಮತ * | ಮೈಶುಗರ್ | ಸಕಂ |
| 83 | ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿಯಮತ * | ಎಮ್‌ಪಿವಿಎಲ್ | ಸಕಂ |
| 84 | ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮತ * | ಎಮ್‌ಎಸ್‌ಐಎಲ್ | ಸಕಂ |
| 85 | ಮಾರ್ಕೆಟಿಂಗ್ ಕಮ್ಯುನಿಕೇಷನ್ ಮತ್ತು ಅಡ್ವರ್ಟೈಸಿಂಗ್ ನಿಯಮಿತ * | ಎಮ್‌ಸಿಎ | ಸಕಂ |
| 86 | ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ನಿಯಮಿತ * | ಕೆಎಸ್‌ಎಸಿಪಿಎಲ್ | ಸಕಂ |
| 87 | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತು ರಫ್ತು ನಿಗಮ ನಿಯಮಿತ * | ಕೆಎಪಿಪಿಇಸಿ | ಸಕಂ |
| 88 | ಕರ್ನಾಟಕ ರಾಜ್ಯ ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿ ನಿಯಮಿತ * | ಕೆಎಸ್‌ಪಿಎಎಮ್‌ಎಲ್ | ಸಕಂ |
| 89 | ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ * | ಕೆಎಫ್‌ಡಿಸಿ – ಮೀನುಗಾರಿಕಾ | ಸಕಂ |
| 90 | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಎಡಬ್ಲ್ಯುಡಿಸಿಎಲ್ | ಸಕಂ |
| 91 | ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ * | ಕೆಸಿಡಿಸಿ – ಕಾಂಪೋಸ್ಟ್ | ಸಕಂ |
| 92 | ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ * | ಕೆಸಿಡಿಸಿಎಲ್ – ಗೇರು | ಸಕಂ |
| 93 | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ * | ಕೆಎಫ್‌ಡಿಸಿಎಲ್ – ಅರಣ್ಯ ಅಭಿವೃದ್ಧಿ | ಸಕಂ |
| 94 | ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಎಫ್‌ಐಸಿ | ಸಕಂ |
| 95 | ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ * | ಕೆಎಸ್‌ಎಸ್‌ಸಿಎಲ್ | ಸಕಂ |
| 96 | ಕರ್ನಾಟಕ ಆಹಾರ ನಿಯಮಿತ # | ಎಫ್‌ಕೆಎಲ್ | ಸನಿಇಕಂ |
| 97 | ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ * | ಕೆಎಸ್‌ಎಮ್‌ಡಿಎಮ್‌ಸಿಎಲ್ | ಸಕಂ |
| 98 | ಕರ್ನಾಟಕ ಅಂತರಗಂಗ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ * | ಕೆಎಎಮ್‌ಐಸಿಎಲ್ | ಸಕಂ |
| 99 | ಬೆಂಗಳೂರು ಬಯೋ– ಇನ್ನೋವೇಷನ್ ಸೆಂಟರ್ * | ಬಿಬಿಸಿ | ಸಕಂ |
| 100 | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ * | ಕೆಎಸ್‌ಎಸ್‌ಐಡಿಸಿ | ಸಕಂ |
| 101 | ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ * | ಕಿಯೋನಿಕ್ಸ್ | ಸಕಂ |
| 102 | ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ * | ಕೆಎಸ್‌ಬಿಸಿಎಲ್ | ಸಕಂ |
| 103 | ಕರ್ನಾಟಕ ಔದ್ಯೋಗಿಕ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ * | ಕೆವಿಟಿಎಸ್‌ಡಿಸಿಎಲ್ | ಸಕಂ |
| 104 | ಕರ್ನಾಟಕ ಪಬ್ಲಿಕ್ ಲ್ಯಾಂಡ್ಸ್ ನಿಗಮ ನಿಯಮಿತ * | ಕೆಪಿಎಲ್‌ಸಿಎಲ್ | ಸಕಂ |
| 105 | ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ ನಿಯಮಿತ * | ಕೆಎಮ್‌ಇಆರ್‌ಸಿಎಲ್ | ಸಕಂ |
| 106 | ವಿಜ್ಞಾನ ಗ್ಯಾಲರಿ ಬೆಂಗಳೂರು # | ಎಸ್‌ಜಿಬಿ | ಸನಿಇಕಂ |

***ಅನುಬಂಧ-1 (ಮುಂದುವರಿದಿದೆ)***

| ಕ್ರಮ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳ ಹೆಸರು | ಸಂಕ್ಷೇಪಣ | ವರ್ಗ |
|---|---|---|---|
| 107 | ಅಂತಾರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ * | ಐಎಫ್ಎಬಿ | ಸಕಂ |
| 108 | ಕೆನರಾ ಪ್ಲಾಸ್ಟಿಕ್ ಫೋರಂ # | ಸಿಪಿಎಫ್ | ಸನಿಇಕಂ |
| 109 | ಶಿಗ್ಗಾಂವ್ ಜವಳಿ ಪಾರ್ಕ್ # | ಎಸ್‌ಟಿಪಿ | ಸನಿಇಕಂ |
| 110 | ಕರ್ನಾಟಕ ಆಗ್ರೋ ಕೈಗಾರಿಕೆಗಳ ನಿಗಮ ನಿಯಮಿತ (ಕಾರ್ಯಸ್ಥಗಿತ) * | ಕೆಎಐಸಿ | ಸಕಂ |
| 111 | ಮೈಸೂರು ಟೊಬ್ಯಾಕೊ ಕಂಪನಿ ನಿಯಮಿತ (ಕಾರ್ಯಸ್ಥಗಿತ) * | ಎಮ್‌ಟಿಸಿ | ಸಕಂ |
| 112 | ಕರ್ನಾಟಕ ಪಲ್ವ್‌ವುಡ್ ನಿಯಮಿತ (ಕಾರ್ಯಸ್ಥಗಿತ) * | ಕೆಪಿಎಲ್ (ಪಲ್ವ್‌ವುಡ್) | ಸಕಂ |
| 113 | ಕರ್ನಾಟಕ ರಾಜ್ಯ ವಿನೀರ್ಸ್ ನಿಯಮಿತ (ಕಾರ್ಯಸ್ಥಗಿತ) * | ಕೆಎಸ್‌ವಿಎಲ್ | ಸಕಂ |
| 114 | ಮೈಸೂರು ಮ್ಯಾಚ್ ಕಂಪನಿ ನಿಯಮಿತ (ಕಾರ್ಯಸ್ಥಗಿತ) * | ಎಮ್‌ಎಮ್‌ಸಿ | ಸಕಂ |
| 115 | ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ (ಕಾರ್ಯಸ್ಥಗಿತ) * | ಎಮ್‌ಎಲ್‌ಡಬ್ಲ್ಯೂ | ಸಕಂ |
| 116 | ಮೈಸೂರು ಕಾಸ್ಮೆಟಿಕ್ಸ್ ನಿಯಮಿತ (ಕಾರ್ಯಸ್ಥಗಿತ) * | ಎಮ್‌ಸಿಎಲ್ | ಸಕಂ |
| 117 | ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ (ಕಾರ್ಯಸ್ಥಗಿತ) * | ಎಮ್‌ಸಿಟಿ | ಸಕಂ |
| 118 | ಎನ್‌ಜಿಇಎಫ್ ನಿಯಮಿತ (ಕಾರ್ಯಸ್ಥಗಿತ) * | ಎನ್‌ಜಿಇಎಫ್ | ಸಕಂ |
| 119 | ಕರ್ನಾಟಕ ಟೆಲಿಕಾಂ ನಿಯಮಿತ (ಕಾರ್ಯಸ್ಥಗಿತ) * | ಕೆಟಿಎಲ್ | ಸಕಂ |
| 120 | ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ನಿಯಮಿತ (ಕಾರ್ಯಸ್ಥಗಿತ) * | ಎಮ್‌ಎಸಿಸಿಎಲ್ | ಸಕಂ |
